*Department of Public Instruction, Mysore*

# BHARATHA VEERACHARITHA

# ಭಾರತ ವೀರಚರಿತ

BY

S. G. NARASIMHA CHAR

SECOND EDITION, 2,500 COPIES

BANGALORE
PRINTED AT THE GOVERNMENT PRESS
1926

ಕ್ರಯ ನಾಲ್ಕು ಆಣೆ

UNIVERSAL
LIBRARY
OU_198971
UNIVERSAL
LIBRARY

## ಸೂಚನೆ.

ಈ ಪುಸ್ತಕವು ಸರ್ಕಾರದ ಬುಕ್ ಡಿಪೋಗಳಲ್ಲಿಯೂ ಮತ್ತು ಇಲಾಖೆಯಿಂದ ನೇಮಿಸಲ್ಪಟ್ಟಿರುವ ಏಜಂಟರುಗಳಲ್ಲಿಯೂ, ಈ ಪುಸ್ತುಕದ ಮೇಲೆ ಮುದ್ರಿಸಿರುವ ಬೆಲೆಗೆ ದೊರೆಯುತ್ತೆ. ಇದಕ್ಕಿಂತ ಹೆಚ್ಚಾದ ಬೆಲೆಗೆ ಮಾರುವ ಪಕ್ಷದಲ್ಲಿ ಅಂಥಾವರ ವಿಳಾಸಗಳನ್ನು ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್‌ಗವರಿಗೆ ಕೂಡಲೆ ಬರಹದ ಮೂಲಕ ತಿಳಿಸಬೇಕು.

ಕೆ. ಮಾರ್ಥ್‌,

ಇನ್ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

# ವಿಷಯಸೂಚಿಕೆ.


| | ಕಥೆಗಳು | ಪುಟಸಂಖ್ಯೆ |
|---|---|---|
| 1. | ಬೆಂಕಿಗೆ ಸಿಕ್ಕಿ ಬದುಕಿದವಳು | 1—10 |
| 2. | ಪಾದಷಾಹನ ಪತ್ನಿ | 10—21 |
| 3. | ಬಳೆಯ ಬಂಧುತ್ವ | 21—41 |
| 4. | ವೀರನಾರಿ | 41—50 |
| 5. | ಹಜಾರತ್ತಿನ ಪದ್ಮರಾಗ | 50—61 |
| 6. | ಕಮಲಾವತೀ ಕಲ್ಯಾಣ | 61—71 |
| 7. | ದೇಶಭ್ರಷ್ಟ | 72 90 |
| 8. | ಸೈನಿಕನ ಸೌಭಾಗ್ಯ | 91—117 |
| 9. | ಕಳೆದುಕೊಂಡ ಕೈಪೆಟ್ಟಿಗೆ | 117—131 |

# ಭಾರತ ವೀರಚರಿತ.

## ಬೆಂಕಿಗೆ ಸಿಕ್ಕಿ ಬದುಕಿದವಳು.

### I.

ಈಗ್ಗೆ ಮುನ್ನೂರು ವರುಷಗಳಿಗೆ ಹಿಂದೆ ಅಕ್ಬರ್‌ಪಾದಷಾಹನು ಗುಜರಾತ್ ದೇಶಕ್ಕೆ ಮುತ್ತಿಗೆ ಹಾಕಿದ್ದನು. ಆಗ ಅವನ ಸೇನೆಗೆ ಹೋಗಿ ಸೇರುವುದಕ್ಕಾಗಿ ಇನ್ನೂರು ಮಂದಿ ಮೊಗಲ ಸೈನಿಕರು ರಾಜಪುಟಾಣದ ಪ್ರಾಂತದಲ್ಲಿ ಹೋಗುತ್ತಿದ್ದರು. ಆ ಸೈನಿಕರು ತೊಟ್ಟುಕೊಂಡಿದ್ದ ಲೋಹದ ಕವಚಗಳೂ ಉಟ್ಟುಕೊಂಡಿದ್ದ ಚಿತ್ರವರ್ಣದ ಉಡುಪುಗಳೂ ಸಂಧ್ಯಾಕಾಲದ ಸೂರ್ಯಕಿರಣಗಳಲ್ಲಿ ಥಳಥಳನೆ ಹೊಳೆಯುತ್ತಿದ್ದುವು. ಅವರು ಗುರಾಣಿಗಳನ್ನೂ ಪಟ್ಟಕತ್ತಿಗಳನ್ನೂ ಧರಿಸಿದ್ದರು. ಅವರ ಆಯುಧಗಳೂ ಉಡುಪುಗಳೂ ಸ್ವಲ್ಪವಾದರೂ ಮಾಸಿ ಕಳೆಗುಂದದೆ ಇದ್ದುದನ್ನು ನೋಡಿದರೆ, ಅವರು ಆಗತಾನೆ ತಮ್ಮ ಸ್ಥಳದಿಂದ ಹೊರಟಿದ್ದಂತೆ ತೋರುತ್ತಿತ್ತು. ನಿಜವಾದ ಸಂಗತಿಯೂ ಹಾಗೆಯೇ ಇತ್ತು. ಅವರು ಆ ದಿನ ಮಧ್ಯಾಹ್ನವೇ ಒಬ್ಬ ಮೊಗಲ್ ಸರದಾರನ ಕೋಟೆಯಿಂದ ಹೊರಟಿದ್ದರು. ಅವರಲ್ಲಿ ಮೊದಲನೆಯ ಸಲ ಯುದ್ಧಕ್ಕೆ ಹೊರಟವರು ಹಲವರಿದ್ದರು. ಆ ಮೊಗಲ್ ಸರದಾರನ ಮಗನಾದ ಅಬ್ಬಾಸ್‌ಖಾನನೇ ಅವರ ಸೇನಾನಾಯಕನಾಗಿದ್ದನು. ಆತನು ಇನ್ನೂ ತರುಣನು ; ಆಕಾರದಲ್ಲಿ ಎತ್ತರವಾಗಿಯೂ ರೂಪಿನಲ್ಲಿ ಲಕ್ಷಣವಾಗಿಯೂ ಇದ್ದನು. ಅವನು ವೀರನಾದ ಅಕ್ಬರ್‌ಪಾದಷಾಹನ ಕೈಕೆಳಗೆ ತನಗೆ ಮುಂದೆ ಉಂಟಾಗುವ ವಿಜಯವನ್ನು ನೆನೆನೆನೆದು ಉಲ್ಲಾಸಪಡುತ್ತಿದ್ದನು ; ಅದರಿಂದ ಅವನ ಮುಖವೆಲ್ಲಾ ಕಳೆಯೇರಿ ಕಂಗೊಳಿಸುತ್ತಿತ್ತು.

ಅವರು ಹೋಗುತ್ತಿದ್ದ ಮಾರ್ಗಕ್ಕೆ ಕೆಲವು ಮೈಲಿಗಳ ದೂರದಲ್ಲಿ ಇನ್ನೊಂದು ಕುದುರೆಸವಾರರ ಗುಂಪೂ ಇದೇ ಮಾರ್ಗದ ಕಡೆಗೆ ಬರುತ್ತಿತ್ತು. ಆದರೆ ಆ ಸವಾರರ ಸ್ವಭಾವವು ಬೇರೆಯದಾಗಿತ್ತು. ಅವರೆಲ್ಲರು ಶಾಂತಪ್ರಕೃತಿಗಳಾದ ಹಿಂದೂ ಜನರಾಗಿದ್ದರು. ಅವರು ಒಂದು ಹೆಣ್ಣನ್ನು ಯಾವಜ್ಜೀವವೂ ಜನಾನದಲ್ಲಿ ಕೂಡಿಡುವುದಕ್ಕಾಗಿ ತಂದೆಯ ಮನೆಯಿಂದ ಗಂಡನ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಅವಳ ಪಲ್ಲಕ್ಕಿಯ ಮೇಲೆಲ್ಲಾ ಕುತ್ತಿನಿಯ ಪರದೆಯನ್ನು ದಟ್ಟವಾಗಿ ಹೊದಿಸಿದ್ದರು. ಇದರಿಂದ ದಾರಿಹೋಕರ ಕಣ್ಣುಗಳು ಆಕೆಯಮೇಲೆ ಬೀಳದಂತೆ ಅಡ್ಡಿಯಾದುದು ಮಾತ್ರವೇ ಅಲ್ಲದೆ, ಅವಳು ನಿರ್ಮಲವಾದ ಗಾಳಿಯನ್ನು

ಸೇವಿಸದಂತೆಯೂ ಮಾರ್ಗದ ನೆರೆಹೊರೆಯ ಪ್ರಕೃತಿಸೌಂದರ್ಯವನ್ನು ಅನುಭವಿಸದಂತೆಯೂ ಸಹ ಅಡ್ಡಿಯಾಗಿತ್ತು. ಆ ವೇಳೆಗೆ ಸೂರ್ಯಾಸ್ತಮಾನಕಾಲವಾಯಿತು. ಅವರು ರೋಹಿಣೀ ನದಿಯ ತೀರದಲ್ಲಿ ಪ್ರಯಾಣ ಮಾಡುತ್ತಮಾಡುತ್ತ ಅಲ್ಲಿದ್ದ ಶ್ಮಶಾನದ ನೇರಕ್ಕೆ ಬಂದರು. ಅಲ್ಲಿಗೆ ಬಂದಕೂಡಲೆ ಹಠಾತ್ತಾಗಿ ಕಳ್ಳರು ಬಂದು ದಾರಿಕಟ್ಟಿ ಮೇಲೆಬಿದ್ದು ಹೆಣ್ಣಿನ ಮೈಗಾವಲಿಗೆ ಬಂದಿದ್ದ ರಾಜಪುತ್ರರನ್ನು ನಿರಾಯಾಸವಾಗಿ ಸ್ವಾಧೀನಪಡಿಸಿಕೊಂಡು ಪಲ್ಲಕ್ಕಿಯನ್ನು ಹಿಡಿದು ಅದರ ಪರದೆಯನ್ನು ನಿರ್ದಾಕ್ಷಿಣ್ಯವಾಗಿ ಹರಿದೆಸೆದು ಅದರಲ್ಲಿ ಕುಳಿತಿದ್ದ ಸುಂದರಾಂಗಿಯನ್ನು ಹೊರಕ್ಕೆ ಎಳೆದರು.

ತುಲಸೀಬಾಯಿಯು ತನ್ನ ಸುತ್ತಲೂ ಸುತ್ತಿಕೊಂಡಿದ್ದ ಕರಾಳಾಕೃತಿಗಳನ್ನು ನೋಡಿ ಭಯಭ್ರಾಂತಳಾಗಿ ನಿಂತಳು. ಅಯ್ಯೋ ಪಾಪ! ಏನುಮಾಡಿಯಾಳು! ಅವಳು ಏನೂ ಅರಿಯದವಳು, ಇನ್ನೂ ಹದಿನೈದು ವಯಸ್ಸಿನ ಸಣ್ಣ ಹುಡುಗಿ. ತಂದೆ ತಾಯಿಗಳಿಗೆ ಒಬ್ಬಳೇ ಮಗಳಾದುದರಿಂದ ಮನೆಯಲ್ಲಿ ಬಹು ಸುಖವಾಗಿ ಬೆಳೆದವಳು. ಕಷ್ಟನಿಷ್ಠುರಗಳ ದಶೆಯನ್ನೇ ಕಂಡವಳಲ್ಲ. ಅಂಥವಳು ಹೀಗೆ ಹಠಾತ್ತಾಗಿ ಆ ದುಷ್ಟರ ಕೈಗೆ ಬಿದ್ದು ಅತ್ಯಂತ ಭಯಗ್ರಸ್ತೆಯಾದುದು ಸಹಜವಾಗಿಯೇ ಇದೆ. ಆ ವಿಧವಾದ ಭಯದಿಂದಲೂ ತನ್ನ ಚಿಕ್ಕ ವಯಸ್ಸಿಗೆ ಸಹಜವಾದ ಅಜ್ಞಾನದಿಂದಲೂ, ಅವಳು ಆ ಕಳ್ಳರನ್ನು ನೋಡಿ ತಾನು ಕಥೆಗಳಲ್ಲಿ ಕೇಳಿದ್ದ ರಾಕ್ಷಸರೇ ಇವರೆಂದು ಭಾವಿಸಿಕೊಂಡಳು. ಅಂದಚಂದಗಳು ಅರಣ್ಯಜೀವಿಗಳನ್ನು ಮರುಳುಗೊಳಿಸುವ ಪಕ್ಷದಲ್ಲಿ ಆ ದುಷ್ಟರ ಎದೆಯನ್ನು ಕರಗಿಸುವುದಕ್ಕೆ ಬೇಕಾದಷ್ಟು ಸೌಂದರ್ಯವು ಅವಳಲ್ಲಿ ಸಂಪೂರ್ಣವಾಗಿ ನೆಲೆಸಿತ್ತು. ಆದರೆ ಅವರು ಆ ನೀಲಲೋಚನೆಯ ದೀನಾವಲೋಕನವನ್ನು ಸ್ವಲ್ಪವೂ ತಿಳಿಯಲಾರದೆ ಹೋದರು ಅಷ್ಟೇ ಅಲ್ಲ; ಅವಳ ಮೈಯಲ್ಲಿ ಸಮೃದ್ಧಿಯಾಗಿ ಇಟ್ಟಿದ್ದ ಒಡವೆಗಳನ್ನೆಲ್ಲ ಕೊಟ್ಟುಬಿಡಬೇಕು ಎಂಬದಾಗಿ ಕಠೋರವಾಗಿ ಹೇಳಿದರು. ಅವಳು ಕೇವಲ ಭಯಪರವಶಳಾಗಿದ್ದುದರಿಂದ ಅದನ್ನು ಕೂಡ ಮಾಡಲಾರದೆ ಹೋದಳು. ನಡುಕವೆತ್ತಿದ ಅವಳ ಕೈ ಬೆರಲುಗಳು ಅವಳ ಕಿವಿ ಕೊರಲು ಮೂಗುಗಳಲ್ಲಿದ್ದ ಮುತ್ತುಗಳನ್ನೂ ಕೈಕಾಲುಗಳಲ್ಲಿದ್ದ ಚಿನ್ನದ ಬಳೆಗಳನ್ನೂ ತೆಗೆಯಲೊಲ್ಲದೆ ಹೋದುವು.

ಇನ್ನು ಸ್ವಲ್ಪ ತಡವಾಗಿದ್ದಲ್ಲಿ ಆ ಧೂರ್ತರು ಅವಳ ಒಡವೆಗಳನ್ನು ಮಾತ್ರವಲ್ಲದೆ ಅವಳುಟ್ಟಿದ್ದ ನಿರಾಜಿ ಸೀರೆಯನ್ನು ಕೂಡಾ ದಯಾದಾಕ್ಷಿಣ್ಯವಿಲ್ಲದೆ ಸುಲಿದುಕೊಂಡು ಬಿಡುತ್ತಿದ್ದರು. ಆದರೆ ಆ ವೇಳೆಗೆ ಸರಿಯಾಗಿ ಅಬ್ಬಾಸ್‌ಖಾನನು ತನ್ನ ಪರಿವಾರದೊಡನೆ ಆ ಸ್ಥಳಕ್ಕೆ ಬಂದು ಸೇರಿದನು. ಅಷ್ಟೊಂದುಮಂದಿ ಸೈನಿಕರು ಹಠಾತ್ತಾಗಿ ಬಂದುದನ್ನು ಕಂಡು ಅವರೊಡನೆ ಹೋರಾಡಲಾರದೆ ಕಳ್ಳರೆಲ್ಲರು ದಿಕ್ಕಾಪಾಲಾಗಿ ಪಲಾಯನಮಾಡಿದರು. ಅವರ ಹಿಂದೆಯೇ ಸುಮಾರು ಇಪ್ಪತ್ತು ಮಂದಿ ಸವಾರರು ಬೆನ್ನಟ್ಟಿಕೊಂಡು ಹೋದರು. ಇಷ್ಟಾದರೂ ತುಲಸೀ

ಬಾಯಿಯು ತನಗೆ ಒದಗಿದ ಅಪಾಯವು ತಪ್ಪಿಹೋದುದನ್ನು ಕೂಡ ತಿಳಿಯಲಾರದೆ ಚಿತ್ರಗತವಾದ ಚಿಂತೆಯೋ ಎಂಬಂತೆ ನಿಶ್ಚೇಷ್ಟಳಾಗಿ ನೆಲದಮೇಲೆ ಕುಳಿತಿದ್ದಳು. ಅಬ್ಬಾಸ್‌ಖಾನನು ಮೆಲ್ಲಗೆ ಅವಳ ಬಳಿಗೆ ಹೋದನು. ಕೂಡಲೆ ಅವಳ ಮುಖವು ಸಂತೋಷದಿಂದ ಅರಳಿತು. ಅವಳಕಣ್ಣಿಗೆ ಕಳ್ಳರು ರಾಕ್ಷಸರಂತೆ ತೋರಿದರೆ ಅಬ್ಬಾಸ್ ಖಾನನು ನಿಜವಾಗಿ ನಳಕೂಬರನಂತೆ ತೋರಿದನು. ಅಬ್ಬಾಸಿನಲ್ಲಿದ್ದಷ್ಟು ಗಾಂಭೀರ್ಯವನ್ನೂ ಸೌಂದರ್ಯವನ್ನು ಅವಳ ಕಣ್ಣುಗಳು ಕಂಡುದೇ ಇಲ್ಲ. ಆಗಿನ ಉಡಿಗೆ ತೊಡಿಗೆಗಳು ಕೂಡ ಅವನ ಸಹಜವಾದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದ್ದುವು. ಹಾಗೆಯೇ ಅವನೂ ಕೂಡ ತುಲಸೀಬಾಯಿಯಷ್ಟು ರೂಪವತಿಯಾದ ಸ್ತ್ರೀಯನ್ನು ಕಂಡುದೇ ಇಲ್ಲ ; ಅದರಲ್ಲಿಯೂ, ಆ ಕಾಲದಲ್ಲಿ ಅವಳು ದಿವ್ಯವಾದ ವಸ್ತ್ರಾಭರಣಗಳಿಂದ ಮತ್ತಷ್ಟು ಸೌಂದರ್ಯವುಳ್ಳವಳಾಗಿ, ಥಳಥಳಿಸುವ ತನ್ನ ಕಣ್ಣುಗಳಲ್ಲಿ ಕಂಬನಿಗಳನ್ನು ತುಂಬುತ್ತ ಅವನ ಕಣ್ಣೆದುರಿಗೆ ಕುಳಿತಿದ್ದಳು.

ಹಾಗೆ ಕುಳಿತಿದ್ದ ಸ್ತ್ರೀರತ್ನವನ್ನು ನೋಡಿದ ಮಾತ್ರದಲ್ಲಿಯೇ ಖಾನನಿಗೆ ಹೃದಯದಲ್ಲಿ ಅನುರಾಗವುಂಟಾಯಿತು. ಬಳಿಕ ಆದರದಿಂದ ಅವಳನ್ನು ಕರೆದು ಕೊಂಡು ಹೋಗಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸುವಾಗಲಂತೂ, ಅವನ ಮನಸ್ಸಿನಲ್ಲಿ ನಾನಾ ವಿಧವಾದ ಆಲೋಚನೆಗಳು ಹುಟ್ಟಿ ಹುಚ್ಚು ಹೊಳೆಯಂತೆ ಉಕ್ಕಲಾರಂಭಿಸಿದುವು. ಅವಳನ್ನು ತನ್ನ ತಂದೆಯ ಕೋಟೆಗೋ ಇಲ್ಲವೆ ಕಾಡಿನಲ್ಲಿ ಎಲ್ಲಾದರೂ ಒಂದು ಸುರಕ್ಷಿತವಾದ ಪ್ರದೇಶಕ್ಕೋ ಕರೆದುಕೊಂಡು ಹೋಗಿಬಿಟ್ಟರೆ ಅಲ್ಲಿ ಯಾರೂ ಅರಿಯದಂತೆ ತಾವಿಬ್ಬರೂ ಎಂದಿಗೂ ಸುಖವಾಗಿರಬಹುದೆಂದು ಒಂದು ಸಲ ಯೋಚನೆ ಮಾಡಿದನು. ಉತ್ತರಕ್ಷಣದಲ್ಲಿಯೇ ತನ್ನ ಪ್ರಭುವಾದ ಪಾದಷಾಹನ ವಿಷಯದಲ್ಲಿ ತಾನು ಮಾಡಬೇಕಾದ ಕರ್ತವ್ಯವೂ ತನ್ನ ಗೌರವವೂ ಅವನ ನೆನಪಿಗೆ ಬಂದುವು. ಸಹಾಯಶೂನ್ಯಳಾದ ಒಬ್ಬ ಸಣ್ಣ ಹುಡುಗಿಯ ವಿಷಯದಲ್ಲಿ ತಾನು ಅನ್ಯಾಯಮಾಡಬೇಕೆಂದಿದ್ದುದು ಬಹಳ ನೀಚವಾದುದೆಂದು ಅವನ ಮನಸ್ಸಿನಲ್ಲಿ ಹೊಳೆಯಿತು. ಈ ಎರಡು ವಿಧವಾದ ಭಾವಗಳಿಗೂ ಅವನ ಮನಸ್ಸಿನಲ್ಲಿ ಸ್ವಲ್ಪಕಾಲ ಹೊಡೆದಾಟವಾಗಿ ಕೊನೆಗೆ ಅವನ ಗೌರವಕ್ಕೇ ವಿಜಯವಾಯಿತು. ತರುವಾಯ ಖಾನನು ತನಗೆ ಎಷ್ಟು ಮನೋವ್ಯಥೆಯಾದರೂ ಸರಿಯೆ ತುಲಸೀಬಾಯಿಯ ಹಂಬಲನ್ನು ಬಿಟ್ಟು ತನ್ನ ಕರ್ತವ್ಯವನ್ನು ನಡೆಯಿಸುವುದಾಗಿ ಸಂಕಲ್ಪಮಾಡಿಕೊಂಡನು. ಆ ವೇಳೆಗೆ ಕಳ್ಳರ ಭಯದಿಂದ ಅಲ್ಲಲ್ಲಿ ಅವಿತುಕೊಂಡಿದ್ದ ಪಲ್ಲಕ್ಕಿಯ ಬೋಯಿಗಳೂ ಸಮೀಪಕ್ಕೆ ಬಂದು ಸೇರಿದರು.

ತರುವಾಯ ಅಬ್ಬಾಸ್‌ಖಾನನು ತುಲಸೀಬಾಯಿಯ ಪರಿಜನಕ್ಕೆ ಬೆಂಗಾವಲಾಗಿ ಅವಳ ಮಾವನ ಮನೆ ಕಣ್ಣಿಗೆ ಕಾಣುವವರೆಗೂ ಸಂಗಡ ಹೋಗಿ ಬಿಟ್ಟು ಬರುವುದಾಗಿ ಗೊತ್ತುಮಾಡಿಕೊಂಡು ಅವರ ಜೊತೆಯಲ್ಲಿಯೇ ಹೊರಟನು. ಆ ಉದ್ದಕ್ಕೂ ಅವನು ನಾನಾ ವಿಧವಾದ ಆಲೋಚನೆಗಳಲ್ಲಿ ಮಗ್ನನಾಗಿ ಕುದುರೆ

ಯನ್ನು ಪಲ್ಲಕ್ಕಿಯ ಪಕ್ಕದಲ್ಲಿಯೇ ಬಿಟ್ಟುಕೊಂಡು ಹೋದನು. ಆದರೂ ಅವನು ತುಲಸೀಬಾಯಿಯನ್ನು ನೋಡಲಾಗುತ್ತಿರಲಿಲ್ಲ; ಅವಳು ಮಾತ್ರ ಪರದೆಯ ಮೂಲಕ ಅವನನ್ನು ನೋಡಬಹುದಾಗಿತ್ತು. ಅವಳು ಅನೇಕವೇಳೆ ಹಾಗೆ ನೋಡಿಯೂ ನೋಡಿದಳು. ಆ ಹೊಸಬನ ಸೌಂದರ್ಯವನ್ನು ನೋಡಿದಹಾಗೆಲ್ಲಾ ಅವಳ ಹೃದಯದಲ್ಲಿ ಹುಟ್ಟಿದ ಪ್ರೀತಿಯೂ, ಆಶ್ಚರ್ಯವೂ ಹೆಚ್ಚುತ್ತಾ ಬಂದುವು. ಈ ರೀತಿಯಲ್ಲಿ ಅವರು ಪ್ರಯಾಣಮಾಡುತ್ತ ಕಡೆಗೆ ದಾರಿ ಕವಲೊಡೆಯುವ ಒಂದು ಸ್ಥಳಕ್ಕೆ ಬಂದು ಸೇರಿದರು. ಅಲ್ಲಿಂದ ಮುಂದೆ ಅವರು ಒಬ್ಬರಿಂದೊಬ್ಬರು ಅಗಲಿ ಬೇರೆ ಬೇರೆ ಮಾರ್ಗದಲ್ಲಿ ಹೋಗತಕ್ಕವರಾಗಿದ್ದರು. ಆದುದರಿಂದ ಅಲ್ಲಿಗೆ ಬರುತ್ತಲೆ ಖಾನನು ಕುದುರೆಯನ್ನು ನಿಲ್ಲಿಸಿಕೊಂಡು ತಡೆಯಲಾರದ ಗದ್ಗದಸ್ವರದಿಂದ ತಾನು ಹೋಗಿ ಬರುವುದಾಗಿ ಹೇಳಿದನು. ಆ ಮಾತನ್ನು ಕೇಳಿ ತುಲಸೀಬಾಯಿಯು ತಮ್ಮ ಪದ್ಧತಿಯನ್ನು ಸಡ್ಡೆಮಾಡದೆ ಪಲ್ಲಕ್ಕಿಯ ಪರದೆಯನ್ನು ಓರೆಮಾಡಿ ಅವನ ಕೈಗೆ ಒಂದು ವಜ್ರದುಂಗುರವನ್ನು ಹಾಕಿದಳು. ಕಡೆಯ ಸಲ ಅವರಿಬ್ಬರ ನಟ್ಟ ನೋಟಗಳು ಪ್ರೇಮವನ್ನೂ ನಿರಾಶೆಯನ್ನೂ ತೋರಿಸುತ್ತಾ ಚಿರಕಾಲ ಸಂಧಿಸಿದ್ದುವು. ಬಳಿಕ ಈ ಸಂಸಾರವೆಂಬ ಸಮುದ್ರದ ತರಂಗದಲ್ಲಿ ಅವರಲ್ಲಿ ಒಬ್ಬೊಬ್ಬರು ಒಂದೊಂದು ಕಡೆಗೆ ಚೆದರಿಹೋದರು. ಅವನು ಯುದ್ಧಕ್ಕೂ ಯಶಸ್ಸಿಗೂ ಪ್ರಯಾಣಮಾಡಿದನು; ಅವಳು ತನ್ನ ಹೊಸಮನೆಗೆ ತೆರಳಿದಳು. ಹೀಗೆ ತೆರಳುವಾಗ ತಾನು ಮಾಡಿದ ಅವಿವೇಕಕ್ಕಾಗಿ ಅವಳು ದೂಷಣೆಯನ್ನು ಹೊರಬೇಕಾಗಬಹುದು, ಪ್ರಾಯಶ್ಚಿತ್ತಗಳಿಗೆ ಒಳಗಾಗಲೂ ಬಹುದು. ಆದರೂ ಯಾವ ದೂಷಣೆಯೂ, ಯಾವ ಪ್ರಾಯಶ್ಚಿತ್ತವೂ, ಅವಳ ಮನಸ್ಸಿನಲ್ಲಿ ಖಚಿತವಾಗಿ ನಟ್ಟುಹೋದ ಆ ತರುಣನ ಭಾವಚಿತ್ರವನ್ನು ಮಾತ್ರ ಎಂದಿಗೂ ತೊಡೆಯಲಾರವು.

## II.

ಇದು ನಡೆದು ಒಂದು ವರ್ಷಕಾಲ ಕಳೆದುಹೋಯಿತು. ಬಳಿಕ ಒಂದಾನೊಂದು ದಿನ ಅಬ್ಬಾಸ್‌ಖಾನನು ಪುನಃ ಅದೇ ರೋಹಿಣೀನದಿಯ ತೀರದಲ್ಲಿ ಸವಾರಿಮಾಡುತ್ತಾ ಬಂದನು. ಆ ಕಾಲದಲ್ಲಿ ಅವನು ತಾನು ಹಿಂದೆ ಯುದ್ಧದಲ್ಲಿ ಜಯಿಸಿದಾಗ ತನ್ನ ಪಾಲಿಗೆ ಬಂದಿದ್ದ ಒಂದು ಅರಬ್ಬಿ ತಾಕಣವನ್ನು ಹತ್ತಿದ್ದನು. ಅವನ ಗುರಾಣಿಯೂ ಸೀಸಕವೂ ಹಿಂದೆ ಇದ್ದಂತೆಯೇ ಪಳಪಳನೆ ಮಿರಗುತ್ತಿದ್ದುವು; ಆದರೆ ಅವು ಪ್ರಕೃತದಲ್ಲಿ ಎಂದಿನಂತೆ ನುಣ್ಣಗೆ ನಯವಾಗಿರದೆ ಈಟಿ ಕತ್ತಿ ಮೊದಲಾದುವುಗಳ ಪೆಟ್ಟಿನಿಂದ ಕಚ್ಚು ಕಚ್ಚಾಗಿದ್ದುವು. ಈ ವೀರನು ಕಳೆದ ಒಂದು ವರ್ಷಕಾಲವೆಲ್ಲಾ ಘೋರವಾದ ಯುದ್ಧಗಳಲ್ಲಿ ತನ್ನ ಮನಸ್ಸು ದಣಿಯ ಹೊಡೆದಾಡಿದ್ದನು. ಅವನು ಸೂರತ್ತಿನ ಹತ್ತಿರ ಬೂತಾಳೆ ಬೇಲಿಯ ಬಳಿ ಅಕ್ಬರನ ಪಕ್ಕದಲ್ಲಿ ನಿಂತು ಮಿರಜರೊಡನೆ ಘೋರವಾಗಿ ಕಾಳಗಮಾಡಿದುದಲ್ಲದೆ ಅನೇಕವಾದ ಇತರ ಕಠೋರಕದನಗಳಲ್ಲಿ ಸಹ ತನ್ನ ಪೌರುಷವನ್ನು ಪ್ರಕಾಶಪಡಿಸಿದ್ದನು.

ಈ ವೇಳೆಗೆ ಆ ಯುದ್ಧಗಳು ಮುಗಿದುಹೋಗಿದ್ದುವು. ಈ ಮಧ್ಯೆ ಅಬ್ಬಾಸನ ತಂದೆಯು ಸತ್ತುಹೋಗಿದ್ದನು. ಆದಪ್ರಯುಕ್ತ ಅಬ್ಬಾಸ್‌ಖಾನನು ಈಗ ತನ್ನ ಪಿತ್ರಾರ್ಜಿತವಾದ ಸಂಸ್ಥಾನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಹೋಗುತ್ತಿದ್ದನು. ಆ ರೀತಿಯಲ್ಲಿ ಹೋಗುತ್ತ ತಾನು ಅರಮನೆಯಲ್ಲಿ ಒಂಟಿಯಾಗಿ ವಾಸ ಮಾಡಬೇಕಾದ ಸ್ಥಿತಿಯನ್ನೂ ತಾನು ಈಗ ಹೋಗುತ್ತಿದ್ದ ಸ್ಥಳದಲ್ಲಿ ಒಂದು ವರ್ಷ ಹಿಂದೆ ಒಂದಾವೃತ್ತಿಮಾತ್ರ ತನ್ನ ದೃಷ್ಟಿಗೆ ಗೋಚರವಾಗಿ ಪುನಃ ಕಣ್ಮರೆಯಾದ ಆ ಸುಂದರಿಯ ಮುಖವನ್ನೂ ನೆನೆದುಕೊಂಡು ಅವನ ಮನಸ್ಸು ಕೇವಲ ಚಿಂತಾಕ್ರಾಂತವಾಗಿದ್ದಿತು. "ನಾನು ಯಾರನ್ನು ಪ್ರೀತಿಸಿದೆನೋ ಅವರಿಂದ ಅಗಲಿ ಈ ಪ್ರಪಂಚದಲ್ಲಿ ಯಾವಜ್ಜೀವವೂ ಒಂಟಿಯಾಗಿಯೇ ಇರಬೇಕಾದಮೇಲೆ ನನಗೆ ಯುದ್ಧದಲ್ಲಿ ಸಂಪಾದಿಸಿದ ಖ್ಯಾತಿಯಿಂದಲೂ ಗೌರವದಿಂದಲೂ ಆಗತಕ್ಕ ಪ್ರಯೋಜನವೇನು ?" ಎಂದು ಮೊದಲಾಗಿ ಆಲೋಚಿಸಿದನು. ಯದ್ಯಪಿ ಯೌವನವೂ ಆರೋಗ್ಯವೂ ಕಾಲಕ್ರಮೇಣ ಈ ವಿಧವಾದ ಚಿಂತೆಗಳನ್ನು ನಿವಾರಿಸಬಹುದು ; ಕೊನೆಯ ಪಕ್ಷ ಬಲುಮಟ್ಟಿಗೆ ಕಡಿಮೆಯಾದರೂ ಮಾಡಬಹುದು. ಆದರೂ ಸದ್ಯಃ ರೋಹಿಣೀತೀರದಲ್ಲಿ ಹೋಗುತ್ತಿದ್ದಾಗ ಅವನ ಹೃದಯದಲ್ಲಿ ದುಃಖವು ತಾನೇತಾನಾಗಿ ಪ್ರಬಲಿಸಿಕೊಂಡಿತ್ತು. ಅವನ ಉತ್ತಮವಾದ ತೇಜಸ್ಸೂ ಕೂಡ ಅವನ ದುಃಖದ ಸೋಂಕಿನಿಂದ ಮಲಿನವಾಯಿತೋ ಎಂಬಹಾಗಿತ್ತು.

ಈ ಮೇರೆಗೆ ಅಬ್ಬಾಸ್‌ಖಾನನು ದುಃಖಾಕ್ರಾಂತನಾಗಿ ಹೋಗುತ್ತಿರುವಾಗ ಅವನ ಎದುರಿಗೆ ಕೆಲವರು ಹಿಂದುಗಳು ಒಂದು ಶವವನ್ನು ಸಾಗಿಸಿಕೊಂಡು ಸುಡ್ಡುಗಾಡಿನ ಕಡೆಗೆ ಬರುತ್ತಿದ್ದರು. ಅವರನ್ನು ಶೂನ್ಯದೃಷ್ಟಿಯಿಂದ ನೋಡುತ್ತ ಅವನೂ ಸಮೀಪಕ್ಕೆ ಬರುತ್ತಿದ್ದನು. ಹತ್ತಿರಕ್ಕೆ ಬಂದಾಗ ನೋಡಿದನು ; ಒಬ್ಬ ಹುಡುಗನ ಶವವನ್ನು ಸಾಗಿಸಿಕೊಂಡು ಅದರ ಸುತ್ತಲೂ ಅನೇಕಜನ ಸ್ನೇಹಿತರೂ ನಂಟರೂ ಬರುತ್ತಿದ್ದರು. ಶವಕ್ಕೆ ಭಾರಿ ಜರತಾರಿ ಹಚ್ಚಡವನ್ನು ಹೊದಿಸಿದ್ದರು ಅದರ ಹಿಂದೆ ನೂರಾರು ಮಂದಿ ಜನರು ಗುಂಪಾಗಿ ಅಳುತ್ತ ಬರುತ್ತಿದ್ದರು. ಅದನ್ನು ನೋಡಿದರೆ ಆ ಹುಡುಗನು ಶ್ರೀಮಂತರ ಮನೆತನಕ್ಕೆ ಸೇರಿದವನಂತೆ ಕಾಣುತ್ತಿತ್ತು. ಚಟ್ಟವನ್ನು ಹೊತ್ತು ನಾಲ್ಕು ಜನರು ಪಟ್ಟೆಯ ಮಡಿಗಳನ್ನುಟ್ಟು ಬೋಳುತಲೆ ಬಿಟ್ಟುಕೊಂಡಿದ್ದರು. ಚಟ್ಟದ ಮುಂದುಗಡೆ ನೂರಾರು ಜನರು ಅಶುಭಸೂಚಕವಾದ ಬಿಳಿಯ ಪಾಗುಗಳನ್ನು ಹಾಕಿಕೊಂಡು ಬರಿಯಕಾಲುಗಳಲ್ಲಿ ನಡೆಯುತ್ತ, ದುಃಖಕರವಾದ ರಾಗದಿಂದ ಗಟ್ಟಿಯಾಗಿ ರಾಮನಾಮವನ್ನು ಹೇಳುತ್ತ, ಅಲ್ಲಲ್ಲಿ ಒಂದೊಂದು ಹಿಡಿ ಅಕ್ಕಿಯನ್ನೂ ಗೋದುವೆಯನ್ನೂ ಎರಚುತ್ತ, ದಾರಿಯ ಪಕ್ಕಗಳಲ್ಲಿ ಒಂದೊಂದು ಹಿಡಿ ದುಡ್ಡುಗಳನ್ನು ಚೆಲ್ಲುತ್ತ ಬರುತ್ತಿದ್ದರು. ಹೆಣದ ಕಾಲಿನ ಮುಂಗಡೆ ಹೋಗುತ್ತಿದ್ದವನೊಬ್ಬನು ಚಿತಿಯನ್ನು ಹೊತ್ತಿಸುವುದಕ್ಕಾಗಿ ಒಂದು ಮಡಕೆಯಲ್ಲಿ ಬೆಂಕಿಯನ್ನು ತರುತ್ತಿದ್ದನು. ಆ ಗುಂಪಿನಲ್ಲಿ ಎರಡು

ಕುದುರೆಗಳು ಇದ್ದುವು. ಅವುಗಳಲ್ಲಿ ಒಂದರಮೇಲೆ ಒಂದು ಡಂಕವನ್ನು ಇಟ್ಟಿದ್ದರು; ಇನ್ನೊಂದರಮೇಲೆ ಒಬ್ಬನು ಒಂದು ಬಿಚ್ಚಿದ ಕೋರೆಪಟವನ್ನು ಹಿಡಿದುಕೊಂಡು ಕುಳಿತಿದ್ದನು.

ಇವರು ಶ್ಮಶಾನಕ್ಕೆ ಹೋಗಿ ಸೇರಿದ ಬಳಿಕ ನೋಡುವಲ್ಲಿ ಅಲ್ಲಿ ಸಹಗಮನಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದ್ದಹಾಗೆ ಕಾಣಿಸಿತು. ಆ ಶವದ ಬಳಿಯಲ್ಲಿ ಒಬ್ಬ ಹೆಂಗಸು ನಿಂತಿದ್ದಳು. ಅವಳು ಆ ಸತ್ತ ಹುಡುಗನ ಹೆಂಡತಿಯಾಗಿದ್ದಿರ ಬೇಕು. ಅವಳು ಶವದೊಡನೆ ಚಿತಿಯಲ್ಲಿ ಬೀಳುವದಕ್ಕೆ ಸಿದ್ಧಳಾಗಿದ್ದಳು. ಮಹಾ ಘೋರವಾದ ಸಹಗಮನದ ವಿಷಯದಲ್ಲಿ ಅಕ್ಬರ್‌ಪಾದಷಹನಿಗೆ ಬಹಳ ಅಸಮಾ ಧಾನವಾಗಿದ್ದಿತು. ಆತನು ಅದನ್ನು ನಿಲ್ಲಿಸುವುದಕ್ಕಾಗಿ ಬೇಕಾದ ಸಾಹಸವನ್ನೆಲ್ಲಾ ಮಾಡಿದ್ದನು. ಯಾವ ಹೆಂಗಸಾದರೂ ಮನಃಪೂರ್ವಕವಾಗಿ ತಾನಾಗಿಯೇ ಇಷ್ಟಪಡದೆ ಇದ್ದಲ್ಲಿ ಅಂಥವಳನ್ನು ಬಲಾತ್ಕಾರವಾಗಿ ಸಹಗಮನ ಮಾಡಿಸಕೂಡ ದೆಂದು ಕಟ್ಟುನಿಟ್ಟಾದ ನಿಬಂಧನೆಯನ್ನು ಕೂಡ ಮಾಡಿದ್ದನು. ಪಾದಷಾಹನ ಉದಾರವಾದ ಆಶಯಗಳಲ್ಲೆಲ್ಲಾ ಅಬ್ಬಾಸ್‌ಖಾನನೂ ಸಹ ತನ್ನ ತಾರುಣ್ಯಕ್ಕೆ ತಕ್ಕ ಹಾಗೆ ಅತ್ಯಭಿನಿವೇಶವುಳ್ಳವನಾಗಿದ್ದನು. ಆದುದರಿಂದ ಪ್ರಕೃತ ವಿಷಯದಲ್ಲಿ ಪಾದ ಷಾಹನ ಶಾಸನಕ್ಕೆ ಭಂಗವುಂಟಾಗದಂತೆ ತಾನೇ ಕಣ್ಣಾರ ನೋಡಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿಕೊಂಡು ಅಲ್ಲಿ ನೆರದಿದ್ದ ಬ್ರಾಹ್ಮಣರೇ ಮೊದಲಾದ ಪರಿಜನರ ಕೋಪವನ್ನು ಸಡ್ಡೆಮಾಡದೆ ನೆಟ್ಟಗೆ ಕುದುರೆಯನ್ನು ಬಿಟ್ಟುಕೊಂಡು ಚಿತಿಯ ಬಳಿಗೆ ಹೋದನು.

ಸಮೀಪಕ್ಕೆ ಹೋಗಿ ನೋಡುವಲ್ಲಿ ಅಲ್ಲಿ ನಿಂತಿದ್ದ ಹೆಂಗಸು ಹನ್ನೆರಡು ತಿಂಗಳುಕಾಲದ ಹಿಂದೆ ಅದೇ ಸ್ಥಳದಲ್ಲಿ ತನ್ನಿಂದ ಕಾಪಾಡಲ್ಪಟ್ಟ ಸುಂದರಿಯೆಂದು ಗೊತ್ತಾಯಿತು. ಆ ಕಾಲದಲ್ಲಿ ಖಾನನಲ್ಲಿ ಉಂಟಾದ ಮನೋಭಾವಗಳನ್ನು ಯಾರಿಗೆತಾನೆ ವರ್ಣಿಸಲು ಸಾಧ್ಯ ! ತುಲಸೀಬಾಯಿಯ ಗಂಡನು ಇನ್ನೂ ಹತ್ತು ಹನ್ನೆರಡು ವಯಸ್ಸಿನ ಹುಡುಗನು. ಅವನು ನಿತ್ಯರೋಗಿಯಾಗಿದ್ದನು. ಅವಳು ಅವನನ್ನು ಪ್ರೀತಿಯಿಂದ ಕಾಣುತ್ತಿದ್ದಳು. ಅವನಿಗೂ ಅವಳಲ್ಲಿ ಪ್ರೀತಿಯಿತ್ತು; ಅವನು ಅವಳ ಕೈಯಿಂದ ಹೊರತು ಮತ್ತೊಬ್ಬರ ಕೈಯಿಂದ ಔಷಧವನ್ನು ತೆಗೆದುಕೊಳ್ಳುತ್ತಿರ ಲಿಲ್ಲ. ಆದರೂ ಅವನಿಗೆ ಗುಣವಾಗಲಿಲ್ಲ. ಜ್ವರವು ಪ್ರಬಲವಾಗಿ ಕೊನೆಗೆ ಅವನು ಸತ್ತುಹೋದನು. ಅಲ್ಲಿಂದ ಮುಂದೆ ಈ ಸಣ್ಣ ವಯಸ್ಸಿನ ವಿಧವೆಗೆ ಬದುಕಿ ಬಾಳುವ ಆಸೆಯನ್ನುಂಟುಮಾಡುವ ಸೌಕರ್ಯಗಳು ಯಾವುವೂ ಇರಲಿಲ್ಲ. ಅವಳು ಪುನಃ ಮದುವೆಮಾಡಿಕೊಳ್ಳುವುದಕ್ಕೆ ಇಷ್ಟಪಟ್ಟಲ್ಲಿಯೂ ಕೂಡ, ಅವರ ಜಾತಿಪದ್ಧತಿಗಳು ಅವಕಾಶ ಕೊಡುತ್ತಿರಲಿಲ್ಲ. ಇನ್ನು ಮೇಲೆ ಅವಳ ತಲೆ ಕೂದಲಿಗೆ ಪರಿಮಳದ ಎಣ್ಣೆಗಳನ್ನು ಹಚ್ಚಿ ಹೆರಳು ಹಾಕಿ ಹೂಗಳನ್ನು ಮುಡಿಸರು. ಇನ್ನು ಮೇಲೆ ಅವಳ ರತ್ನಪಡಿ ನಗಗಳನ್ನೂ ಜರತಾರಿಸೀರೆಗಳನ್ನೂ ಕಿತ್ತು ಕಳೆದು, ಅವುಗಳಿಗೆ ಪ್ರತಿ

ಯಾಗಿ ಬಿಳಿಯ ಬಟ್ಟೆಯನ್ನು ಬಲಾತ್ಕಾರವಾಗಿ ಉಡಿಸುವರು. ಇಷ್ಟೂ ಸಾಲದೆ ಅವಳು ಹಿಂದೆ ಮಾಡಿದ ಯಾವುದೋ ಪಾಪದಿಂದ ಅವಳ ಗಂಡನು ಸತ್ತುಹೋದನೆಂದು ಭಾವಿಸಿ ಕಂಡಕಂಡವರೆಲ್ಲಾ ಅವಳನ್ನು ಕಂಡರೆ ಅಪಶಕುನವೆಂದು ಹೇಳುತ್ತಾ ಅವಳಲ್ಲಿ ಅಸಹ್ಯವನ್ನು ತೋರ್ಪಡಿಸುತ್ತ ಅಸಡ್ಡೆಯಾಗಿ ಕಾಣುವರು. ಇಂಥ ಸಂದರ್ಭದಲ್ಲಿ ಬ್ರಾಹ್ಮಣರು ಅವಳ ಬಳಿಗೆ ಹೋಗಿ ಸಹಗಮನವು ಮಹಾ ಪುಣ್ಯಪ್ರದವೆಂದು ಹೇಳಿದರೆ ಅವಳು ಕಿವಿಗೊಟ್ಟು ಕೇಳಿದುದರಲ್ಲಿ ಆಶ್ಚರ್ಯವೇನಿದೆ? ಯಾವಜ್ಜೀವವೂ ಕಣ್ಣೀರಿನಲ್ಲಿ ಕೈತೊಳೆಯುತ್ತ ದುಃಖದಲ್ಲಿ ನವೆಯುವುದಕ್ಕಿಂತ ಚಿತಿಯಲ್ಲಿ ಬೆಂದು ಒಂದು ಕ್ಷಣಕಾಲ ಯಾತನೆಪಟ್ಟು ಸಾಯುವುದೇ ಮೇಲೆಂದು ತೋರುವುದು ಸಹಜವೇ. ಆದುದರಿಂದ ಅವಳು ಈ ರೀತಿಯಾಗಿ ಬಲಿಯಾಗಲು ಒಪ್ಪಿಕೊಂಡಳು. ಹಿಂದೂ ಸ್ತ್ರೀಯರು ತಮ್ಮ ಪತಿಗಳಲ್ಲಿ ತಮಗಿರುವ ಪ್ರೇಮಾತಿಶಯವನ್ನು ಯಾವ ಘೋರವಾದ ಮರಣದ ಮೂಲಕ ಪ್ರಕಟಪಡಿಸುವರೋ ಅಂಥ ಸಹಗಮನ ವಿಧಾನದಿಂದ ಈ ಬಾಲೆಯೂ ಸಹ ತನ್ನ ದೇಹವನ್ನು ಯಜ್ಞೇಶ್ವರನಿಗೆ ಅರ್ಪಿಸುವುದಾಗಿ ನಿಶ್ಚಯಮಾಡಿಕೊಂಡು ನಿರಾಶೆಯಿಂದ ನಿರ್ಭಯವಾಗಿ ಬಂದು ಸ್ಥಿರವಾಗಿ ನಿಂತಿದ್ದಳು. ಆ ಕಾಲದಲ್ಲಿ ಅವಳು ಕಡೆಯಸಾರಿ ತನ್ನ ಎಲ್ಲಾ ಒಡವೆಗಳನ್ನು ಇಟ್ಟುಕೊಂಡಿದ್ದಳು. ಅವಳ ಒಡವೆಗಳ ಚಿನ್ನವನ್ನು ಎಷ್ಟುಹೊತ್ತಿಗೆ ಬೆಂಬೂದಿಯಿಂದ ಬಾಚಿಕೊಳ್ಳುವೆವೋ ಎಂಬುದಾಗಿ ಪುರೋಹಿತರು ತಹತಹಪಡುತ್ತ ನಿಂತಿದ್ದರು. ಅಬ್ಬಾಸ್‌ಖಾನನು ನೋಡುವ ಕಾಲದಲ್ಲಿ ಅವಳು ಶಿಲಾಪ್ರತಿಮೆಯಂತೆ ನಿಶ್ಚಲವಾಗಿ ನಿರುತ್ಸಕಳಾಗಿ ನಿಂತಿದ್ದಳು. ಅವಳಿಗೆ ಇವನನ್ನು ಪುನಃ ಕಾಣುವ ಪ್ರತ್ಯಾಶೆಯೇ ಇರಲಿಲ್ಲ. ಆದುದರಿಂದ ಇವನನ್ನು ಕಂಡ ಕೂಡಲೆ ಅವಳ ರಕ್ತನಾಳಗಳಲ್ಲಿ ರಕ್ತವು ಉಲ್ಲೋಲ ಕಲ್ಲೋಲವಾಗಿ ಸಂಚರಿಸಲಾರಂಭಿಸಿತು ; ಅವಳ ಮುಖದಲ್ಲಿ ಕಳೆಯೇರಿತು. ಅವಳ ಹೃದಯದಲ್ಲಿ ಆಶೆಯು ಪುನಃ ತಲೆಯೆತ್ತಿತ್ತು. ಆಗ ಅವಳು ಇನ್ನು ಮುಂದೆ ಸೂರ್ಯನ ಮನೋಹರವಾದ ಬೆಳಕನ್ನು ನೋಡದೆ ಇಷ್ಟು ಸಣ್ಣ ವಯಸ್ಸಿನಲ್ಲಿಯೇ ಸತ್ತುಹೋಗುವುದು ಬಹು ದುಃಖಕರವೆಂದು ಯೋಚಿಸಿಕೊಂಡಳು.

ಅಬ್ಬಾಸ್‌ಖಾನನು ಹಿಂದೆ ಕಂಡಾಗ ಅವಳು ಚಲುವೆಯಾದ ಹುಡುಗಿಯಾಗಿದ್ದವಳು ಈ ಒಂದು ವರ್ಷ ಕಾಲದಲ್ಲಿ ಸರ್ವಾಂಗ ಸುಂದರಿಯಾದ ಯುವತಿಯಾಗಿದ್ದಳು. ಆದರೂ ಖಾನನಿಗೆ ಅವಳ ಮರುಳುಗೊಳಿಸುವ ಸೌಂದರ್ಯವನ್ನು ನೋಡಿ ಉಂಟಾದ ಆಶ್ಚರ್ಯಕ್ಕಿಂತಲೂ ಸಂಕಟಕರವಾದ ಅವಳ ಸ್ಥಿತಿಯನ್ನು ನೋಡಿ ಹೆಚ್ಚಾದ ಕನಿಕರವುಂಟಾಯಿತು. ಅವನು ಒಂದು ನಿಮಿಷಮಾತ್ರದಲ್ಲಿ ಅಲ್ಲಿಯ ಸನ್ನಿವೇಶವನ್ನು ತಿಳಿದುಕೊಂಡು, ಅಲ್ಲಿ ಬಂದಿದ್ದ ಬ್ರಾಹ್ಮಣರ ಮುಖಂಡನ ಬಳಿಗೆ ನೆಟ್ಟಗೆ ಕುದುರೆಯನ್ನುಬಿಟ್ಟುಕೊಂಡು ಹೋಗಿ–ಸ್ತ್ರೀಯ ಅನುಮತಿಯಿಲ್ಲದೆ ಬಲಾತ್ಕಾರವಾಗಿ ಸಹಗಮನಮಾಡಿಸಕೂಡದೆಂದು ರಾಜಶಾಸನವಿರುವುದು ಗೊತ್ತಿದೆಯೋ ಇಲ್ಲವೋ ?–ಎಂದು ಪ್ರಶ್ನೆಮಾಡಿದನು. " ಅವಳನ್ನೇ ಹೋಗಿ ಕೇಳು.

ಅವಳು ಪತಿವ್ರತೆಯೂ ಪತಿಯಲ್ಲಿ ಪ್ರೇಮವುಳ್ಳವಳೂ ಆಗಿರುವುದರಿಂದ ಪತಿಯೊಡನೆ ಚಿತಾರೋಹಣ ಮಾಡುವುದಾಗಿ ತಾನೇ ಒಪ್ಪಿಕೊಂಡು ಬಂದಿರುವಳು '' ಎಂದು ಅವನು ಹೇಳಿದನು. ಕೂಡಲೆಅಬ್ಬಾಸ್‌ಖಾನನು ಆಸ್ತ್ರೀಯಕಡೆಗೆ ತಿರುಗಿಕೊಂಡು '' ಯಾವ ಹೆಂಗಸನ್ನೂ ಅವಳ ಇಷ್ಟಕ್ಕೆ ವಿರುದ್ಧವಾಗಿ ಬಲಾತ್ಕಾರದಿಂದ ಸಹ ಗಮನ ಮಾಡಿಸಕೂಡದೆಂದು ಪಾದಷಾಹರ ಶಾಸನವಿದೆ. ಆದುದರಿಂದ ಹೀಗೆ ಅಕಾಲದಲ್ಲಿ ಪರಲೋಕಕ್ಕೆ ಸಾಗಿಹೋಗುವುದು ನಿನಗೆ ಇಷ್ಟವೋ ಹೇಗೆ? ತಿಳಿಸು '' ಎಂದು ಕೇಳಿದನು. ಈ ಮಾತನ್ನು ಕೇಳಿದ ಕೂಡಲೆ ಆ ದುರ್ಭಾಗ್ಯಳಾದ ಹುಡುಗಿಗೆ ಪ್ರಾಣದಲ್ಲಿ ಆಶೆಯುಂಟಾಗಿ ಅಬ್ಬಾಸಿನ ಕಡೆಗೆ ಕೈನೀಡಿ '' ಖಾವಂದ್, ನೀವು ಹಿಂದೆ ಒಂದಾವೃತ್ತಿ ನನ್ನನ್ನು ರಕ್ಷಿಸಿರುವಿರಿ. ಈಗಲೂ ಸಾಧ್ಯವಾದರೆ ಈ ಕಠಿನ ಹೃದಯರ ಬಾಧೆಯಿಂದ ನನ್ನನ್ನು ಕಾಪಾಡಿರಿ ''—ಎಂದು ಪ್ರಾರ್ಥಿಸಿ, ಪುನಃ— '' ಇಲ್ಲ, ಇದು ಸಾಧ್ಯವಲ್ಲ. ಇವರು ನನ್ನ ಸಾವನ್ನೇ ಹಾರೈಸುತ್ತಿರುವರು. ನೀವು ಅಡ್ಡಿಮಾಡಿದಲ್ಲಿ ನನ್ನ ಕಣ್ಣೆದುರಿಗೆ ನಿಮ್ಮನ್ನು ಸಹ ಕೊಂದುಬಿಡುವರು. ಇಲ್ಲಿ ನಿಲ್ಲಬೇಡಿ, ಜಾಗ್ರತೆಮಾಡಿ. ಈ ಘೋರವಾದ ಪ್ರದೇಶದಿಂದ ಈಗಲೇ ಹೊರಟು ಹೋಗಿ. ನನ್ನ ಅದೃಷ್ಟವಿದ್ದಂತಾಗಲಿ ''—ಎಂದು ನುಡಿದಳು.

ತುಲಸೀಬಾಯಿಯು ಖಾನನ ಸಹಾಯವನ್ನು ಪ್ರಾರ್ಥಿಸಿದ ಕೂಡಲೆ ಬ್ರಾಹ್ಮಣರು, ತಮ್ಮ ಸ್ವಾಮ್ಯವು ಎಲ್ಲಿ ತಪ್ಪಿಹೋಗುವುದೋ ಎಂದು ದಿಗಿಲುಬಿದ್ದು '' ಇವಳು ಸಹಗಮನ ಮಾಡಲು ತಾನಾಗಿಯೇ ಒಪ್ಪಿಕೊಂಡು ಬಂದಿರುವಳು. ಈಗ ಮರಣಸಮಯದಲ್ಲಿ ಇವಳು ಆಡಿದ ಮಾತುಗಳಿಗೆ ಗಮನ ಕೊಡಕೂಡದು '' ಎಂದು ಹೇಳುತ್ತ, ಈ ಮಧ್ಯೆ ಚಿತಿಯಿಂದ ಕಟ್ಟಿಗೆಗಳನ್ನು ಹಿರಿದು ಹಿರಿದು ಕೈಗೆ ತೆಗೆದುಕೊಳ್ಳುತ್ತ ತಮ್ಮ ಕೆಲಸಕ್ಕೆ ಅಡಚಣೆ ಆದಲ್ಲಿ ತಾವು ಸುಮ್ಮನೆ ಬಿಡುವುದಿಲ್ಲವೆಂಬ ಅಂಶವನ್ನು ತೋರ್ಪಡಿಸಿದರು. ಇದನ್ನು ಕಂಡು ಅಬ್ಬಾಸ್‌ಖಾನನು ಮೆಲ್ಲಮೆಲ್ಲಗೆ ತನ್ನ ಕುದುರೆಯನ್ನು ತುಲಸೀಬಾಯಿಯ ಪಕ್ಕಕ್ಕೆ ಓಸರಿಸಿ, ಅವಳ ಕಿವಿಯಲ್ಲಿ—'' ಇಗೋ ನೋಡು, ನಾನು ಕುದುರೆಯಿಂದಿಳಿದರೆ ಇಬ್ಬರೂ ಕೆಟ್ಟುಹೋಗುತ್ತೇವೆ. ನೀನು ನನ್ನ ರಿಕಾಪಿನ ಮೇಲೆ ಕಾಲಿಟ್ಟು ಹಿಂದುಗಡೆಯಿಂದ ನನ್ನ ಬಲಗೈಯನ್ನು ಭದ್ರವಾಗಿ ಹಿಡಿದುಕೊ, ನಿನ್ನನ್ನು ನನ್ನ ಹಿಂದುಗಡೆ ಕುಳ್ಳಿರಿಸಿಕೊಳ್ಳುತ್ತೇನೆ. ನೀನು ಅಲ್ಲಿ ಕುಳಿತೆಯಾದರೆ ಸಾಕು. ಈ ಪಿಶಾಚಗಳನ್ನೆಲ್ಲಾ ಸಡ್ಡೆಮಾಡಬೇಕಾದುದಿಲ್ಲ.''—ಎಂದು ಗುಟ್ಟಾಗಿ ಹೇಳಿದನು. ಆ ಧೀರಳಾದ ರಾಜಪುತ್ರ ಹುಡುಗಿಯು ಅವನ ಮಾತಿನಂತೆಯೇ ನಡೆದು, ತನ್ನ ಪ್ರಿಯುನ ಕೈಯನ್ನು ಹಿಡಿದು ಕುದುರೆಯ ತಡಿಯ ಮೇಲೆ ಕುಳಿತಳು. ಒಡನೆಯೇ ಖಾನನು ತನ್ನ ಕುದುರೆಯನ್ನು ಊರಕಡೆ ಮುಖವಾಗಿ ತಿರುಗಿಸಿ, ವಿಶೇಷ ಶ್ರಮವಿಲ್ಲದೆ ಆ ಬ್ರಾಹ್ಮಣರ ನಡುವೆ ನುಗ್ಗಿ, ತನ್ನ ಊರುಕಡೆಗೆ ಬಿಟ್ಟುಕೊಂಡು ಹೊರಟನು.

ಅವರಿಬ್ಬರೂ ಆ ರೀತಿಯಲ್ಲಿ ಸುಡುಗಾಡಿನಿಂದ ತಪ್ಪಿಸಿಕೊಂಡು ಬಂದ

ಕೂಡಲೆ ಅವರಿಗೆ ಮತ್ತೊಂದಪಾಯವು ಬಂದೊದಗಿತು. ಇಷ್ಟೆಲ್ಲಾ ನಡೆಯುವಾಗ ಆ ಶ್ಮಶಾನದ ಪಕ್ಕದಲ್ಲಿ ಸ್ವಲ್ಪದೂರವಾಗಿ ಸವಾರಿ ಮಾಡುತ್ತಿದ್ದ ಇಬ್ಬರು ರಾಜಪುತ್ರ ಸವಾರರು ಇಲ್ಲಿ ನಡೆದುದನ್ನೆಲ್ಲಾ ದೂರದಿಂದಲೇ ನೋಡುತ್ತಿದ್ದರು. ಅವರು ಹತ್ತಿರದಲ್ಲಿರಲಿಲ್ಲವಾದುದರಿಂದ ತುಲಸೀಬಾಯಿಯನ್ನು ಖಾನನು ಕುದುರೆಯ ಮೇಲಕ್ಕೆ ಹತ್ತಿಸಿಕೊಳ್ಳದಂತೆ ಅಡ್ಡಿ ಮಾಡಲಾರದೆ ಹೋದರು. ಆದರೆ ಅವರು ಖಾನನು ಹೋಗತಕ್ಕ ಮಾರ್ಗದಲ್ಲಿದ್ದ ಕಾರಣ, ಅವನನ್ನು ಮುಂದಕ್ಕೆ ಹೋಗಲೀಯದೆ ಅಡ್ಡಗಟ್ಟುವ ಏರ್ಪಾಡುಮಾಡಿಕೊಂಡು ಕಾದಿದ್ದರು. ಇನ್ನು ತಡೆಮಾಡಲು ಅವಕಾಶವಿರಲಿಲ್ಲ. ಕೂಡಲೆ ಅಬ್ಬಾಸ್‍ಖಾನನು ತುಲಸೀಬಾಯಿಯನ್ನು ನೋಡಿ "ನೀನು ನನ್ನ ಬಲಗೈಯನ್ನು ಬಿಟ್ಟು ನನ್ನ ನಡುಕಟ್ಟನ್ನು ಗಟ್ಟಿಯಾಗಿ ಹಿಡಿದುಕೊಂಡಿರು." ಎಂದು ಹೇಳಿ, ಆ ಇಬ್ಬರು ಶತ್ರುಗಳಲ್ಲಿ ತನ್ನ ಬಲಗಡೆಗೆ ಬರುತ್ತಿದ್ದ ಬಲಿಷ್ಠನಾದ ರಾಜಪುತ್ರನ ಮೇಲೆ ತನ್ನ ಕುದುರೆಯನ್ನು ಮಹಾ ರಭಸದಿಂದ ಓಡಿಸಿಕೊಂಡು ಬಂದನು. ಅವನು ಹತ್ತಿರಹತ್ತಿರಕ್ಕೆ ಬರುವಾಗ ಅವನ ಸೀಸಕದ ಮೇಲೆಯೂ, ಗುರಾಣಿಯಮೇಲೆಯೂ, ಒಂದೊಂದು ಕತ್ತಿಯ ಪೆಟ್ಟು ಬಿದ್ದಿತು ; ಆದರೆ ಆ ಪೆಟ್ಟಿನಿಂದ ಅವನ ಗಮನಕ್ಕೆ ಯಾವ ಅಡ್ಡಿಯೂ ಆಗಲಿಲ್ಲ. ಅವನು ವೇಗವಾಗಿ ಹೋಗುತ್ತ ತನ್ನ ಎಡಗಡೆಯಲ್ಲಿದ್ದ ಶತ್ರುವು ಮೂರ್ಛಿತನಾಗಿ ಬೀಳುವಂತೆ ಅವನ ತಲೆಯಮೇಲೆ ಕತ್ತಿಯಿಂದ ಬಲವಾಗಿ ಪ್ರಹಾರಮಾಡಿ ಅದೇ ಸಮಯದಲ್ಲಿಯೇ ಬಲಗಡೆಯಲ್ಲಿದ್ದವನನ್ನು ತರುಬಿದನು. ಆ ವೇಗಕ್ಕೆ ಆರಾಜಪುತ್ರನ ಕುದುರೆಯು ಹಿಂಗಾಲಮೇಲೆ ಕುಕ್ಕರಿಸಿ ಹೋಗಿ ಸವಾರನನ್ನು ನೆಲದ ಧೂಳಿಯಲ್ಲಿ ಕೆಡವಿಬಿಟ್ಟಿತು. ಆವೇಳೆಗೆ ತಲೆಯ ಮೇಲೆ ಬಿದ್ದ ಪೆಟ್ಟಿನಿಂದ ಬವಳಿಗೊಂಡಿದ್ದ ಇನ್ನೊಬ್ಬ ರಾಜಪುತ್ರನು ಮೆಲ್ಲಗೆ ಚೇತರಿಸಿಕೊಂಡು ಎದ್ದು ನೋಡಿ, ಅಷ್ಟೊಂದು ಪರಾಕ್ರಮಶಾಲಿಯಾದ ಶತ್ರುವಿನ ಮೇಲೆ ಒಂಟಿಯಾಗಿ ನಿಂತು ಕೈಮಾಡಲಂಜಿ, ಅಬ್ಬಾಸಿಗೆ ದಾರಿಬಿಟ್ಟುಕೊಟ್ಟು, ಕುದುರೆಯಿಂದಿಳಿದು ಕೆಳಗೆ ಬಿದ್ದಿದ್ದ ತನ್ನ ಜೊತೆಗಾರನಿಗೆ ಸಹಾಯಮಾಡಲು ಹೋದನು. ತರುವಾಯ ಅಬ್ಬಾಸನು ಮುಂದೆ ಸ್ವಲ್ಪದೂರ ಸವಾರಿಮಾಡಿಕೊಂಡು ಹೋಗಿ ತನ್ನ ತಂದೆಯ ಕೋಟೆಗೆ ಸೇರಿದನು. ಆ ಬಳಿಕ ಸ್ವಲ್ಪಕಾಲದಲ್ಲಿಯೇ ಅವನಿಗೂ ತುಲಸೀಬಾಯಿಗೂ ಕ್ರಮವಾಗಿ ವಿವಾಹಮಹೋತ್ಸವವು ಬೆಳೆಯಿತು.

ಇದು ನಡೆದ ಕೆಲವು ಕಾಲಕ್ಕೆ ತುಲಸೀಬಾಯಿಯ ತಂದೆಯೂ ಕೂಡ ಮನಸ್ಸನ್ನು ಮೆಲ್ಲಗೆ ತಿರುಗಿಸಿ ಈ ವಿವಾಹ ಸಂಬಂಧಕ್ಕೆ ಒಪ್ಪಿಕೊಂಡನು ಅವನಿಗೆ ತನ್ನ ಮಗಳಲ್ಲಿ ಬಹು ಪ್ರೀತಿಯಿತ್ತು. ಅವನು ತನ್ನ ಮಗಳು ಅನುಗಾಲವೂ ವಿಧವೆಯಾಗಿ ಕಷ್ಟಪಟ್ಟುಕೊಂಡಿದ್ದೋ ಇಲ್ಲವೇ ಚಿತಿಯಲ್ಲಿ ಬಿದ್ದೋ ಸಾಯುವುದಕ್ಕಿಂತ ಹೀಗಾದುದೇ ಮೇಲೆಂದು ತಿಳಿದು ಮನಸ್ಸಿನಲ್ಲಿಯೇ ಸಂತೋಷಪಟ್ಟುಕೊಂಡನು. ಅಬ್ಬಾಸ್‍ಖಾನನು ರಣರಂಗದಲ್ಲಿ ಪರಾಕ್ರಮವನ್ನು ತೋರಿಸಿ ಅಕ್ಬರ್ ಪಾದಷಾಹನ ಮೆಚ್ಚಿಗೆಯನ್ನು ಮೊದಲೇ ಪಡೆದಿದ್ದನು, ಈಗ ಸಹಗಮನವನ್ನು ತಪ್ಪಿಸಿ

ರಾಜಪುತ್ರಸ್ತ್ರೀಯನ್ನು ಮದುವೆಮಾಡಿಕೊಂಡುದರಿಂದ ಪಾದಷಾಹನ ಮೆಚ್ಚಿಗೆಯನ್ನು ಕಳೆದುಕೊಳ್ಳುವ ಪ್ರಮೇಯವೇನೂ ಉಂಟಾಗಲಿಲ್ಲ. ಮೊಗಲ್ ಸರದಾರರಲ್ಲಿ ತಮ್ಮ ಪಾದಷಾಹನ ಅಭಿಪ್ರಾಯಾನುಸಾರವಾಗಿ ಯಾರೂ ಇಷ್ಟುಮಟ್ಟಿಗೆ ನಡಿಸಲು ಇಷ್ಟವುಳ್ಳವರಾಗಿರಲಿಲ್ಲ. ಆದರೆ ಖಾನನು ಮಾತ್ರ ಈ ಎರಡು ಕೆಲಸಗಳಲ್ಲಿಯೂ ಪಾದಷಾಹನನ್ನು ಅನುಸರಿಸಿ ಅವನ ರಾಜತಂತ್ರದಲ್ಲಿ ಸಹಕಾರಿಯಾದನು. ಇದರಿಂದ ಅವನಿಗೆ ಉಂಟಾದ ಫಲವು ಸಹಜವಾಗಿಯೇ ಇದೆ, ಅವನು ಪಾದಷಾಹನ ಪ್ರಸಾದ ಸೂಚಕವಾದ ಅನೇಕ ಬಹುಮಾನಗಳನ್ನು ಪಡೆದುದಲ್ಲದೆ, ಕಾಲಕ್ರಮೇಣ ಅಕ್ಬರನ ಮಹಾಸೈನ್ಯಾಧಿಪತಿಗಳಲ್ಲಿಯೂ ಅತ್ಯಂತ ವಿಶ್ವಾಸಪಾತ್ರರಾದ ಮಂತ್ರಿಗಳಲ್ಲಿಯೂ ಮುಖಂಡನೆನಿಸಿಕೊಂಡನು.

---

## ಪಾದಷಾಹನ ಪತ್ನಿ.

### 1. ವರಿಸುವಿಕೆ.

ಸಿಂಧು ದೇಶದಲ್ಲಿ ಅಹಮದ್‌ಷಾ ಎಂಬ ಪಾದಷಾಹನು ಆಳುತ್ತಿದ್ದನು. ಆತನು ಯೌವನಸ್ಥನಾಗಿಯೂ, ಬಲಿಷ್ಠನಾಗಿಯೂ, ಸುಂದರನಾಗಿಯೂ, ಇದ್ದನು. ಅವನ ಗಡ್ಡಮೀಸೆಗಳ ಕೂದಲುಗಳು ಕಾಡಿಗೆಯಂತೆ ಕಪ್ಪಾಗಿದ್ದುವು. ಆತನು ಯುದ್ಧಗಳಲ್ಲಿ ಪರಾಕ್ರಮಶಾಲಿಯೆಂಬುದಾಗಿ ಹೆಸರುಗೊಂಡಿದ್ದನು. ಅಷ್ಟುಮಾತ್ರವಲ್ಲದೆ ಅವನು ಕಾವ್ಯಶಿಲ್ಪಗಳೇ ಮೊದಲಾದ ಕಲೆಗಳಿಗೆಲ್ಲಾ ಪೋಷಕನೆಂಬುದಾಗಿಯೂ ಪ್ರಖ್ಯಾತನಾಗಿದ್ದನು. ಆತನು ಬೇಸಗೆಯ ಕಾಲದಲ್ಲಿ ತನ್ನ ರಾಜಧಾನಿಯನ್ನು ಬಿಟ್ಟು ಚಾಂದ್ನಿತಲಾವ್ ಎಂಬ ರಜತಸರೋವರದ ಪಕ್ಕದಲ್ಲಿದ್ದ ತನ್ನ ಅರಮನೆಗೆ ಬಂದು ವಾಸಮಾಡುವನು. ಹೀಗಿರುತ್ತಿರಲು ಆತನು ಒಂದಾನೊಂದು ದಿವಸ ಅಲ್ಲಿ ಒಂದು ದೊಡ್ಡ ಮಹೋತ್ಸವವನ್ನು ಮಾಡಿ, ಆ ದಿನ ರಾತ್ರಿ ಬೆಳದಿಂಗಳಲ್ಲಿ ತನ್ನ ಇಷ್ಟಮಿತ್ರರೊಡಗೂಡಿ ಸ್ವರ್ಣ ಖಚಿತವಾದ ನಾವೆಗಳಲ್ಲಿ ಕುಳಿತು ತನ್ನ ಸಂಗಡ ಕರೆತಂದ ಸಂಗೀತಗಾರರ ಗಾನಗಳನ್ನು ಕೇಳುತ್ತ ಸರೋವರದ ನಡುವೆ ಗಿಡಬಳ್ಳಿಗಳಿಂದ ತುಂಬಿ ಸೊಗಸುತ್ತಿದ್ದ ಎಡೆತಿಟ್ಟುಗಳನ್ನು ಬಳಸಿಕೊಂಡು ಬರುತ್ತಿದ್ದನು. ಆ ಕಾಲದಲ್ಲಿ ಅವನನ್ನು ನೋಡಿದರೆ ಅವನು ಇಲ್ಲಿ ಮನುಷ್ಯನಿಗೆ ಲಭ್ಯವಾದ ಸುಖದ ತುಟ್ಟತುದಿಯನ್ನೇ ಮುಟ್ಟಿದಂತೆ ತೋರುತ್ತಿದ್ದನು. ಗವಾಯಿಗಳು ಪಾದಷಾಹನ ವಿಜಯಗಳನ್ನೂ ಸ್ವರ್ಗಲೋಕದ ಅಪ್ಸರಸ್ತ್ರೀಯರ ಸೌಂದರ್ಯವನ್ನೂ ಗುಲಾಬಿಹೂವಿಗೂ ಬುಲ್ ಬುಲ್ ಪಕ್ಷಿಗೂ ಇರುವ ಅನುರಾಗವನ್ನೂ ವರ್ಣಿಸಿರುವ ಹಾಡನ್ನು ಮಾಡಿ ಗಾನಮಾಡಿದರು. ಅವರ ಗಾನವು ಮುಗಿದ ತರುವಾಯ ಒಬ್ಬ ಹಿಂದೂ ಸಂಗೀತಗಾರನು ಹುಲ್ಲೆಗಣ್ಣುಳ್ಳವಳಾಗಿಯೂ

ಶ್ರೀರಾಮದೇವನ ಪತ್ನಿಯಾದ ಸೀತಾದೇವಿಯಂತೆ ಗುಣವತಿಯಾಗಿಯೂ ಇದ್ದ ಒಬ್ಬ ರಾಜಪುತ್ರಕನ್ಯೆಯನ್ನು ಹೊಗಳಿ ಹಾಡಿದನು. ಆ ಮೋಹನಕರವಾದ ಸಂಗೀತದ ಇಂಪೂ, ಆ ಮನಸ್ಸನ್ನು ಮರುಳುಗೊಳಿಸುವ ಬೆಳದಿಂಗಳ ಹೆಂಪೂ, ಆ ಹಾಡಿನಲ್ಲಿ ಹಾಡಿದ ಕನ್ಯಾಮಣಿಯ ಸೌಂದರ್ಯದ ಸೊಂಪೂ, ಪಾದಷಾಹನ ಮನಸ್ಸನ್ನು ಕರುಗಿಸಿ ಅನುರಾಗದ ಮೊಳಕೆಯನ್ನು ನಾಟಿದುವು. ಕೂಡಲೆ ಪಾದಷಾಹನು ಸಂಗೀತಗಾರನನ್ನು ನೋಡಿ—'ಈ ನಾರೀಮಣಿಯು ಯಾವ ಕಾಲದಲ್ಲಿದ್ದಳು ? ಅವಳನ್ನು ಯಾವ ಕಾಫರ್ ಗುಲಾಮನು ಮದುವೆಯಾದನು ?' ಎಂಬದಾಗಿ ಕೇಳಿದನು. ಅದಕ್ಕೆ ಸಂಗೀತಗಾರನು—'' ಖಾವಂದ್ ಅವಳು ಈಗ ಜೀವಿಸುತ್ತಿರುವಳು. ಅವಳಿಗೆ ಇನ್ನೂ ಮದುವೆಯಾಗಿಲ್ಲ. ನಾನು ರಾಜಪುತ್ರನಾದ ಪರ್ವತಸಿಂಗನ ಒಬ್ಬಳೇ ಮಗಳಾದ ಲಾಲ್‌ದೇವಿಯ ಸೌಂದರ್ಯವನ್ನು ವರ್ಣಿಸುತ್ತಿದ್ದೇನೆ '' ಎಂದು ಉತ್ತರ ಕೊಟ್ಟನು. 'ಅವಳು ನಿನ್ನ ವರ್ಣನೆಗೆ ಸರಿಯಾಗಿ ಸುಂದರಿಯಾಗಿದ್ದರೆ ನನ್ನ ರಾಣಿಯಾಗುವಳು. ಹಾಗಿಲ್ಲದೆ ನಿನ್ನ ವರ್ಣನೆ ತಪ್ಪಾಗಿದ್ದಲ್ಲಿ ನಿನ್ನ ಸುಳ್ಳು ಹೊಗಳಿಕೆಗೆ ತಕ್ಕ ಹಾಗೆ ನಿನ್ನ ತಲೆಯನ್ನು ಕಳೆದುಕೊಳ್ಳುವೆ'' ಎಂದು ಹೇಳಿ, ಪಾದಷಾಹನು ನಾನಾ ವಿಧವಾದ ಆಲೋಚನೆಗಳಲ್ಲಿ ಮಗ್ನನಾಗಿ ಅಂಬಿಗರನ್ನು ಕುರಿತು ನಾವೆಯನ್ನು ಹಿಂತಿರುಗಿಸಿ ಅರಮನೆಯ ಅಮೃತಶಿಲಾ ಸೋಪಾನದ ಬಳಿಗೆ ನಡಿಸುವಂತೆ ಅಪ್ಪಣೆಮಾಡಿದನು.

ಮರುದಿನ ಬೆಳಗ್ಗೆ ಅಹಮದ್‌ಷಾಹನು ತನ್ನ ಮುಖ್ಯಮಂತ್ರಿಯಾದ ಬ್ರಾಹ್ಮಣನನ್ನು ಕರೆಯಕಳುಹಿ ಪರ್ವತಸಿಂಗನ ಮಗಳ ವಿಷಯವಾಗಿ ಪ್ರಶ್ನೆಮಾಡಿದನು. ಆ ಬ್ರಾಹ್ಮಣನು ಆಕೆಯ ಸೌಂದರ್ಯವನ್ನೂ ಕಲಾಕೌಶಲ್ಯವನ್ನೂ ಮಿತವಾದ ಮಾತುಗಳಿಂದ ಹೆಚ್ಚು ಕಡಿಮೆಯಿಲ್ಲದಂತೆ ವಿಜ್ಞಾಪಿಸಿದನು. ಅವನ ಮಾತುಗಳು ಹಿಂದಿನ ದಿನ ಸರೋವರದ ಮೇಲೆ ಬೆಳದಿಂಗಳಲ್ಲಿ ಸಂಗೀತಗಾರನು ಹಾಡಿದಹೊಗಳಿಕೆಯ ನುಡಿಗಳಿಗೆ ಅನುಸಾರವಾಗಿದ್ದುವು. ಸ್ತ್ರೀಲೋಲನಾದ ಪಾದಷಾಹನಿಗೆ ಇಷ್ಟೇಸಾಕು ; ಇನ್ನೇನೂ ಹೆಚ್ಚು ಬೇಕಾದುದಿಲ್ಲ. ಆದುದರಿಂದ ಇದು ನಡೆದ ಉತ್ತರಕ್ಷಣದಲ್ಲಿಯೇ ಅವನು ಬ್ರಾಹ್ಮಣನನ್ನು ಕುರಿತು—'' ಲಾಲ್‌ದೇವಿಯನ್ನು ನಾನು ಮದುವೆಯಾಗಲಿಷ್ಟಪಟ್ಟು ಗೊತ್ತುಮಾಡಿಕೊಂಡಿರುವುದಾಗಿ ಪರ್ವತಸಿಂಗನಿಗೆ ತಿಳಿಸಬೇಕು''-ಎಂದು ಅಜ್ಞಾಪಿಸಿದನು. ಹಾಗೆಯೇ ತಿಳಿಸಿದುದೂ ಆಯಿತು. ಆದರೆ ಈ ಅನುರಾಗವು ಸುಖವಾಗಿ ಸಾಗತಕ್ಕುದಾಗಿರಲಿಲ್ಲ. ಯದ್ಯಪಿ ಹಿಂದೆ ಅನೇಕ ರಾಜಪುತ್ರರು ತಮ್ಮ ಹೆಣ್ಣುಮಕ್ಕಳನ್ನು ಅಹಮದ್‌ಷಾಹನ ಅಂತಃಪುರಕ್ಕೂ ಅವನ ಸರದಾರರ ಅಂತಃಪುರಕ್ಕೂ ತಾವೇ ಅನುಮತಿಸಿ ಕಳುಹಿಸಿಕೊಟ್ಟಿದ್ದುದುಂಟು. ಆದರೆ ಪರ್ವತಸಿಂಗನು ರಾಜಪುತ್ರರಲ್ಲಿ ರಾಜಪುತ್ರನಾಗಿರುವನು; ಇದರ ಮೇಲೆ ತನ್ನ ವಂಶವು ನಿಷ್ಕಳಂಕವಾದುದೆಂಬ ಹೆಮ್ಮೆಯುಳ್ಳವನು. ತನ್ನ ಮಗಳು ಜಾತಿಕೆಟ್ಟು ಒಬ್ಬ ಮಹಮ್ಮದೀಯ ಚಕ್ರವರ್ತಿಯನ್ನು ಮದುವೆಯಾಗಿ ಅವನ ಸಿಂಹಾಸನಕ್ಕೆ ಭಾಗಿಯಾಗುವ ಹಾಗಿದ್ದರೂ ಕೂಡ ಅದಕ್ಕೆ ಪರ್ವತಸಿಂ

ಗನು ಒಪ್ಪುತ್ತಿರಲಿಲ್ಲ. ಅವನಿಗೆ ಆ ವಿಧವಾದ ಅಭಿಪ್ರಾಯೆ ಸಹ ಹೀನಾಯವಾಗಿ ತೋರುತ್ತಿತ್ತು. ಹೀಗಿದ್ದರೂ ಅವನು ಸದ್ಯಃ ಸ್ವಲ್ಪ ಅವಕಾಶವನ್ನು ಪಡೆದುಕೊಳ್ಳುವುದಕ್ಕೋಸ್ಕರ ತನ್ನ ಅಧಿರಾಜನ ಇಷ್ಟಾನುಸಾರವಾಗಿ ನಡೆದುಕೊಳ್ಳುವಂತೆ ನಟಿಸಿ ಸ್ವಲ್ಪ ಅವಕಾಶವನ್ನು ಪಡೆದುಕೊಂಡನು. ತರುವಾಯ ಅವನು ಆ ಹೋರು ಎಂಬ ತನ್ನ ಗಿರಿದುರ್ಗಕ್ಕೆ ಹೋಗಿ ಸೇರಿಕೊಂಡು, ಅಲ್ಲಿಗೆ ತನ್ನ ಬಂಧುಬಳಗವನ್ನೂ ಪೋಷ್ಯವರ್ಗವನ್ನೂ ಕರೆಯಕಳುಹಿಸಿ, ತನ್ನನ್ನೂ ತನ್ನ ಮಗಳನ್ನೂ ಈ ವಿಧವಾದ ಅವಮಾನದಿಂದ ತಪ್ಪಿಸಿ ರಕ್ಷಿಸಬೇಕೆಂದು ಅವರನ್ನೆಲ್ಲಾ ಕೇಳಿದನು.

ಅಹಮದ್‌ಷಾಹನಿಗೆ ಈ ಏರ್ಪಾಡುಗಳ ಸುಳಿವು ತಿಳಿಯಿತು. ಕೂಡಲೆ ಅವನು ರಾಜಪುತ್ರರ ಗಿರಿದುರ್ಗವನ್ನು ಲಗ್ಗೆ ಹತ್ತುವುದಕ್ಕಾಗಲಿ, ಇಲ್ಲವೆ ರಾಜ ಪುತ್ರ ಕನ್ಯಕೆಯನ್ನು ಎದುರುಗೊಂಡು ಕರೆತರುವುದಕ್ಕಾಗಲಿ, ಸಮಯ ಬಂದ ಹಾಗೆ ಉಪಯೋಗಿಸಿಕೊಳ್ಳಲನುಕೂಲವಾಗುವಂತೆ ಸಮಸ್ತ ಸೋಪಸ್ಕರ ಸಹಿತ ವಾದ ಹತ್ತುಸಾವಿರ ಮಂದಿ ಸೈನಿಕರುಳ್ಳ ಒಂದು ಸರ್ವೋತ್ತಮವಾದ ಸೈನ್ಯ ವನ್ನು ಸಿದ್ಧಪಡಿಸಿದನು. ಅನಂತರ ತಾನು ತನ್ನ ಪಟ್ಟದಾನೆಯಮೇಲೆ ಬೆಳ್ಳಿಯ ಅಂಬಾರಿಯಲ್ಲಿ ಕುಳಿತುಕೊಂಡು ಲಾಲ್‌ದೇವಿಗಾಗಿ ಅನರ್ಘ್ಯವಾದ ಗವಸಿನಿಂದ ಶೃಂಗಾರವಾಗಿದ್ದ ಮತ್ತೊಂದಾನೆಯನ್ನು ಸಂಗಡ ತೆಗೆದುಕೊಂಡು ತಾನೇ ಸೇನೆ ಯನ್ನು ನಡಿಸುತ್ತ ಆಹೋರಿಗೆ ಹೊರಟನು ಪಾದಷಾಹನು ಆ ರೀತಿಯಲ್ಲಿ ಹೊರಟುಬಂದು ನಿರ್ಭಯವಾಗಿ ಕೋಟೆಯ ಬಾಗಿಲಿಗೇ ತನ್ನ ಸೇನೆಯನ್ನು ಕರೆ ದುಕೊಂಡು ಹೋಗಿ ತಮ್ಮನ್ನು ಒಳಕ್ಕೆ ಬಿಡಬೇಕೆಂದು ಆಜ್ಞೆಮಾಡಿದನು. ಇದಕ್ಕೆ ಪ್ರತ್ಯುತ್ತರವಾಗಿ ಕೋಟೆಯಿಂದ ಒಂದು ಬಾಣವು ಹಾರಿಬಂದಿತು. ಕೈಚಳಕದಿಂದ ಗುರಿಯಿಟ್ಟು ಹೊಡೆದ ಆ ಬಾಣವು ಅಹಮ್ಮದ್‌ಷಾಹನ ಅಂಬಾರಿಯ ಕಲಶಕ್ಕೆ ಚುಚ್ಚಿಕೊಂಡಿತು. ಆ ಬಾಣಕ್ಕೆ ಒಂದು ಕಾಗದದ ಸುರುಳಿ ಕಟ್ಟಿತ್ತು. ಅದನ್ನು ತೆಗೆದು ಓದುವಲ್ಲಿ—ಈಗ ಅಂಬಾರಿಯ ಕಲಶಕ್ಕೆ ಗುರಿಯಿಟ್ಟು ಹೊಡೆದವನು ಪರ್ವ ತಸಿಂಗನ ಮಗಳನ್ನು ಮದುವೆಯಾಗಲಿಚ್ಛಿಸುವ ಕಪಿಮುಸುಡಿಯ ಕಾಡು ಮನು ಷ್ಯನ ತಲೆಗೂ ಸುಲಭವಾಗಿ ಹೊಡೆಯಬಲ್ಲನು. ಆದುದರಿಂದ ಕೈಮೀರುವುದಕ್ಕೆ ಮುಂದೆಯೇ ಎಚ್ಚತ್ತುಕೊಂಡು ಹೆಚ್ಚು ಅಪಾಯವಾಗುವುದಕ್ಕೆ ಮೊದಲೇ ಹಿಂದಿ ರುಗು - ಎಂದು ಬರೆದಿತ್ತು. ಅದನ್ನು ಓದುತ್ತಿರುವ ಸಮಯದಲ್ಲಿಯೇ, ಪಾದ ಷಾಹನು ಹಿಂದೆ ಕನ್ಯಕೆಗಾಗಿ ಕಳುಹಿಸಿದ್ದ ಅಮೂಲ್ಯವಾದ ಸೀರೆಯೂ ಸಹ ಚಿಂದಿ ಯ ಗಂಟಿನಂತೆ ಅಸಡ್ಡೆಯಾಗಿ ಎಣಿಸಲ್ಪಟ್ಟುಕೋಟೆಯಿಂದ ಎಸೆಯಲ್ಪಟ್ಟು ಅವನ ಪಟ್ಟದಾನೆಯ ಕಾಲಮುಂದೆ ಧೂಳಿಯಲ್ಲಿ ಬಿದ್ದಿತು. ಈ ಎರಡು ಸಂಗತಿಗಳಿಂದಲೂ ನಿರ್ದಾಕ್ಷಿಣ್ಯವಾಗಿ ಯುದ್ಧಮಾಡುವುದೇ ನಿಶ್ಚಿತವಾದಂತಾಯಿತು. ಕೂಡಲೆ ಮಹ ಮ್ಮದೀಯ ಸೈನಿಕರು ತಮಗೆ ಅಪಮಾನದೊಡನೆ ಅಪಾಯವೂ ಸಂಭವಿಸಬಹು ದೆಂದು ಶಂಕಿಸಿ, ಎಲ್ಲಾ ರಾಜಪುತ್ರರೂ ಹಠಾತ್ತಾಗಿ ಬಾಣಪ್ರಯೋಗ ಮಾಡಿಬಿಡು

ವರೋ ಎಂದು ಭಯಪಟ್ಟು, ಮಾನದಮೇಲೆ ದೃಷ್ಟಿಯಿಡುವುದಕ್ಕಿಂತ ಕಾಲ್ನಡಿಗೆಯಮೇಲೆ ಹೆಚ್ಚು ದೃಷ್ಟಿಯಿಟ್ಟು, ಆ ಅರಕ್ಷಿತವಾದ ಸ್ಥಳದಿಂದ ಹಿಮ್ಮೆಟ್ಟಿ ಹೊರಟುಹೋದರು.

ಅಲ್ಲಿಂದ ಮುಂದೆ ಅಹಮದ್‌ಷಾಹನ ಕನ್ಯಾವರಣವು ಪ್ರಬಲವಾದ ಮುತ್ತಿಗೆಯ ರೂಪವನ್ನು ಕೈಕೊಂಡಿತು. ಆ ಊರಿನ ಕೋಟೆಯನ್ನು ಮೂರು ಸಾವಿರ ಮಂದಿ ರಾಜಪುತ್ರವೀರರು ರಕ್ಷಿಸುತ್ತಿದ್ದರು. ಅಹಮದ್ ಷಾಹನು ಕನ್ಯಕೆಯನ್ನೂ ಅವಳ ತಂದೆಯನ್ನೂ ವಶಪಡಿಸಿಕೊಳ್ಳುವುದಕ್ಕಾಗಿ ಕಳುಹಿಸಿದ ಅಪರಿಮಿತವಾದ ದ್ರವ್ಯಗಳನ್ನೆಲ್ಲಾ ಅವರು ತಮ್ಮ ಕೋಟೆಯನ್ನು ಭದ್ರಪಡಿಸುವುದರಲ್ಲಿಯೂ ಸೈನಿಕರಿಗೆ ಉತ್ತಮವಾದ ಆಯುಧಗಳನ್ನು ಕೊಂಡು ಕೊಡುವುದರಲ್ಲಿಯೂ ವಿನಿಯೋಗಿಸಿದ್ದರು. ಮಹಮ್ಮದೀಯ ಸೈನಿಕರು ಲಗ್ಗೆ ಹತ್ತುವುದಕ್ಕಾಗಿ ಕೋಟೆಯ ಸಮೀಪಕ್ಕೆ ಬಂದಾಗಲೆಲ್ಲಾ ಅವರಲ್ಲಿ ಹಲವರು ಒಳಗಿನಿಂದ ಬಿಟ್ಟ ಬಾಣಗಳಿಗೆ ತುತ್ತಾಗಿಯೂ ಕೋಟೆಯ ಮೇಲಿನಿಂದ ಉರುಳಿಸಿದ ಗುಂಡುಕಲ್ಲುಗಳಿಗೆ ಸಿಕ್ಕಿ ನಜ್ಜುಗುಜ್ಜಾಗಿಯೂ ಸತ್ತುಹೋಗುತ್ತಿದ್ದರು. ರಾಜಪುತ್ರರು ಕೆಲವುವೇಳೆ ತಮ್ಮ ಶತ್ರುಗಳು ಕೋಟೆಯ ಗೋಡೆಗಳಿಗೆ ಏಣಿಹಾಕಿ ಅವುಗಳಮೇಲೆ ಹತ್ತಿ ಬರುವವರೆಗೂ ಸುಮ್ಮನಿದ್ದು ಬಳಿಕ ಕೋಟೆಯಮೇಲೆ ಕಾಲಿಡುವ ಸಮಯದಲ್ಲಿ ಮೇಲಿದ್ದವರನ್ನು ದೊಡ್ಡ ಜಲ್ಲೆಗಳಿಂದ ಕೆಳಕ್ಕೆ ಉರುಳಿಸಿಬಿಡುವರು. ಇವರು ಕೆಳಕ್ಕೆ ಉರುಳುವಾಗ ಕೆಳಗೆ ಏಣಿಯ ಹಂತಗಳ ಮೇಲಿದ್ದವರೆಲ್ಲಾ ಉರುಳಿ ಬಿದ್ದು ಕೈಕಾಲು ಮುರಿದು ಸತ್ತುಹೋಗುವರು. ಈ ರೀತಿಯಾಗಿ ಕೋಟೆಗೆ ಲಗ್ಗೆಹತ್ತುವ ಪ್ರಯತ್ನಗಳೆಲ್ಲಾ ನಿಷ್ಫಲವಾಗಿ ಹೋಗಲು ಶತ್ರುಗಳು ಕೋಟೆಯನ್ನು ಹಿಡಿಯುವುದು ಅಸಾಧ್ಯವೆಂದು ಭಾವಿಸಿ ಲಗ್ಗೆ ಹತ್ತುವುದನ್ನು ಬಿಟ್ಟು, ಭದ್ರವಾಗಿ ಮುತ್ತಿಗೆ ಹಾಕಿಕೊಂಡು ನಿಂತರು.

ಇನ್ನು ಕೋಟೆಯು ಶತ್ರುಗಳ ಕೈವಶವಾಗಲಿಕ್ಕೆ ಕಾಲನಿರೀಕ್ಷಣೆಯೊಂದೇ ಉಳಿಯಿತು. ಎರಡು ಮೂರು ತಿಂಗಳ ಕಾಲದಲ್ಲಿ ಕೋಟೆಯೊಳಗಿನ ದವಸ ಧಾನ್ಯಗಳೆಲ್ಲಾ ಮುಗಿಯುತ್ತಾ ಬಂದುವು. ಹೊರಗಿನಿಂದ ಸಹಾಯವೊದಗುವ ಸಂಭವವಿರಲಿಲ್ಲ. ಆಗಲೂ ಪರ್ವತಸಿಂಗನು ಮಾತ್ರ ತನ್ನ ಮಗಳನ್ನು ಪಾದಷಾಹನಿಗೆ ಮದುವೆಮಾಡಿ ಕೊಡುವುದಾಗಿ ಒಪ್ಪಿಕೊಳ್ಳುವುದಾದರೆ ರಾಜಪುತ್ರರಿಗೆ ಅನುಕೂಲವಾಗುವಂತೆ ಒಪ್ಪಂದ ಮಾಡಿಕೊಳ್ಳಬಹುದಾಗಿತ್ತು. ಆದರೆ ಪರ್ವತಸಿಂಗನು ಅದಕ್ಕೆ ಎಷ್ಟುಮಾತ್ರವೂ ಒಪ್ಪನು. ಈ ವಿಷಯಕ್ಕೆ ಒಡಂಬಟ್ಟ ಹೊರತು ಸೆರೆ ಸಿಕ್ಕಿದ ಸೇನೆಗೆ ಯಾವ ವಿಧವಾದ ಒಪ್ಪಂದದ ಮಾತೂ ದೊರೆಯುವಹಾಗಿರಲಿಲ್ಲ.

ಹೀಗೆ ಒದಗಿದ ಸನ್ನಿವೇಶದಲ್ಲಿ ರಾಜಪುತ್ರರು ಶತ್ರುಗಳಿಗೆ ವಶವಾಗುವುದಕ್ಕಿಂತ ಯುದ್ಧದಲ್ಲಿ ಮಡಿಯುವುದೇ ಮೇಲೆಂದು ನಿರ್ಧರಮಾಡಿಕೊಂಡರು. ತಾವು ಯುದ್ಧದಲ್ಲಿ ಒಂದುವೇಳೆ ಮಡಿದರೆ ತಮ್ಮ ಹೆಂಡಿರೂ ಹೆಣ್ಣುಮಕ್ಕಳೂ ಮಹ

ಮ್ಮದ್ ಸೈನಿಕರ ಜನಾನಕ್ಕೆ ಸೇರಬೇಕಾಗುವುದು. ಈ ಘೋರವಾದ ಪಾಪವನ್ನು ತಪ್ಪಿಸಬೇಕಾದರೆ ಮೊದಲು ಹೆಂಗಸರು ಮಕ್ಕಳುಗಳನ್ನೆಲ್ಲಾ ಅಗ್ನಿಪ್ರವೇಶ ಮಾಡಿಸಿ, ತರುವಾಯ ಗಂಡಸರೆಲ್ಲಾ ಮಹಾ ರಭಸದಿಂದ ಶತ್ರುಗಳ ಮೇಲೆ ಬಿದ್ದು ರಣರಂಗದಲ್ಲಿ ಮಡಿಯಬೇಕಾಗುವುದು ಎಂದು ನಿಶ್ಚಯಿಸಿಕೊಂಡರು.

ಈ ದುಃಖಕರವಾದ ನಾಟಕದಲ್ಲಿ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಕಾರ್ಯವನ್ನು ಮಾಡಲು ತಾವು ಸಿದ್ಧರಾಗಿದ್ದೇವೆಂದು ತಿಳಿಸಿದರು. ಅವರಲ್ಲಿ ಸಾಯುವುದಕ್ಕಿಂತ ಹೇಗಾದರೂ ಬಾಳುವುದೇ ಮೇಲೆಂದು ಎಣಿಸುವವರು ಯಾರಾದರೂ ಇದ್ದ ಪಕ್ಷದಲ್ಲಿ ಅವರೂ ಕೂಡ ತಮ್ಮ ಆ ವಿಧವಾದ ದುರಾಶೆಯನ್ನು ತಿಳಿಸಿದರೆ ಅದರಿಂದ ಅವಮಾನವುಂಟಾಗುವುದೊಂದೇ ಹೊರತು ಸಾವು ತಪ್ಪುವುದಿಲ್ಲವೆಂದು ತಿಳಿದುಕೊಂಡು ಮೌನವಾಗಿದ್ದುಬಿಟ್ಟರು. ಆ ಸ್ತ್ರೀಯರಲ್ಲಿ ಕೆಲವರು ಮಾತ್ರ ತಮ್ಮ ಪತಿ ಪಿತೃ ಭ್ರಾತೃಗಳ ಸಂಗಡ ಹೋಗಿ ಯುದ್ಧಮಾಡಲು ಆಜ್ಞೆಯನ್ನು ಪಡೆದುಕೊಂಡರು. ಪರ್ವತಸಿಂಗನ ಪತ್ನಿಯು ತನ್ನ ಮುಖದಲ್ಲಿ ಸ್ವಲ್ಪವಾದರೂ ಭಯವನ್ನಾಗಲಿ ದುಃಖವನ್ನಾಗಲಿ ತೋರಪಡಿಸದೆ—ನಾವು ತುರುಕರ ದಾಸಿಗಳಾಗಲೊಲ್ಲೆವು. ಅಗ್ನಿಪ್ರವೇಶ ಮಾಡಿ ಸ್ವರ್ಗದಲ್ಲಿ ನಂಟರಿಷ್ಟರೊಡನೆ ಸೇರುವುದಾಗಿ ನಿಶ್ಚಯಮಾಡಿಕೊಂಡಿರುವೆವು - ಎಂದು ತನ್ನ ಗಂಡನೊಡನೆ ಹೇಳಿದಳು. ಆ ದಿನ ರಾತ್ರಿ ಮಹತ್ತಾದ ಅಗ್ನಿಕುಂಡವು ಸಿದ್ಧವಾಯಿತು. ಬಳಿಕ ಕೋಟೆಯಲ್ಲಿದ್ದ ಆಭರಣಗಳೇ ಮೊದಲಾದ ಅನರ್ಘ್ಯವಾದ ವಸ್ತುಗಳನ್ನೆಲ್ಲಾ ಮೊದಲು ಆ ಅಗ್ನಿಕುಂಡಕ್ಕೆ ಹಾಕಿಬಿಟ್ಟರು. ಅನಂತರ ದೊಡ್ಡವರು ಸಣ್ಣವರೆನ್ನದೆ ಹೆಂಗಸರೆಲ್ಲಾ ಮಕ್ಕಳು ಮರಿ ಸಹಿತವಾಗಿ ಬೆಂಕಿಯಲ್ಲಿ ಬಿದ್ದೋ, ಇಲ್ಲವೇ ಶಸ್ತ್ರಗಳನ್ನು ಹಾಯ್ದೋ ಪ್ರಾಣವನ್ನು ತೊರೆದುಬಿಟ್ಟರು. ಹೀಗಾಗಿ ಆ ರಾತ್ರಿ ಕೋಟೆಯೊಳಗಾಗಿ ರಾಜಪುತ್ರಸ್ತ್ರೀಯರ ಒಂದು ಪಿಳ್ಳೆ ಸಹ ಜೀವಸಹಿತವಾಗಿ ಉಳಿಯಲಿಲ್ಲ.

ಮಾರನೆಯ ದಿನ ಬೆಳಗಾಯಿತು. ಅದರೊಡನೆ ಗಂಡಸರ ಮರಣದ ಸರದಿಯೂ ಬಂದಿತು. ಈ ದಿನ ಅವರು ಶತ್ರುಗಳ ಕೈಯಲ್ಲಿ ಮರಣವನ್ನು ಪಡೆಯಬೇಕು. ಈ ಕಾರ್ಯಕ್ಕೆ ಹೊರಡುವ ಮೊದಲು ಅವರೆಲ್ಲರೂ ಶಾಸ್ತ್ರೋಕ್ತಪ್ರಕಾರ ದೇವತಾಪೂಜೆಯನ್ನು ಮಾಡಿ ತಮ್ಮ ಕಿರೀಟದೊಳಗೆ ತುಲಸೀಕಾಷ್ಠವನ್ನಿಟ್ಟು, ಕೊರಳಿಗೆ ಸಾಲಗ್ರಾಮವನ್ನು ಕಟ್ಟಿಕೊಂಡು, ಸ್ವರ್ಗಲೋಕದ ಅಪ್ಸರಸ್ತ್ರೀಯರೊಡನೆ ತಮಗಾಗುವ ವಿವಾಹಮಂಗಳವನ್ನು ಸೂಚಿಸುವುದಕ್ಕಾಗಿಯೋ ಎಂಬಂತೆ ಕಿರೀಟವೊಂದನ್ನೂ ಧರಿಸಿಕೊಂಡು, ಈ ರೀತಿ ಅಲಂಕೃತರಾದ ಬಳಿಕ ಎಲ್ಲರೂ ಕೇಸರಿ ಬಣ್ಣದ ಉಡುಪನ್ನು ತಳೆದು, 2,500 ಮಂದಿ ವೀರರು ಸೂರ್ಯೋದಯಕ್ಕೆ ಸರಿಯಾಗಿ ಕೋಟೆಯ ಬಾಗಿಲಬಳಿಗೆ ಬಂದು ಸೇರಿ ಅದೇ ತಮಗೆ ಕಡೆಯ ಪರಸ್ಪರಸಂದರ್ಶನವೆಂದು ಭಾವಿಸಿ ಒಬ್ಬರನ್ನೊಬ್ಬರು ಆದರದೊಡನೆ ಆಲಿಂಗನ ಮಾಡಿಕೊಂಡರು. ಇದಾದಕೂಡಲೆ ಅವರು ಕೋಟೆಯ ಬಾಗಿಲನ್ನು ತೆಗಿಸಿ ಪರ್ವತ

ಸಿಂಗನ ಮತ್ತು ಅವನ ಮಗನಾದ ರಾಮಸಿಂಗನ ಮತವನ್ನನುಸರಿಸಿ ಒಮ್ಮುಖ ವಾಗಿ ಹೊರಹೊರಟು ಶತ್ರುಸೇನೆಯ ಮಧ್ಯಭಾಗದಲ್ಲಿ ಗಾಳಿಗೆ ಅಲ್ಲಾಡುತ್ತಿದ್ದ ಹಸುರು ಬಾವಟೆಯಿಂದ ಮನೋಹರವಾಗಿದ್ದ ಪಾದಷಾಹನ ಪಟ್ಟೆ ಬಟ್ಟೆಯ ಗುಡಾರವನ್ನು ಕಂಡು ಅದರ ಕಡೆಗೆ ಮಹಾ ರಭಸದಿಂದ ನುಗ್ಗಿದರು. ರಾಜ ಪುತ್ರಜಾತಿಗೆ ಪ್ರಾಪ್ತವಾದ ಇಂಥ ವಿಪತ್ಕಾಲದಲ್ಲಿ ಎಲ್ಲರೂ ಸಮಾನಸ್ಥಿತಿಯಲ್ಲಿರ ಬೇಕೆಂದೆಣಿಸಿ ಪರ್ವತಸಿಂಗ್ ರಾಮಸಿಂಗರೂ ಕೂಡ ತಮ್ಮ ಕುದುರೆಗಳನ್ನು ಹತ್ತದೆ ಸಾಮಾನ್ಯರಾದ ಕಾಲಾಳುಗಳಂತೆ ಬರಿಯ ಕಾಲ್ನಡೆಯಲ್ಲಿಯೇ ಬಂದರು. ಆದರೆ ಇತರರಿಗೂ ರಾಜನಿಗೂ ಇರುವ ಭೇದವನ್ನು ಸೂಚಿಸುವುದಕ್ಕಾಗಿ ಪರ್ವತ ಸಿಂಗನ ತಲೆಯ ಮೇಲುಗಡೆ ರಾಜಚಿಹ್ನಸೂಚಕವಾದ ಛತ್ರವನ್ನೂ, ಆತನ ವಂಶ ವನ್ನು ಸೂಚಿಸುವುದಕ್ಕಾಗಿ ಸೂರ್ಯಚಂದ್ರರಿಂದಲಂಕೃತವಾದ ನಿರಾಜಿ ಕಲಶದಧ್ವಜ ಪಟವನ್ನೂ ಹಿಡಿದಿದ್ದರು. ಈ ಧ್ವಜಪಟ ಛತ್ರಗಳು ರಾಜರನ್ನು ಶತ್ರುಗಳ ಬಾಣಕ್ಕೆ ನಿರಂತರವೂ ಗುರಿಮಾಡುವ ಪ್ರಯುಕ್ತ ಯುದ್ಧಕಾಲದಲ್ಲಿ ಅಪಾಯಕರವಾದ ಚಿಹ್ನೆ ಗಳೇಸರಿ. ಆದರೂ ಪ್ರಕೃತದಲ್ಲಿ ಎಲ್ಲರೂ ಸಾಯುವುದಕ್ಕಾಗಿಯೇ ಬಂದಿದ್ದುದರಿಂದ ರಾಜನು ಒಂದುವೇಳೆ ಮೊದಲೇ ಸತ್ತರೂ ಸ್ವರ್ಗಕ್ಕೆ ಒಂದು ಹೆಜ್ಜೆ ಮುಂದಾಗಿ ಹೋದಂತಾಗುವುದೇ ಹೊರತು ಮತ್ತೇನೂ ವ್ಯತ್ಯಾಸವಾಗುತ್ತಿರಲಿಲ್ಲ. ಹಾಗೆ ಅವರು ಸಮೀಪಕ್ಕೆ ಬಂದು ನೋಡುವಲ್ಲಿ ಮಹಮ್ಮದೀಯರು ಒಂದು ಮಣ್ಣು ದಿಣ್ಣೆಯ ಹಿಂದೆ ಬೀಡುಬಿಟ್ಟುಕೊಂಡಿದ್ದುದಾಗಿ ತಿಳಿಯಿತು. ಅವರಿಗೆ ತಿಳಿಯ ದಂತೆ ರಾಜಪುತ್ರರು ಹಠಾತ್ತಾಗಿ ಕಾಣಿಸಿಕೊಂಡು ಮೇಲೆ ಬಿದ್ದುಬಿಟ್ಟರು. ಆ ಕಾರಣದಿಂದಲೇ ಅವರು ವಿಶೇಷ ಪ್ರಯಾಸವಿಲ್ಲದೆ ಆ ದಿಣ್ಣೆಯನ್ನು ಭೇದಿಸಿ ಒಳ ಹೊಗಬಹುದಾಯಿತು. ಆ ಮೇರೆ ಒಳಹೊಕ್ಕ ಕೂಡಲೆ ಅವರು ಶತ್ರುಸೇನೆಯನ್ನು ಸವರುತ್ತ ದಾರಿ ಬಿಡಿಸಿಕೊಂಡು ಪಾದಷಾಹನ ಗುಡಾರದ ಕಡೆಗೆ ಹೋದರು. ಅದನ್ನು ಕಂಡು ಅಹಮದ್‌ಷಾಹನು ಗಕ್ಕನೆ ತನ್ನ ಪಟ್ಟದಾನೆಯ ಅಂಬಾರಿಯನ್ನೇ ರಿದನು ಅವನ ಮುಖವನ್ನು ಕಂಡಕೂಡಲೇ ರಾಜಪುತ್ರರ ಪ್ರಹಾರದಿಂದ ಹಿಮ್ಮೆ ಟ್ಟಿದ್ದ ಮಹಮ್ಮದೀಯ ಸೈನಿಕರೆಲ್ಲಾ ಅಲ್ಲಿಗೆ ಬಂದು ಸೇರಲಾರಂಭಿಸಿದರು. ಆದರೂ ದೂರದಲ್ಲಿ ಇತರ ಭಾಗಗಳಲ್ಲಿದ್ದ ಮಹಮ್ಮದೀಯ ಸೈನಿಕರೆಲ್ಲಾ ಅಲ್ಲಿಗೆ ಬಂದು ಸೇರಲು ಬಹುಕಾಲ ವಿಳಂಬವಾಯಿತು ಈ ನಡುವೆ ಪಾದಷಾಹನು ತನ್ನ ಧ್ವನಿಯಿಂದಲೂ ಕೈಸನ್ನೆಯಿಂದಲೂ ತನ್ನ ಸೈನಿಕರನ್ನು ಪ್ರೋತ್ಸಾಹಿಸುತ್ತ ಮಧ್ಯೆಮಧ್ಯೆ ಮುಂದುವರಿವ ರಾಜಪುತ್ರರಮೇಲೆ ಬಾಣಗಳನ್ನು ಹೊಡೆಯುತ್ತ, ಪ್ರತಿ ನಿಮಿಷವೂ ಸೆರೆಸಾವುಗಳಿಗೆ ಒಳಗಾಗುವ ಹಾಗಿದ್ದರೂ ಎದೆಗೆಡದೆ ಸ್ಥಿರ ವಾಗಿ ನಿಂತು ಯುದ್ಧಮಾಡುತ್ತಾ ಇದ್ದನು ಇದನ್ನು ನೋಡಿ ಅವನ ವೈಗಾ ವಲ ಭಟರು ಹುರಿಗೊಂಡು ಪಟ್ಟದಾನೆಯ ಮುಂದೆ ಬಂದು ನಿಂತು, ತಮ್ಮಲ್ಲಿ ಒಂದು ಪಿಳ್ಳೆ ಸಹ ಉಳಿಯದೆ ಸಾಯುವವರೆಗೂ ಕಡಿದಾಡುತ್ತ ಕಾದಿದರು.

ಅವೇಳೆಗೆ ಸರಿಯಾಗಿ ಅಲ್ಲಿಗೆ ಬಂದು ಬಂದು ಸೇರುತ್ತಿದ್ದ ಸೇನಾಭಾಗವು ಸತ್ತವರ ಸ್ಥಾನದಲ್ಲಿ ನಿಂತು ಯುದ್ಧ ಮಾಡುತ್ತಿದ್ದಿತು. ಇಷ್ಟಾದರೂ ರಾಜಪುತ್ರರು ಹೆಜ್ಜೆ ಹೆಜ್ಜೆಯಾಗಿ ಸಾಗಿ ಮುಂದುವರಿಯುತ್ತ ಸ್ವಲ್ಪ ಸ್ವಲ್ಪವಾಗಿ ಷಾಹನ ಸಮೀಪಕ್ಕೆ ಬರುತ್ತ ಇದ್ದರು. ಹಾಗೆ ಸಾಗುತ್ತ ಸಾಗುತ್ತ ಕಡೆಗೆ ಅವರು ಪಟ್ಟದಾನೆಯ ಎದುರಿಗೆ ಬಂದು ನಿಂತು ತಮ್ಮ ಬಾಣಗಳಿಂದಲೂ ಈಟಿಗಳಿಂದಲೂ ಅಂಬಾರಿಯನ್ನು ತುಂಬಿಬಿಟ್ಟರು.

ಆ ಕಾಲದಲ್ಲಿ ತರುಣನಾದ ರಾಮಸಿಂಗನ ಪರಾಕ್ರಮವು ರಾಜಪುತ್ರರ ಹಗೆಯನ್ನು ಸಂಪೂರ್ಣವಾಗಿ ತೀರಿಸಿಬಿಡುವ ಹಾಗ ತೋರಿತು. ಅವನು ತಟ್ಟನೆ ಪಾದಷಾಹನು ಏರಿದ್ದ ಆನೆಯ ಹೊಟ್ಟೆಯ ಕೆಳಗೆ ನುಗ್ಗಿ ತನ್ನ ಕಠಾರಿಯಿಂದ ಅಂಬಾರಿಯ ಕಟ್ಟನ್ನು ಕತ್ತರಿಸಿಬಿಟ್ಟನು. ಕೂಡಲೆ ಅಂಬಾರಿಯು ಮಗುಚಿಕೊಂಡು ಪಾದಷಾಹನು ನೆಲಕ್ಕೆ ಉರುಳಿದನು. ಆ ವೇಳೆಗೆ ಮುಂದಕ್ಕೆ ಬಂದಿದ್ದ ಒಬ್ಬಿಬ್ಬರು ರಾಜಪುತ್ರರೂ ರಾಮಸಿಂಗನೂ ಕಿರುಬಗಳ ಹಾಗೆ ಹಾರಿ ಅವನ ಮೈಮೇಲೆ ಬಿದ್ದರು. ಆದರೆ ಅವನನ್ನು ಸಂಹರಿಸಲು ಮಾತ್ರ ಸಾಧ್ಯವಾಗಲಿಲ್ಲ. ಅವನು ಗಕ್ಕನೆ ಹಾರಿ ನಿಂತು ಕತ್ತಿಯನ್ನು ಹಿರಿದು ತಿರುಗಿಸುತ್ತ ಸಮೀಪದಲ್ಲಿದ್ದ ತನ್ನ ಸೈನಿಕರು ಬಂದು ಬಿಡಿಸಿಕೊಳ್ಳುವ ವರೆಗೂ ಹೊಡೆದಾಡುತ್ತಿದ್ದನು.

ಇದುವರೆಗೂ ರಾಜಪುತ್ರರ ಪರಾಕ್ರಮವು ಮೇಲುಗೈಯಾಗಿತ್ತು. ಇಲ್ಲಿಂದತ್ತ ಅದು ಕ್ರಮಕ್ರಮವಾಗಿ ಸರಿಗೈಯಾಗುತ್ತ ಬಂದು, ದೂರ ದೂರದಲ್ಲಿದ್ದ ಶತ್ರು ಸೈನಿಕರು ಬಂದು ಕೈಕಲೆತ ಹಾಗೆಲ್ಲಾ ಕುಗ್ಗಲಾರಂಭಿಸಿತು. ರಾಜಪುತ್ರ ಸೇನೆಯು ಪ್ರಥಮಪ್ರವೇಶದಲ್ಲೇ ಮಹಾರಭಸದಿಂದ ಶತ್ರುಸೇನೆಯ ಮಧ್ಯಭಾಗಕ್ಕೆ ಬಂದುಬಿಟ್ಟಿತ್ತು. ಈಗ ಅದರ ಉಭಯಪಾರ್ಶ್ವಗಳಲ್ಲೂ ಶತ್ರುಗಳು ಮುತ್ತಿಕೊಂಡು ಕ್ರಮ ಕ್ರಮವಾಗಿ ಸುತ್ತಲೂ ಸುತ್ತಿಕೊಂಡು ನಡುವೆ ಸಿಕ್ಕಿಸಿಕೊಂಡುಬಿಟ್ಟರು. ಇದು ತಿಳಿದ ಕೂಡಲೆ ರಾಜಪುತ್ರರು ಮಂಡಲಾಕಾರವಾಗಿ ನಿಂತು ಶತ್ರುಸಂಹಾರಮಾಡುತ್ತ ಸತ್ತುಬಿದ್ದ ತಮ್ಮ ಸೈನಿಕರ ದೇಹವನ್ನೇ ಕೋಟೆ ಮಾಡಿಕೊಳ್ಳುತ್ತಾ ಘೋರವಾಗಿ ಯುದ್ಧಮಾಡತೊಡಗಿದರು. ಈ ವೇಳೆಗೆ ಅವರಿಗೆ ಮುಂದುವರಿವ ಶಕ್ತಿ ಕುಗ್ಗಿ ಹೋಯಿತು ಸೈನಿಕರು ಮಡಿದುಹೋದ ಹಾಗೆಲ್ಲಾ ಅವರ ಮಂಡಲವು ಕ್ರಮ ಕ್ರಮವಾಗಿ ಕಿರಿದಾಗುತ್ತ ಬಂದಿತು. ಅವರ ಕತ್ತಿಗಳು ಮುರಿದು ಮೊಂಡಾದುವು. ಅವಿಚ್ಛಿನ್ನವಾದ ಯುದ್ಧಶ್ರಮದಿಂದ ಅವರ ಮಾಂಸಖಂಡಗಳು ಬಲಹೀನವಾದುವು. ಇನ್ನು ಸ್ವಲ್ಪಕಾಲದಲ್ಲಿಯೇ ಅವರು ಶತ್ರುಗಳ ಮೇಲೆ ಮುಂದರಿವುದನ್ನು ಬಿಟ್ಟು ಆತ್ಮ ರಕ್ಷಣೆಯನ್ನು ಮಾಡಿಕೊಳ್ಳುವುದರಲ್ಲಿಯೇ ತೃಪ್ತರಾಗಬೇಕಾಯಿತು. ಹೀಗಾದರೂ ಕೂಡ ಆಗಾಗ್ಗೆ ನಾಲ್ಕಾರು ಮಂದಿ ರಾಜಪುತ್ರರು ತೀವ್ರವಾದ ವೇಗದಿಂದ ಭೇದಿಸಿಕೊಂಡು ಶತ್ರು ಸೈನ್ಯದ ಮಧ್ಯಭಾಗಕ್ಕೆ ನುಗ್ಗಿ ಸಾಧ್ಯವಾದಷ್ಟು ಮಂದಿಯನ್ನು ಸಂಹರಿಸಿ, ತಾವು ಹಾರೈಸಿದಂತೆಯೇ ವೀರಮರಣವನ್ನು ಹೊಂದುತ್ತಿದ್ದರು.

ಈ ಮಧ್ಯೆ ಪರ್ವತಸಿಂಗನ ಧ್ವಜಚ್ಛತ್ರಗಳನ್ನು ಧ್ವಂಸಮಾಡಬೇಕೆಂದು ಮಹಮ್ಮದೀಯರು ಅನೇಕವೇಳೆ ಸಾಹಸಮಾಡಿದರು. ಆದರೂ ಕೈವಶವಾಗದೆ ಅವು ರಣಧೂಳಿಗೂ ರಣಘೋಷಕ್ಕೂ ಮೇಲೆ ಕಂಗೊಳಿಸುತ್ತ ನಿಂತಿದ್ದುವು. ಪರ್ವತ ಸಿಂಗನೂ ಕೂಡ ಮಹಾ ಪರಾಕ್ರಮಶಾಲಿಗಳಾದ ತನ್ನ ಪಿತೃಪಿತಾಮಹರಂತೆಯೇ ಇದುವರೆಗೂ ಕಠೋರವಾಗಿ ಕದನಮಾಡುತ್ತಿದ್ದನು. ಈಗ ಆತನು ಶತ್ರುಗಳ ಬಾಣಘಾತದಿಂದ ನೊಂದು, ರಾಜಭಕ್ತಿಯಿಂದ ತನಗಾಗಿ ಪ್ರಾಣವನ್ನು ಬಿಟ್ಟ ತನ್ನ ವೀರರೊಡನೆ ರಣಭೂಮಿಯಲ್ಲಿ ಪವಡಿಸಿಬಿಟ್ಟನು. ಇದಾದ ಉತ್ತರಕ್ಷಣ ದಲ್ಲಿಯೇ ರಾಮಸಿಂಗನು ತನ್ನ ತಂದೆಯ ಸ್ಥಾನದಲ್ಲಿ ಬಂದು ನಿಂತು ಈ ಘೋರ ವಾದ ಯುದ್ಧವನ್ನು ನಡಿಸತೊಡಗಿದನು. ಸ್ವಲ್ಪ ಕಾಲದಲ್ಲಿಯೇ ಅವನ ಖಡ್ಗವು ಮುರಿದುಹೋಯಿತು. ಕೂಡಲೆ ಅವನು ಆಗತಾನೆ ರಣಭೂಮಿಗೆ ಬಂದ ಒಬ್ಬ ಖಾನನ ಕೈಯಿಂದ ಒಂದು ತೀಕ್ಷ್ಣವಾದ ಖಡ್ಗವನ್ನು ಕಿತ್ತುಕೊಂಡು ಅದರಿಂದಲೇ ಮೂರು ಮಂದಿ ಶತ್ರುಗಳನ್ನು ಸಂಹರಿಸಿ ತಾನೂ ಸಂಹೃತನಾಗಿ ಬಿದ್ದುಬಿಟ್ಟನು. ಅವನೊಡನೆ ರಾಜಪುತ್ರರ ಚಂದ್ರ ಸೂರ್ಯಧ್ವಜವೂ ಭಗ್ನವಾಗಿ ಭೂಮಿಗೆ ಬಿದ್ದು ಹೋಯಿತು. ಅದರೊಡನೆ ಯುದ್ಧವೂ ಕೊನೆಗಂಡಿತು. ಆ ವೇಳೆಗೆ ಉಭಯ ಪಕ್ಷದವರಲ್ಲಿಯೂ ಸೇರಿ ಐದುಸಾವಿರ ಮಂದಿ ವೀರರು ಹತರಾಗಿ ಹೋದರು. ಅಲ್ಲಿಂದ ಮುಂದೆ ಮಹಮ್ಮದೀಯರ "ದೀಞ್ ದೀಞ್" ಎಂಬ ವೀರಘೋಷ ಒಂದು ಕೇಳುತ್ತಿದ್ದಿತೇ ಹೊರತು ಅದಕ್ಕೆ ಪ್ರತಿಯಾಗಿ ಏಳುತ್ತಿದ್ದ ರಾಜಪುತ್ರರ "ಹರಹರ ಮಹಾದೇವ" ಎಂಬ ವೀರಘೋಷವು ಕೇಳಿಸುತ್ತಿರಲಿಲ್ಲ. ಆದಿನ ಭಯಂಕರ ವಾದ ರಣರಂಗದಲ್ಲಿ ಆಹೋರಿನಲ್ಲಿದ್ದ ರಾಜಪುತ್ರ ವೀರರೆಲ್ಲಾ ಮೈಮರೆದೊರೆ ಗಿದರು. ಆದರೂ ಅವರು ತಾವು ಬೀಳುವುದಕ್ಕೆ ಮುಂಚೆ ತಮಗಿಂತ ಹೆಚ್ಚು ಮಂದಿ ಶತ್ರು ಸೈನಿಕರನ್ನು ಅಧೋಲೋಕಕ್ಕೆ ನೂಕಿ ಆ ಬಳಿಕ ತಾವು ಬಿದ್ದಿದ್ದರು. ಹೀಗೆ ಯುದ್ಧವು ಮುಗಿದ ತರುವಾಯ ಅಹಮದ್‌ಷಾಹನು ಇಷ್ಟು ಶ್ರಮದಿಂದ ಸಾಧಿಸಿದ ತನ್ನ ವಧುವನ್ನು ಎತ್ತಿಕೊಂಡು ಹೋಗುವುದಕ್ಕಾಗಿ ಆಹೋರ್‌ಕೋಟೆ ಯನ್ನು ಪ್ರವೇಶಿಸಿದನು. ಅಲ್ಲಿ ಹೋಗಿ ನೋಡುವಲ್ಲಿ ಎಲ್ಲೆಲ್ಲಿಯೂ ಶವಗಳು ತುಂಬಿದ್ದುವೇ ಹೊರತು ಜೀವಸಹಿತವಾದ ಒಂದು ಪಿಳ್ಳೆ ಸಹ ಕಣ್ಣಿಗೆ ಬೀಳಲಿಲ್ಲ, ಕೋಟೆಯ ಹೊರಗೂ ಒಳಗೂ ವಾಯುಮಂಡಲವೆಲ್ಲಾ ಹೆಣದ ನಾತದಿಂದ ಹೊಲ ಸಾಗಿ ಹೋಗಿತ್ತು. ರಾಜಪುತ್ರವೀರರು ಇತರ ಯುದ್ಧಗಳಲ್ಲಿ ಹೇಗೆಯೋ ಹಾಗೆಯೇ ಇಲ್ಲಿಯೂ ಕೂಡ ತಾವು ಯುದ್ಧದಲ್ಲಿ ಹತರಾದರೂ ಆಗುವವರೇ ಹೊರತು ಎಂದಿಗೂ ಪರಾಧೀನರಾಗತಕ್ಕವರಲ್ಲ—ಎಂಬ ಅಂಶವನ್ನು ಪ್ರಕಟಪಡಿ ಸಿದರು. ಹೀಗೆ ರಾಜಪುತ್ರಸ್ತ್ರೀಯರೂ ಪುರುಷರೂ ಸಹ ಸ್ವಲ್ಪವಾದರೂ ಹಿಂಜ ರಿಯದೆ ಸ್ಥಿರಭಾವದಿಂದ ಕೈಕೊಂಡ ವೀರಮರಣವು ಇವರ ವಂಶೀಯರಲ್ಲೆಲ್ಲಾ ಇದೇ ವಿಧವಾದ ಅಪ್ರತಿಹತಸ್ಥೈರ್ಯವನ್ನು ಉಂಟುಮಾಡಿ ತನ್ಮೂಲಕ ಮೊಗಲರ ಪ್ರಭುತ್ವಕ್ಕೆ ಕೂಡ ಒಳಗಾಗದ ನಿಷ್ಕಳಂಕವಾದ ಸ್ವಾತಂತ್ರ್ಯ ಸಂಪತ್ತನ್ನು ಸಂಪಾ ದಿಸಿ ಕೊಟ್ಟಿತು.

## II.

ಅಹಮದ್‌ಷಾಹನು ತನ್ನ ಕನ್ಯಾವರಣದಿಂದ ಸಂಭವಿಸಿದ ದಾರುಣವಾದ ಫಲವನ್ನು ನೋಡಿ ಸ್ವಲ್ಪಕಾಲ ಖಿನ್ನನಾಗಿದ್ದನು. ಹೀಗಿರುತ್ತಿರುವಲ್ಲಿ ಲಾಲ್ ದೇವಿಯು ಆ ಊರಿನ ಅಗ್ನಿಕುಂಡದಲ್ಲಿ ಮೃತಳಾಗಲಿಲ್ಲವೆಂಬ ಸಂಗತಿಯು ಗೂಢ ಚಾರರ ಮೂಲಕ ಅವನಿಗೆ ತಿಳಿಯಬಂದಿತು. ಅದನ್ನು ಕೇಳಿ ಅವನಿಗೆ ಪುನಃ ಉತ್ಸಾಹವುಂಟಾಯಿತು. ಅವನು ಆ ಊರ ಕೋಟೆಗೆ ಮುತ್ತಿಗೆ ಹಾಕುವುದಕ್ಕೆ ಮುಂಚೆಯೇ ರಾಜಪುತ್ರರು ಆಕೆಯನ್ನು ಗೋಪ್ಯವಾಗಿ ಹೊರಕ್ಕೆ ಕರೆದುಕೊಂಡು ಹೋಗಿ ಪರ್ವತಸಿಂಗನ ವಿಶ್ವಾಸಕ್ಕೆ ಪಾತ್ರನಾದ ಒಬ್ಬ ನೆರೆ ನಾಡಿನ ರಾಜನ ರಕ್ಷಣೆಯಲ್ಲಿ ಇಟ್ಟಿದ್ದರು. ಈ ಸಂಗತಿಯನ್ನು ತಿಳಿದ ಕೂಡಲೆ ಅಹಮದ್‌ಷಾಹನು ತಾನು ಆಕೆಯನ್ನು ಮದುವೆಯಾಗುವುದಾಗಿ ನಿಷ್ಕರ್ಷಿಸಿರುವ ಕಾರಣ, ಅವಳನ್ನು ಕಳುಹಿಸಿ ಕೊಡಬೇಕೆಂಬುದಾಗಿ ಪರ್ವತಸಿಂಗನ ಮಿತ್ರನಿಗೆ ರಾಯಸವನ್ನು ಬರೆದು ಕಳುಹಿಸಿದನು. ಆ ಮಿತ್ರನೂ ಕೂಡ ಪಾದಷಾಹನ ಆಜ್ಞೆಯನ್ನು ಲಕ್ಷ್ಯ ಮಾಡದೆ, ಅವನು ಸಮಸ್ತ ಸೈನ್ಯಸಮೇತವಾಗಿ ಬಂದರೂ ತಾನು ಕಡೆಯವರೆಗೂ ಹೊಡೆದಾಡಿ ಆ ಕನ್ಯೆಯನ್ನು ರಕ್ಷಿಸಲು ಸಿದ್ಧನಾಗಿದ್ದನು. ಆದರೆ ಲಾಲ್ ದೇವಿಯು—ನಾನು ಇನ್ನು ಮುಂದೆ ಅನ್ಯಾಯವಾದ ನರಹತಿಗೆ ಕಾರಣವಾಗ ಲೊಲ್ಲೆ. ನನ್ನನ್ನು ಮದುವೆಯಾಗುವೆನೆಂದು ಪಾದಷಾಹನು ನಿಷ್ಕರ್ಷೆಮಾಡಿ ಕೊಂಡಿರುವುದರಿಂದ ಅವನ ಇಷ್ಟಾನುಸಾರವಾಗಿಯೇ ನಡೆಯಲಿ. ಅವನು ನನ್ನನ್ನು ಮದುವೆಯಾದುದಕ್ಕಾಗಿ ಪಶ್ಚಾತ್ತಾಪ ಪಡೆದಂತೆಯೂ ಆಗಲಿ'—ಎಂದು ಹೇಳಿ, ತರುವಾಯ ತಾನು ಪಾದಷಾಹನನ್ನು ಮದುವೆಯಾಗಲೊಡಂಬಟ್ಟು ವಿವಾ ಹಮುಹೂರ್ತದಲ್ಲಿ ಆತನು ಧರಿಸಿಕೊಳ್ಳುವುದಕ್ಕಾಗಿ ನವರತ್ನಗಳಿಂದಲಂಕೃತವಾದ ಜರತಾರಿಯುಡಗೆಯನ್ನು ಕಳುಹಿಸಿಕೊಡುವುದಾಗಿ ಮಾತುಕೊಟ್ಟು ಕಳುಹಿಸಿದಳು. ಅದನ್ನು ಕೇಳಿ ರಾಜಪುತ್ರರೆಲ್ಲಾ—ಅಯ್ಯೋ, ತನ್ನ ಜಾತಿಯನ್ನೇ ನಿರ್ಮೂಲಮಾಡಿ ತನ್ನ ಪಿತೃಭ್ರಾತೃಗಳ ರಕ್ತದಲ್ಲಿ ಕೈ ತೊಳೆದ ಆ ರಾಕ್ಷಸಾಧಮನ ಕೈಯನ್ನು ಹಿಡಿಯುವ ಇಂಥಾ ನೀಚಸ್ತ್ರೀಯೂ ಉಂಟೇ ?—ಎಂದು ಅವಳನ್ನು ನಾನಾವಿಧ ವಾಗಿ ಶಪಿಸುತ್ತಿದ್ದರು.

ಈ ನಡುವೆ ವಿವಾಹಮಹೋತ್ಸವವು ಚಾಂದ್ನಿತಲಾವಿನ ಪಕ್ಕದಲ್ಲಿದ್ದ ಅರ ಮನೆಯಲ್ಲಿ ನಡೆಯುವುದಾಗಿ ನಿಷ್ಕರ್ಷೆಯಾಯಿತು. ರಾಜತಂತ್ರವೇ ಮೊದಲಾದ ಹಲವು ಕಾರಣಗಳಿಗಾಗಿ ಆ ವಿವಾಹವನ್ನು ಬಹು ವಿಜೃಂಭಣೆಯಿಂದ ನಡಿಸುವು ದಾಗಿ ಏರ್ಪಾಟಾಯಿತು. ಷಾಹನು ಆ ವಿವಾಹವನ್ನು ಪ್ರಬಲವಾದ ಒಂದು ಸಮಾಧಾನ ಸಂತರ್ಪಣೆಯಂತೆ ಮಾಡಿ ತನ್ಮೂಲಕ ತನ್ನ ಇಷ್ಟಾರ್ಥವನ್ನು ಪಡೆ ದುಕೊಳ್ಳುವುದು ಮಾತ್ರವೇ ಅಲ್ಲದೆ ಹಿಂದುಗಳನ್ನೂ ಮುಸಲ್ಮಾನರನ್ನೂ ಸ್ನೇಹ ಭಾವದಿಂದ ಒಂದುಗೂಡಿಸಿ ತಾನು ಉಭಯ ಸಂಸ್ಥಾನಗಳನ್ನೂ ಏಕಾಧಿಪತ್ಯ

ದಿಂದ ಆಳಬೇಕೆಂದು ಆಲೋಚಿಸಿದ್ದನು. ತನ್ನ ಆ ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಇದುವರೆಗೆ ತನಗೆ ವಿರೋಧವಾಗಿ ಕತ್ತಿ ಹಿಡಿದಿದ್ದ ರಾಜಪುತ್ರರಿಗೆಲ್ಲಾ ಅಭಯಪ್ರದಾನ ಮಾಡುವದಾಗಿ ಹೇಳಿದನು. ಈ ಮದುವೆಯನ್ನು ಕೂಡಿದ ಮಟ್ಟಿಗೂ ಹಿಂದೂ ಜನರ ಸಂಪ್ರದಾಯಾನುಗುಣವಾಗಿ ಮಾಡಬೇಕೆಂದು ಗೊತ್ತುಮಾಡಿ ಆ ಶುಭಕಾಲದಲ್ಲಿ ಸಾವಿರಾರು ಬ್ರಾಹ್ಮಣರಿಗೆ ಮೃಷ್ಟಾನ್ನಭೋಜನ ಮಾಡಿಸುವಂತೆ ಆಜ್ಞೆಮಾಡಿದನು. ಅವನ ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಇತರ ಸಂಸ್ಥಾನಗಳಿಂದಲೂ ಲಕ್ಷೋಪಲಕ್ಷ ಜನರು ಗುಂಪು ಗುಂಪಾಗಿ ಬಂದು ಸೇರಿ ಪಾದಷಾಹನ ಔದಾರ್ಯದಿಂದ ತೃಪ್ತರಾಗುತ್ತಿದ್ದರು.

ಕೊನೆಗೆ ಅಹಮದ್ ಷಾಹನ ಅಭಿಲಾಷೆಗೆ ಚರಮಸೀಮೆ ಎನಿಸಿಕೊಂಡ ವಿವಾಹದಿವಸವೇ ಬಂದೊದಗಿತು. ಆ ದಿವಸ ಆತನೂ ಲಾಲ್‌ದೇವಿಯೂ ಕೊರಳಲ್ಲಿ ವಿವಾಹ ಮಾಲಿಕೆಗಳನ್ನು ಹಾಕಿಕೊಂಡು ಹಸೆಯ ಮೇಲೆ ಒಬ್ಬರ ಪಕ್ಕದಲ್ಲಿ ಒಬ್ಬರು ಕುಳಿತುಕೊಂಡಿದ್ದಾರೆ. ಆ ಮೋಹನಾಂಗಿಯಾದ ವಧುವು ಸರ್ವೋತ್ತಮವಾದ ಪಟ್ಟೆಮಡಿಯ ಕುಪ್ಪಸವನ್ನು ತೊಟ್ಟು ಕೆಂಪು ಬಿಳುಪು ಚುಕ್ಕಿಯ ರೇಶ್ಮೆ ಪತ್ತಲವನ್ನುಟ್ಟು ಅದರ ಜರತಾರಿ ಸೆರಗನ್ನು ತಲೆಯ ಮುಸುಕು ಹಾಕಿಕೊಂಡು ಕಿರೀಟದಂತಿರುವ ಶಿರೋಭೂಷಣವನ್ನು ಧರಿಸಿ ಶೃಂಗಾರವಾಗಿ ಕುಳಿತಿದ್ದಾಳೆ. ವರನೂ ಕೂಡ ಅದೇ ದಿನ ಬೆಳಗ್ಗೆ ತನಗೆ ವಧುವು ಕಳುಹಿಸಿಕೊಟ್ಟ ದಿವ್ಯರತ್ನೋಜ್ವಲವಾದ ಜರತಾರಿ ಉಡುಪನ್ನು ಹಾಕಿಕೊಂಡು ಪ್ರಕಾಶಿಸುತ್ತಿದ್ದಾನೆ. ಆ ಸಮಯದಲ್ಲಿ ಅವನು ಮಹಮ್ಮದೀಯರ ಪದ್ಧತಿಗೆ ವಿರುದ್ಧವಾಗಿ ತನ್ನ ಕೈಯಲ್ಲಿ ಆಕೆಯ ಕೈಯನ್ನೂ ತುಲಸೀದಳವನ್ನೂ ತೆಗೆದುಕೊಂಡಿದ್ದಾನೆ. ಇದೋ ಈಗ ಅವರಿಬ್ಬರೂ ಸತಿಪತಿಗಳಾಗಿ ಬಿಟ್ಟರು.

ಆ ಬಳಿಕ ಆಕಾಲದಲ್ಲಿ ನಡೆಯಬೇಕಾದ ಮಂಗಳ ಕಾರ್ಯಗಳೆಲ್ಲಾ ನಡೆದುವು. ಆ ತರುವಾಯ ಲಾಲ್‌ದೇವಿಯು ಹಸೆಯಿಂದೆದ್ದು ತನ್ನ ಗಂಡನ ಕೈಯನ್ನು ಹಿಡಿದುಕೊಂಡು ರಜತಸರೋವರದ ಮೇಲುಗಡೆಯಲ್ಲಿದ್ದ ಕೈಸಾಲೆಯ ಕೈಪಿಡಿ ಗೋಡೆಯ ಬಳಿಗೆ ಕರೆದುಕೊಂಡು ಹೋಗಿ " ಎಲೈ ಸ್ವಾಮಿಯೇ, ಸೂರ್ಯನ ಬೆಳಕಿನಲ್ಲಿ ನಿಂತು ರಾಜಭಕ್ತಿಯುಳ್ಳ ನಿಮ್ಮ ಪ್ರಜೆಗಳಿಗೆ ನಿಮ್ಮ ಸಂದರ್ಶನವನ್ನು ಕರುಣಿಸಿ ಸಂತೋಷ ಪಡಿಸಿರಿ " ಎಂದು ಹೇಳಿದಳು.

ಆ ಉನ್ನತಸ್ಥಳದಲ್ಲಿ ನಿಂತು ಷಾಹನು ನಾಲ್ಕು ಕಡೆಯಲ್ಲಿಯೂ ನೋಡುವಲ್ಲಿ ಎಲ್ಲೆಲ್ಲಿಯೂ ಸಂತೋಷ ಸೂಚಕವಾದ ಹಬ್ಬದುಡುಗೆಗಳನ್ನುಟ್ಟುಕೊಂಡು ಸಹಸ್ರೋಪಸಹಸ್ರವಾಗಿ ಬಂದು ಸೇರಿದ್ದ ಪ್ರಜೆಗಳನ್ನು ಕಂಡನು. ಅವರು ಅವನ ದರ್ಶನಮಾತ್ರದಿಂದಲೇ ಸಂತುಷ್ಟರಾಗಿ ಜಯಘೋಷವನ್ನು ಮಾಡಿದರು. ಆ ವಿಭವವನ್ನೆಲ್ಲಾ ನೋಡಿ ಅವನ ಹೃದಯವು ಮೇಲ್ಮೆಯಿಂದ ಹಿಗ್ಗಿಹೋದುದೇನೂ ಆಶ್ಚರ್ಯವಲ್ಲ. ಆ ಸರೋವರವೂ ಅದರ ತೀರಗಳೂ ಅವನ ಪ್ರಜೆಗಳಿಂದ ಕಿಕ್ಕಿ

ರಿದು ಹೋಗಿದ್ದುವು. ಕಣ್ಣಿಗೆ ಕಾಣುವವರೆಗೆ ಯಾವ ಕಡೆ ನೋಡಿದರೂ ಅವನ ಸೀಮೆಗೆ ಸೇರದೆಯಿದ್ದ ಬಯಲಾಗಲಿ ತಪ್ಪಲಾಗಲಿ ಬೆಟ್ಟವಾಗಲಿ ಅವನ ದೃಷ್ಟಿಗೆ ಗೋಚರವಾಗಲಿಲ್ಲ. ಇಷ್ಟೊಂದು ಸಂಪತ್ತಿಗೂ ಶಿಖರಪ್ರಾಯವಾಗಿಯೂ ತನ್ನ ಬಾಹುಬಲದಿಂದ ಲಬ್ಧಳಾಗಿಯೂ ಇದ್ದ ಸುಂದರಾಂಗಿಯೂ ಕೂಡ ತನ್ನ ಪಟ್ಟ ಮಹಿಷಿಯಾಗಿ ತನ್ನ ಪಕ್ಕದಲ್ಲಿಯೇ ನಿಂತಿದ್ದಳು. ಇವೆಲ್ಲವನ್ನೂ ನೆನೆದು ನೆನೆದು ಪಾದಷಾಹನು ಅಪಾರವಾದ ಆನಂದಸಾಗರದಲ್ಲಿ ತೇಲಾಡುತ್ತಿದ್ದನು. ಹೀಗಿರು ತ್ತಿರುವ ಕಾಲದಲ್ಲಿ ಲಾಲ್‌ದೇವಿಯು ನವವಧುವಿಗೆ ಸಹಜವಾದ ಲಜ್ಜಾವಲೋಕ ನವನ್ನು ತೊರೆದು, ವಿಜಾತೀಯವಾದ ನೋಟದಿಂದ ಆತನನ್ನು ದುರದುರನೆ ನೋಡುತ್ತ—"ಓ ಸ್ವಾಮಿ, ಹೀಗೆ ಸಮಸ್ತ ಸಂಪತ್ತೂ ಬಂದೊದಗಿರುವಾಗಲೇ ಈ ಆನಂದವನ್ನು ಅನುಭವಿಸು. ಮನುಷ್ಯರು ಸಂಪತ್ತಿನ ಪರಾಕಾಷ್ಠತೆಗೆ ಬಂದ ಕೂಡಲೆ ದೇವತೆಗಳ ವಿದ್ವೇಷಕ್ಕೆ ಪಾತ್ರರಾಗುವರೆಂಬುದನ್ನು ನೆನೆದುಕೊ. ಸರ್ವ ಸಂಪೂರ್ಣವಾದ ಆರೋಗ್ಯ, ಯೌವನ, ಅನುರಾಗ ಇವುಗಳನ್ನು ಅನುಭವಿಸುತ್ತಿ ರುವ ನಾವು ಒಂದು ದಿವಸದೊಳಗಾಗಿ ಒಂದು ಕ್ಷಣಕಾಲದಲ್ಲಿಯೇ ಅಳಿದು ಹೋಗ ಬಹುದು"—ಎಂಬದಾಗಿ ಗಂಭೀರಭಾವದಿಂದ ಹೇಳಿದಳು. ಅದನ್ನು ಕೇಳಿ ಅಹಮದ್ ಷಾಹನು ಅನುರಾಗಪೂರ್ವಕವಾದ ಮಂದಹಾಸದಿಂದಲೇ ಪ್ರತ್ಯುತ್ತರ ಕೊಟ್ಟನು. ಆತನಿಗೆ ತನ್ನ ಪತ್ನಿಯಲ್ಲಿ ಅತ್ಯಧಿಕವಾದ ಮೋಹವಿದ್ದುದರಿಂದ, ಅವಳ ಮಾತುಗಳೂ ಅವಳ ಕೆಲಸಗಳೂ ಅವಳ ಸೌಂದರ್ಯವನ್ನು ಮತ್ತಷ್ಟು ಪೋಷಿಸುವಂತೆ ತೋರು ತ್ತಿದ್ದುವು.

ಹಾಗೆ ನಿಂತುಕೊಂಡು ನೋಡುತ್ತಿರುವಲ್ಲಿ ಪಾದಷಾಹನ ರತ್ನಮಯವಾದ ಉಡುಪಿನ ಮೇಲೆ ಸೂರ್ಯ ಕಿರಣಗಳು ಬಿದ್ದಹಾಗೆಲ್ಲಾ ಅದರಲ್ಲಿದ್ದ ವಜ್ರಗಳಿಂದ ಅಗ್ನಿಜ್ವಾಲೆ ಹುಟ್ಟುವ ಹಾಗೆ ತೋರಿತು. ಆತನ ಪಕ್ಕದಲ್ಲಿದ್ದ ಆಸ್ಥಾನಾಧಿಕಾರಿ ಗಳೂ ಕೆಳಗೆ ಸರೋವರದ ಸುತ್ತಲೂ ತುಂಬಿಕೊಂಡಿದ್ದ ಜನರೂ ಸಹ ಭ್ರಾಂತರಾಗಿ ಅದನ್ನೇ ನೋಡುತ್ತಿದ್ದರು. ಅವರು ನೋಡುತ್ತಿದ್ದ ಹಾಗೆಯೇ ಹಠಾತ್ತಾಗಿ ಅವನ ದಕ್ಷಿಣಭುಜದಿಂದ ನಿಜವಾಗಿಯೂ ಉರಿ ಹೊರಟಿತು. ಎಲ್ಲರಿಗೂ ಅದನ್ನು ನೋಡಿ ಮಹತ್ತಾದ ಭ್ರಾಂತಿಯೂ, ಮಿತಿಮೀರಿದ ಶೋಕವೂ ಉಂಟಾದುವು. ಅವರು ತಮ್ಮ ಕಣ್ಣನ್ನೇ ನಂಬಲಾರದೆ ಹೋದರು. ಆದರೂ ಉರಿ ಮಾತ್ರ ಇದ್ದೇ ತ್ತು. ಲಾಲ್‌ದೇವಿಯು ತನ್ನ ವರನ ಉಡುಪಿಗೆ ತೊಡೆದಿದ್ದ ವಿಷವು ಸೂರ್ಯಕಿರ ಣದ ವೇಗದಿಂದ ಹತ್ತಿಕೊಂಡು ಉರಿಯನ್ನು ಎಬ್ಬಿಸಿತು. ಅದನ್ನು ಕಂಡು ಷಾಹನು ನಡುಗಿ ಹೋದನು. ಅವನು ಯುದ್ಧದಲ್ಲಿ ಭಯವನ್ನರಿತವನಲ್ಲ. ಆದರೆ ತನ್ನ ಅನುರಾಗಕ್ಕೆ ಪಾತ್ರಳಾದ ಸ್ತ್ರೀಯಿಂದ ಈ ಘೋರವಾದ ರೀತಿಯಲ್ಲಿ ಮೃತ್ಯು ವೊದಗಿದುದನ್ನು ಕಂಡು, ಅವನು ಎದೆಗೆಟ್ಟು ಸಾಮಾನ್ಯ ಮನುಷ್ಯನ ಸ್ಥಿತಿಗಿಳಿದು ನೋವಿನಿಂದ ಚೀರುತ್ತ ತನ್ನ ದೇಹವನ್ನು ದಹಿಸುತ್ತಿರುವ ವಸ್ತ್ರವನ್ನು ತೆಗೆಯುವ

ಆತುರದಿಂದ ಹಿಂದಕ್ಕೂ ಮುಂದಕ್ಕೂ ಓಡಾಡ ತೊಡಗಿದನು. ಅದೂ ಕೂಡ ಬಹಳ ಕಾಲ ನಡೆಯಲಿಲ್ಲ. ಅಗ್ನಿ ಜ್ವಾಲೆಯು ಮಹಾ ಭಯಂಕರವಾಗಿ ವ್ಯಾಪಿಸಿ ಕ್ಷಣಮಾತ್ರದಲ್ಲಿ ಆ ಪಾದಷಾಹನನ್ನೂ ಅವನ ಅಮೂಲ್ಯವಾದ ವಸ್ತ್ರಗಳನ್ನೂ ಸುಟ್ಟು ಬೂದಿಮಾಡಿಬಿಟ್ಟಿತು. ಈ ನಡುವೆ ಲಾಲ್‌ದೇವಿಯು ಸುಸ್ಥಿರಭಾವದಿಂದ ಕೈಪಿಡಿ ಗೋಡೆಯನ್ನು ಹತ್ತಿ ತನ್ನ ವರನ ಮರಣಸಂಕಟವನ್ನು ಮಿಶ್ರಭಾವದಿಂದ ನೋಡುತ್ತ, ತನ್ನ ಪಿತೃ ಭ್ರಾತೃಕುಲದವರ ಮರಣದ ಸಾಲವು ಇಂದಿಗೆ ಸಂಪೂರ್ಣವಾಗಿ ತೀರಿತೆಂದು ತೃಪ್ತಿಪಟ್ಟವಳಾಗಿ, ರಜತಸರೋವರದೊಳಕ್ಕೆ ತಲೆಕೆಳಗಾಗಿ ಬಿದ್ದುಬಿಟ್ಟಳು.

---

## ಬಳೆಯ ಬಂಧುತ್ವ.

ರಾಜಪುಟಾಣ ಪ್ರಾಂತದಲ್ಲಿ ಒಂದು ದೃಢವಾದ ಗಿರಿದುರ್ಗವುಂಟು. ಅಲ್ಲಿಯ ಸಭಾಮಂಟಪದಲ್ಲಿ ಒಂದಾನೊಂದು ದಿವಸ ಕೆಲವುಂದಿ ಸೇನಾನಾಯಕರೂ ಪ್ರಧಾನಿಗಳೂ ಮಂತ್ರಾಲೋಚನಾಸಭೆಯಲ್ಲಿ ನೆರೆದಿದ್ದರು. ಅವರಲ್ಲಿ ಹೆಚ್ಚುಮಂದಿ ವೃದ್ಧರಾಗಿದ್ದರು. ಆ ಸಭಾಮಂಟಪದ ನಡುವೆ ಹಾಕಿದ್ದ ಉಪ್ಪಾರದ ಮೇಲೆ ನಾಗೂರು ರಾಜನಾದ ಮಾನಸಿಂಗನು ಉದ್ದವಾದ ಬಿಳಿಯ ಗಡ್ಡವನ್ನು ಬಿಟ್ಟುಕೊಂಡು ಕುಳಿತಿದ್ದನು. ಅವನ ಮುಖವು ಪ್ರಬಲವಾದ ಚಿಂತೆಯಿಂದ ಬಾಗಿಕೊಂಡಿತ್ತು. ಅವನ ಸುತ್ತಲೂ ಕುಳಿತಿದ್ದ ಮಂತ್ರಿಗಳೂ ಕೂಡ ಅವನಂತೆಯೇ ಚಿಂತಾಕ್ರಾಂತರಾಗಿದ್ದರು. ಅವರು ಆ ರೀತಿಯಾಗಿ ಚಿಂತಿಸುವುದಕ್ಕೆ ಪ್ರಬಲವಾದ ಕಾರಣವೂ ಇತ್ತು. ಆ ಕಾಲದಲ್ಲಿ ಮಾನಸಿಂಗನ ಮಕ್ಕಳು, ಅಧಿರಾಜನಾದ ಮೊಗಲ್ ಚಕ್ರವರ್ತಿಯ ಪರವಾಗಿ ತಮ್ಮ ಸಂಸ್ಥಾನದ ಮುಕ್ಕಾಲು ಪಾಲು ಸೇನೆಯನ್ನು ತೆಗೆದುಕೊಂಡು ಹೋಗಿ ನೂರಾರು ಹರದಾರಿದೂರದಲ್ಲಿ ದಕ್ಷಿಣ ದೇಶದಲ್ಲಿ ಯುದ್ಧ ಮಾಡುತ್ತಿದ್ದರು. ಅವರು ದೇಶದಲ್ಲಿಲ್ಲದ ಆ ಸಮಯದಲ್ಲಿ ಗುಜರಾತಿನ ಮಹಮ್ಮದೀಯ ರಾಜನು ಒಂದು ದೊಡ್ಡ ದಂಡನ್ನು ಕಟ್ಟಿಕೊಂಡು ಬಂದು ಹಠಾತ್ತಾಗಿ ನಾಗೂರು ಸಂಸ್ಥಾನದ ಮೇಲೆ ಬಿದ್ದಿದ್ದನು. ವೃದ್ಧನಾದ ರಾಜನು ತನ್ನ ರಾಜಧಾನಿಯನ್ನು ಕಾಪಾಡಿಕೊಳ್ಳುವುದರಲ್ಲಿ ನಿರಾಶನಾಗಿ ತನ್ನ ಅರಸಿತಿಯರನ್ನೂ ಹೆಣ್ಣು ಮಕ್ಕಳನ್ನೂ ಅರಮನೆಯ ಬೊಕ್ಕಸ ಭಂಡಾರವನ್ನೂ ತೆಗಿಸಿಕೊಂಡು, ದಕ್ಷಿಣದಲ್ಲಿ ನಡೆಯುವ ಯುದ್ಧಕ್ಕೆ ಹೋಗಲು ಶಕ್ತಿಯಿಲ್ಲದೆ ತನ್ನಂತೆಯೇ ಊರಲ್ಲಿ ನಿಂತಿದ್ದ ವೃದ್ಧರಾದ ಕೆಲವು ಮಂದಿ ಪ್ರಧಾನಪುರುಷರನ್ನೂ ಅನೇಕ ಜನ ಹೆಂಗಸರನ್ನೂ ಮಕ್ಕಳನ್ನೂ ತನ್ನ ಸಂಗಡ ಕರೆದುಕೊಂಡು, ತನ್ನ ರಾಜಧಾನಿಯನ್ನೂ ಅಮೃತಶಿಲಾ ನಿರ್ಮಿತವಾದ ಅರಮನೆಯನ್ನೂ ಶತ್ರುಗಳು ಇಷ್ಟಬಂದಂತೆ ಮಾಡಿಕೊಳ್ಳಲಿ ಎಂದು ಬಿಟ್ಟು, ನಿಂತಲ್ಲಿ ನಿಲ್ಲದೆ ಗೋದ್ವಾರದುರ್ಗಕ್ಕೆ ಬಂದು ಸೇರಿಕೊಂಡಿ

ದ್ದನು. ಇಲ್ಲಿ ಕಣಜಗಳೆಲ್ಲವೂ ದವಸ ಧಾನ್ಯಗಳಿಂದ ತುಂಬಿದ್ದುವು ; ಕೆರೆಯಲ್ಲಿ ನೀರು ಸಮೃದ್ಧಿಯಾಗಿತ್ತು ; ಆದರೆ ವಿಸ್ತಾರವಾದ ಈ ಕೋಟೆಯನ್ನು ಕಾಪಾಡಿ ಕೊಳ್ಳುವುದಕ್ಕೆ ಸಾಕಾದಷ್ಟು ಜನರು ಮಾತ್ರ ಇರಲಿಲ್ಲ. ಗುಜರಾತಿನಿಂದ ಬಂದ ಮಹಮ್ಮದೀಯರ ಸೈನ್ಯವು ಆಗಲೇ ಕೋಟೆಯ ಸುತ್ತಲೂ ಬೀಡುಬಿಡುತ್ತಿದ್ದ ಹಾಗೆ ಕಂಡಿತು. ಕೋಟೆಯೊಳಗಿದ್ದ ರಾಜನಿಗೂ ಅವನ ಪರಿವಾರಕ್ಕೂ ಶರಣಾಗತಿ, ಮರಣ ಎಂಬಿವೆರಡು ಘೋರವಾದ ಉಪಾಯಗಳು ಹೊರತು ಬೇರೆ ಯಾವ ವಿಧ ವಾದ ರಕ್ಷಣೋಪಾಯವೂ ಇದ್ದಂತೆ ಕಾಣಿಸಲಿಲ್ಲ. ತಪ್ಪಿಸಿಕೊಂಡು ಹೋಗೋ ಣವೆಂದರೆ ಸುರಕ್ಷಿತವಾದ ಬೇರೆ ಸ್ಥಳವೂ ಇರಲಿಲ್ಲ. ಹಾಗೆ ಒಂದು ಸ್ಥಳವಿದ್ದರೂ ಈಗ ಅಲ್ಲಿಗೆ ಹೋಗುವುದೂ ಸಾಧ್ಯವಾಗುತ್ತಿರಲಿಲ್ಲ—ಏಕೆಂದರೆ ಶತ್ರುಸೈನಿಕರು ಆಗಲೇ ಕೋಟೆಯ ಹೆಚ್ಚು ಭಾಗವನ್ನು ಸುತ್ತಿಕೊಂಡಿದ್ದರು. ಒಂದುವೇಳೆ ಅವ ರನ್ನು ಭೇದಿಸಿಕೊಂಡು ಹೋಗೋಣವೆಂದರೂ ಕೂಡ, ಆಗಲೇ ತಕ್ಕ ಸ್ಥಳಗಳಲ್ಲಿ ಬಂದು ನಿಂತಿದ್ದ ಹಗೆಗಳ ಕುದುರೆದಳವು ಸುಲಭವಾಗಿ ಬೆನ್ನಟ್ಟಿ ಬಂದು ಸುತ್ತಿ ಕೊಂಡು ಅವರನ್ನೆಲ್ಲಾ ತುಂಡುತುಂಡಾಗಿ ಕತ್ತರಿಸಿ ಬಿಡುವ ಸ್ಥಿತಿಯಲ್ಲಿತ್ತು.

ಇಂಥಾ ವಿಪತ್ತಿನಲ್ಲಿ ಏನು ಮಾಡಬೇಕೆಂದು ಮಂತ್ರಾಲೋಚನೆ ಮಾಡುವದ ಕ್ಕಾಗಿ ಅವರೆಲ್ಲರೂ ಸಭೆ ಕೂಡಿದ್ದರು. ಅಲ್ಲಿ ಸೇರಿದ್ದ ವಿವೇಕಿಗಳು ಹಲವು ವಿಷಯ ವಾಗಿ ವಿಚಾರಮಾಡಿದರು. ತಮ್ಮ ವಶದಲ್ಲಿದ್ದ ಅಲ್ಪ ಸ್ವಲ್ಪ ಸೈನ್ಯದಿಂದ ಕೋಟೆ ಯನ್ನು ದೀರ್ಘಕಾಲ ರಕ್ಷಿಸಿಕೊಳ್ಳುವ ಉಪಾಯವೇನೆಂದು ವಿಚಾರಮಾಡಿದರು ; ಹೊರಗಿನಿಂದ ಯಾವ ರೀತಿಯಾಗಿ ಸಹಾಯವನ್ನು ಸಂಪಾದಿಸಬಹುದೆಂದು ಚರ್ಚೆ ಮಾಡಿದರು. ಹೀಗೆ ಎಷ್ಟೆಷ್ಟು ಆಲೋಚನೆ ಮಾಡಿದರೂ ಕೂಡ, ಮೇಲೆ ಹೇಳಿದ ಎರಡು ಉಪಾಯಗಳೇ ಹೊರತು ಮೂರನೆಯ ಹಾದಿಯೇ ತೋರಲಿಲ್ಲ. ಅವರಿಗೆ ಮಿತ್ರರಾದ ನೆರೆಹೊರೆಯ ರಾಜರೊಬ್ಬರೂ ಫಿರೋಜ್‌ಷಾಹನ ದೊಡ್ಡ ಸೇನೆಯೊ ಡನೆ ಕಾದಿ ಗೆಲ್ಲುವಷ್ಟು ಶಕ್ತರಾಗಿರಲಿಲ್ಲ. ಯಾವ ಯಾವ ಮಾರ್ಗದಲ್ಲಿ ಯೋಚಿ ಸಿದರೂ ಶರಣ—ಮರಣಗಳಲ್ಲದೆ ಬೇರೆ ಏನೂ ಕಾಣಿಸಲಿಲ್ಲ. ಶರಣಾಗತರಾದಲ್ಲಿ ನಾಗೂರು ರಾಜಪುತ್ರಿಯರೆಲ್ಲರೂ ತುರುಕರ ಅಂತಃಪುರಕ್ಕೆ ನಡೆಯಬೇಕಾಗು ವುದು ಇಂಥ ಅವಮಾನವನ್ನು ಸಹಿಸುವುದಕ್ಕಿಂತ ಅವರಲ್ಲರೂ ಶಾಸ್ತ್ರವಿಧಾನ ವಾಗಿ ಜೋಹರ್ ಎಂದರೆ ಅಗ್ನಿಪ್ರವೇಶವನ್ನು ಮಾಡುವುದೇ ಉತ್ತಮವೆಂದು ಗೊತ್ತುಮಾಡಿದರು. ಈ ನಡುವೆ ಸಂಧಿಯನ್ನು ಮಾಡಿಕೊಳ್ಳುತ್ತೇವೆಂದೂ ಕೋಟೆ ಯನ್ನು ಕೈವಶಮಾಡಿ ಕೊಡುತ್ತೇವೆಂದೂ ನೆಪವಿಟ್ಟು ಆದಷ್ಟು ವಿಳಂಬ ಮಾಡಿ ಕಾಲ ಹರಣ ಮಾಡಬೇಕು. ಆ ಬಳಿಕ ಕೊನೆಯವರೆಗೂ ಕೋಟೆಯನ್ನು ರಕ್ಷಿಸಿಕೊಳ್ಳ ಬೇಕು. ಆ ವೇಳೆಗೂ ದೇವತೆಗಳು ದರ್ಪೋದ್ಧತನಾದ ಶತ್ರುವನ್ನು ಅಟ್ಟದೆ ಹೋಗಿ ಕೋಟೆಯನ್ನು ಕಾಪಾಡುವುದು ಅಸಾಧ್ಯವಾಗಿ ಹೋದಲ್ಲಿ ರಾಜಪುತ್ರರ ಜೋಹರ್ ಸಂಪ್ರದಾಯಾನುಸಾರವಾಗಿ ಹೆಂಗಸರುಮಕ್ಕಳನ್ನೆಲ್ಲಾ ಅಗ್ನಿಗಾಹು

ತಿಮಾಡಿ ಗಂಡಸರೆಲ್ಲರೂ ಅರಿಸಿನದ ಬಟ್ಟೆಯನ್ನುಟ್ಟು ಖಡುಪಾಣಿಗಳಾಗಿ ಕೋಟೆ ಯಿಂದ ಹೊರಹೊರಟು ಶತ್ರುಗಳನ್ನು ಸಂಹರಿಸುತ್ತ ಯುದ್ಧರಂಗದಲ್ಲಿ ಶರೀರವನ್ನು ಬಿಟ್ಟುಬಿಡಬೇಕು ಎಂದು ಮೊದಲಾಗಿ ನಿಷ್ಕರ್ಷೆ ಮಾಡಿಕೊಂಡರು.

ಈ ರೀತಿಯಾಗಿ ನಿರ್ಧರವಾದ ಬಳಿಕ ಅವರೆಲ್ಲರೂ ವಿಷಣ್ಣರಾಗಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಅಲ್ಲಿ ಆಯಾ ಮನೆಯ ಹೆಂಗಸರೆಲ್ಲರೂ ತಮ್ಮ ಭಾಗ್ಯ ವೆಂತಾಗುವುದೋ ಎಂಬ ಚಿಂತೆಯಿಂದ ಅವರ ಬರವನ್ನೇ ಎದುರುನೋಡುತ್ತ ನಿಂತಿದ್ದರು. ಹೀಗೆ ಆತುರದಿಂದ ಕುದಿಯುತ್ತಿದ್ದವರಲ್ಲಿ ರಾಜಾ ಮಾನಸಿಂಗನ ಪ್ರೇಮಪುತ್ರಿಯಾದ ಪನ್ನೆ ಎಂಬುವಳೇ ಮುಂದಾಳಾದವಳು. ಇವಳು ಪನ್ನೆ ಎಂದರೆ ವಜ್ರವೆಂಬ ಅರ್ಥವುಳ್ಳ ತನ್ನ ಹೆಸರಿಗೆ ತಕ್ಕ ಹಾಗೆ ತನ್ನ ದೇದೀಪ್ಯಮಾನವಾದ ತಾರುಣ್ಯದಿಂದಲೂ ನವನವೋನ್ಮೇಷವಾದ ಬುದ್ಧಿಶಕ್ತಿಯಿಂದಲೂ ಕಂಗೊಳಿಸು ತ್ತಿದ್ದಳು. ರಾಜಪುಟಾಣದಲ್ಲಿ ಸರ್ವಸಾಮಾನ್ಯವಾಗಿ ಹೆಣ್ಣು ಮಕ್ಕಳೆಲ್ಲಾ ನಿಷ್ಫಲ ವಾದ ಹೊರೆಯೆಂಬ ಭಾವವಿದೆ. ಆದರೂ ಮಾನಸಿಂಗನಿಗೆ ಮಾತ್ರ ತನ್ನ ಪುತ್ರ ರಲ್ಲಿದ್ದುದಕ್ಕಿಂತಲೂ ಇವಳಲ್ಲಿ ಹೆಚ್ಚಾಗಿ ಪ್ರೇಮವಿತ್ತು. ಇವಳೇ ಅವನ ಮಕ್ಕಳಲ್ಲಿ ಕಿರಿಯವಳು. ಇವಳು ಮಾನಸಿಂಗನ ಕಿರಿಯ ರಾಣಿಯ ಒಬ್ಬಳೇ ಮಗಳು. ಈ ರಾಣಿಯು ರಾಜನ ವೃದ್ಧಾಪ್ಯಕಾಲದಲ್ಲಿ ಸ್ವಲ್ಪ ದಿವಸ ಮಟ್ಟಿಗೆ ಜೀವಿಸಿದ್ದು ಹದಿನಾಲ್ಕು ವರ್ಷಗಳ ಹಿಂದೆ ಕಾಲವಾಗಿ ಹೋಗಿದ್ದಳು. ತನ್ನ ಮಗಳನ್ನು ನೋಡಿದಾಗಲೆಲ್ಲಾ ಆತನಿಗೆ ಚಿತಿಯಲ್ಲಿ ಬೆಂದುಹೋದ ತನ್ನ ರಾಣಿಯ ರೂಪವೇ ಸ್ಮರಣೆಗೆ ಬರುತ್ತಿತ್ತು. ಆತನು ರಾಜಕಾರ್ಯದ ಶ್ರಮದಿಂದ ಬಳಲಿ ಬಂದಾಗ ಎಷ್ಟೋವೇಳೆ ಈ ಹುಡುಗಿಯ ಆಟಪಾಟಗಳಿಂದಲೂ ಪ್ರೀತಿಯಿಂದಲೂ ಮನಶ್ಶಾಂ ತಿಯನ್ನು ಹೊಂದಿದ್ದನು. ಅಂಥವಳಿಗೆ ಈ ದಾರುಣವಾದ ಸಮಾಚಾರವನ್ನು ಹೇಗೆ ತಾನೆ ಹೇಳಾನು ?

ಅವನು ಮೊದಲು ಸ್ವಲ್ಪ ಹೊತ್ತಿನ ವರೆಗೆ ಯಾವ ಮಾತನ್ನೂ ಆಡದೆ ಸುಮ್ಮನೆ ನಿಂತಿದ್ದನು. ಅರಮನೆಯ ಹೆಂಗಸರೆಲ್ಲರೂ ಅವನ ಸುತ್ತಲೂ ಬಳಸಿ ಕೊಂಡು ಕಣ್ಣೀರು ಹಾಕುತ್ತ ಅವನ ಸಮಾಧಾನೋಕ್ತಿಗಳನ್ನೇ ಎದುರು ನೋ ಡುತ್ತ ನಿಂತಿದ್ದರು. ಆದರೂ ಅವನು ಸ್ವಲ್ಪ ಕಾಲದ ವರೆಗೂ ತನ್ನ ಪ್ರೇಮಪುತ್ರಿ ಯಾದ ಪನ್ನೆಯ ಆದರಕ್ಕೂ ಪ್ರಶ್ನೆಗಳಿಗೂ ಕೂಡ ಒಳಗಾಗದೆ ದೃಢವಾಗಿ ನಿಂತಿ ದ್ದನು. ಕೊನೆಗೆ ಎದೆಯನ್ನು ಗಟ್ಟಿಮಾಡಿಕೊಂಡು—ನಮಗೆ ದೇವತಾ ಸಹಾಯ ವೊದಗದಿದ್ದಲ್ಲಿ ಇನ್ನು ಸ್ವಲ್ಪಕಾಲದಲ್ಲಿಯೇ ನೀವೆಲ್ಲರೂ ಚಿತಾರೋಹಣ ಮಾಡ ಬೇಕಾಗುವುದು—ಎಂದು ಹೇಳಿಬಿಟ್ಟನು.

ಈ ಮರಣವಾರ್ತೆಯನ್ನು ಕೇಳಿದ ಕೂಡಲೆ ಅಲ್ಲಿದ್ದವರೆಲ್ಲರೂ ತಮ್ಮ ತಮ್ಮ ವಯಸ್ಸಿಗೂ ಸ್ವಭಾವಕ್ಕೂ ತಕ್ಕ ಹಾಗೆ ನಡೆದುಕೊಂಡರು : ಕೆಲವರು ಮೌನವಾಗಿ ನಿಂತು ಬಿಟ್ಟರು ; ಕೆಲವರು ಕಣ್ಣೀರುಸುರಿಸತೊಡಗಿದರು ; ಮತ್ತೆ ಕೆಲವರು

ಗೋಳಾಡಲಾರಂಭಿಸಿದರು. ನೂರು ವರ್ಷ ವಯಸ್ಸಿನ ಹಣ್ಣಹಣ್ಣು ಮುದುಕಿಯಾಗಿದ್ದ ಮಾನಸಿಂಗನ ತಾಯಿಯು ಇಂಥ ಸಂದರ್ಭ ಪ್ರೊದಗಿದುದಕ್ಕಾಗಿ ಹೆಮ್ಮೆಪಟ್ಟುಕೊಂಡು ನಿಜವಾದ ರಾಜಪುತ್ರಸ್ತ್ರೀಗೆ ತಕ್ಕ ರೀತಿಯಲ್ಲಿ ತಾನು ದೇಹತ್ಯಾಗ ಮಾಡಬೇಕೆಂದು ತವಕಪಡುತ್ತಿದ್ದಳು ಕೆಲವರು ಸಣ್ಣ ವಯಸ್ಸಿನ ಹೆಂಗಸರು ಕೂಡ ಆಕೆಯಂತೆ ಮನೋದಾರ್ಢ್ಯವನ್ನು ಅವಲಂಬಿಸಿದರು. ಮತ್ತೆ ಕೆಲವರು ತಮಗೆ ಜೀವದಲ್ಲಿ ಸುಖವು ಹೆಚ್ಚಾಗಿ ಉಂಟಾಗುವ ಸಂಭವವಿರುವ ಕಾರಣ ಮರಣದಲ್ಲಿ ದುಃಖವು ಹೆಚ್ಚಾಗಿ ಉಂಟಾಗುವದೆಂದು ವಾದಮಾಡುವ ತಾತ್ಪರ್ಯವುಳ್ಳವರಾಗಿದ್ದರು. ತಮ್ಮ ಸ್ಥಿತಿಯನ್ನು ಅರಿದುಕೊಳ್ಳಲಾರದ ಸಣ್ಣ ಮಕ್ಕಳು ತಮ್ಮ ಸುತ್ತು ಮುತ್ತಲೂ ದುಃಖೋದ್ರೇಕದಿಂದ ಗೋಳಾಡುತ್ತಿದ್ದ ಹಿರಿಯರನ್ನು ಕಂಡು ಎಂದಿನಂತೆಯೇ ದೊಡ್ಡದಾಗಿ ಕಣ್ಣುಗಳನ್ನು ಬಿಟ್ಟುಕೊಂಡು ನೋಡುತ್ತ ಬೆಪ್ಪಾಗಿ ಕುಳಿತಿದ್ದುವು

ಆದರೆ ಈ ಮರಣವಾರ್ತೆಯನ್ನು ಕೇಳಿದ ಕಾಲದಲ್ಲಿ ಪನ್ನೆಯ ಮನೋಭಾವವು ಮಾತ್ರ ಹೀಗಾಗದೆ ವಿಜಾತೀಯವಾಗಿಯೂ ಅವಳ ಸ್ವಭಾವಕ್ಕೆ ತಕ್ಕುದಾಗಿಯೂ ಇತ್ತು. ಅವಳು ಮಹಾರಾಜನ ತಾಯಿಯಂತೆ ದೃಢಚಿತ್ತಳಾಗಿಯೂ ಇರಲಿಲ್ಲ : ದುರ್ಬಲರಾದ ಇತರ ಸ್ತ್ರೀಯರಂತೆ ನಿಷ್ಫಲವಾಗಿ ರೋದನಮಾಡಲೂ ಇಲ್ಲ. ಅವಳು ಸದ್ದು ಮಾಡದೆ ಕಿಟಿಕಿಯ ಬಳಿಗೆ ಹೋಗಿ ಅಲ್ಲಿ ತನ್ನ ಮೊಳಕೈಯನ್ನೂರಿ ಕೈಮೇಲೆ ತಲೆಯಿಟ್ಟುಕೊಂಡು ಕಿಟಿಕಿಯ ಜಾಲಂದರಗಳ ಮೂಲಕ ಕಾಣುತ್ತಿದ್ದ ಪ್ರದೇಶಗಳಲ್ಲಿ ದೃಷ್ಟಿಯಿಟ್ಟು ಸ್ವಲ್ಪಕಾಲ ತನ್ನಲ್ಲೇ ಆಲೋಚನೆ ಮಾಡುತ್ತ ಕುಳಿತಿದ್ದಳು. ಅವಳ ಕಣ್ಣುಗಳು ಆ ಪ್ರದೇಶದಲ್ಲಿ ಸುಳಿದಾಡುತ್ತ, ಸುಳಿದಾಡುತ್ತ ಕೊನೆಗೆ ಬಹುದೂರದಲ್ಲಿ ಮುಂಗತ್ತಲೆಯ ಮಬ್ಬಿನಲ್ಲಿ ಮಂಕುಮಂಕಾಗಿ ಮರಯಾಗುತ್ತಿದ್ದ ಒಂದು ಬೆಟ್ಟದ ತುದಿಯಲ್ಲಿ ನಿಂತುವು.

ಪನ್ನೆಯ ನೇತ್ರಗಳು ಹಠಾತ್ತಾಗಿ ಹೋಗಿ ಆ ಪರ್ವತ ಶಿಖರದಲ್ಲಿ ನಿಲ್ಲಲಿಲ್ಲ. ಅವಳು ಮನೋರಾಜ್ಯದಲ್ಲಿ ನಲಿಯುವ ಸ್ವಭಾವದವಳು ; ಅವಳು ಎಷ್ಟೋ ವೇಳೆ ಆ ಅರಿಖಂಡಗಿರಿಯ ಶಿಖರದ ಮೇಲೆ ಕಣ್ಣಿಟ್ಟು ಎಷ್ಟೋ ಮನೋರಥಪ್ರಾಸಾದಗಳನ್ನು ಕಲ್ಪಿಸಿಕೊಂಡಿದ್ದಳು. ಏಕೆಂದರೆ ಅಲ್ಲಿಯ ರಾಜನಾದ ಉಮೇದಸಿಂಗನು ಎರಡು ವರ್ಷಕ್ಕೆ ಹಿಂದೆ ಮಾನಸಿಂಗನ ಮಿತ್ರನಾಗಿ ನಾಗೂರಿಗೆ ಬಂದು ಬೀದಿಗಳಲ್ಲಿ ಸವಾರಿ ಹೋದಾಗ ನೋಡಿದುದು ಮೊದಲುಗೊಂಡು ಪನ್ನೆಯು ಅವನ ಸೌಂದರ್ಯಕ್ಕೂ ಠೀವಿಗೂ ಮೋಹಗೊಂಡು ಮರುಳಾಗಿದ್ದಳು. ಆ ಕಾಲದಲ್ಲಿ ಅವನೂ ಕೂಡ ಇನ್ನೂ ಚಿಕ್ಕವನಾಗಿದ್ದನು ; ಅದೇ ತಾನೆ ಅವನು ಬೀಲರೆಂಬ ಬಲವಾದ ಕಳ್ಳರ ಗುಂಪಿನ ಮೇಲೆ ಬಿದ್ದು ಅವರನ್ನೆಲ್ಲಾ ಧ್ವಂಸಮಾಡಿ ಪ್ರಥಮ ವಿಜಯದ ಪರುಠವಣೆಯಿಂದ ಮೆರೆಯುತ್ತ ಹಿಂದಿರುಗಿ ಬಂದಿದ್ದನು. ಅವನ ಮನೋಹರವಾದ ಮುಖವನ್ನೂ ಅವನ ಕುದುರೆಸವಾರಿಯ ಚಳಕವನ್ನೂ ನೋಡಿದವಳಾಗಿ

ಪನ್ನೆಯು ಹಾಗೆಯೇ ಅವನಲ್ಲಿ ಮೋಹಗೊಂಡು ತನಗೆ ಅವನಂಥ ವೀರನಾದ ತರುಣನೇ ಗಂಡನಾಗಲೆಂದು ಗುಟ್ಟಾಗಿ ಭಗವಂತನಲ್ಲಿ ಪ್ರಾರ್ಥಿಸಿಕೊಂಡಿದ್ದಳು. ಆಗ್ಗೆ ಪನ್ನೆಯ ಆಸೆ ನೆರವೇರುವುದಕ್ಕೆ ಯಾವ ವಿಧವಾದ ಅಡ್ಡಿಯಿದ್ದಂತೆಯೂ ಕಾಣಬರಲಿಲ್ಲ. ಆದರೆ ನಿಜವಾದ ಅನುರಾಗವು ಎಂದು ತಾನೇ ನಿರ್ವಿಘ್ನವಾಗಿ ಫಲಿಸಿದೆ? ಅದಾದ ಕೆಲವು ಕಾಲಕ್ಕೆ ಈ ಇಬ್ಬರು ರಾಜರಿಗೂ ಎಲ್ಲೆಕಟ್ಟಿನ ವಿಷಯವಾಗಿ ವಿವಾದ ಹುಟ್ಟಿತು. ಇದೇ ಕಾರಣದಿಂದ ಇಬ್ಬರಿಗೂ ಪ್ರಬಲವಾದ ಮನಸ್ತಾಪವುಂಟಾಗಿ ಅವರಿಗೆ ಸಾಕ್ಷಾತ್ತಾಗಿ ಯುದ್ಧವುಂಟಾಗದೆ ಹೋದರೂ, ಉಭಯ ಸಂಸ್ಥಾನಗಳ ಪರಸ್ಪರ ಸ್ನೇಹ ಭಾವಕ್ಕೆ ಸಂಪೂರ್ಣವಾದ ಭಂಗವುಂಟಾಯಿತು. ಅಲ್ಲಿಂದೀಚೆಗೆ ಪರಸ್ಪರ ವಿವಾಹ ಸಂಬಂಧದ ಮಾತಿಗೆ ಅವಕಾಶವೇ ತಪ್ಪಿಹೋಯಿತು. ಆದಮಾತ್ರಕ್ಕೆ ಪನ್ನೆಯು ಆ ಬಾಲವೀರನ ಭಾವಚಿತ್ರವನ್ನು ತನ್ನ ಹೃದಯದಲ್ಲಿಟ್ಟು ಪೂಜಿಸುವದಕ್ಕೂ ಅವನನ್ನೇ ಸೌಂದರ್ಯಕ್ಕೂ ಸಾಹಸಕ್ಕೂ ಮೇಲುಪಙ್ಕ್ತಿಯೆಂದು ಭಾವಿಸಿಕೊಳ್ಳುವುದಕ್ಕೂ ಯಾವ ಅಡ್ಡಿಯೂ ಇರಲಿಲ್ಲ ಹೀಗಾಗಿ ಅವಳು ಸಂಕಲ್ಪ ಸಂಪತ್ತನ್ನು ಅನುಭವಿಸುವಾಗಲೆಲ್ಲಾ ಎಷ್ಟೋ ವೇಳೆ ಅರಿಖಂಡಗಿರಿಯ ಶಿಖರದಲ್ಲಿ ದೃಷ್ಟಿಯಿಡುತ್ತಿದ್ದಳು. ಈಗ ಅವಳ ಮನಸ್ಸು ಬೇರೆ ವಿಧವಾದ ಆಲೋಚನೆಯಿಂದ ಕೂಡಿದ್ದರೂ, ಅವಳ ಕಣ್ಣುಗಳು ಮಾತ್ರ ಅಭ್ಯಾಸಬಲದಿಂದ ಅದೇ ದೆಸೆಗೆ ತಿರುಗಿದುವು.

ಹಾಗೆ ನೋಡುತ್ತಿರುವಾಗ ಅವಳಿಗೆ ಹಠಾತ್ತಾಗಿ ಒಂದಾಲೋಚನೆ ತೋರಿತು. ಭಗ್ಗನೆ ಅವಳ ನಾಡೀವೇಗವು ಹೆಚ್ಚಿತು ; ಕಣ್ಣುಗಳು ಹೊಳಪೇರಿದುವು. ನಾನು ಏತಕ್ಕೆ ಈ ವೀರನ ಸಹಾಯವನ್ನು ಕೋರಬಾರದು ? ನಾವು ಸಹಾಯವನ್ನು ಅಪೇಕ್ಷಿಸಿದರೆ ಈತನು ನಮನಮಗಿರುವ ಕ್ಷುದ್ರವಿವಾದಗಳನ್ನೆಲ್ಲಾ ಮರೆತು ಇಂಥ ವಿಪತ್ತಿನಲ್ಲಿ ರಾಜಪುತ್ರರಾಜನಿಗೆ ಸಹಾಯವಾಗಿ ಬಂದು ಮಹಮ್ಮದೀಯರಿಂದುಂಟಾದ ಭೀತಿಯನ್ನು ನಿವಾರಿಸಲೊಲ್ಲನೇ ? ನಾನು ಏಕೆ ನನ್ನ ರಕ್ಷಾಬಂಧವನ್ನು ಕೊಟ್ಟು ಪ್ರತಿಜ್ಞಾಪೂರ್ವಕವಾಗಿ ಆತನನ್ನು ನಮ್ಮ ಸಹಾಯಕ್ಕೆ ತಂದುಕೊಳ್ಳಬಾರದು ? ಎಂದು ಮೊದಲಾಗಿ ಆಲೋಚನೆ ಮಾಡಿದಳು. ಆ ವೇಳೆಗೆ ಸರಿಯಾಗಿ ಬಳೆಯ ಹಬ್ಬವೂ ಬಂದು ಒದಗಿತ್ತು. ಬಳೆಯ ಹಬ್ಬದಲ್ಲಿ ರಾಜಪುತ್ರಸ್ತ್ರೀಯರೂ ಬಾಲೆಯರೂ ತಮತಮಗೆ ಇಷ್ಟನಾದ ವೀರನಿಗೆ ತಮ್ಮ ತಮ್ಮ ಬಳೆಗಳನ್ನು ಕಳುಹಿಸಿ ಅವನನ್ನು ತಮ್ಮ ಬಳೆಯ ಬಂಧುವನ್ನಾಗಿ ಮಾಡಿಕೊಳ್ಳುವ ಸಂಪ್ರದಾಯವುಂಟು. ತನ್ನಲ್ಲಿಗೆ ಕಳುಹಿಸಿಕೊಟ್ಟ ಬಳೆಯನ್ನೂ ಅದರೊಡನೆ ತಾನು ವಹಿಸಿಕೊಳ್ಳಬೇಕಾದ ಧರ್ಮವನ್ನೂ ಆ ವೀರನು ಅಂಗೀಕರಿಸುವುದಾದರೆ, ಆತನು ಆ ಸ್ತ್ರೀಗೆ ಒಂದು ಪಟ್ಟೆಬಟ್ಟೆಯ ಕಣವನ್ನೋ ಇಲ್ಲವೆ ಒಂದು ಕಿಂಕಾಪಿನ ಕಣವನ್ನೋ ಅಥವಾ ಒಂದು ಚಿನ್ನದ ಬಳೆಯನ್ನೋ ಕೊಟ್ಟು ಕಳುಹಿಸುವನು. ಅಲ್ಲಿಂದ ಮೊದಲುಗೊಂಡು ಆತನು ಧರ್ಮವೀರನಾಗಿ ಆಕೆಯ ಸೇವೆಯಲ್ಲಿ ನಿರತನಾಗಿದ್ದು

ಕೊಂಡು, ಆಕೆ ತನ್ನ ಸಹಾಯವನ್ನು ಕೋರಿದಾಗಲೆಲ್ಲಾ ಹೋಗಿ ಆಕೆಯ ಕಷ್ಟಗಳನ್ನು ನಿವಾರಣೆಮಾಡಲು ಬದ್ಧನಾಗುವನು. ಈ ಸಂಪ್ರದಾಯವನ್ನು ತನಗನುಕೂಲವಾಗಿ ಏಕೆ ಮಾಡಿಕೊಳ್ಳಬಾರದು ಎಂದು ಪನ್ನೆಯು ಯೋಚಿಸಿದಳು. ಹೀಗೆಲ್ಲಾ ಮನಸ್ಸಿನಲ್ಲಿ ಆಲೋಚನೆಮಾಡಿಕೊಂಡವಳಾಗಿ ಅಲ್ಲಿಂದೆದ್ದು ತಂದೆಯ ಬಳಿಗೆ ಹೋದಳು. ಆತನು ಕೈಯಲ್ಲಿ ತಲೆಯಿಟ್ಟುಕೊಂಡು ನಿರಾಶೆಯನ್ನೇ ಏನಾದರೂ ಚಿತ್ರಿಸಿದ್ದಾರೋ ಎಂಬಂತೆ ಕುಳಿತಿದ್ದನು.

ಅದನ್ನು ನೋಡಿ ಮೆಲ್ಲಗೆ ಆತನ ಸಮೀಪಕ್ಕೆ ಹೋಗಿ—ಅಪ್ಪಾಜಿ, ಒಂದು ನಿಮಿಷ ಕಿಟಿಕಿಯ ಬಳಿಗೆ ದಯಮಾಡುವಿರಾ—ಎಂದು ಕೇಳಿದಳು.

ಆತನು ಶೂನ್ಯಭಾವದಿಂದ ಅವಳ ಹಿಂದೆಯೇ ಹೊರಟನು. ತಮ್ಮ ಮಾತು ಇತರರಿಗೆ ಕೇಳಿಸದಷ್ಟು ದೂರ ಹೋದ ಕೂಡಲೆ ಪನ್ನೆಯು ತಮ್ಮ ತಂದೆಯನ್ನು ಕುರಿತು—" ಅಪ್ಪಾಜಿ, ಅರಿಖಂಡದ ರಾಜಕುಮಾರನು ಎಂದಾದರೂ ನಿಮ್ಮನ್ನು ಅಲಕ್ಷ್ಯವಾಗಿ ಕಂಡಾಗಲಿ ನಿಮಗೂ ನಿಮ್ಮ ಪ್ರಜೆಗಳಿಗೂ ವಿರೋಧವಾಗಿ ಏನಾದರೂ ನೀಚ ಕೃತ್ಯವನ್ನು ಮಾಡಿಯಾಗಲಿ ಅಪರಾಧಿಯಾಗಿದ್ದಾನೆಯೇ "—ಎಂದು ಪ್ರಶ್ನೆಮಾಡಿದಳು.

ಅದಕ್ಕೆ ಅವನು —" ಇಲ್ಲ ಮಗು, ಅವನು ಅಂಥಾದ್ದನ್ನು ಏನೂ ಮಾಡಿಲ್ಲ. ಅವನು ಮಾಡಿರುವ ತಪ್ಪಿಷ್ಟೇ:—ನಮ್ಮ ದೇಶದ ಎಲ್ಲೆಯ ಸಮೀಪದಲ್ಲಿ ವಿವಾದಾರ್ಹವಾದ ಸ್ವಲ್ಪ ಭೂಮಿಯಿದೆ. ಅದನ್ನು ತನ್ನದೆಂದು ಹೇಳುತ್ತಾನೆ. ಆ ಭೂಮಿಯ ವಿಷಯವಾಗಿ ನೂರಾರು ವರ್ಷದಿಂದಲೂ ಇದೇ ರೀತಿಯಾಗಿ ವಿವಾದವು ನಡೆಯುತ್ತಾ ಬಂದಿದೆ. ಅದು ಗಿಡ ಗಂಟಿ ಕೂಡ ಬೆಳೆಯದ ಬರಿಯ ಮರಳು ಕಾಡು. ಅದರಲ್ಲಿ ಅರಿಖಂಡದ ರಾಜನಿಗೆ ಸ್ವಲ್ಪ ಹಕ್ಕು ಇರಬಹುದಾಗಿಯೂ ಕಾಣುತ್ತದೆ. ಅದು ನಮ್ಮ ವಶಕ್ಕೆ ಬಂದುದು ನ್ಯಾಯವೋ ಅನ್ಯಾಯವೋ ನಾನು ಕಾಣೆ. ಆದರೂ ಅದನ್ನು ಬಿಟ್ಟರೆ ನಮ್ಮ ಕೀರ್ತಿಗೆ ಕಳಂಕಬರುವುದೆಂದು ನಮ್ಮ ಕೈಯಲ್ಲಿಯೇ ಇಟ್ಟುಕೊಂಡಿದ್ದೇನೆ. ಇದಕ್ಕಾಗಿ ನಮ್ಮಿಬ್ಬರಿಗೂ ಹಲವು ನಿಷ್ಠುರದ ಮಾತುಗಳು ಕೂಡ ನಡೆದಿವೆ. ನಿನ್ನ ಅಣ್ಣಂದಿರು ದಕ್ಷಿಣದೇಶದಿಂದ ಬಂದ ಕೂಡಲೆ ಯುದ್ಧಮಾಡಿ ಈ ವಿವಾದವನ್ನು ಪರಿಹರಿಸಬೇಕೆಂದು ನಿಶ್ಚಯ ಮಾಡಿಕೊಂಡಿದ್ದೇವೆ. ಅಲ್ಲಿಯ ರಾಜಕುಮಾರನೋ ಎಂದರೆ ಅವನು ಮಹಾವೀರನು. ಅವನು ನಮ್ಮ ಪರವಾಗಿ ಯುದ್ಧಮಾಡಿ ಕಳ್ಳರ ಗುಂಪನ್ನು ಸಂಹರಿಸಿದಾಗ ಅವನನ್ನು ನನ್ನ ಮಗನಂತೆ ಪ್ರೀತಿಯಾಗಿ ಕಂಡೆನು. ಈಗ ತುರುಕರ ನಡುವೆ ಸಿಕ್ಕಿಕೊಂಡು ಒಂದು ತಿಂಗಳೊಳಗಾಗಿ ಸಾಯಬೇಕಾಗಿರುವ ನಮಗೆ ಆ ಸಮಾಚಾರವನ್ನೆಲ್ಲಾ ಕಟ್ಟಿಕೊಂಡು ಪ್ರಯೋಜನವೇನು ? " ಎಂದನು.

ಅದನ್ನು ಕೇಳಿ ಪನ್ನೆಯು–" ಅಪ್ಪಾಜಿ. ಉಮೇದಸಿಂಗನಿಗೆ ನನ್ನ ಬಳೆಯನ್ನು ಕಳುಹಿಸಿಕೊಡುತ್ತೇನೆ. ಆತನು ಖಂಡಿತವಾಗಿಯೂ ನಮ್ಮ ಸಹಾಯಕ್ಕೆ ಬರುವನೆಂಬದಾಗಿ ನನ್ನ ಮನಸ್ಸಿಗೆ ಗೊತ್ತಾಗಿದೆ "— ಎಂದು ಹೇಳಿದಳು.

ಅದನ್ನು ಕೇಳಿ ಆತನು ಕೋಪಿಸಿಕೊಂಡು—ಏನು? ನಮ್ಮ ಪರಾಕ್ರಮವನ್ನು ಲಕ್ಷ್ಯಮಾಡದೆ ಹೋದ ಶತ್ರುವಿನಲ್ಲಿ ಸಹಾಯವನ್ನು ಪ್ರಾರ್ಥಿಸಿ ಅವಮಾನ ತಂದುಕೊಳ್ಳಲೇ? ಅದು ಎಂದಿಗೂ ಆಗತಕ್ಕದಲ್ಲ. ಈ ಮಹಮ್ಮದೀಯರು ಬಂದು ಹೀಗೆ ಮುತ್ತಿಗೆ ಹಾಕದಿದ್ದರೆ ಅವನ ಕೊಬ್ಬನ್ನು ಮುರಿಯಬೇಕೆಂದಿದ್ದೆನು. ಈಗ ನಾನು ಅವನ ಸಹಾಯವನ್ನು ಕೋರಲೆ? ಈ ಮಾತು ಇಷ್ಟಕ್ಕೆ ಸಾಕು."— ಎಂದು ನುಡಿದನು. ಮಾನಸಿಂಗನಿಗೆ ನಿಜವಾಗಿಯೂ ಮಹತ್ತಾದ ಆಗ್ರಹವುಂಟಾಗಿತ್ತು. ಆದರೂ ಪನ್ನೆಯು ಆತನ ಕೋಪವನ್ನು ಸಮಾಧಾನ ಮಾಡಿ ಅವನನ್ನು ತನ್ನ ಕಡೆಗೆ ತಿರುಗಿಸಿಕೊಳ್ಳುವ ಉಪಾಯವನ್ನು ಚೆನ್ನಾಗಿ ಅರಿತಿದ್ದಳು. ಅದೂ ಅಲ್ಲದೆ ತತ್ಕಾಲದಲ್ಲಿ ಅವಳು ಹೇಳಿದ ಮಾತುಗಳು ಬಹಳ ಸಮಂಜಸವಾಗಿಯೂ ರಕ್ಷಣೋಪಾಯಕ್ಕೆ ತಕ್ಕ ಸಾಧನಗಳಾಗಿಯೂ ಇದ್ದುವು. ಮೇಲೂ ರಾಜಪುತ್ರಸ್ತ್ರೀಯರು ಮಹಮ್ಮದೀಯರಿಗೆ ಸಹ ನಿರಾಕ್ಷೇಪವಾಗಿ ಬಳೆಗಳನ್ನು ಕಳುಹಿಸುತ್ತಿರುವಲ್ಲಿ, ಪನ್ನೆಯು ಆತನಿಗೆ ಬಳೆ ಕಳುಹಿಸುವುದರಿಂದ ಯಾವ ಅವಮಾನಕ್ಕೂ ಕಾರಣವಾಗುತ್ತಿರಲಿಲ್ಲ. ತತ್ಕಾಲದಲ್ಲಿ ಅವನು ಶತ್ರುವಾಗಿದ್ದ ಮಾತ್ರದಿಂದಲೇ ಯಾವ ಬಾಧಕವೂ ಉಂಟಾಗಲಾರದು. ಸಾಮಾನ್ಯ ಶತ್ರುವಿನಿದಿರಲ್ಲಿ ರಾಜಪುತ್ರ ರಾಜರೆಲ್ಲರೂ ತಮ್ಮಲ್ಲಿದ್ದ ಅಂತಃಕಲಹಗಳನ್ನು ಮರೆತು ಒಂದಾಗತಕ್ಕದೇ ಧರ್ಮವಾಗಿರುವುದು. ಪ್ರಕೃತದಲ್ಲಿ ಉಮೇದಸಿಂಗನು ಸಹಾಯಕ್ಕೆ ಬರಬೇಕಾದುದು ರಾಜಕೀಯವಾಗಿಯೂ ಇರುವುದು. ಇಂದು ನಾಗೂರು ಸಂಸ್ಥಾನವು ಬಿದ್ದು ಹೋಗಿ ಮಹಮ್ಮದೀಯರ ಕೈವಶವಾದರೆ ಮುಂದೆ ಅರಿಖಂಡ ಸಂಸ್ಥಾನಕ್ಕೂ ತಲೆನೋವು ಬಂದೇ ಬರುವುದು. ಇವೇ ಮೊದಲಾದ ಮಾತುಗಳನ್ನು ಹೇಳಿ ಪಿತೃಭಕ್ತಿಯನ್ನು ತೋರಿಸುವ ಹಲವು ಉಪಚಾರಗಳನ್ನು ಮಾಡಿ ಪನ್ನೆಯು ಮೆಲ್ಲಗೆ ತಂದೆಯನ್ನು ತನ್ನಂತೆ ಮಾಡಿಕೊಂಡಳು. ತರುವಾಯ ಬಳೆಯನ್ನು ಒಬ್ಬ ವಿಶ್ವಾಸಾರ್ಹನಾದ ಸೇವಕನ ಮೂಲಕ ಕಳುಹಿಸಿಕೊಡಬೇಕೆಂದು ನಿಷ್ಕರ್ಷೆಯಾಯಿತು.

ಅಲ್ಲಿಂದ ಮುಂದೆ ಉಮೇದಸಿಂಗನಿಗೆ ಯಾವ ಬಳೆಯನ್ನು ಕಳುಹಿಸಬೇಕೆಂದು ವಿಚಾರಮಾಡಿದರು ಕೊನೆಗೆ ಕೆಂಪು ವಜ್ರಗಳಿಂದ ದೇದೀಪ್ಯಮಾನವಾಗಿದ್ದ ಒಂದು ಚಿನ್ನದ ಬಳೆಯನ್ನು ಕಳುಹಿಸುವುದಾಗಿ ಗೊತ್ತುಮಾಡಿ ತೆಗೆದಿರಿಸಿಕೊಂಡರು. ಅದನ್ನು ಸಾಹಸದಿಂದ ಭದ್ರವಾಗಿ ತೆಗೆದುಕೊಂಡು ಹೋಗಿ ಅರಿಖಂಡದ ರಾಜನಿಗೆ ಒಪ್ಪಿಸುವವನು ಯಾರು ಎಂದು ಚರ್ಚೆ ಮಾಡಿದರು. ತರುವಾಯ ನಂಬುಗೆಗೆ ಅರ್ಹನಾದ ಒಬ್ಬ ವೃದ್ಧ ಸೇವಕನ ಹದಿನಾರು ವಯಸ್ಸಿನ ಬನ್ನಿ ಎಂಬ ಹುಡುಗನ ಕೈಯಲ್ಲಿಕೊಟ್ಟು 'ಕಳುಹುವುದಾಗಿ ಗೊತ್ತುಮಾಡಿದರು. ಉತ್ತರಕ್ಷಣದಲ್ಲಿಯೇ ಆ ಹುಡುಗನು ಹೊರಡಲು ಸಿದ್ಧನಾಗಿ,—ಶತ್ರುಗಳು ಕೋಟೆಯ ಸುತ್ತಲೂ ಬಳಸಿಕೊಳ್ಳುವುದಕ್ಕೆ ಮುಂಚೆಯೇ ನಾನು ಹೊರಹೊರಟು ಬೆಳಕು ಹರಿಯುವುದಕ್ಕೆ ಮೊದಲೇ ಕತ್ತಲೆಯ ಮಬ್ಬಿನಲ್ಲಿ ಠಾಣೆಯದವರ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡು ನಡೆದುಬಿಡುತ್ತೇನೆ —ಎಂದು ಹೇಳಿದನು.

ಆಗ ಎಲ್ಲರೂ ಆ ಹುಡುಗನ ಕಾರ್ಯವು ನಿರ್ವಿಘ್ನವಾಗಿ ಕೈಗೂಡಲೆಂದು ಹರಸಿ ಅವನಿಗೆ ಹಲವು ಎಚ್ಚರಿಕೆಯ ಮಾತುಗಳನ್ನು ಹೇಳಿ ರಾತ್ರಿಯ ಕತ್ತಲಲ್ಲಿ ಕೋಟೆಯಿಂದ ನೂಲೇಣಿಯ ಮಾರ್ಗವಾಗಿ ಹೊರಕ್ಕೆ ಇಳಿಸಿ ಕೊಟ್ಟರು. ಕೂಡಲೆ ಅವನು ಕತ್ತಲೆಯಲ್ಲಿ ಕಣ್ಮರೆಯಾಗಿ ಹುಲ್ಲೆಯಮರಿಯಂತೆ ಹಾರಿ ನಡೆಯುತ್ತ ಕೋಟೆಯ ಸುತ್ತಲೂ ಇದ್ದ ಬಂಡೆಗಳ ನಡುವೆ ಹಾದಿ ಹಿಡಿದು ಹೇರಟನು. ಇಕ್ಕಟ್ಟಾದ ಆ ಸೊಟ್ಟುಪಟ್ಟ ಹಾದಿಗಳೆಲ್ಲಾ ಅವರಿಗೆ ಚೆನ್ನಾಗಿ ಗೊತ್ತಿದ್ದುವು. ಆದುದರಿಂದ ನಕ್ಷತ್ರಗಳ ಮಾಸಲು ಬೆಳಕೇ ಅವನಿಗ ಸಾಕಾಗಿತ್ತು. ಅವನು ಹಾಗೆ ಸ್ವಲ್ಪ ದೂರ ಹೋಗಿ ನಿಲ್ಲುವಲ್ಲಿ ಮುಂದೆ ಎಲ್ಲೆಲ್ಲಿಯೂ ಶತ್ರುಸೈನಿಕರು ಹತ್ತಿರ ಹತ್ತಿರವಾಗಿ ಉರಿಹಾಕಿಕೊಂಡು ಕಾವಲುಕಾಯುತ್ತಿದ್ದರು. ಅವರ ಕಣ್ಣಿಗೆ ಬೀಳದೆ ಆ ಉರಿಯ ಬೆಳಕಿನಲ್ಲಿ ಹೋಗುವುದಕ್ಕಾಗುತ್ತಿರಲಿಲ್ಲ. ಆದರೂ ಅವನು ಜಾಗ್ರತೆಯಾಗಿ ಹೊರಟೇ ತೀರಬೇಕು; ಇನ್ನರಗಳಿಗೆಯಲ್ಲಿ ಚಂದ್ರೋದಯವಾಗುವುದು. ಆ ಬಳಿಕ ಬೆಳದಿಂಗಳಲ್ಲಿ ತಪ್ಪಿಸಿಕೊಂಡು ಹೋಗುವುದು ಅಸಾಧ್ಯ. ಆದುದರಿಂದ ಅವನು ಮೆಲ್ಲಗೆ ಮುಂದಕ್ಕೆ ನಡೆದು ಶತ್ರುಗಳ ಠಾಣೆಯದವರು ಸ್ವಲ್ಪ ದೂರದೂರವಾಗಿ ಉರಿ ಹಾಕಿಕೊಂಡಿದ್ದ ಒಂದು ಕಡೆಗೆ ಹೋಗಿ ಬಂಡೆಗಳ ನೆರಳಲ್ಲಿ ದೂರಿಕೊಂಡು ಎರಡು ಕಡೆಯ ಕಾವಲುಗಾರರ ಕಣ್ಣಿಗೂ ಬೀಳದೆ ಹೊರಕ್ಕೆ ಸಾಗಿ ತನ್ನ ಮನಸ್ಸಿನಲ್ಲಿ—ಇನ್ನು ನಾನು ಗೆದ್ದೆನು ಎಂದು ಕೊಂಡನು. ಆದರೇನು? ಎಷ್ಟೋಸಲ ಕೈಗೆ ಬಂದ ತುತ್ತು ಬಾಯಿಗೆ ಬರುವುದಿಲ್ಲ. ಅವನು ಹಾಗೆಯೇ ಚಿಂತಿಸುತ್ತಿರುವಾಗಲೇ ಹಾದಿಯ ಪಕ್ಕದ ಪೊದರಿನಿಂದ ಯಾವನೋ ಒಬ್ಬನು ಹಾರಿಬಂದು ಅವನ ಮೇಲೆ ಬಿದ್ದನು. ಕೂಡಲೆ ಇಬ್ಬರೂ ನೆಲಕ್ಕೆ ಬಿದ್ದುಬಿಟ್ಟರು. ಬನ್ನಿಯು ಚಿಕ್ಕಂದಿಂದಲೂ ಸಾಧಕಮಾಡಿ ಕುಸ್ತಿಯಲ್ಲಿ ಗಟ್ಟಿಗನಾಗಿದ್ದನು. ಆದರೂ ಇಕ್ಕಳದಲ್ಲಿ ಹಿಡಿದಂತೆ ಹಿಡಿದ ಆ ಬಲಿಷ್ಠನ ಕೈಪಟ್ಟಿನ ಮುಂದೆ ಇವನ ಯುಕ್ತಿಗಳೇನೂ ಸಾಗಲಿಲ್ಲ. ಹಾಗೆ ಹಿಡಿದುಕೊಂಡ ಮನುಷ್ಯನು ಅವನನ್ನು ನೋಡಿ—"ಎಲೋ ಹುಡುಗ! ಇನ್ನು ನಿನ್ನಾಟ ನಡೆಯುವುದಿಲ್ಲ. ಸುಮ್ಮನೆ ನನ್ನೊಡನೆ ಬಾ, ನಮ್ಮ ಗುಜರಾತಿನ ಮಹಾರಾಜನ ಭೇಟಿ ತೆಗೆದುಕೋ ನಡೆ." ಎಂದು ಹೇಳಿದನು.

ಬಳಿಕ ಬನ್ನಿಯು ಇನ್ನು ಹೆಣಗಾಡಿದರೆ ಪ್ರಯೋಜನವಿಲ್ಲವೆಂದು ತಿಳಿದು—ಅದೃಷ್ಟವಿದ್ದಂತಾಗಲಿ—ಎಂದು ಹೇಳುತ್ತ ಅವನಿಗೆ ವಶನಾದ ಹಾಗೆ ನಟಿಸುತ್ತ ಸ್ವಸ್ಥವಾಗಿ ಆ ಸಿಪಾಯಿಯ ಪಕ್ಕದಲ್ಲಿಯೇ ಹೋದನು. ಅವನು ಬನ್ನಿಯ ಬಲ ತೋಳನ್ನು ಹಿಡಿದು ಕಾವಲುಗಾರನು ಹಾಕಿಕೊಂಡಿದ್ದ ಬೆಂಕಿಯ ಕಡೆಗೆ ಕರೆದು ಕೊಂಡು ಹೋಗುತ್ತಿದ್ದನು. ಇನ್ನು ಸ್ವಲ್ಪ ಹೊತ್ತಿಗೆಲ್ಲಾ ಬೆಂಕಿಯ ಬೆಳಕಿನಲ್ಲಿ ಆ ಹುಡುಗನ ಮೈಯನ್ನೆಲ್ಲಾ ಶೋಧಿಸಿ ನೋಡುವರು; ಅಗ ಅವನ ಪಾಗಿನ ಕೆಳಗೆ ಮುಚ್ಚಿಟ್ಟ ರತ್ನಕಟಕವು ಸಿಕ್ಕಿ ಗುಟ್ಟು ಹೊರಬಿದ್ದು ಬಿಡುವುದು. ಇಂಥ

ಅವಸ್ಥೆಯಲ್ಲಿದ್ದರೂ ಬನ್ನಿಯು ಧೈರ್ಯಗೆಡದೆ—ತಪ್ಪಿಸಿಕೊಂಡು ಹೋಗಲು ಏನಾದರೂ ಯುಕ್ತಿ ಮಾಡಬೇಕು; ಕೊನೆಗೆ ಪ್ರಯತ್ನದಲ್ಲಿಯೇ ಸತ್ತರೂ ಸರಿಯೇ, ಮಾಡಿಯೇ ತೀರಬೇಕು—ಎಂದು ನಿಷ್ಕರ್ಷೆಮಾಡಿಕೊಂಡನು. ಆ ವೇಳೆಗೆ ಸಿಪಾಯಿಯು ಬನ್ನಿಯ ಸಣ್ಣ ಆಕಾರವನ್ನೂ ಅವನ ನಟನೆಯ ವಿಧೇಯತೆಯನ್ನೂ ನೆಚ್ಚಿ, ಬಟ್ಟೆಯಲ್ಲಿ ಏನಾದರೂ ಆಯುಧಗಳನ್ನು ಮುಚ್ಚಿಟ್ಟುಕೊಂಡಿರುವನೋ ಏನೋ ಎಂದು ಸಹ ನೋಡದೆ, ಅವನ ಎಡಗೈಯನ್ನೂ ಕಟ್ಟದೆ ವ್ಯೈಮರೆತು ಬರುತ್ತಿದ್ದನು. ಅವನು ಮಾತ್ರ ಎಚ್ಚರವಾಗಿ ಹುಡುಗನ ಅಂಗಿಯ ಜೋಳಿನಲ್ಲಿ ಹುಡುಕಿ ನೋಡಿದ್ದರೆ ಚೇಳಿನ ಹಾಗೆ ಬಾಗಿಕೊಂಡಿದ್ದ ಒಂದು ಬಿಚ್ವ್ವ ಎಂಬ ಕಠಾರಿ ಸಿಕ್ಕುತ್ತಿತ್ತು. ಆದರೆ ಸಿಪಾಯಿ ಹುಡುಕಿ ನೋಡಲಿಲ್ಲ. ಆದುದರಿಂದ ಹುಡುಗನು ಕೈಚಳಕದಿಂದ ತಟ್ಟನೆ ಕಠಾರಿಯನ್ನು ಹಿಡಿದುಕೊಂಡು ಸಿಪಾಯಿಯ ತೋಳಿನ ಮಾಂಸಖಂಡದಲ್ಲಿ ತಿವಿದು ಒಳಕ್ಕೆ ನಾಟಿಬಿಟ್ಟನು. ಅವನು ನೋವನ್ನು ತಾಳಲಾರದೆ ಅಯ್ಯೋ ಎಂದು ಕಿರಿಚಿಕೊಂಡು ಕೈ ಸಡಿಲಬಿಟ್ಟನು. ಕೂಡಲೆ ಬನ್ನಿಯು ತನ್ನ ಸರ್ವಪ್ರಯತ್ನದಿಂದಲೂ ಒದರಿ ಕೈ ಬಿಡಿಸಿಕೊಂಡು, ಅಂಬೆಸೆದಂತೆ ಬಹು ವೇಗವಾಗಿ ಓಡತೊಡಗಿದನು. ಅದನ್ನು ಕಂಡು ಮಹಮ್ಮದೀಯ ಸೈನಿಕರು ಹಲವರು ಅವನನ್ನು ಬೆನ್ನಟ್ಟಿಕೊಂಡು ಹೋದರು.

ಹಾಗೆ ಹುಡುಗನು ಜಾಡಿಸಿ ಕೈ ಬಿಡಿಸಿಕೊಳ್ಳುವಾಗ ಅವನ ದುರದೃಷ್ಟಕ್ಕೆ ಸರಿಯಾಗಿ ಅವನ ಪಾಗು, ಬಚ್ಚಿಟ್ಟಿದ್ದ ರತ್ನದ ಬಳೆ ಸಹಿತ ಕೆಳಗೆ ಬಿದ್ದುಹೋಯಿತು. ಏನಾದರೂ ಮಾಡಿ ಅದನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿ ಅವನು ಹಿಂತಿರುಗಿ ನೋಡಿದನು. ಆಗ ತನ್ನ ಬೆಂಬತ್ತಿ ಬಂದವನು ಬಂಡೆಗಳ ನಡುವೆ ದಾರಿ ಕಾಣದೆ ತಡವರಿಸುತ್ತಿದ್ದನು. ಅದನ್ನು ಕಂಡು ಬನ್ನಿಯು ಗಕ್ಕನೆ ಒಂದು ಪಕ್ಕಕ್ಕೆ ಸರಿದು ಒಂದು ಬಂಡೆಯ ಮರೆಯಲ್ಲಿ ನಿಂತನು. ಸಿಪಾಯಿಯು ಹುಡುಗನನ್ನು ಕಾಣದೆ ಹುಡುಕುತ್ತ ಮುಂದೆ ಓಡಿದನು. ಹುಡುಗನು ಹೆಜ್ಜೆಯ ಸದ್ದಾಗದಂತೆ ವೇಗವಾಗಿ ಹಿಂದಕ್ಕೆ ಓಡುತ್ತ ಪಾಗು ಬಿದ್ದಿದ್ದಲ್ಲಿಗೆ ಹೋಗಿ ಮುಟ್ಟಿನೋಡಿದನು ಅವನ ಪುಣ್ಯಕ್ಕೆ ಬಳೆಯು ಅದರಲ್ಲೇ ಇತ್ತು; ಕೂಡಲೆ ಪಾಗನ್ನು ಎತ್ತಿ ತಲೆಗೆ ಹಾಕಿಕೊಂಡು ಯಥಾಪ್ರಕಾರ ಪ್ರಯಾಣ ಹೊರಟನು.

ಈಗ ಅವನಿಗೆ ಒಂದು ಒಳ್ಳೆಯ ಸಮಯ ಬಂದೊದಗಿತು. ಅವನು ತಡವು ಮಾಡದೆ ಅದಕ್ಕೆ ತಕ್ಕಂತೆ ನಡೆದುಕೊಂಡನು. ಅದೇನೆಂದರೆ—ರಾತ್ರಿ ಸದ್ದಡಗಿದ ವೇಳೆಯಲ್ಲಿ ತಮ್ಮವರಲ್ಲೊಬ್ಬನು ಪೆಟ್ಟು ತಿಂದು ಹಠಾತ್ತಾಗಿ ಕಿರುಚಿಕೊಂಡಿದ್ದನ. ಕೇಳಿ, ಸುತ್ತುಮುತ್ತು ಮಲಗಿದ್ದ ಸಿಪಾಯಿಗಳು ಬೆಚ್ಚಿಬಿದ್ದು ಎದ್ದು ನಿದ್ದೆಗಣ್ಣುಗಳನ್ನು ಹೊಸಕಿಕೊಳ್ಳುತ್ತ ದೀವಟಿಗೆಗಳನ್ನು ಹಿಡಿದು ಏನಾಯಿತೋ ನೋಡಬೇಕೆಂದು ಹುಡುಕಲಾರಂಭಿಸಿದರು. ಒಬ್ಬ ಮಹಮ್ಮದ್ ಸರದಾರನು ಒಳ್ಳೆಯ ದುಪ್ಪು ಹಾಕಿಕೊಂಡು ಸೊಗಸಾದ ಕರಿಯ ಠಾಕಣವನ್ನೇರಿ ಹುಡುಕುವವರಿಗೆ ಅಪ್ಪ

ಣೆಮಾಡುತ್ತ ಇತ್ತಲೂ ಅತ್ತಲೂ ಸಂಚರಿಸುತ್ತಿದ್ದನು. ಸ್ವಲ್ಪ ಹೊತ್ತಿನೊಳಗಾಗಿ ಅವನು ಹಳ್ಳತಿಟ್ಟಾದ ಆ ಕಾಡಿನಲ್ಲಿ ತನ್ನ ಕುದುರೆಯು ತನಗೆ ಬರಿಯ ಹೊರೆಯೇ ಹೊರತು ಸಹಾಯವಾಗಲಾರದೆಂದು ತಿಳಿದು ಅದನ್ನು ತನ್ನ ಪಕ್ಕದಲ್ಲಿ ಬರುತ್ತಿದ್ದ ಒಬ್ಬ ಸಣ್ಣಾಳಿನ ವಶದಲ್ಲಿ ಬಿಟ್ಟು ಕಾಲ್ನಡೆಯಲ್ಲಿಯೇ ಮುಂದೆ ಹೋದನು. ಆದರೆ ಬನ್ನಿಯು ಮರೆಯಾಗಿ ನಿಂತು ನೋಡುತ್ತಿದ್ದ ಸ್ಥಳದಲ್ಲಿಯೇ ಆ ಸರದಾರನು ಕುದುರೆಯನ್ನು ಆಳಿನ ವಶದಲ್ಲಿ ಕೊಟ್ಟನು. ಆ ಕುದುರೆಯು ಸ್ವಲ್ಪ ಹೊತ್ತಿಗೆಲ್ಲಾ ಚಂಡಿತನದಿಂದ ನೆಗೆಯುತ್ತಾ ಆಳಿನ ಕೈಗೆ ಅಡಕವಾಗದೆ ಪೇಚಾಡಿಸತೊಡಗಿತು. ಆಗ ಹುಡುಕುವವರೊಬ್ಬರೂ ಹತ್ತಿರದಲ್ಲಿರಲಿಲ್ಲ. ಆದುದರಿಂದ ಬನ್ನಿಯು ಧೈರ್ಯವಾಗಿ ಮುಂದಕ್ಕೆ ಬಂದನು. ಅವನನ್ನು ಕಂಡು ಕುದರೆಯ ಆಳು—ಎಲೋ ಕತ್ತೆಯಮಗನೇ, ಮುಂದಕ್ಕೆ ಬಂದು ಈ ಹಾಳು ಕುದುರೆಯನ್ನು ಹಿಡಿದುಕೊಳ್ಳದೆ ದೂರದಲ್ಲಿಯೇ ನಿಂತು ನೋಡುತ್ತಿದ್ದೀಯಾ—ಎಂದು ಬೈದನು. ಇಂಥ ಸಮಯವು ಒದಗೀತೇ ಎಂದು ಕಾದಿದ್ದ ಬನ್ನಿಯು ಬೇಗನೆ ಮುಂದಕ್ಕೆ ಹೋಗಿ ಕಡಿವಾಣವನ್ನು ತೆಗೆದುಕೊಂಡು—ನನಗೆ ಇನಾಮು ಕೊಡುವುದಾದರೆ ನಾನು ಕುದುರೆಯನ್ನು ಹಿಡಿದಿರುತ್ತೇನೆ. ನೀನು ಅಲ್ಲಿ ಕುಳಿತಿರಬಹುದು—ಎಂದು ಹೇಳಿದನು. ಆ ಮಾತಿಗೊಪ್ಪಿ ಆ ಸೋಮಾರಿಯಾದ ಸೇವಕನು ಬನ್ನಿಯ ವಶದಲ್ಲಿ ಕುದುರೆಯನ್ನು ಬಿಟ್ಟು ತಾನು ಮಾಡತಕ್ಕ ಕೆಲಸವನ್ನು ಮತ್ತೊಬ್ಬನ ಕೈಯಲ್ಲಿ ಮಾಡಿಸುತ್ತ ಹಾಯವಾಗಿ ಒಂದು ಕಲ್ಲಿನ ಮೇಲೆ ಕುಳಿತುಕೊಂಡು ನೋಡುತ್ತಿದ್ದನು. ಬನ್ನಿಗೆ ಅದು ಹೊತ್ತು ಕಳೆಯುವ ಸಮಯವಲ್ಲ. ಆದುದರಿಂದ ಕುದುರೆಯ ಹೆಗಲನ್ನು ತಟ್ಟಿ ಸಮಾಧಾನಪಡಿಸುವವನ ಹಾಗೆ ಸ್ವಲ್ಪ ಮುಂದಕ್ಕೆ ಹೋಗಿ, ರಿಕಾಪಿನಲ್ಲಿ ಕಾಲಿಡದೆ ಚೆಂಗನೆ ಹಾರಿ ಕುದುರೆಯ ಮೇಲೆ ಕುಳಿತುಕೊಂಡನು.

ಬನ್ನಿಯು ಹಾಗೆ ಕುಳಿತುಕೊಂಡು ಕೂಡಲೆ ಹಿಮ್ಮಡಿಯನ್ನು ಸೋಕಿಸಿ ಕುದುರೆಯನ್ನು ಅರಖಂಡದ ಕಡೆಗೆ ವೇಗವಾಗಿ ಬಿಟ್ಟುಕೊಂಡು ಹೋದನು. ಅದನ್ನು ನೋಡಿ ಕುದುರೆಯ ಆಳು ಫಕ್ಕನೆ ಎದ್ದುನಿಂತು ಗಟ್ಟಿಯಾಗಿ ಕೂಗಿಕೊಂಡನು. ಆ ವೇಳೆಗೆ ಸರಿಯಾಗಿ ಪೂರ್ವದಿಕ್ಕಿನಲ್ಲಿ ಚಂದ್ರನು ಹುಟ್ಟಿ ಮಂಜಿನಿಂದ ಮಸಮಸಕಾಗಿ ಕಾಣಿಸಿದನು. ಆ ಬೆಳದಿಂಗಳ ಬೆಳಕು ಬನ್ನಿಗೆ ದಾರಿಯನ್ನು ತೋರಿಸಿ ಅಪಾಯವಿಲ್ಲದೆ ಹೋಗುವಂತೆ ಸಹಾಯವನ್ನು ಮಾಡಿತು ; ಆದರೆ ಅದೇ ಬೆಳಕೇ ಅವನು ಮುಂದೆ ಹೋದಹಾಗೆಲ್ಲಾ ಅವನನ್ನು ಶತ್ರುಗಳಿಗೆ ತೋರಿಸಿ ವಿರೋಧವನ್ನುಂಟುಮಾಡಿತು. ಹಾಗೆ ಹೋಗುತ್ತಿದ್ದ ಬನ್ನಿಯನ್ನು ಕಂಡಕೂಡಲೆ ನೂರಾರುಮಂದಿ ಶತ್ರುಸವಾರರು ಆತುರಾತುರವಾಗಿ ಕುದುರೆಗಳನ್ನು ಹತ್ತಿ ಬೆನ್ನಟ್ಟಿಕೊಂಡು ಹೊರಟರು. ಆದರೂ ಅವರು ಆ ಹುಡುಗನನ್ನು ಹಿಡಿಯುವ ಹಾಗೆ ಕಾಣಲಿಲ್ಲ ಏಕೆಂದರೆ ಬನ್ನಿಯು ಹತ್ತಿಕ್ಕೊಂಡಿದ್ದ ಕುದುರೆಯು ಬಲವಾಗಿಯೂ ಚುರುಕಾಗಿಯೂ ಇತ್ತು. ಇದರಮೇಲೆ ಅವನು ಅದಕ್ಕೆ ಒಂದು ಗರಿಯಷ್ಟು ಕೂಡ

ಭಾರವಾಗಿ ಇರಲಿಲ್ಲ. ಆದಕಾರಣ ಅವನು ಕ್ಷಣಮಾತ್ರದಲ್ಲಿಯೇ ಬೆಟ್ಟದ ತಳಕ್ಕಿಳಿದು ಗೋದ್ವಾರಕ್ಕೂ ಅರಿಖಂಡಕ್ಕೂ ನಡುವೆ ಇದ್ದ ಉಸುಬಿನ ಬಯಲಮೇಲೆ ನಾಗಾಲೋಟದಲ್ಲಿ ದೌಡುಬಿಡುತ್ತಿದ್ದನು. ಆ ಕಾಲದಲ್ಲಿ ತನ್ನನ್ನು ಪ್ರವಾಹದಂತೆ ನಯವಾಗಿಯೂ ಬಿರುಗಾಳಿಯಂತೆ ವೇಗವಾಗಿಯೂ ಹೊತ್ತುಕೊಂಡು ಹೋಗುತ್ತಿದ್ದ ಕುದುರೆಯನ್ನು ನೋಡಿ ಬನ್ನಿಯು ಎಷ್ಟು ಮಟ್ಟಿಗೆ ಹಿಗ್ಗಿರಬೇಕು! ಹಾಗೆ ಹೋಗುತ್ತ ಅವನು ಒಂದುಸಲ ಹಿಂತಿರುಗಿ ನೋಡಿದನು ಆ ವೇಳೆಗೆ ಬೆನ್ನಟ್ಟಿ ಬರುತ್ತಿರುವವರೆಲ್ಲಾ ಹಿಂದುಬಿದ್ದು ಎಲ್ಲೋ ಒಬ್ಬಿಬ್ಬರು ದೂರದೂರದಲ್ಲಿ ಬರುತ್ತಿದ್ದರು. ಮುಂದೆ ಅರವತ್ತು ಮೈಲಿದೂರದಲ್ಲಿ ಅರಿಖಂಡವು ಚೆನ್ನಾಗಿ ಕಾಣಬರುತ್ತಿತ್ತು, ಆ ದೂರವು ನಿಮಿಷನಿಮಿಷಕ್ಕೂ ಕಡಿಮೆಯಾಗುತ್ತ ಐವತ್ತು ಮೈಲಿಯಿಂದ ನಾಲ್ವತ್ತಕ್ಕೂ ನಾಲ್ವತ್ತರಿಂದ ಮೂವತ್ತಕ್ಕೂ ಮೂವತ್ತರಿಂದ ಇಪ್ಪತ್ತಕ್ಕೂ ಇಪ್ಪತ್ತರಿಂದ ಹತ್ತಕ್ಕೂ ಇಳಿಯಿತು. ಆ ವೇಳೆಗೆ ಬನ್ನಿಯ ಕುದುರೆಯು ಬಲಗುಂದುತ್ತ ಬಂದಿತು. ಆದುದರಿಂದ ಅದು ಮುಗ್ಗರಿಸಿ ಬೀಳದಂತಿರುವುದಕ್ಕಾಗಿ ಮುಳ್ಳುಕಡಿವಾಣವನ್ನು ಉಪಯೋಗಿಸಬೇಕಾಯಿತು. ಆದರೂ ಬಿಡದೆ, ಹುಡುಗನು ಶ್ರಮಪಟ್ಟುಕೊಂಡೇ ಹೋಗಿ ಬೆಳಗಿನ ಜಾವದ ವೇಳೆಗೆ ಅರಿಖಂಡದ ಹೊರಬಾಗಿಲ ಬಳಿಗೆ ಸೇರಿದನು. ಅಷ್ಟುಹೊತ್ತಿಗೆ ನೆರೆಹೊರೆಯ ಹಳ್ಳಿಯವರು ಹಲವರು ಮಾರಾಟಕ್ಕಾಗಿ ಪದಾರ್ಥಗಳನ್ನು ತಂದು ಅರಿಖಂಡದ ಬಾಗಿಲಲ್ಲಿ ಬಂದು ಕಾದಿದ್ದರು. ಹುಡುಗನು ಅಲ್ಲಿಗೆ ಹೋಗಿ ಸೇರುವ ಕಾಲಕ್ಕೆ ಸರಿಯಾಗಿ ಅವರನ್ನೆಲ್ಲಾ ಒಳಕ್ಕೆ ಬಿಡುವುದಕ್ಕೋಸ್ಕರ ಕೋಟೆಯ ಬಾಗಿಲನ್ನು ತೆರೆದರು.

ಕೂಡಲೆ ಬನ್ನಿಯು ಕೋಟೆಗೆ ಹೋದನು. ಅಲ್ಲಿಯ ಕಾವಲುಗಾರರು ಅವನ ಕೋರಿಕೆಯ ಮೇರೆಗೆ ಅವನನ್ನು ಅರಮನೆಗೆ ಕರೆದುಕೊಂಡು ಹೋದರು. ಆಗ ಅರಮನೆಯ ಅಂಗಳದಲ್ಲಿ ಹಲವುಮಂದಿ ಸವಾರರು ದಿವ್ಯವಾದ ತೇಜಿಗಳನ್ನೇರಿ ಗಿಡಗಗಳನ್ನೂ ಬೇಟೆ ನಾಯಿಗಳನ್ನೂ ತೆಗೆದುಕೊಂಡು ಬೇಟೆಗೆ ಹೊರಡಲು ಸಿದ್ಧರಾಗಿ ನಿಂತಿದ್ದರು. ಆ ಸವಾರರ ನಡುವೆ ಬೇಟೆಯುಡುಪನ್ನು ಹಾಕಿಕೊಂಡು ಉನ್ನತಾಕಾರವಾದ ಇಬ್ಬರು ತರುಣರಿದ್ದರು. ಅವರಲ್ಲಿ ಒಬ್ಬಾತನನ್ನು ಅರಿಖಂಡದ ಸ್ವಾಮಿಯಾದ ಉಮೇದಸಿಂಗನೆಂದು ತೋರಿಸಿದರು ತತ್‌ಕ್ಷಣವೇ ಬನ್ನಿಯು ಕುದುರೆಯಿಂದಿಳಿದು ಆತನ ಬಳಿಗೆ ಓಡಿಹೋಗಿ ಆತನ ಕೈಯ್ಯಲ್ಲಿ ಬಳೆಯನ್ನಿಟ್ಟು— ಇದನ್ನು ಪನ್ನೆಯು ಕಳುಹಿಸಿರುವಳು. ಆಕೆಯೂ ಆಕೆಯ ತಂದೆಯೂ ಸಹ ಗೋದ್ವಾರದಲ್ಲಿ ಮಹಮ್ಮದೀಯರ ಮುತ್ತಿಗೆಯಲ್ಲಿ ಸಿಕ್ಕಿಬಿದ್ದಿರುವರು; ರಾಜಪುತ್ರವೀರರಾದ ತಾವು ಸಹಾಯಕ್ಕೆ ಬರಬೇಕೆಂಬುದಾಗಿ ಕೋರುವಳು—ಎಂದು ಹೇಳಿದನು. ಆ ಮಾತನ್ನು ಕೇಳಿ ಉಮೇದಸಿಂಗನ ಮುಖವು ಗರ್ವದಿಂದ ಕಳೆಯೇರಿತು. ಅವನು-ಈಗ ಕೆಲಕಾಲದಿಂದ ಉಭಯ ಸಂಸ್ಥಾನಗಳಿಗೂ ವಿವಾದ ವಿದ್ದರೂ ಕೂಡ ಅಸಮಾನರೂಪವತಿಯಾದ ಪನ್ನೆಯು ಈಗ ನನ್ನ ಸಹಾಯವನ್ನು ಕೋರಿದಳಲ್ಲ, ಅದೇ ನನಗೆ ಅತಿಶಯವಾದ ಮರ್ಯಾದೆ—ಎಂದು ಭಾವಿಸಿಕೊಂಡನು.

ಬಳಿಕ ಆತನು ತನ್ನ ಪಕ್ಕದಲ್ಲಿದ್ದವನನ್ನು ನೋಡಿ " ಮಿತ್ರನೆ, ನನಗೆ ಹುಲ್ಲೆ ಹುಲಿಗಳ ಬೇಟೆಗಿಂತಲೂ ಶ್ರೇಷ್ಠವಾದ ಮತ್ತೊಂದು ಬೇಟೆ ಬಂದು ಒದಗಿದೆ ಫೆರೋಜ್‌ಷಾಹನು ಮಾನಸಿಂಗನ ಗೋದ್ವಾರದುರ್ಗಕ್ಕೆ ಮುತ್ತಿಗೆ ಹಾಕಿದ್ದಾನೆ. ಮಾನಸಿಂಗನ ಪುತ್ರಿ ಪನ್ನೆಯು ತನ್ನ ಸಹಾಯಕ್ಕೆ ಬರಬೇಕೆಂಬುದಾಗಿ ಬಳೆಯನ್ನು ಕೊಟ್ಟು ಕಳುಹಿಸಿದ್ದಾಳೆ. ಆದ ಪ್ರಯುಕ್ತ ನಾನು ನಿನ್ನಿಂದ ಬೀಳುಕೊಂಡು, ಯುದ್ಧಕ್ಕೆ ಹೋಗುವೆನು "--ಎಂದು ಹೇಳಿದನು.

ಅದನ್ನು ಕೇಳಿ ಆತನು ನೀನು ಬೀಳುಕೊಳ್ಳಲೇಕೆ ? ಪನ್ನೆಗೆ ನೀನು ಬಳೆಯಮೂಲಕ ಬಂಧುವಾದರೆ ಜಲೀಮ್‌ಸಿಂಗನು ಆಯುಧಗಳ ಮೂಲಕ ಬಂಧುವಾಗಿದ್ದಾನೆ. ಇಷ್ಟುದಿವಸಗಳವರೆಗೂ ನಿನ್ನ ಆತಿಥ್ಯದಲ್ಲಿದ್ದ ಈ ಐವತ್ತುಮಂದಿ ವೀರರೊಡನೆ ಕೂಡಿ ಅವನು ಗೋದ್ವಾರದಬಳಿ ನಿನ್ನ ಕೈಕೆಳಗೆ ನಿಂತು ಯುದ್ಧ ಮಾಡಲು ಸಿದ್ಧನಾಗಿದ್ದಾನೆ' —ಎಂದನು.

ಜಲೀಮ್‌ಸಿಂಗನ ಈ ವಿಧವಾದ ಉದಾರವಾಕ್ಯಗಳನ್ನು ಕೇಳಿ ಇಬ್ಬರು ರಾಜಕುಮಾರರ ಪರಿಜನರೂ ಹರ್ಷದಿಂದ ಜಯಘೋಷವನ್ನು ಮಾಡಿದರು. ಬಳಿಕ ರಾಜಕುಮಾರರು—ಎಲ್ಲರೂ ಒಡನೆ ಯುದ್ಧಕ್ಕೆ ಬೇಕಾದ ಸನ್ನಾಹಗಳನ್ನು ಮಾಡಬೇಕು--ಎಂಬುದಾಗಿ ತಿಳಿಸುವಂತೆ ಎಲ್ಲಾ ಕಡೆಗೂ ರಾಜದೂತರನ್ನು ಅಟ್ಟಿದರು. ಆ ಸಂಭ್ರಮದಲ್ಲಿ ಅವರು ಬನ್ನಿಯನ್ನೂ ದಾರಿನಡೆದು ಬಳಲಿದ್ದ ಅವನ ಕುದುರೆಯನ್ನೂ ಮರೆತುಬಿಡದೆ, ಬೇಕಾದ ಊಟ ಉಪಚಾರಗಳಿಂದ ಸತ್ಕಾರಮಾಡಿಸಿದರು. ಬನ್ನಿಯು ಗೋದ್ವಾರದ ಕೋಟೆಯ ಮೇಲಿಂದ ನೂಲೇಣಿಯಲ್ಲಿ ಇಳಿದುದು ಮೊದಲುಗೊಂಡು ಅವನು ಅರಿಖಂಡಕ್ಕೆ ಬರುವವರೆಗೂ ಮಾಡಿದ ಸಾಹಸಗಳನ್ನೂ ಪಟ್ಟ ಕಷ್ಟಗಳನ್ನೂ ಅವನಿಂದ ಮತ್ತೆ ಮತ್ತೆ ಹೇಳಿಸಿ ಕೇಳಿದರು

ಇಲ್ಲಿ ಹೀಗಿರಲು ಅಲ್ಲಿ ಫೆರೋಜ್‌ಷಾಹನು ಮೂರು ದಿನದ ಹಾದಿಯಲ್ಲಿ ಹಿಂದೆ ಸಾಗಿ ಬರುತ್ತಿದ್ದ ತನ್ನ ಫಿರಂಗಿಗಳಿಗಾಗಿ ಕಾದುಕೊಂಡಿರದೆ, ಒಂದೇಸಾರಿ ಗೋದ್ವಾರದ ಕೋಟೆಯಮೇಲೆ ಕಾಣಿಸಿಕೊಳ್ಳಲುಪಕ್ರಮಿಸಿದನು. ಬನ್ನಿಯು ಕೋಟೆಯಿಂದಿಳಿದು ಅಷ್ಟೊಂದು ಚಾತುರ್ಯದಿಂದ ಅರಿಖಂಡದ ಕಡೆಗೆ ಹೋದದಿನ ಬೆಳಗಿನ ಜಾವದಲ್ಲಿಯೇ ಮುಸಮ್ಮದೀಯರು ಗೋದ್ವಾರದ ಕೋಟೆಗೆ ಲಗ್ಗೆಹತ್ತುವ ಪ್ರಯತ್ನವನ್ನು ಮಾಡಿದರು. ರಾಜದ್ರೋಹಿಯಾದ ಗೋದ್ವಾರ ನಿವಾಸಿಯೊಬ್ಬನು ಮತ್ತೊಬ್ಬರಿಗೂ ತಿಳಿಯದ ಒಂದು ಗೂಢಮಾರ್ಗದಿಂದ ಶತ್ರುಗಳನ್ನು ದುರ್ಗಕ್ಕೆ ಏರಿಸುವುದಾಗಿ ಹೇಳಿ ಒಂದು ನೂಲೇಣಿಯನ್ನು ಹಾಕಿದನು. ಆ ದುರ್ಗದ ಗೋಡೆಯ ಕೆಳಗೆ ಶತ್ರುಗಳ ಒಂದು ಸಣ್ಣ ಪಡೆ ಬಂದು ನಿಂತುಕೊಂಡು ತಮ್ಮ ಮುಂದೆ ತೂಗಾಡುತ್ತ ಸ್ವಲ್ಪಸ್ವಲ್ಪವಾಗಿ ಬೀಳುತ್ತಿದ್ದ ನೂಲೇಣಿಯನ್ನು ನೋಡುತ್ತ ರಾಜದ್ರೋಹಿಯ ಕೆಲಸವು ಕೈಗೂಡಿತೆಂದು ಹಿಗ್ಗುತ್ತ ನಿಂತಿದ್ದರು. ಆದರೆ ಅವರ ಸಂತೋಷವು ಕ್ಷಣಕಾಲದಲ್ಲಿ ಭಗ್ನವಾಗಿ ಹೋಯಿತು. ಅವರು ನೂಲೇಣಿಯು

ಕೆಳಹಂತದಲ್ಲಿ ಕಾಲಡುವುದಕ್ಕೆ ಮುಂದೆಯೋ ಅದುಜಾರಿ ದೊಪ್ಪನೆ ಕೆಳಕ್ಕೆ ಬಿದ್ದು ಬಿಟ್ಟಿತು. ಅದರ ಸಂಗಡಲೇ ಚಂಡಿನಂತೆ ಗುಂಡಾದ ಯಾವುದೋ ಒಂದು ಪದಾರ್ಥವೂ ಬಿದ್ದಿತು. ಅದೇನೆಂದು ನೋಡುವಲ್ಲಿ ಅದು ರಾಜದ್ರೋಹಿಯ ತಲೆಬುರುಡೆಯೆಂದು ಗೊತ್ತಾಯಿತು. ಆ ದ್ರೋಹಿಯು ಕೋಟೆಗೆ ನೂಲೇಣಿ ಕಟ್ಟುತ್ತಿರುವುದನ್ನು ಪಹರೆಯವರು ಕಂಡು ತಟ್ಟನೆ ಅವನಮೇಲೆ ಬಿದ್ದು ತಲೆಯನ್ನು ಕತ್ತರಿಸಿ ಹೊರಗೆ ಹಾಕಿಬಿಟ್ಟರು

ಮರುದಿನವೆಲ್ಲಾ ಮುತ್ತಿಗೆಗಾರರು ಸುರಂಗಗಳನ್ನು ಮಾಡುತ್ತಲೂ, ಕಂದಕಗಳನ್ನು ತೋಡುತ್ತಲೂ. ಅದೇ ಕಾಲದಲ್ಲಿಯೇ ಕೋಟೆ ಯುದ್ಧಕ್ಕೂ ಅಲ್ಲಲ್ಲೇ ಸಣ್ಣ ಸಣ್ಣ ದಳಗಳನ್ನು ಕಳುಹಿಸಿ ಹುಸಿಮುತ್ತಿಗೆ ಹಾಕಿಸುತ್ತಲೂ ಇದ್ದರು, ಇದರಿಂದ ಒಳಗಿನ ಸೈನಿಕರು ಮುತ್ತಿಗೆಗಳನ್ನು ತಡೆಯುವುದರಲ್ಲೇ ಬೇಸತ್ತು ಶತ್ರುಗಳ ಸುರಂಗಗಳಿಗೆ ಸ್ವಲ್ಪವೂ ಅಡ್ಡಿಮಾಡಲಾರದೆ ಹೋದರು. ಆ ದಿನ ಕೋಟೆಗೆ ಲಗ್ಗೆ ಹತ್ತಲು ವಿಶೇಷ ಪ್ರಯತ್ನಗಳೇನೂ ನಡೆಯಲಿಲ್ಲ. ಮುತ್ತಿಗೆಗಾರರು ತಮ್ಮ ಫಿರಂಗಿಗಳು ಬಂದಮೇಲೆ ಅವುಗಳನ್ನು ಕೋಟೆಗೆ ಗುರಿಯೆತ್ತಿಕಟ್ಟಿ ತಮ್ಮಲ್ಲಿ ಸಂಬಳಕ್ಕಿದ್ದ ಚತುರರಾದ ಪೋರ್ತುಗೀಸ್ ಲಾಂದರಾಜರ ಕೈಯಲ್ಲಿ ಗುಂಡು ಹಾರಿಸಿದರೆ ನಿಮಿಷದಲ್ಲಿ ಕೋಟೆ ಬಿರುಕುಬಿಟ್ಟು ತಮ್ಮ ಕೈವಶವಾಗುವುದೆಂದು ನಂಬಿಕೊಂಡು, ಅವುಗಳು ಬರುವವರೆಗೂ ಸುಮ್ಮನಿರುವುದು ಉತ್ತಮವೆಂದು ಬಗೆದು, ಅವುಗಳ ಬರವನ್ನೇ ಎದುರು ನೋಡುತ್ತಾ ಇದ್ದರು.

ಇತ್ತ ಉಮೇದಸಿಂಗನು ತಾನು ಪನ್ನೆಯ ಪ್ರಾರ್ಥನೆಗೆ ಒಡಂಬಟ್ಟುದನ್ನು ತಿಳಿಸುವುದಕ್ಕಾಗಿ ಅವಳಿಗೆ ಮುತ್ತು ಬಿಗಿದ ಒಂದು ಕುತ್ತಿನಿ ಜರತಾರಿಯ ಕುಪ್ಪಸವನ್ನು ಒಬ್ಬ ಹರಿಕಾರನ ಮೂಲಕ ಕಳುಹಿಸಿಕೊಟ್ಟನು. ಆ ಹರಿಕಾರನು ಸವ್ವರಾತ್ರಿಯಲ್ಲಿ ಕೋಟೆಯ ಗೋಡೆಯನ್ನು ಹತ್ತಿ ಒಳಹೊಕ್ಕು ತಾನು ತಂದ ಕುಪ್ಪಸವನ್ನೊಪ್ಪಿಸಿದನು. ಅದರಿಂದ ಒಳಗಿದ್ದವರಿಗೆಲ್ಲಾ ಸ್ವಲ್ಪ ಧೈರ್ಯವುಂಟಾಯಿತು. ಉಮೇದಸಿಂಗನೊಡನೆ ಜಲೀಮ್‌ಸಿಂಗನೂ ಗೋದ್ವಾರದ ರಕ್ಷಣೆಗೆ ಬರುವ ಸಂಗತಿಯನ್ನು ಕೇಳಿದೊಡನೆ ಅವರಿಗೆ ಮತ್ತಷ್ಟು ಪ್ರತ್ಯಾಶೆಯುಂಟಾಯಿತು. ಇತ್ತ ಉಮೇದಸಿಂಗನೂ ಜಲೀಮ್ ಸಿಂಗನೂ ತಮ್ಮ ಉಭಯಸೇನೆಗಳ ಮುಂದೆ ಜತೆಯಾಗಿ ಸವಾರಿ ಮಾಡುತ್ತ ಆ ಸನ್ನಿವೇಶದಲ್ಲಿ ತಾವು ಏನು ಮಾಡಬೇಕೆಂದು ಮಂತ್ರಾಲೋಚನೆಮಾಡಿದರು. "ನಮ್ಮ ಬಳಿ ಒಟ್ಟು 5,000 ಸೈನ್ಯಕ್ಕೆ ಮೇಲೆ ಇಲ್ಲ; ಶತ್ರುಗಳ ಬಳಿಯಲ್ಲಿ ಕನಿಷ್ಠಪಕ್ಷ 15,000ಕ್ಕೆ ಕಡಿಮೆಯಾಗಿಲ್ಲ. ಆದುದರಿಂದ ಪ್ರಕೃತದಲ್ಲಿ ಯುದ್ಧಮಾಡುವುದು ವಿವೇಕವಾಗಿ ಕಾಣುವುದಿಲ್ಲ. ಆದಪ್ರಯುಕ್ತ ನಾವು ಶತ್ರುಗಳ ಸುತ್ತಲೂ ಹೊಂಚಿಕೊಂಡು ಸುಳಿದಾಡುತ್ತ ಸಮಯ ಸಿಕ್ಕಿದಾಗ ಒಳಕ್ಕೆ ಸಹಾಯವನ್ನು ಒದಗಿಸಿಕೊಡುವುದು ಒಳ್ಳೆಯದು ಎಲ್ಲಕ್ಕೂ ಮೇಲೆ ಶತ್ರುಗಳಿಗೆ ಗುಜರಾತಿನಿಂದ ಕಾಗದ ಪತ್ರಗಳು ಬಾರದಂತೆ ಅಡ್ಡಿ

ಮಾಡುವುದೇ ಸರ್ವೋತ್ತಮವಾದ ಉಪಾಯ. ಹಾಗೆ ಮಾಡಿಬಿಟ್ಟರೆ ಈಗ ಶತ್ರುರಾಜ್ಯದಲ್ಲಿ ಬರಿಯ ಬೆಂಗಾಡಿನಲ್ಲಿ ಸಿಕ್ಕಿಕೊಂಡಿರುವ ಮಹಮ್ಮದೀಯರಿಗೆ ತಮ್ಮ ದೇಶದಿಂದ ದವಸ ಧಾನ್ಯಗಳು ಬಂದು ಒದಗಲು ದುಸ್ತರವಾಗುವುದು. ಆದುದರಿಂದ ಈ ರೀತಿಯಾಗಿಯೇ ಮಾಡಬೇಕು ''—ಎಂದು ಆಲೋಚನೆ ಮಾಡಿಕೊಂಡು ಗೋದ್ವಾರದ ನೈಋತ್ಯ ಭಾಗಕ್ಕೆ ಹೋಗಿ ಅಹಮ್ಮದಾಬಾದಿನಿಂದ ಬರುವ ರಾಜ ಮಾರ್ಗದ ಪಕ್ಕದಲ್ಲಿ ಸುರಕ್ಷಿತವಾದ ಒಂದುಕಡೆ ಬೀಡು ಬಿಟ್ಟುಕೊಂಡರು.

ಅವರು ಇನ್ನೂ ನೆಟ್ಟಗೆ ನೆಲಸಿದರೋ ಇಲ್ಲವೋ ಎನ್ನುವುದರೊಳಗಾಗಿ ಒಬ್ಬ ರಾಜಪುತ್ರಸವಾರನು ಕುದುರೆಯನ್ನು ನಾಗಾಲೋಟದಲ್ಲಿ ಓಡಿಸಿಕೊಂಡು ಬಂದು—' ಇಗೋ ಹತ್ತಿರದಲ್ಲಿಯೇ ಮಹಮ್ಮದೀಯರ ಫಿರಂಗಿಗಳು ಬರುತ್ತಿವೆ. ಕಾವಲಿಗೆ ನಾಲ್ಕಾರುಮಂದಿ ಸಿಪಾಯಿಗಳು ಮಾತ್ರವೇ ಸಂಗಡ ಬರುತ್ತಾರೆ ಅವರ ನಾಯಕರು ತಮ್ಮ ಮೇಲೆ ಹಠಾತ್ತಾಗಿ ಶತ್ರುಗಳು ಬಂದು ಬಿದ್ದಾರೆಂಬ ಶಂಕೆ ಕೂಡ ಇಲ್ಲದೆ ಯಾವ ಏರ್ಪಾಡನ್ನೂ ಮಾಡದೆ ಸ್ವೈಮರೆತು ಬರುತ್ತಿದ್ದಾರೆ ' ಎಂಬದಾಗಿ ಸಮಾಚಾರವನ್ನು ತಂದು ಹೇಳಿದನು. ಇದನ್ನು ಕೇಳಿದ ಉತ್ತರಕ್ಷಣದಲ್ಲಿಯೇ ಉವೇದಸಿಂಗನು ಎರಡುಸಾವಿರ ಭಟರನ್ನು ಕರೆದುಕೊಂಡುಕಣಿವೆಯಲ್ಲಿ ಅವರು ಬರುವದಾರಿಯ ಇಕ್ಕಟ್ಟಾದ ಒಂದು ಭಾಗಕ್ಕೆ ಹೋಗಿ ಉಭಯ ಪಾರ್ಶ್ವಗಳಲ್ಲಿಯೂ ಅವರನ್ನು ಮರಸಿಟ್ಟು ಫಿರಂಗಿ ಬರುವುದನ್ನೇ ಕಾದುಕೊಂಡಿದ್ದನು. ಸ್ವಲ್ಪಹೊತ್ತಿಗೆಲ್ಲಾ ಫಿರಂಗಿಗಳು ಕಾಣಿಸಿದುವು. ಆ ಫಿರಂಗಿಗಾಡಿಗಳಿಗೆ ಗುಜರಾತಿನ ಪ್ರಸಿದ್ಧವಾದ ಎತ್ತುಗಳನ್ನು ಕಟ್ಟಿ ಮೆಲ್ಲಗೆ ನಡೆಯಿಸುತ್ತ ಬರುತ್ತಿದ್ದರು. ಅವುಗಳ ಮುಂಗಾವಲಾಗಿ ನಾಲ್ಕಾರುಮಂದಿ ಸವಾರರು ಮಾತ್ರ ಬಂದರು. ಅವರು ಯಾವ ಕಡೆಯನ್ನೂ ನೋಡದೆ ಮುಂದಕ್ಕೆ ಹೋದರು, ಬಳಿಕ ಪೋರ್ತುಗೀಸ್ ಗೋಲಂದಾಜರಕೂಡ ಫಿರಂಗಿಗಾಡಿಗಳು ಬಂದುವು. ಅವು ಉಭಯಪಾರ್ಶ್ವದಲ್ಲಿಯೂ ಅವಿತುಕೊಂಡಿದ್ದ ಸೈನಿಕರ ಮಧ್ಯಭಾಗಕ್ಕೆ ಬಂದಕೂಡಲೆ ಮೇಲೆ ಬೀಳುವಂತೆ ಸೈನಿಕರಿಗೆ ಅಪ್ಪಣೆಯಾಯಿತು. ಒಡನೆಯೇ ಕಣ್ಣಿಗೆ ಕಾಣಿಸದಂತೆ ನಿಂತಿದ್ದ ರಾಜಪುತ್ರ ಸೈನಿಕರಿಂದ ಗುಂಡುಗಳೂ ಬಾಣಗಳೂ ಏಕಾಕಾರವಾಗಿ ಬಂದು ಗೋಲಂದಾಜರಮೇಲೆ ಬಿದ್ದುವು ಅವರು ಶತ್ರುಗಳಿರುವ ದಿಕ್ಕನ್ನುಕಾಣದೆ ಹುಚ್ಚಾಬಟ್ಟೆಯಾಗಿ ಕೋವಿಗಳನ್ನು ಹಾರಿಸಿದರು ಅದರಿಂದ ಯಾರಿಗೂ ಏನೂ ಅಪಾಯವಾಗಲಿಲ್ಲ ಈ ನಡುವೆ ರಾಜಪುತ್ರರ ಅಂಬುಗಳ ಪೆಟ್ಟಿನಿಂದ ನೊಂದ ಎತ್ತುಗಳು ದಿಕ್ಕು ದಿಕ್ಕಿಗೆ ನುಗ್ಗತೊಡಗಿದುವು. ಇದರಿಂದ ಇದ್ದ ಗಲಬಿಲಿಯು ಮತ್ತಷ್ಟು ಹೆಚ್ಚಾಯಿತು. ಫಿರಂಗಿಕಾವಲಿನ ದಳವು ಅತ್ಯಲ್ಪವಾಗಿದ್ದುದರಿಂದಲೂ, ರಾಜ ಪುತ್ರರು ಹಠಾತ್ತಾಗಿ ಮೇಲೆಬಿದ್ದುದರಿಂದಲೂ, ಪೋರ್ತುಗೀಸರು ತಮ್ಮಲ್ಲಿ ಬಹುಜನರು ಹತರಾಗುವ ವರೆಗೂ ಹೊಡೆದಾಡಿ ಕೊನೆಗೆ ಫಿರಂಗಿಗಳನ್ನು ರಕ್ಷಿಸಿ

ಕೊಳ್ಳುವುದು ಸಾಧ್ಯವಲ್ಲವೆಂದು ತಿಳಿದು ಶರಣಾಗತರಾದರು ಹೀಗೆ ಕೈಗೆ ಸಿಕ್ಕಿದ ಫಿರಂಗಿಗಳನ್ನು ಹಿಡಿದುಕೊಳ್ಳಲು ತಮಗೆ ಶಕ್ತಿ ಸಾಲದೆಂದು ರಾಜಪುತ್ರರಿಗೂ ಗೊತ್ತಾಯಿತು. ಅವರು ಶತ್ರುವಿಗಿಂತ ಸಂಖ್ಯೆಯಲ್ಲಿ ಕಡಿಮೆಯಾಗಿದ್ದುದರಿಂದ, ಈ ಕುಂದಕವನ್ನು ತಮ್ಮ ಅಧಿಕವಾದ ವೇಗದಿಂದ ಸರಿಮಾಡಿಕೊಳ್ಳಬೇಕೆಂದಿದ್ದರು. ಹೀಗಿರುವಲ್ಲಿ ಅವುಗಳನ್ನು ಇಟ್ಟುಕೊಳ್ಳುವುದರಿಂದ ಅವರಿಗೆ ತಡೆಯಾಗುತಿದ್ದಿತೇ ಹೊರತು ಅನುಕೂಲವಾಗುತ್ತಿರಲಿಲ್ಲ. ಆದುದರಿಂದ ಅವರು ತಾವು ಹಿಡಿದುಕೊಂಡ ಫಿರಂಗಿಗಳನ್ನು ಸಮೀಪದಲ್ಲಿದ್ದ ಒಂದು ಕೆರೆಯಲ್ಲಿ ಹಾಕಿಬಿಟ್ಟು ಪೋರ್ತುಗೀಸರನ್ನೂ ಎತ್ತುಗಳನ್ನೂ ಕೈಸೆರೆಹಿಡಿದು ಮರಳಿ ತಮ್ಮ ಬಿಡಾರಕ್ಕೆ ಬಂದರು. ಆ ವೇಳೆಗೆ ತಮ್ಮ ಬಿಡಾರವನ್ನು ಮುತ್ತುವುದಕ್ಕಾಗಿ ಮಹಮ್ಮದೀಯರ ಸೇನೆಯಿಂದ ಒಂದು ದಳವು ಬರುತ್ತಿತ್ತು. ರಾಜಪುತ್ರರು ಹಾಗೆ ಫಿರಂಗಿಗಳನ್ನು ಹಿಡಿದುದ ಬಹಳ ಒಳ್ಳೆಯದಾಯಿತು. ತನ್ನಲ್ಲಿ ಫಿರಂಗಿಗಳೂ ಇಲ್ಲದೆಹೋಗಿ ತನ್ನ ಬೆಂಬಳಿಯಲ್ಲಿ ಶತ್ರುಸೇನೆಯೂ ಇದ್ದುದರಿಂದ ಫಿರೋಜ್‌ಷಾಹನು ಗೋದ್ವಾರದ ಕೋಟೆಯನ್ನು ಜಾಗ್ರತೆಯಾಗಿ ಹಿಡಿಯಲಾಗಲಿಲ್ಲ. ಇಷ್ಟೇ ಅಲ್ಲ. ತಮ್ಮವರಿಗಾದ ಸೋಲನ್ನು ಕೇಳಿ ಅವನ ಸೈನಿಕರೆಲ್ಲಾ ದಿಗಿಲುಬಿದ್ದು ಕೋಟೆಗೆ ಮುತ್ತಿಗೆಹಾಕಲು ಸಮ್ಮತಿಸದೆ ಹೋದರು. ಅವರಲ್ಲಿ ಅನೇಕರು ತಾವು ರಾಜಪುಟಾನದ ಮರಳುಗಾಡಿನಲ್ಲಿ ಅನ್ಯಾಯವಾಗಿ ಸತ್ತು ಫಲವತ್ತಾದ ತಮ್ಮ ದೇಶವನ್ನು ಪುನಃ ನೋಡುವುದಿಕ್ಕಿಲ್ಲದಂತಾಯಿತೆಂದು ಭಾವಿಸಿ ಧೈರ್ಯಗುಂದಿದರು.

ಇತ್ತ ಹೀಗಿರಲು ಅತ್ತ ರಾಜಪುತ್ರರಲ್ಲಿ ಉತ್ಸಾಹವು ವಿಶೇಷವಾಗಿ ಹೆಚ್ಚಿತು. ಫಿರಂಗಿಗಳನ್ನು ಹಿಡಿದುಕೊಂಡ ಸಮಾಚಾರವು ದೇಶದ ಎಲ್ಲಾ ಕಡೆಗಳಲ್ಲಿಯೂ ಹರಡಿಕೊಂಡಿತು. ಆ ಸುದ್ದಿಯನ್ನು ಕೇಳಿ ನೆರೆಹೊರೆಯ ರಾಜಪುತ್ರರಾಜರು ಮಹಮ್ಮದೀಯರ ಹಾವಳಿಯನ್ನು ತಪ್ಪಿಸುವುದಕ್ಕೆ ಇದೇ ಸಮಯವೆಂದಂದುಕೊಂಡು ಇಲ್ಲಿಗೆ ಬಂದು ಸೇರಲಾರಂಭಿಸಿದರು. ನಾಗೂರು ಸಂಸ್ಥಾನದಿಂದಲೂ ಕೂಡ ರಾಜಪುತ್ರಸವಾರರು ಮೂವರು ನಾಲ್ವರಾಗಿ ಬಂದು ಬಂದು ಸೇರತೊಡಗಿದರು. ಈ ಕಾಲದಲ್ಲಿ ನಾಗೂರಿನ ತರುಣಭಟರೆಲ್ಲರೂ ದಕ್ಷಿಣದಲ್ಲಿ ಚಕ್ರವರ್ತಿಯ ಪರವಾಗಿ ಯುದ್ಧಕ್ಕೆ ಹೊರಟುಹೋಗಿದ್ದಕಾರಣ ಇಲ್ಲಿಗೆ ಬಂದವರಲ್ಲಿ ಅನೇಕರು ವೃದ್ಧರಾಗಿಯೋ ಇಲ್ಲವೇ ಬಾಲರಾಗಿಯೋ ಇದ್ದರು ಆದರೂ ಉಮೇದಸಿಂಗನ ಕೈಕೆಳಗಿದ್ದ ಆ ಸಣ್ಣದಳಕ್ಕೆ ಇಂಥವರ ಆಗಮನವೂ ಇಷ್ಟವಾಗಿತ್ತು.

ಇದೇ ಸಮಯದಲ್ಲಿ ಫಿರೋಜ್‌ಷಾಹನ ಸೇನೆಯು ಬಹಳ ಕಷ್ಟಕ್ಕೆ ಸಿಕ್ಕಿತ್ತು. ಈ ಸೇನೆಗೂ ರಾಜಪುಟಾಣಕ್ಕೂ ಎಲ್ಲಾ ವಿಧವಾದ ಸಂಸರ್ಗವೂ ತಪ್ಪಿಹೋದುದರಿಂದ ಹೊಸತಾಗಿ ಪದಾರ್ಥಗಳನ್ನು ತರಿಸಿಕೊಳ್ಳಲು ಅವಕಾಶ ತಪ್ಪಿಹೋ

ಯಿತು. ಸೈನ್ಯದಲ್ಲಿದ್ದ ದವಸ ಧಾನ್ಯಗಳೆಲ್ಲಾ ಮುಗಿಯುತ್ತ ಬಂದುವು. ಆದುದರಿಂದ ಅವರು ಮುಂದೆ ಅನ್ನವಿಲ್ಲದೆ ಸಾಯುವ ಸಂಗತಿ ಬಂದಿತು. ಈ ಕಷ್ಟವನ್ನು ನಿವಾರಣೆಮಾಡಬೇಕಾದರೆ ಅವರು ಕೋಟೆಯನ್ನು ಲಗ್ಗೆ ಹತ್ತಿ ಒಳಗೆ ದವಸ ಧಾನ್ಯಗಳಿಂದ ತುಂಬಿದ್ದ ಕಣಜಗಳನ್ನು ಹಿಡಿದುಕೊಳ್ಳಬೇಕೇ ಹೊರತು ಬೇರೆ ಯಾವ ಉಪಾಯವೂ ಕಾಣಲಿಲ್ಲ. ಆದಕಾರಣ ಮಹಮ್ಮದೀಯ ಸೈನಿಕರು ಆ ಕೋಟೆಯ ಮಹಾದ್ವಾರದ ರಕ್ಷಣೆಗಾಗಿ ಕಟ್ಟಿದ್ದ ಕೊತ್ತಳದ ಕೆಳಗೆ ದೊಡ್ಡ ಸುರಂಗವನ್ನು ಹಾಕಿ ಕೊತ್ತಳವನ್ನು ಹಾರಿಸಿ ದೀಽ ದೀಽ ಎಂದು ಕೂಗುತ್ತ ಲಗ್ಗೆ ಹತ್ತಲಾರಂಭಿಸಿದರು. ಆ ಕೂಗನ್ನು ಕೇಳಿ ಒಳಗೆ ಕಾದಿದ್ದ ರಾಜಪುತ್ರವೀರರೂ ಸಿಂಹನಾದಮಾಡಿದರು. ಸುರಂಗ ಹಾರಿದ ಸದ್ದನ್ನು ಕೇಳಿ ಉಮೇದಸಿಂಗನು—ಓಹೋ! ಕೋಟೆಯೊಳಗಿನವರಿಗೆ ಅಪಾಯವು ಸಮೀಪವಾಯಿತು— ಎಂದು ಹೇಳಿ ಕೂಡಲೆ, ತನ್ನ ತುರಗಸೈನ್ಯವನ್ನು ವ್ಯೂಹವಾಗಿ ನಿಲ್ಲಿಸಿ, ಕೋಟೆಗೆ ಲಗ್ಗೆಹತ್ತುವ ಮಹಮ್ಮದೀಯ ಸೈನ್ಯದ ಹಿಂದುಗಡೆಯಲ್ಲಿ ಹೋಗಿ ಅವರಮೇಲೆ ಬೀಳುವಂತೆ ಅಪ್ಪಣೆಮಾಡಿದನು. ಇವರು ಮೇಲೆ ಬಿದ್ದ ಕಾರಣ ಫಿರೋಜ್‌ಷಾಹನು ಲಗ್ಗೆಹತ್ತುವವರ ಬೆಂಬಲಕ್ಕಾಗಿ ಕೂಡಿಸಿದ್ದ ಸೇನೆಯನ್ನು ಹಿಂತಿರುಗಿಸಿ ಶತ್ರುಗಳನ್ನು ಎದುರಿಸಬೇಕಾಯಿತು. ಇದೇ ಸಮಯದಲ್ಲಿ ಜಲೀಮ್‌ಸಿಂಗನು ತನ್ನ ಐವತ್ತುಮಂದಿ ಸವಾರರೊಡನೆ ಹೊರಟು ಶತ್ರುಸೇನೆಯುದ್ದಕ್ಕೂ ವೇಗವಾಗಿ ಹೋಗುತ್ತ ಕ್ಷಣಕ್ಷಣಕ್ಕೂ ಬೇರೆ ಬೇರೆ ಕಡೆ ಮೇಲೆ ಬೀಳುವಂತೆ ಕಾಣಿಸಿಕೊಳ್ಳುತ್ತ ಶತ್ರುಗಳು ದುರ್ಬಲರಾಗಿದ್ದ ಭಾಗದಲ್ಲೆಲ್ಲಾ ರಭಸದಿಂದ ಮೇಲೆ ಬೀಳುತ್ತ ತೊಂದರೆಪಡಿಸಲಾರಂಭಿಸಿದನು. ಈ ಕಾರಣಗಳಿಂದ ಶತ್ರುವು ಕೋಟೆಗೆ ಲಗ್ಗೆಹತ್ತುವ ಪ್ರಯತ್ನವನ್ನು ಬಿಟ್ಟು ಇವರೊಡನೆ ಯುದ್ಧಕ್ಕೆ ನಿಲ್ಲಬೇಕಾಯಿತು. ತರುವಾಯ ಉಭಯಪಕ್ಷದವರೂ ಬಹುಕಾಲಯುದ್ಧ ಮಾಡಿ ಯಾರೂ ನಿಷ್ಕೃಷ್ಟವಾದ ಜಯವನ್ನು ಪಡೆಯದೆ ತಮ್ಮ ತಮ್ಮ ಪಾಳೆಯಗಳಿಗೆ ತೆರಳಿದರು.

ಫಿರೋಜ್‌ಷಾಹನು ಅಂದಿನ ಯುದ್ಧದಲ್ಲಿ ತನಗೆ ಯಾವ ಫಲವೂ ಆಗದೆ ಹೋದುದನ್ನು ನೋಡಿ, ತಾನು ಕೋಟೆಯನ್ನು ಹಿಡಿದುಕೊಳ್ಳಬೇಕಾದರೆ ಮೊದಲು ಉಮೇದಸಿಂಗನನ್ನು ತೀರ ಸೋಲಿಸಬೇಕೆಂದು ಗೊತ್ತುಮಾಡಿಕೊಂಡನು. ಕ್ಷಿಪ್ರದಲ್ಲಿ ಅವನನ್ನು ಸೋಲಿಸದೆಯೂ ಗುಜರಾತಿನೊಡನೆ ಸಂಸರ್ಗವನ್ನು ಕೂಡಿಸಿಕೊಳ್ಳದೆಯೂ ಹೋದಲ್ಲಿ ಅವನ ಸೈನ್ಯವು ಯುದ್ಧದಲ್ಲಿ ಪರಾಜಿತವಾಗದಿದ್ದರೂ ಅನ್ನವಿಲ್ಲದೆಯಾದರೂ ಸೋತುಹೋಗುವುದೆಂದು ಅವನಿಗೆ ಗೊತ್ತಾಯಿತು. ಆದುದರಿಂದ ಆವನು ಮರುದಿವಸ ಹೊರಗಣ ಶತ್ರುಗಳನ್ನು ಧ್ವಂಸಮಾಡುವುದಾಗಿ ನಿಶ್ಚಯಿಸಿ, ನಾನು ಆವರೊಡನೆ ಯುದ್ಧಮಾಡುತ್ತಿರುವಾಗ ಹಿಂದಿನಿಂದ ಗೋದ್ವಾರದವರು ಬಂದು ಮೇಲೆ ಬೀಳದಂತೆ ನೋಡಿಕೊಳ್ಳುವುದಕ್ಕಾಗಿ ಕೋಟೆಯ ಬಳಿಯಲ್ಲಿ ಒಂದು ಸಣ್ಣ ದಳವನ್ನು ಬಿಟ್ಟು, ಅಹಮ್ಮದಾಬಾದಿನ ಮಾರ್ಗದಲ್ಲಿ ಪಾಳೆಯಹಾಕಿ

ಕೊಂಡ ರಾಜಪುತ್ರರ ಮೇಲೆ ಹೊರಟು, ತನ್ನ ಸೇನೆಯ ಮಧ್ಯಭಾಗದಲ್ಲಿ ಕಾಲಾಳು ಗಳನ್ನೂ ಉಭಯ ಪಾರ್ಶ್ವಗಳಲ್ಲಿಯೂ ಕುದುರೆ ಪಡೆಯನ್ನೂ ನಿಲ್ಲಿಸಿಕೊಂಡು, ಸೇನೆಯ ಹಿಂದುಗಡೆಯಲ್ಲಿ ತಾನು ಅಮೂಲ್ಯವಾದ ರತ್ನ ಕಂಬಳದಿಂದ ಅಲಂಕೃತ ವಾದ ಪಟ್ಟದಾನೆಯನ್ನು ಏರಿ ಅಂಬಾರಿಯಲ್ಲಿ ಕುಳಿತು, ರಾಜಚಿಹ್ನಸೂಚಕವಾದ ಛತ್ರವನ್ನು ಹಿಡಿಸಿಕೊಂಡು ಅಂಗರಕ್ಷಕರಿಂದ ಪರಿವೃತನಾಗಿ ಹೊರಟನು. ಹಾಗೆ ಬಂದ ಮಹಮ್ಮದೀಯರ ಈ ಪ್ರಬಲವಾದ ಸೈನ್ಯಕ್ಕೆ ಎದುರಾಗಿ ನಿಂತು ಯುದ್ಧ ಮಾಡಿ ಸ್ವಲ್ಪ ಭಟರುಳ್ಳ ರಾಜಪುತ್ರಸೇನೆಯು ಗೆಲ್ಲುವ ಸಂಭವವುಂಟೆ? ಅದು ಎಷ್ಟುಮಾತ್ರವೂ ಸಾಧ್ಯವಾಗಿ ಕಾಣಿಸಲಿಲ್ಲ. ರಾಜಪುತ್ರರು ಶತ್ರುಸೇನಾಮಧ್ಯ ದಲ್ಲಿದ್ದ ಪದಾತಿಗಳಮೇಲೆ ಬಿದ್ದಲ್ಲಿ ಉಭಯಪಾರ್ಶ್ವದ ಕುದುರೆದಳವೂ ಸುತ್ತಿ ಕೊಂಡು ಇವರನ್ನು ತುಳಿದುಬಿಡುವುವು. ಉಮೇದಸಿಂಗನು ಎಷ್ಟುಮಟ್ಟಿಗೆ ಧೀರ ನಾಗಿದ್ದನೋ ಅಷ್ಟುಮಟ್ಟಿಗೆ ವಿವೇಕಿಯೂ ಆಗಿದ್ದನು. ಆದುದರಿಂದ ಅವನು ತನ್ನ ಮೇಲೆ ಬರುತ್ತಿರುವ ಶತ್ರುಸೇನೆಯ ಎದುರಿಗೆ ಹೋಗಿ ಮೇಲೆಬಿದ್ದರೆ ತನಗೆ ಖಂಡಿತವಾಗಿಯೂ ಅಪಜಯವಾಗುವುದೆಂದು ತಿಳಿದು ಹಿಮ್ಮೆಟ್ಟುವನಂತೆ ನಟಿಸಿ ಶತ್ರುವನ್ನು ಕುಟಿಲೋಪಾಯದಿಂದ ಜಯಿಸಬೇಕೆಂದು ಆಲೋಚಿಸಿದನು. ಬಳಿಕ ತದನುಗುಣವಾಗಿ ಶತ್ರುವು ತಮ್ಮ ಬಿಲ್ಲೆಸುಗೆಗೆ ಬರುವವರೆಗೂ ಸುಮ್ಮನಿದ್ದು, ಬಂದಕೂಡಲೆ ಅಂಬುಗಳನ್ನು ಬಿಡುತ್ತ ಸ್ವಲ್ಪದೂರ ವ್ಯೂಹವಾಗಿ ಹಿಮ್ಮೆಟ್ಟಿ ಹೋಗುತ್ತ ಪುನಃ ನಿಂತು ಬಾಣ ಪ್ರಯೋಗಮಾಡುತ್ತ ಶತ್ರುಗಳನ್ನು ಗೋದ್ವಾರ ದಿಂದ ಬಹುದೂರ ಎಳೆದುಕೊಂಡು ಹೋದನು. ತರುವಾಯ ಉಪಾಯಾಂತರ ವನ್ನು ಮಾಡಲೆಣಿಸಿ ಶತ್ರುಗಳು ತಮ್ಮೆಸುಗೆಗೆ ಬಂದಕೂಡಲೆ ರಾಜಪುತ್ರರೆಲ್ಲಾ ಹಠಾತ್ತಾಗಿ ಒಟ್ಟಿಗೆ ಬಲಗಡೆ ಮಗ್ಗುಲಾಗಿ ತಿರುಗಿ ನಾಲ್ಕುಸಾವಿರಮಂದಿ ಸೈನಿ ಕರು ಮಹಮ್ಮದೀಯ ಸೇನೆಯ ಎಡಪಕ್ಕದಲ್ಲಿದ್ದ ಕುದುರೆಯ ದಳದಮೇಲೆ ಬಿದ್ದು ಸ್ವಲ್ಪಕಾಲ ಘೋರವಾಗಿ ಕಾದಿ ಅದನ್ನು ಶತ್ರುಸೇನಾಮಧ್ಯಕ್ಕೆ ತರುಬಿದರು. ಹೀಗೆ ವಿಜಯವನ್ನು ಪಡೆದ ರಾಜಪುತ್ರರು ಇಷ್ಟರಲ್ಲೇ ತೃಪ್ತರಾಗದೆ ವೀರಾವೇಶ ದಿಂದ ಮೈಮರೆತು ತಮ್ಮ ಸೇನಾನಾಯಕರ ಅಭಿಪ್ರಾಯವನ್ನು ಸಡ್ಡೆಮಾಡದೆ ಮಹಮ್ಮದೀಯರ ಕಾಲದಳದಮೇಲೆ ಬಿದ್ದರು. ಆದರೂ ಅವರು ಈಟಿಯ ಕಾಡನ್ನು ಭೇದಿಸಲಾರದೆ ಈ ನಿಷ್ಫಲವಾದ ಶ್ರಮದಲ್ಲಿ ನೂರಾರುಮಂದಿಯನ್ನು ಕಳೆದುಕೊಂಡು ಕೊನೆಗೆ ಶತ್ರುಸೇನೆಯ ಬಲಗಡೆಯಲ್ಲಿದ್ದ ಅಶ್ವಸೈನ್ಯದಿಂದ ಬಳಸ ಲ್ಪಟ್ಟು ಜಲೀಮ್‌ಸಿಂಗನ ಮಾತಿಗೆ ಕಿವಿಗೊಟ್ಟು ಹಿಂದಿರುಗಿದರು. ಇವರೆಲ್ಲರೂ ಸಿಕ್ಕಿಹೋಗುವಂತಾದ ಈ ವಿಧವಾದ ಅಪಾಯದಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದುವವರೆಗೂ ಜಲೀಮ್‌ಸಿಂಗನು ತನ್ನ ಕಳೆದುಳಿದ ಸವಾರರ ಸಹಾಯದಿಂದ ಶತ್ರುಗಳ ಕುದುರೆಗಳನ್ನು ತಡೆದು ನಿಲ್ಲಿಸಿಕೊಂಡಿದ್ದನು. ಈ ಸಮಯದಲ್ಲಿ ಅನೇಕ ಸವಾರರು ಹತರಾಗಿ ಅಲ್ಲಿಯ ಮರಳೆಲ್ಲಾ ಅವರ ರಕ್ತದಿಂದ ತೋ ಯಿದುಹೋಯಿತು.

ಇಲ್ಲಿ ಹೀಗೆ ಯುದ್ಧ ನಡೆಯುತ್ತಿರುವಾಗ ಅಲ್ಲಿ ಉಮೇದಸಿಂಗನು ಸಾವಿರ ಮಂದಿ ಸೈನಿಕರನ್ನು ಆರಿಸಿ ತೆಗೆದುಕೊಂಡು, ಹೋರಾಡುತ್ತಿದ್ದ ಉಭಯ ಸೇನೆಯನ್ನೂ ಬಳಸಿಕೊಂಡುಬಂದು ಗೋದ್ವಾರದ ಬಾಗಿಲ ಕಡೆಗೆ ನೆಟ್ಟಗೆ ನುಗ್ಗಿದನು. ಮಾನಸಿಂಗನೂ ಪನ್ನೆಯೂ ಕೋಟೆಯ ಪೂರ್ವಭಾಗದ ಒಂದು ಕೊತ್ತಳದಲ್ಲಿದ್ದು ಕೊಂಡು ದೂರದಲ್ಲಿ ನಡೆಯುತ್ತಿದ್ದ ಯುದ್ಧವನ್ನು ನೋಡುತ್ತಿದ್ದರು. ಮೊದಲು ಮೊದಲು ಅವರ ಕಣ್ಣಿಗೆ ಎಲ್ಲಿ ನೋಡಿದರೂ ಮೇಘಾಕಾರವಾದ ಧೂಳಿಯೂ ನಡುನಡುವೆ ಬಾಲಸೂರ್ಯ ಕಿರಣಗಳಿಂದ ತಳತಳಿಸುತ್ತಿದ್ದ ಖಡ್ಗ ಖೇಟಕ ಕಿರೀಟಗಳ ಹೊಳಪೂ ಕಾಣಿಸುತ್ತಿದ್ದುವು. ಆಮೇಲೆ ಕ್ರಮ ಕ್ರಮವಾಗಿ ಸ್ವಲ್ಪ ಧೂಳಿಯು ಮೂಲಬಲದಿಂದ ಬೇರೆಯಾಗಿ ಗೋದ್ವಾರದ ಕಡೆಗೆ ವೇಗವಾಗಿ ಬರುತ್ತಿರುವಂತೆ ಕಾಣಿಸಿತು "ಅದೇನಾಗಿರಬಹುದು ? ಮುಸಲ್ಮಾನರ ಕುದುರೆ ದಳವೇನಾದರೂ ಪೆಟ್ಟುತಿಂದು ಕಾಲಬಲವನ್ನು ಬಿಟ್ಟು ಹಿಂದಕ್ಕೆ ಬರುತ್ತಿರುವುದೆ ? ಇಲ್ಲವೆ ರಾಜಪುತ್ರ ಸವಾರರೇ ಪೆಟ್ಟುತಿಂದು ಯುದ್ಧದಿಂದ ಪ್ರಯೋಜನವಿಲ್ಲವೆಂದು ನಿರಾಶರಾಗಿ ಅರಿಖಂಡದ ಕಡೆಗೆ ಹೋಗುತ್ತಿರುವರೆ ?" ಎಂದು ಮೊದಲಾಗಿ ತಂದೆ ಮಕ್ಕಳು ವಿಕಲ್ಪಿಸುತ್ತಿದ್ದರು. ಸ್ವಲ್ಪ ಕಾಲದಲ್ಲಿಯೇ ಕುತೂಹಲಾವಿಷ್ಟರಾದ ಮಾನಸಿಂಗ ಪನ್ನೆಗಳ ದೃಷ್ಟಿಗೆ ಆ ದಳದ ಮುಂದುಗಡೆ ಹಾರಾಡುತ್ತಿದ್ದ ಪಂಚರಂಗಿ ಧ್ವಜಪಟವು ಕಾಣಿಸಿತು. ಅದನ್ನು ನೋಡಿ ಅದು ರಾಜಪುತ್ರರ ಸೇನೆಯೇ ಸರಿ ಎಂದು ನಿಶ್ಚಯಿಸಿಕೊಂಡರು. ಇನ್ನು ಸ್ವಲ್ಪ ಹೊತ್ತಿಗೆಲ್ಲಾ ಅರಿಖಂಡದವರ ಧ್ವಜಪಟವೂ ಕಾಣಿಸಿತು. ಅದನ್ನು ಕಂಡು ಪನ್ನೆಯು ಆ ದಳಕ್ಕೆ ತನ್ನ ವಲಯು ಬಂಧುವಾದ ಅರಿಖಂಡದ ರಾಜನೇ ನಾಯಕನಾಗಿರುವನೆಂದು ತಿಳಿದುಕೊಂಡಳು. ಆತನು ರಾಜದ್ರೋಹಿಯಲ್ಲವೆಂಬದಾಗಿ ಅವಳ ಮನಸ್ಸಿಗೆ ಗೊತ್ತಾಯಿತು. ಇನ್ನು ಸ್ವಲ್ಪ ಹೊತ್ತಿನಲ್ಲಿ ಆ ಸೈನಿಕರು ಮುತ್ತಿಗೆಯ ದಳವನ್ನು ಭೇದಿಸಿಕೊಂಡು ಕೋಟೆಗೆ ಬರುತ್ತಿರುವುದಾಗಿ ವಿಶದವಾಗಿ ತಿಳಿಯಿತು. ಈ ಸಂಗತಿಯು ಮುತ್ತಿಗೆಯ ದಳದವರಿಗೂ ಗೊತ್ತಾಗಿ ರಾಜ ಪುತ್ರಸೇನೆಯನ್ನು ಅಡ್ಡಿ ಮಾಡುವುದಕ್ಕಾಗಿ ಕೋಟೆ ಬಾಗಿಲಬಳಿ ತಮ್ಮ ಸೇನೆಯನ್ನು ಬಲಪಡಿಸತೊಡಗಿದರು.

ಉಮೇದಸಿಂಗನು ಒಡನೆ ಶತ್ರುಗಳಮೇಲೆ ಬೀಳುವಂತೆ ತನ್ನ ಸೇನೆಗೆ ಅಪ್ಪಣೆಕೊಡದೆ ಸ್ವಲ್ಪಕಾಲ ವಿಳಂಬ ಮಾಡಿದನು, ಅದನ್ನು ನೋಡಿ ಮಹಮ್ಮದೀಯರ ಸೇನಾನಾಯಕನು—"ಭಯದಿಂದ ಶತ್ರುಗಳು ಹಿಂಜರಿಯುತ್ತಿರುವರು, ಸೈನಿಕರಿರಾ, ಮುಂದುವರಿಯಿರಿ, ಕಂಪಿಸುತ್ತಿರುವ ಶತ್ರುಸೇನೆಯನ್ನು ಭೇದಿಸಿರಿ" ಎಂಬದಾಗಿ ಕೂಗಿಕೊಂಡನು, ಉಮೇದಸಿಂಗನು ಶತ್ರುಗಳಿಗೆ ಅಂಜಿ ಹಿಂಜರಿದಿರಲಿಲ್ಲ. ತನ್ನ ಸೈನಿಕರೂ ಇನ್ನೂ ರಭಸದಿಂದ ಮೇಲೆ ಬೀಳಲಿ ಎಂದು ಅವರಿಗೆ ಉಸಿರುಬಿಡಲು ಸ್ವಲ್ಪ ಅವಕಾಶ ಕೊಟ್ಟಿದ್ದನು, ಈ ಕೂಗನ್ನು ಕೇಳಿದ ಕೂಡಲೆ ಶತ್ರುಗಳ ಮೇಲೆ ಬೀಳುವಂತೆ ಅಪ್ಪಣೆಮಾಡಿದನು. ಕೂಡಲೆ ನಾಲ್ಕುಸಾವಿರ ಕುದುರೆ

ಗಳು ತಮ್ಮ ಗೊರಸಲ ಪೆಟ್ಟಿನಿಂದ ಭೂಮಿಯಲ್ಲಿ ಪ್ರತಿಧ್ವನಿಯನ್ನು ಹುಟ್ಟಿಸುತ್ತ ಮಹಾರಭಸದಿಂದ ಹೋಗಿ ಮೇಲೆಬಿದ್ದು ಶತ್ರುಸೈನ್ಯದ ಮುಂದಿನ ಶ್ರೇಣಿಯನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಟ್ಟಿತು. ಎರಡನೆಯ ಶ್ರೇಣಿಯು ಇನ್ನು ಸ್ವಲ್ಪ ಹೆಚ್ಚುಕಾಲ ಹೊಡದಾಡಿತು; ಅದನ್ನು ಕೋಟೆಗೋಡೆಯ ಬಳಿಗೆ ತರುಬಿಕೊಂಡು ಹೋಯಿತು. ಅಲ್ಲಿ ಆ ದಳವು ಕೋಟೆಯ ಮೇಲಿಂದ ತಲೆಯಮೇಲೆ ಉರುಳಿಸು ತ್ತಿರುವ ಕಲ್ಲುಗುಂಡುಗಳಿಂದಲೂ, ಪ್ರಯೋಗಿಸುತ್ತಿರುವ ಈಟಿ ಕಣೆಗಳಿಂದಲೂ, ಮುಂದುಗಡೆಯಲ್ಲಿ ಮುಂಬರಿದು ಮೇಲೆಬೀಳುತ್ತಿರುವ ಕುದುರೆ ಪಡೆಯಿಂದಲೂ, ಪೆಟ್ಟುತಿಂದು ಗಾಯಪಟ್ಟು ಮುಂದೆ ಯುದ್ಧಮಾಡಲಾರದೆ ಚೆಲ್ಲಾಪಿಲ್ಲಿಯಾಗಿ ಓಟ ಕಿತ್ತಿತು. ಬಳಿಕ ಕೋಟೆಬಾಗಿಲನ್ನು ತೆರೆದರು. ಜಯಶಾಲಿಗಳಾದ ರಾಜಪುತ್ರ ರು ತಮ್ಮಲ್ಲಿ ಗಾಯಪಟ್ಟವರನ್ನೂ ಸತ್ತವರನ್ನೂ ಜತೆಯಲ್ಲಿ ಸಾಗಿಸಿಕೊಂಡು ಕೋಟೆ ಯೊಳಕ್ಕೆ ಪ್ರವೇಶಮಾಡಿದರು. ಒಳಗಿದ್ದ ಸೈನಿಕರೆಲ್ಲರೂ ಒಟ್ಟಾಗಿ ಬಂದು ತಮ್ಮ ರಕ್ಷಕನಾದ ಉಮೇದಸಿಂಗನ ಕಾಲುಗಳನ್ನು ಮುಟ್ಟಿ ನಮಸ್ಕಾರ ಮಾಡಿ ದರು. ಮಾನಸಿಂಗನೂ ಆತನ ಮಂತ್ರಿಗಳೂ ಕೂಡ ಉಮೇದಸಿಂಗನಿಗೆ ವಿಶೇಷ ವಾಗಿ ಮರ್ಯಾದೆಮಾಡಿದರು. ಹಿಂದೆ ಅಪಹರಿಸಿದ ಮಹಮ್ಮದೀಯನ ಕರಿಯ ಕುದುರೆಯ ಮೇಲೆ ಹತ್ತಿಕೊಂಡು ಉಮೇದಸಿಂಗನ ಸೈನಿಕರ ಸಂಗಡ ಬಂದ ಬನ್ನಿಯನ್ನೂ ಕೂಡ ಹಲವುಬಗೆಯಾಗಿ ಕೊಂಡಾಡಿ ತಕ್ಕ ಹಾಗೆ ಮನ್ನಣೆಮಾಡಿದರು,

ಇತ್ತ ಫಿರೋಜ್‌ಷಾಹನು ರಾಜಪುತ್ರರ ಮೂಲಬಲವನ್ನು ಸೋಲಿಸಿ ಅಟ್ಟಿ ಬಿಟ್ಟು ತನ್ನ ಆನೆಯನ್ನು ಬಿಟ್ಟುಕೊಂಡು ಶಿಬಿರದ ಮಧ್ಯದಲ್ಲಿದ್ದ ತನ್ನ ಗುಡಾರಕ್ಕೆ ಬಂದು ನೋಡುವಲ್ಲಿ ವಿಜಯ ಫಲವೆಲ್ಲಾ ಶತ್ರುಗಳ ಹಸ್ತಗತವಾಗಿ ಹೋದ ಅಂಶವು ಗೊತ್ತಾಯಿತು. ಅವನ ಹಿಂದೆ ನಿಂತಿದ್ದ ಶತ್ರುಸೈನ್ಯವು ಈಗುಂಟಾದ ಪರಾಜ ಯದಿಂದ ಇನ್ನೂ ಎದೆಗುಂದಿರಲಿಲ್ಲ; ಇನ್ನೂ ತನ್ನ ಮಾರ್ಗವನ್ನು ತಡೆಯಲು ಸಮರ್ಥವಾಗಿಯೇ ಇತ್ತು. ಅಷ್ಟೇ ಅಲ್ಲದೆ ಅದಕ್ಕೆ ಇನ್ನು ಸ್ವಲ್ಪಕಾಲದಲ್ಲಿಯೇ ವಿಶೇಷ ಸಹಾಯವು ಬಂದೊದಗುವ ವಿಷಯವೂ ಅವನಿಗೆ ಗೊತ್ತಿತ್ತು. ಈಗ ಕೋಟೆಯೊಳಗೆ ಹೆಚ್ಚು ಸೈನ್ಯವು ಸೇರಿ ಅಲ್ಲಿ ಎಲ್ಲರಿಗೂ ಬೇಕಾದಷ್ಟು ದವಸ ಧಾನ್ಯ ಗಳೂ ಇದ್ದುವು. ಅವರು ಇನ್ನುಮೇಲೆ ದಕ್ಷಿಣದಿಂದ ಮಾನಸಿಂಗನ ಮಕ್ಕಳು ಹಿಂದಿ ರುಗಿ ಬರುವವರೆಗೂ ಕೋಟೆಯನ್ನು ಕಾಪಾಡಿಕೊಳ್ಳಬಲ್ಲರೆಂಬುದೂ ಅವನಿಗೆ ಗೊತ್ತಾಯಿತು. ಆದಕಾರಣ ಫಿರೋಜ್‌ಷಾಹನು ಇಂಥ ಈ ಸನ್ನಿವೇಶದಲ್ಲಿ ಮುತ್ತಿ ಗೆಯನ್ನು ತೆಗೆದುಬಿಡುವುದೇ ಒಳ್ಳೆಯದೆಂದು ಯೋಚಿಸಿ, ಸಂಧಿಮಾಡಿಕೊಳ್ಳುವು ದಾಗಿ ಉಮೇದಸಿಂಗನಿಗೆ ಹೇಳಿಕಳುಹಿಸಿ, ತನ್ನ ಸೈನ್ಯವು ಹಿಂದಿರುಗಿ ಹೋಗು ವಾಗ ಅದಕ್ಕೆ ಯಾವ ವಿಧವಾದ ತೊಂದರೆಯನ್ನೂ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿಕೊಡಬೇಕೆಂದು ಕೇಳಿದನು. ರಾಜಪುತ್ರರು ಈ ಅರ್ಥಕ್ಕೆ ಒಡಂಬಡಲಿಲ್ಲ. ಅದನ್ನು ಕೇಳಿ—ಒಳ್ಳೆಯದು, ನಾವು ಹಿಂದಿರುಗಿ ಹೋಗುವಾಗ ತೊಂದರೆ ಮಾಡು

ವುದಿಲ್ಲವೆಂದು ನೀವು ನಿಮ್ಮಲ್ಲಿ ಪವಿತ್ರವಾದ ವಸ್ತುಗಳ ಮೇಲೆ ಆಣೆಯಿಟ್ಟು ಪ್ರತಿಜ್ಞೆ ಮಾಡಿ ಕೊಡದಿದ್ದರೆ ಇದುವರೆಗೂ ಉಳಿಸಿದ್ದ ನಿಮ್ಮ ನಾಗೂರು ಕೋಟೆಯನ್ನು ಹೊಕ್ಕು ಒಂದು ಕಲ್ಲಿನ ಮೇಲೆ ಒಂದು ಕಲ್ಲು ನಿಲ್ಲದಂತೆ ನೆಲಸಮ ಮಾಡಿಬಿಡುತ್ತೇವೆ--ಎಂದು ಹೇಳಿ ಕಳುಹಿಸಿದನು. ಈ ಬೆದರಿಕೆಗೆ ಹೆದರಿ ರಾಜಪುತ್ರರು ಫಿರೋಜ್‌ಷಾಹನ ಸೈನ್ಯವನ್ನು ನಿರಪಾಯವಾಗಿ ಬಿಡುತ್ತೇವೆಂದು ಒಪ್ಪಿಕೊಂಡರು. ಮಾರನೆ ದಿವಸ ಬೆಳಿಗ್ಗೆ ಆತನು ಸೇನಾಸಮೇತನಾಗಿ ಹೊರಟು ಹೋದನು.

ಹೀಗೆ ಗುಜರಾತಿನ ಷಾಹನು ಹೊರಟುಹೋದ ಸುದ್ದಿಯನ್ನು ಕೇಳಿ ಗೋದ್ವಾರದ ಜನರೆಲ್ಲರೂ ಸಂತೋಷಪಟ್ಟು ಒಂದು ದೊಡ್ಡ ಉತ್ಸವವನ್ನು ಮಾಡಿದರು. ಮಾನಸಿಂಗನು ಮುತ್ತಿಗೆಯ ಸೇನೆ ಹಿಂತಿರುಗಿ ಹೋಗುವುದನ್ನು ಕಂಡು ಉಮೇದ್‌ಸಿಂಗನನ್ನು ನೋಡಿ--ಇಂಥ ಆಪತ್ಕಾಲದಲ್ಲಿ ಸಹಾಯಕ್ಕೆ ಬಂದ ನಿನ್ನ ಸಾಹಸಕ್ಕಾಗಿ ನಾನು ಎಷ್ಟು ಕೃತಜ್ಞನಾದರೂ ತೀರದು. ಈ ಯುದ್ಧಕಾರ್ಯಗಳನ್ನು ಇಷ್ಟು ಸಫಲವಾಗಿ ನಡಿಸಿದ ನಿನ್ನ ಶೌರ್ಯವನ್ನೂ ಚಮತ್ಕಾರವನ್ನೂ ನೋಡಿ ನೋಡಿ ನನಗೆ ಅತ್ಯಾಶ್ಚರ್ಯವುಂಟಾಗಿದೆ. ನೀನು ನನ್ನ ರಾಣಿಗಳ ಮತ್ತು ನನ್ನ ಮಗಳ ಪ್ರಾಣಮಾನಗಳನ್ನು ರಕ್ಷಿಸಿದೆ; ನಿನಗೆ ಯಾವ ಪ್ರತ್ಯುಪಕಾರವನ್ನು ಮಾಡೇನು? ನಿನಗೆ ಇಷ್ಟವಾದುದನ್ನು ಹೇಳು, ಕೊಡುವೆನು. ನೀನು ಗೋದ್ವಾರದ ಕೋಟೆಯನ್ನೇ ಕೇಳಿದಾಗ್ಯೂ ಕೊಡುವೆನು. ನನ್ನ ಕಿರೀಟದಲ್ಲಿರುವ ಅನರ್ಘ್ಯವಾದ ರತ್ನವನ್ನು ಕೇಳಿದರೂ ಕೂಡ ಇಲ್ಲವೆನ್ನಲಾರೆನು--ಎಂದು ಹೇಳಿದನು. ಅದಕ್ಕೆ ಆತನು--ರಾಜನೇ, ನಿನ್ನ ಮಾತಿನಂತೆಯೇ ಆಗಲಿ, ನಿನ್ನ ಅರಮನೆಗೂ ನಿನ್ನ ಸಂಸ್ಥಾನಕ್ಕೂ ಭೂಷಣಪ್ರಾಯವಾಗಿರುವ ಅಮೂಲ್ಯವಾದ ಒಂದು ವಜ್ರವನ್ನು ಕೊಡುವವನಾಗು--ಎಂದು ಕೇಳಿದನು. ಇದನ್ನು ಕೇಳಿ--ಮಾನಸಿಂಗನು ತನ್ನ ವಂಶಪಾರಂಪರ್ಯವಾಗಿ ಬಂದ ಕಿರೀಟದಲ್ಲಿರುವ ವಜ್ರವನ್ನು ಕೇಳುವನೆಂದೆಣಿಸಿ--ಹಾಗೆಯೇ ಆಗಲಿ, ಇದನ್ನು ಕೊಡುವೆನು. ಇದು ಇಂದಿನ ಅದ್ಭುತವಾದ ನಿನ್ನ ಸಾಹಸಕ್ಕೆ ಗುರುತಾಗಿ ನಿನ್ನ ವಂಶೀಯರಲ್ಲಿ ಚಿರಕಾಲವಿರುತ್ತಿರಲಿ;--ಎಂದು ಹೇಳಿದನು. ಉಮೇದಸಿಂಗನು--ನನಗೆ ಇಷ್ಟವಾದುದು ಈ ಕಲ್ಲು ವಜ್ರವಲ್ಲ. ಸರ್ವಾಂಗ ಸುಂದರಿಯಾದ ತಮ್ಮ ವಜ್ರ (ಪನ್ನೆ) ವನ್ನು ಕೋರುತ್ತೇನೆ--ಎಂದನು. ಮಾನಸಿಂಗನು ಪರಮಾನಂದಭರಿತನಾಗಿ--ನನ್ನ ಪನ್ನೆಯನ್ನು ಸಂತೋಷವಾಗಿ ಕೊಡುವೆನು. ಈ ವಜ್ರವನ್ನು ನಿನಗೆ ಕೊಟ್ಟರೆ ನನಗೆ ನಷ್ಟವಾಗಲಾರದು--ಎಂದು ವಿನೋದವಾಗಿ ಮಾತನಾಡಿದನು. ಒಡನೆಯೇ ವಿವಾಹಕ್ಕೆ ಬೇಕಾದ ಕಾರ್ಯಗಳನ್ನೆಲ್ಲಾ ನಡಿಸ ತೊಡಗಿದರು. ಈ ಶುಭ ಸಮಾಚಾರವನ್ನು ಕೇಳಿ ಉಭಯ ಸಂಸ್ಥಾನದ ಪ್ರಜೆಗಳೂ ಪರಮಾನಂದಭರಿತರಾದರು. ನಾಗೂರಿನಲ್ಲಿ ನಡೆಯುವ ಈ ಶುಭಪ್ರಸ್ತುತಕ್ಕೆ ಬಂದು ಸಭಾ ಮಂಟಪವನ್ನು ಶೋಭಾಯಮಾನ ಮಾಡಬೇಕೆಂಬದಾಗಿ ಲಗ್ನಪತ್ರಿಕೆಗಳನ್ನು ಬರೆದು

ಗೋದ್ವಾರದ ಸಹಾಯಕ್ಕಾಗಿ ಬಂದ ರಾಜಪುತ್ರ ವೀರರಿಗೆಲ್ಲಾ ಕಳುಹಿಸಿ ಕೊಟ್ಟರು. ತರುವಾಯ ಮುಹೂರ್ತದ ದಿವಸ ಮಾನಸಿಂಗನ ಅಮೃತಶಿಲಾನಿರ್ಮಿತವಾದ ಅರಮನೆಯಲ್ಲಿ ಮಂಗಳ ಮಂತ್ರಘೋಷದೊಡನೆ ವಿವಾಹ ಮಂಗಳ ಕಾರ್ಯಗಳು ನಡೆಯಲಾರಂಭಿಸಿದುವು. ಆಗ ರಾಜಪುತ್ರರ ಸಂಪ್ರದಾಯಾನುಸಾರವಾಗಿ ವರನು ಶಸ್ತ್ರಪಾಣಿಗಳಾದ ತನ್ನ ಬಂಧುಜನರೊಡನೆ ವಿವಾಹ ಮಂಟಪವನ್ನು ಪ್ರವೇಶಿಸಿ ಪನ್ನೆಯನ್ನು ಸೆರೆ ಹಿಡಿದುಕೊಂಡನು ಬಳಿಕ ವಧೂವರನ್ನು ಹಸೆಯಲ್ಲಿ ಕುಳ್ಳಿರಿಸಿ ಶಾಸ್ತ್ರೋಕ್ತವಾಗಿ ವಿವಾಹಮಂಗಳವನ್ನು ನೆರವೇರಿಸಿದರು. ಪನ್ನೆಯು ಅರಿಖಂಡದ ರಾಜನ ಧರ್ಮಪತ್ನಿಯಾದಳು. ಹೀಗೆ ಮಹಾವಿಜೃಂಭಣೆಯಿಂದ ಶುಭಪ್ರಸ್ತುತವು ಬೆಳೆದ ಸಮನಂತರದಲ್ಲಿ ವರನು ತನ್ನ ಪತ್ನಿಯನ್ನು ಕರೆದುಕೊಂಡು ತನ್ನ ರಾಜಧಾನಿಯಾದ ಅರಿಖಂಡಕ್ಕೆ ಪ್ರಯಾಣ ಮಾಡಿದನು.

---

## ವೀರನಾರಿ.

ಈಗ್ಗೆ ಸುಮಾರು ನಾನೂರು ವರ್ಷಗಳ ಹಿಂದೆ ಒಂದು ದಿವಸ, ದೀರ್ಘಾಕಾರನಾಗಿಯೂ ಬಲಿಷ್ಠನಾಗಿಯೂ ಇದ್ದ ಒಬ್ಬ ರಾಜಪುತ್ರತರುಣನು ಅರವಲ್ಲಿ ಪರ್ವತಪಾರ್ಶ್ವದಲ್ಲಿದ್ದ ಅರಣ್ಯದಲ್ಲಿ ಕುದುರೆಯನ್ನು ಹತ್ತಿಕೊಂಡು ಹೋಗುತ್ತಿದ್ದನು. ಪ್ರಮಾಣಾನುರೂಪವಾಗಿದ್ದ ಅವನ ಅಂಗಪ್ರತ್ಯಂಗಗಳನ್ನೂ ಬಲು ಚಿಕ್ಕವಾಗಿದ್ದ ಅವನ ಕೈಕಾಲುಗಳನ್ನೂ ನೋಡಿದರೆ ಅವನು ಖಂಡಿತವಾಗಿಯೂ ಹದಿನಾರು ಬಣ್ಣದ ರಾಜಪುತ್ರವಂಶದವನೇ ಸರಿಯೆಂದು ತೋರುತ್ತಿದ್ದಿತು. ಅವನಿಗೆ ಪ್ರತಾಪಸಿಂಗನೆಂದು ಹೆಸರು. ಅವನು ಆಳುತ್ತಿದ್ದ ಸಂಸ್ಥಾನವು ಅಷ್ಟೊಂದು ದೊಡ್ಡದಲ್ಲವಾದರೂ ಅವನು ಹುಟ್ಟಿದ ಕುಲಮಾತ್ರ ಕಡಿಮೆಯಾದುದಾಗಿರಲಿಲ್ಲ ; ಅವನು, ಪೂರ್ವಕಾದಲ್ಲಿ ಲಂಕಾರಾಜ್ಯವನ್ನು ಜಯಿಸಿ ಪ್ರಸಿದ್ಧನಾದ ಶ್ರೀರಾಮಚಂದ್ರನ ವಂಶದಲ್ಲಿ ಹುಟ್ಟಿದವನು. ಈಗ ಆತನು ಬೇಟೆಯುಡುಪನ್ನು ಉಟ್ಟು ಎದುರಿಗೆ ಬಂದ ಕಾಡಮೃಗವನ್ನು ಸಂಹರಿಸಲು ಸಿದ್ಧನಾಗಿ ಕೈಯಲ್ಲಿ ಭರ್ಜಿಯನ್ನು ಹಿಡಿದುಕೊಂಡು, ಬೇಟೆಗೆ ಹೋಗುತ್ತಿದ್ದನು.

ಅವನು ಹಾಗೆ ಬಹಳ ಹೊತ್ತು ಸುತ್ತುತ್ತಿದ್ದರೂ ಅವನಿಗೆ ಯಾವ ಜಂತುವೂ ಸಿಕ್ಕಲಿಲ್ಲ. ಕೊನೆಗೆ ದೂರದಲ್ಲಿ ಪ್ರಬಲವಾದ ಒಂದು ಕಾಡುಹಂದಿ ಕಾಣಿಸಿತು. ಕೂಡಲೆ ಅವನು ಅದನ್ನು ಬೆನ್ನಟ್ಟಿ, ಹಳ್ಳತಿಟ್ಟುಗಳಿಂದಲೂ ಗಿಡಗಂಟಿಗಳಿಂದಲೂ ಅಪಾಯಕರವಾದ ಕಾಡಿನಲ್ಲಿ ಕುದುರೆಯನ್ನು ವೇಗವಾಗಿ ಬಿಟ್ಟುಕೊಂಡು ಹೋಗಿ, ಬೇಟೆಯನ್ನು ಸಂಧಿಸಿ ಅದರ ಬದಿಯಲ್ಲಿ ತನ್ನ ಭರ್ಜಿಯನ್ನು ಬಲವಾಗಿ ನಾಟಿದನು. ಆದರೆ ದೌರ್ಭಾಗ್ಯವಶದಿಂದ ಆ ಸಮಯಕ್ಕೆ ಸರಿಯಾಗಿ ಅವನ ಕುದುರೆಯು,

ಒಂದು ಹಳ್ಳದಲ್ಲಿ ಕಾಲಿಟ್ಟು ಮುಗ್ಗರಿಸಿ ಅವನನ್ನು ನೆಲಕ್ಕೆ ಕೆಡವಿ ತಾನೂ ಬಿದ್ದುಬಿಟ್ಟಿತು. ಹಾಗೆ ಹಠಾತ್ತಾಗಿ ಬೀಳುವಾಗ ಅವನ ಕೈಯಲ್ಲಿದ್ದ ಭರ್ಜಿಯು ಎರಡು ತುಂಡಾಗಿ ಮುರಿದುಹೋಗಿ ಅರೆಪಾಲುಮಾತ್ರ ಹಂದಿಯ ಮೈಯಲ್ಲಿ ನಾಟಿಕೊಂಡು ನಿಂತಿತು.

ಹೀಗಾಗಲು ಪ್ರತಾಪಸಿಂಗನು ತಟ್ಟನೆ ಕತ್ತಿಯನ್ನು ಹಿರಿದು ಎದ್ದುನಿಂತು ತನ್ನಮೇಲೆ ಬರುತ್ತಿದ್ದ ಹಂದಿಯನ್ನು ಎದುರಿಸಲು ಸಿದ್ಧನಾಗಿದ್ದನು. ಆ ಘೋರವಾದ ಮೃಗವು ಭರ್ಜಿಯ ಘಾಯದಿಂದ ಎಷ್ಟುಮಾತ್ರವೂ ಬಲಗುಂದದೆ ಮಹಾ ರೋಷಾವಿಷ್ಟವಾಗಿ ದಾಡೆಯನ್ನು ಮಸೆಯುತ್ತ ಮೈಮೇಲೆಲ್ಲಾ ಮುಳ್ಳುಹೊದರನ್ನು ಎಬ್ಬಿಸಿಕೊಂಡು ಅತ್ಯಂತ ರಭಸದಿಂದ ಅವನಮೇಲೆ ನುಗ್ಗಿತು. ಕಾಡು ಜೀವಿಗಳಲೆಲ್ಲಾ ಹಂದಿ ಮಹಾ ಧೈರ್ಯವುಳ್ಳದ್ದು ; ಬಹು ಬಲವಾದುದು. ಅದರ ಕೋರೆದಾಡೆಯ ಎದುರಿಗೆ ಮೋಟುಕತ್ತಿಯ ವೀರ್ಯವೇನು ಸಾಗೀತು ; ಗಾಯ ಪಟ್ಟ ಆ ಹಂದಿ ಮಾತ್ರ ಮೈಮೇಲೆ ಬಿದ್ದಿದ್ದಲ್ಲಿ ಪ್ರತಾಪಸಿಂಗನ ಪಾಡು ಏನಾಗುತ್ತಿದ್ದಿತೋ ತಿಳಿವುದುಕಷ್ಟ. ಆದರೆ ಅವನೂ ಹಂದಿಯೂ ಹಾಗೆ ಘೋರವಾದ ಯುದ್ಧದಲ್ಲಿ ಸಂಧಿಸುವ ಸಮಯಕ್ಕೆ ಸರಿಯಾಗಿ ಅದು ಹಠಾತ್ತಾಗಿ ನೆಲದಲ್ಲಿ ಬಿದ್ದು ಉರುಳಿ ಸತ್ತಿತು.

ಈ ಮೇರೆಗೆ ಸನ್ನಿಹಿತವಾದ ಅಪಾಯವು ನಿವೃತ್ತವಾದಕೂಡಲೆ ಪ್ರತಾಪ ಸಿಂಗನು ಆಸತ್ತಮೃಗದ ಕಳೇಬರವನ್ನು ಚೆನ್ನಾಗಿ ನೋಡಿದನು. ಆಗ ಅದರ ಮೈಯಲ್ಲಿ ಗರಿವರೆಗೂ ಹೂತುಕೊಂಡಿದ್ದ ಒಂದು ಬಾಣವು ಕಾಣಬಂದಿತು. ಅದನ್ನು ನೋಡಿ 'ಈ ಸಮಯಕ್ಕೆ ಸರಿಯಾಗಿ ನನ್ನ ಸಹಾಯಕ್ಕೆ ಒದಗಿ ಯಾರು ಈ ಬಾಣವನ್ನು ಹೊಡೆದಿರಬಹುದು' ಎಂಬುದಾಗಿ ನಾಲ್ಕು ಕಡೆಯಲ್ಲಿಯೂ ತಿರುಗಿ ನೋಡಿದನು. ಆ ಕಾಲದಲ್ಲಿ ಕಾಡುಮರಗಳೆರಡರ ಕೊಂಬೆಗಳು ಸಂಧಿಸಿ ಬಾಗಿಕೊಂಡಿದ್ದ ಒಂದು ಪ್ರದೇಶದಲ್ಲಿ ಸೌಂದರ್ಯರಾಶಿಯಾದ ಒಂದು ಸ್ತ್ರೀರೂಪವು ಕಾಣಬಂದಿತು. ಅದನ್ನುನೋಡಿ ಅವನು ಬೆಕ್ಕಸಬೆರಗಾಗಿ ನಿಂತು ಬಿಟ್ಟನು. ಹಾಗೆ ನಿಂತು ಚೆನ್ನಾಗಿ ನೋಡುವಲ್ಲಿ ಹದಿನಾರು ವಯಸ್ಸಿನ ಒಬ್ಬ ಕನ್ಯಾಮಣಿಯು ಧನುರ್ಧಾರಿಯಾಗಿ ಅಲ್ಲಿ ತನ್ನನ್ನು ಹೊತ್ತಿರುವ ಹೆಮ್ಮೆಯಿಂದಲೋ ಎಂಬಂತೆ ಕುಣಿಯುತ್ತಿದ್ದ ಒಂದು ಅರಬ್ಬಿಠಾಕಣದಮೇಲೆ ಕುಳಿತಿದ್ದಳು.

ಪ್ರತಾಪಸಿಂಗನು ಮಾತ್ರ ಒಬ್ಬ ಗ್ರೀಕನಾಗಿದ್ದರೆ ಆ ಪ್ರಕಾರ ತನ್ನೆದುರಿಗಿದ್ದ ಆ ಕನ್ಯಾಮಣಿಯನ್ನು ನೋಡಿ ಭಕ್ತಸಂರಕ್ಷಣಾರ್ಥವಾಗಿ ಒಲಿಂಪಸ್ ಪರ್ವತದಿಂ ದಿಳಿದುಬಂದ ಪ್ರತ್ಯಕ್ಷಳಾದ ದಯಾನಾದೇವಿಯೇ ಎಂದು ಭಾವಿಸಿಕೊಳ್ಳುತ್ತಿದ್ದನು. ಆ ಹುಡುಗಿಯ ಸಹಜವಾದ ಸೌಂದರ್ಯವು ಆರೋಗ್ಯಭಾಗ್ಯದಿಂದ ಉಂಟಾದ ಲಾವಣ್ಯಾತಿಶಯದಿಂದ ಮತ್ತಷ್ಟು ಹೆಚ್ಚಾಗಿ ಕಂಗೊಳಿಸುತ್ತಿತ್ತು. ಅವಳ ಮೃದುವಾದ ಕಪೋಲಗಳು ಬಿಸಿಲಿನ ಬೇಗೆಯಿಂದ ನಸುಮಾಸಲಾಗಿದ್ದುವು. ಅದರೂ ಅವಳ

ಮುಖವು ಪ್ರತಾಪಸಿಂಗನ ಕಣ್ಣಿಗೆ ಅಂತಃಪುರದ ಬೆಡಗಿಯರ ಬಿಳುಪೇರಿದ ಮುಖಕ್ಕಿಂತ ಎಷ್ಟೋ ಮನೋಹರವಾಗಿ ಕಾಣಿಸಿತು. ಅವಳು ನಿಂತ ನಿಲವೆಲ್ಲವೂ ರಮ್ಯವಾಗಿದ್ದುವು ; ಅವಳು ಚಲಿಸಿದ ಚಲನವೆಲ್ಲವೂ ಮನೋಹರವಾಗಿ ಸೊಗಸಿದುವು ಆ ಹುಡುಗಿಯ ಸೊಬಗೂ ಅವಳಿಗನುರೂಪವಾಗಿದ್ದ ಕುದುರೆಯ ಚೆಲ್ವೂ ಸೇರಿ ಅದ್ಭುತವಾದ ಸೌಂದರ್ಯಸಂಪತ್ತನ್ನು ಉಂಟುಮಾಡಿದುವು. ಇಂಥ ಸೌಂದರ್ಯವನ್ನು ಪ್ರತಾಪಸಿಂಗನು ಎಂದೂ ಕಂಡರಿಯನು. ಆದರೆ ಆ ಅದ್ಭುತದರ್ಶನವು ಎಷ್ಟು ಹೃದಯಗ್ರಾಹಿಯಾಗಿತ್ತೊ ಅಷ್ಟು ಕ್ಷಣಿಕವಾಗಿಯೂ ತೋರಿತು. ಏಕೆಂದರೆ ಪ್ರತಾಪಸಿಂಗನ ವಿಸ್ಮಯವು ತಗ್ಗುವಷ್ಟರೊಳಗಾಗಿಯೇ ಆ ಹುಡಗಿಯು ತನ್ನ ಕುದುರೆಯನ್ನು ತಿರುಗಿಸಿ ಹೆದರಿದ ಹುಲ್ಲೆಯಂತೆ ನಿಮಿಷಮಾತ್ರದಲ್ಲಿ ಆ ಎಲೆಹಸುರಿನ ಕಾಡಿನಲ್ಲಿ ಕಣ್ಮರೆಯಾಗಿ ಹೊರಟುಹೋದಳು. ಕಾಡುಹಂದಿಯ ಕರುಳಲ್ಲಿ ಹೂತಿದ್ದ ಬಾಣಮಾತ್ರ ಇಲ್ಲದಿದ್ದಲ್ಲಿ, ಪ್ರತಾಪಸಿಂಗನು ಆ ಹುಡುಗಿಯ ದರ್ಶನವನ್ನು ತನ್ನ ಮನದ ಬೇಳಂಬವೆಂದು ತಿಳಿದುಕೊಳ್ಳುತ್ತಿದ್ದನು.

ಈ ವೇಳೆಗೆ ಸೂರ್ಯನು ಆಕಾಶಲ್ಲಿ ಮಧ್ಯಭಾಗಕ್ಕೆ ಬಂದಿದ್ದನು. ಪ್ರತಾಪಸಿಂಗನು ಸೂರ್ಯೋದಯಕ್ಕೆ ಮೊದಲೇ ಬೇಟೆಗೆ ಹೊರಟಿದ್ದನಾದುದರಿಂದ ಈಗ ಅವನಿಗೆ ಹಸಿವೂ ನೀರಡಿಕೆಯೂ ಉಂಟಾದುವು. ಅದುದರಿಂದ ಅವನು ಕದುರೆಯನ್ನೇರಿ ಯಾವುದಾದರೂ ಒಂದು ಊರಿನಕಡೆ ಹೋಗಬೇಕೆಂದು ಬಗೆದು ಚೆನ್ನಾಗಿ ಸವೆದಿದ್ದ ಒಂದು ಕಾಲುದಾರಿಯನ್ನು ಹಿಡಿದು ಹೊರಟನು. ಇದರಲ್ಲಿ ಅವನ ಅಭಿಲಾಷೆಯು ನಿಷ್ಫಲವಾಗಲಿಲ್ಲ. ಆ ಹಾದಿಯು ಕಾಡಿನಲ್ಲಿ ಅಭುಕ್ತವಾದ ಒಂದು ಪ್ರದೇಶಕ್ಕೆ ಹೋಗುತ್ತಿತ್ತು. ಅದರಲ್ಲಿ ಸ್ವಲ್ಪ ಕಾಲದ ವರೆಗೆ ಹೋದಬಳಿಕ ಅಲ್ಲಿ ಹೊಸದಾಗಿ ಕಟ್ಟಿದಂತೆ ತೋರಿದ ಒಂದು ಹಳ್ಳಿಯು ಅವನ ಎದುರಿಗೆ ಕಾಣಿಸಿತು. ಅಲ್ಲಿಯ ಗುಡಿಸಲುಗಳ ನಡುವೆ ದೊಡ್ಡದಾಗಿದ್ದ ಒಂದು ಗುಡಿಸಲಬಳಿಗೆ ಹೋಗಿ ವಿಚಾರಿಸಿದನು. ವಿಚಾರಿಸುವಲ್ಲಿ ಅದು ರಾಜಪುತ್ರರಾಜನಾದ ಅಜಿತಸಿಂಗನ ಬಿಡಾರವೆಂದೂ ಆತನು ಅಪ್ಘಾರ್ದೇಶದ ದಾವೂದನಿಂದ ಪರಾಜಿತನಾಗಿ ದೇಶಕೋಶಗಳನ್ನು ಕಳೆದುಕೊಂಡು ಅಲ್ಲಿಗೆ ಬಂದಿದ್ದಾನೆಂದೂ ಗೊತ್ತಾಯಿತು.

ರಾಜ್ಯಭ್ರಷ್ಟನಾಗಿದ್ದ ಆ ರಾಜನು ಪ್ರತಾಪಸಿಂಗನನ್ನು ಮರ್ಯಾದೆಯಿಂದ ಬರಮಾಡಿಕೊಂಡು ಆ ವಿಪಿನಪ್ರದೇಶಕ್ಕೆ ಉಚಿತವಾದ ಊಟ ಉಪಚಾರಗಳಿಂದ ಸತ್ಕಾರಮಾಡಿದನು. ಪ್ರತಾಪಸಿಂಗನು ಶ್ರಮನಿವಾರಣೆಯಾದ ಬಳಿಕ ತಾನು ಇಂಥವನೆಂದೂ, ತನ್ನ ಮೇಲೆ ಬಂದು ಬೀಳುತ್ತಿದ್ದ ಕಾಡಹಂದಿಯನ್ನು ಒಬ್ಬ ರೂಪವತಿಯಾದ ಯುವತಿಯು ಕೊಂದು ತನ್ನನ್ನು ರಕ್ಷಿಸಿದಳೆಂದೂ, ತಾನು ಅವಳನ್ನು ಕಣ್ಣಿಟ್ಟು ನೋಡುವುದಕ್ಕೆ ಮೊದಲೇ ಆಕೆ ಕಣ್ಮರೆಯಾಗಿ ಹೊರಟು ಹೋದಳೆಂದೂ ಅಜಿತಸಿಂಗನೊಡನೆ ಹೇಳಿದನು.

ಅದನ್ನು ಕೇಳಿ ಅಜಿತಸಿಂಗನು—ನೀನು ವರ್ಣಿಸುವ ಹುಡುಗಿಯು ನನ್ನ ಮಗಳು, ಪದ್ಮಿನಿಯೋ ಹೊರತು ಬೇರೆ ಯಾರೂ ಇರಲಾರರು. ಅಪ್ಘಾನರು ನಮ್ಮನ್ನು ರಾಜಗೃಹ ದುರ್ಗದಿಂದ ಅಟ್ಟಿದ್ದು ಮೊದಲು ಅವಳು ಕಾಡಹೆಂಗಸಿನಂತೆ ಈ ವನದಲ್ಲೆಲ್ಲಾ ಸಂಚರಿಸುತ್ತ ಬಾಣಪ್ರಯೋಗದಲ್ಲಿ ಅದ್ಭುತವಾದ ಪಾಂಡಿತ್ಯ ವನ್ನು ಪಡೆದುಕೊಂಡಿದ್ದಾಳೆ. ಅರಣ್ಯದ ಸ್ವತಂತ್ರ ಜೀವನ ಸೌಖ್ಯವನ್ನು ಸವಿ ನೋಡಿರುವ ಈ ಬುದ್ಧಿಯಿಲ್ಲದ ಹುಡುಗಿಯು ಇನ್ನು ಮೇಲೆ ತಾನು ಅಂತಃಪುರದ ನಿರ್ಬಂಧಕ್ಕೆ ಒಳಗಾಗುವುದಿಲ್ಲವೆಂದು ಹೇಳುತ್ತಿದ್ದಾಳೆ. ಅವಳು ಈಗ ಬಲು ದೊಡ್ಡ ಹಟಮಾರಿಯಾಗಿ ಹೋಗಿದ್ದಾಳೆ. ಅವಳನ್ನು ಏನುಮಾಡಬೇಕೋ ತಿಳಿಯದೆ ಪೇಚಾಡುತ್ತಿದ್ದೇನೆ—ಎಂದನು.

ಅದನ್ನು ಕೇಳಿ.—ಆ ಮೋಹನಾಂಗಿಯು ನನ್ನಂಥವನನ್ನು ಕೃಪಾಕಟಾಕ್ಷ ದಿಂದ ಅನುಗ್ರಹಿಸುವುದಾದರೆ ನಾನು ಯಾವಜ್ಜೀವವೂ ಅವಳ ದಾಸನಾಗಿದ್ದು ಕೊಂಡು, ಅವಳು ಕೋರಿದ ಕೋರಿಕೆಗಳನ್ನೆಲ್ಲಾ ನಡಿಸುವುದೇ ನನ್ನ ಪರಮಾ ನಂದವೆಂದೂ ಪರಮಭಾಗ್ಯವೆಂದೂ ಭಾವಿಸಿಕೊಳ್ಳುವೆನು ಎಂದು ನುಡಿದನು.

ಆ ಮಾತನ್ನು ಕೇಳಿ—ಅಯ್ಯಾ, ನಿನ್ನನ್ನು ನೋಡಿದರೆ ನಿನ್ನ ರೂಪವು ಕನ್ನಿ ಕೆಯರ ಕೋಪಕ್ಕೆ ಪಾತ್ರವಾಗತಕ್ಕುದಾಗಿ ಬೇರೆ ತೋರುವುದಿಲ್ಲ. ಆದರೂ ಈ ವಿಷಯದಲ್ಲಿ ನಮ್ಮ ಪದ್ಮಿನಿಯದು ಒಂದು ಹುಚ್ಚು ಹಟವಿದೆ. ಅದೇನೆಂದರೆ— ನಮ್ಮ ವಂಶಪಾರಂಪರ್ಯವಾಗಿ ಬಂದ ದೇಶಕೋಶಗಳನ್ನು ಯಾವನು ದಾವೂದನಿಂದ ಜಯಿಸಿಕೊಡುವನೋ ಅವನನ್ನು ಹೊರತು ಮತ್ತೆ ಯಾರನ್ನೂ ಮದುವೆಯಾಗಲೊ ಲ್ಲೆನೆಂದು ಪ್ರತಿಜ್ಞೆಮಾಡಿಕೊಂಡಿದ್ದಾಳೆ. ಅವುಗಳನ್ನು ಜಯಿಸುವವನು ಎಷ್ಟೇ ಕುರೂಪಿಯಾಗಿರಲಿ ಅವನನ್ನು ಮದುವೆಮಾಡಿಕೊಳ್ಳುತ್ತೇನೆ ಎನ್ನುತ್ತಾಳೆ. ಅವನು ಸಿದ್ದಿಯವನಂತೆ ಕಪ್ಪಗಿದ್ದರೂ ಸರಿಯೆ, ರಾಕ್ಷಸನಹಾಗೆ ವಿಕಾರವಾಗಿದ್ದರೂ ಸರಿಯೆ, ಬಾಧೆಯಿಲ್ಲವೆಂದು ಹೇಳುತ್ತಾಳೆ—ಎಂಬುದಾಗಿ ಆತನು ಹೇಳಿದನು.

ಅದಕ್ಕೆ ಪ್ರತಾಪಸಿಂಗನು "ನಾನು ಸಂತೋಷವಾಗಿ ಈ ಕಾರ್ಯವನ್ನು ಕೈಕೊಳ್ಳುತ್ತೇನೆ. ನಿಮ್ಮ ರಾಜಗೃಹದ ಕೋಟೆಯನ್ನು ಪುನಃ ಸಾಧಿಸಿಕೊಡುವು ದಾಗಿ ಪ್ರತಿಜ್ಞೆಮಾಡುತ್ತೇನೆ, ಇಲ್ಲವೇ ಆ ಪ್ರಯತ್ನದಲ್ಲಿ ಶರೀರವನ್ನಾದರೂ ಬಿಡ ತ್ತೇನೆ" ಎಂದನು.

ಅದೇ ದಿನವೇ ಅಚಿಂತಿತವಾದ ಬೇರೊಂದು ಕಡೆಯಿಂದಲೂ ಕನ್ಯಾನ್ವೇಷಿ ಗಳು ಪದ್ಮಿನಿಯನ್ನು ಕೇಳಬಂದರು. ಇವರನ್ನು ದಾವೂದನೇ ಕಳುಹಿಸಿದನು. ದಾವೂದನು ಪದ್ಮಿನಿಯ ಸೌಂದರ್ಯವನ್ನು ಕೇಳಿ ಮೋಹಿತನಾಗಿ, ತಾನು ಸ್ವಲ್ಪ ವಯಸ್ಸು ಕಳೆದವನೆಂಬುದನ್ನೂ ಸಹ ನೆನೆಯದೆ, ತನಗಾಗಲೇ ಇಬ್ಬರು ಮಹಮ್ಮ ದೀಯ ರಾಣಿಗಳಿರುವರೆಂಬುದನ್ನೂ ಕೂಡ ಲೆಕ್ಕಿಸದೆ, ಈ ರಾಜಪುತ್ರ ಕುಮಾರಿ ಯನ್ನೂ ಮದುವೆಯಾಗುವುದಾಗಿ ನಿಶ್ಚಯಿಸಿ ತನ್ನ ಅನುರಾಗವನ್ನು ತಿಳಿಸಿ ಒಂದು

ಕಾಗದವನ್ನು ಬರೆದು, ನಂಬುಗೆಯುಳ್ಳ ಒಬ್ಬ ಆಳಿನ ಕೈಯಲ್ಲಿ ಕೊಟ್ಟು ಅಜಿತಸಿಂಗನ ಬಳಿಗೆ ಕಳುಹಿಸಿದ್ದನು. ಆ ಕಾಗದದ ಒಕ್ಕಣೆ ಹೇಗಿತ್ತೆಂದರೆ :—" ಚಂದ್ರನಂತೆ ಮುಖವುಳ್ಳವಳಾಗಿಯೂ, ನಕ್ಷತ್ರಗಳಂತೆ ನೇತ್ರಗಳುಳ್ಳವಳಾಗಿಯೂ, ಮುತ್ತಿನ ಸರದಂತೆ ಹಲ್ಲುಗಳುಳ್ಳವಳಾಗಿಯೂ, ಹವಳದಂತೆ ತುಟಿಗಳುಳ್ಳವಳಾಗಿಯೂ, ಪಚ್ಚಕರ್ಪೂರದ ವಾಸನೆಯಂತೆ ಪರಿಮಳವಾದ ನಿಶ್ವಾಸವುಳ್ಳವಳಾಗಿಯೂ, ಹುಲ್ಲೆಯಂತೆ ಲಘುವಾಗಿಯೂ ಸುಂದರವಾಗಿಯೂ ಇರುವ ಆಕಾರವುಳ್ಳವಳಾಗಿಯೂ ಪ್ರಕಾಶಿಸುವ ಪದ್ಮಿನಿಯೇ ಇನ್ನು ಮುಂದೆ ನನ್ನ ಹೃದಯಕ್ಕೆ ರಾಣಿಯಾಗಿರುವಳು. ಆದುದರಿಂದ ಅವಳು ಇಲ್ಲಿಗೆ ಬಂದು ನನ್ನ ಹೃದಯವನ್ನೂ ರಾಜ್ಯವನ್ನೂ ಅನುಭವಿಸಲಿ." ಹೀಗೆ ಕಾಗದದ ಮೊದಲಿನಲ್ಲಿ ಬರದಿದ್ದರೂ, ಕೊನೆಯಲ್ಲಿಮಾತ್ರ-- ನನ್ನ ಮಾತನ್ನು ನಿರಾಕರಿಸಿದಲ್ಲಿ ನಾನು ಆಯುಧಪಾಣಿಯಾಗಿ ಹೊರಟು ನೀವಿರುವ ಕಾಡನ್ನು ಹೊಕ್ಕು ಪದ್ಮಿನಿಯನ್ನು ಬಲಾತ್ಕಾರದಿಂದ ಹಿಡಿದುಕೊಂಡು ಹೋಗುವೆನು—ಎಂಬುದಾಗಿ ಹೆದರಿಸಿ ಬರೆದಿತ್ತು.

ಈ ಕಾಗದವನ್ನು ನೋಡಿದಕೂಡಲೆ ಅಜಿತಸಿಂಗನು ಕೋಪದಿಂದ ಕಿಡಿಕಿಡಿಯಾಗಿ ಹೋಗಿ ಕಾಗದವನ್ನು ತಂದ ದೂತನ ತಲೆಯನ್ನು ಕಡಿದುಬಿಡಬೇಕೆಂದು ಮೊದಲು ಯೋಚಿಸಿದನು. ಆದರೂ ಅಷ್ಟರಲ್ಲೇ ತಾಳಿಕೊಂಡು ತನ್ನ ಮಗಳ ಬಳಿಗೆ ಹೋದನು. ಅವಳಿಗೂಕೂಡ ಮೊದಲು ಮಹತ್ತಾದ ರೋಷವುಂಟಾಯಿತು. ಬಳಿಕ ಇಬ್ಬರ ಕೋಪವೂ ಸ್ವಲ್ಪ ಶಾಂತವಾದ ಮೇಲೆ ಅಜಿತಸಿಂಗನು ಮಗಳನ್ನು ನೋಡಿ 'ಮಗು, ನಿನ್ನನ್ನು ಪ್ರತಾಪಸಿಂಗನು ಮದುವೆಮಾಡಿಕೊಳ್ಳುವುದಾಗಿ ಪ್ರಾರ್ಥಿಸುತ್ತಾನೆ. ನಿನಗೆ ಇವನು ತಕ್ಕವರನಾಗಿದ್ದಾನೆ' ಎಂದು ಹೇಳಿದನು.

ಆಗ ಪದ್ಮಿನಿಯ ಮನಸ್ಸಿನಲ್ಲಿ ತಟ್ಟನೆ ಒಂದು ಯೋಚನೆ ಹೊಳೆಯಿತು. ಕೂಡಲೆ ಅವಳು ತಂದೆಯನ್ನು ಕುರಿತು–ಅಪ್ಪಾಜಿ, ಈ ದೂತನ ತಲೆ ಸದ್ಯಕ್ಕೆ ಅವನ ಹೆಗಲಮೇಲೆಯೇ ಇರಲಿ. ನನ್ನನ್ನು ವರಿಸುವವರಲ್ಲಿ ಒಬ್ಬನು ಮುದಿಯಾಗಿ ಕುಳ್ಳಗೆ ಡೊಳ್ಳು ಚಾಚಿಕೊಂಡಿದ್ದಾನೆ; ಮತ್ತೊಬ್ಬನು ಪ್ರಾಯಸಮರ್ಥನಾಗಿ ಉನ್ನತಾಕಾರನಾಗಿ ಲಕ್ಷಣವಾಗಿದ್ದಾನೆ. ಇವರಿಬ್ಬರ ಪ್ರಾರ್ಥನೆಯಿಂದಲೂ ನಮ್ಮ ಪೂರ್ವರಾಜ್ಯವನ್ನೂ ಕೀರ್ತಿಯನ್ನೂ ಪುನಃ ನಮ್ಮ ಕೈಗೆ ಬರಮಾಡಿಕೊಳ್ಳಲು ಒಂದು ಉಪಾಯವು ತೋರುತ್ತದೆ. ಇದನ್ನು ನಡಿಸುವುದಕ್ಕೆ ಮುಂಚೆ ನನಗಾಗಿ ರಾಜಗೃಹವನ್ನು ಜಯಿಸಿಕೊಡುತ್ತೇನೆಂದು ಹೇಳುವ ಈ ಸೊಗಸುಗಾರನೊಡನೆ ಈ ವಿಷಯವನ್ನು ಪರ್ಯಾಲೋಚನೆ ಮಾಡಿ ನೋಡೋಣ–ಎಂದಳು.

ಅದೇ ಪ್ರಕಾರ ಮಂತ್ರಾಲೋಚನೆ ನಡೆದು ಈರೀತಿ ಮಾಡಬೇಕೆಂದು ನಿಶ್ಚಿತವಾಯಿತು. ಬಳಿಕ ಅಜಿತಸಿಂಗನು ಒಬ್ಬ ದೂತನನ್ನು ಕರೆದು " ಎಲಾದೂತ, ನೀನು ದಾವೂದನ ಬಳಿಗೆ ಹೋಗಿ–ನಿಮ್ಮ ಇಷ್ಟಪ್ರಕಾರ ನಡಿಸಿಕೊಡುತ್ತೇವೆ. ಇನ್ನೊಂದು ತಿಂಗಳಿಗೆ ನಮ್ಮ ಪದ್ಮಿನಿಯನ್ನು ಅವಳ ಗೌರವಕ್ಕೆ ತಕ್ಕಂತೆ ನಮ್ಮ

ಪರಿವಾರಜನದ ಸಂಗಡ ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇವೆ. ಇದಕ್ಕಾಗಿ ನೀವು ನಮ್ಮ ರಾಜ್ಯದ ಕೆಲವು ಭಾಗಗಳನ್ನು ಬಿಟ್ಟುಕೊಡುವದಾಗಿ ಖೊರಾನನ್ನು ಮುಟ್ಟಿ ಈಗಲೇ ಪ್ರಮಾಣಮಾಡಿಕೊಡಬೇಕು-ಎಂಬುದಾಗಿ ಹೋಗಿ ತಿಳಿಸು '' ಎಂದು ಆಜ್ಞಾಪಿಸಿದನು. ಆ ವಿಷಯುವನ್ನು ದಾವೂದನಿಗೆ ಸಕಾಲದಲ್ಲಿ ತಿಳಿಸಲಾಯಿತು. ಪದ್ಮಿನಿಯು ಸೌಂದರ್ಯವನ್ನು ಕೇಳಿ ಮೋಹಿತನಾಗಿದ್ದ ದಾವೂದನು ಯಾವುದಕ್ಕೂ ಇಲ್ಲವೆನ್ನಲಾರದೆ ಆ ಅರ್ಥಕ್ಕೆ ಒಡಂಬಟ್ಟನು. ಹೀಗೆ ಏರ್ಪಟ್ಟ ಒಡಂಬಡಿಕೆಯಿಂದ ಈ ವಿಷಯುವು ಸರ್ವಸಮರ್ಪಕವಾಗಿ ಕೊನೆಗಂಡಹಾಗೆ ತೋರಿತು.

ಇದಾದ ಒಂದು ತಿಂಗಳ ತರುವಾಯ ಆ ವಿಪಿನದಿಂದ ಕೆಲಮಂದಿ ಕುದುರೆ ಸವಾರರು ಪದ್ಮಿನಿಯನ್ನು ಕರೆದುಕೊಂಡು ರಾಜಗೃಹದುರ್ಗದ ಕಡೆಗೆ ಹೋಗುತ್ತಿದ್ದರು. ಆ ಸವಾರರ ನಡುವೆ ಬಿಳಿಯ ಪಟ್ಟೆಬಟ್ಟೆಯ ಗವಸುಹಾಕಿದ್ದ ಪಾಲಕ್ಕಿಯಲ್ಲಿ ಪದ್ಮನಿಯುು ಕುಳಿತಿದ್ದಳು. ಅದರ ಹಿಂದುಗಡೆಯಲ್ಲಿಯೇ ಅವಳ ಅರಬ್ಬಿ ಠಾಕಣವನ್ನು ಹಿಡಿದುಕೊಂಡು ಒಬ್ಬ ಕುದುರೆಯಾಳು ಬರುತ್ತಿದ್ದನು. ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಆ ಕುದುರೆಯಾಳು ಪ್ರತಾಪಸಿಂಗನೇ ಹೊರತು ಬೇರೆ ಯಾರೂ ಅಲ್ಲವೆಂದು ಗೊತ್ತಾಗುತ್ತಿತ್ತು. ಆ ಪಲ್ಲಕ್ಕಿಯ ಎರಡು ಕಡೆಯಲ್ಲಿಯೂ ಇನ್ನು ಮೂರು ಪಲ್ಲಕ್ಕಿಗಳಿದ್ದುವು. ಅವುಗಳಲ್ಲಿ ಆರುಜನ ದಾಸಿಯರಿರುವರೆಂದೂ ಅವರು ಪದ್ಮಿನಿಯೊಡನೆ ಅವಳ ಉಪಚಾರಕ್ಕಾಗಿ ಹೋಗುತ್ತಿರುವರೆಂದೂ ಹೇಳಿಕೊಳ್ಳುತ್ತಿದ್ದರು. ಆದರೆ ವಸ್ತುತಃ ಅವುಗಳಲ್ಲಿ ಆರುಮಂದಿ ರಾಜಪುತ್ರರು ತಮ್ಮ ಈಟಿಕತ್ತಿಗಳನ್ನು ದಿಂಬುಗಳ ಕೆಳಗೆ ಮರಸಿಟ್ಟುಕೊಂಡು ಕುಳಿತಿದ್ದರು. ಈ ಒಂದೊಂದು ಪಲ್ಲಕ್ಕಿಗೂ ಆರಾರುಮಂದಿ ಬೋಯಿಗಳಿದ್ದರು ಈ ಬೋಯಿಗಳು ಕೂಡ ವೇಷವನ್ನು ಮರಸಿಕೊಂಡಿದ್ದ ರಾಜಪುತ್ರವೀರರಾಗಿದ್ದರು. ಹೀಗಾಗಿ ಮಹಾ ಸೌಮ್ಯವೇಷದಿಂದ ಕಾಣುತ್ತಿದ್ದ ಈ ಮೆರವಣಿಗೆಯ ಜನರಲ್ಲಿ ಪದ್ಮಿನಿಯುಲ್ಲದೆ 49 ಮಂದಿ ರಾಜಪುತ್ರವೀರರಿದ್ದರು. ಇದಲ್ಲದೆ ಇವರ ಜತೆಯಲ್ಲಿ 30 ಮಂದಿ ಭಟರು ತಮ್ಮ ನಿಜವಾದ ವೇಷದಲ್ಲಿ ವ್ಯೈಗಾವಲಿಗಾಗಿ ಬರುತ್ತಿದ್ದರು. ಇವರಲ್ಲಿ ಅನೇಕರು ಎರಡೆರಡು ಕತ್ತಿಗಳನ್ನಿಟ್ಟುಕೊಂಡಿದ್ದರು ಈ ಪದ್ಧತಿಯುು ರಾಜಪುತ್ರರಲ್ಲಿ ವಾಡಿಕೆಯಾಗಿದ್ದ ಕಾರಣ ಇದರಲ್ಲಿ ಯಾರಿಗೂ ಯಾವ ಅನುಮಾನವೂ ಹುಟ್ಟಲಿಲ್ಲ.

ಹಾಗೆ ಸೌಮ್ಯವೇಷದಲ್ಲಿ ಬಂದಿದ್ದ ಈ ಭಯಂಕರರಾದ ಜನರೆಲ್ಲರೂ ತಮ್ಮ ಪ್ರಾಣದಮೇಲಣ ಆಶೆಯನ್ನು ತೊರೆದು ಬಂದಿದ್ದ ಕಾರಣ ನಿರ್ಭಯದಿಂದ ರಾಜಗೃಹದ ಬಳಿಗೆ ನಡೆದರು. ಅವರು ಇನ್ನೂ ಕೋಟೆಗೆ ಒಂದೆರಡುಮೈಲಿ ದೂರದಲ್ಲಿರುವಾಗಲೇ, ದಾವೂದನೂ ಅವನ ನಂಟರಿಷ್ಟರೂ ಇಪ್ಪತ್ತುಮಂದಿಗಳೂ ದಿವ್ಯ ವಸ್ತ್ರಾಭರಣಗಳಿಂದ ಅಲಂಕೃತರಾಗಿ ಸೊಗಸಾದ ತೇಜಿಗಳನ್ನು ಏರಿ ಪದ್ಮಿನಿಯ ಕಡೆಯವರನ್ನು ಎದಿರುಗೊಳ್ಳಲುಬಂದರು. ಆ ಕಾಲದಲ್ಲಿ ಶೃಂಗಾರಪ್ರಿಯ

ನಾಗಿದ್ದ ದಾವೂದನು ತನ್ನ ಬೊಜ್ಜನ್ನು ಮರಸುವಂತೆ ಬಹು ಚಮತ್ಕಾರವಾಗಿ ಮಾಡಿದ್ದ ಒಂದು ಚಿತ್ರವಿಚಿತ್ರವಾದ ಉಡುಗೆಯನ್ನು ಧರಿಸಿಕೊಂಡಿದ್ದನು ಅವನು ಏರಿಕೊಂಡಿದ್ದ ತೇಜಿಯು ಕುಣಿಯುತ್ತಿತ್ತು. ಅವನು ಮಹಾ ಚತುರನಾದ ಸವಾರ ನಾಗಿದ್ದುದರಿಂದ ಅದನ್ನು ಬಹು ಚಮತ್ಕಾರವಾಗಿ ನಡಿಯುತ್ತಿದ್ದನು. ಅದನು ಪರದೆಯ ಮೂಲಕ ನೋಡಿ ಪದ್ಮಿನಿಯು ತನ್ನ ಮುದಿವರನ ಸಾಮರ್ಥ್ಯಕ್ಕೆ ಬೆರೆಗಾಗಿ ಹೋದಳು. ವಸ್ತುತಃ ದಾವೂದನು ಪ್ರಖ್ಯಾತನಾದ ವೀರನು ; ಅವನು ಕತ್ತಿಹಿಡಿದಮೊದಲು ಇದುವರೆಗೆ ನೂರಾರು ಯುದ್ಧಗಳಲ್ಲಿಯೂ ಮುತ್ತಿಗೆಗಳಲ್ಲಿಯೂ ಮಹಾ ಪರಾಕ್ರಮದಿಂದ ಯುದ್ಧಮಾಡಿ ಹೆಸರುಪಡೆದಿದ್ದನು.

ವಧುವಿನ ಕಡೆಯವರು ಕೋಟೆಯ ಬಳಿಗೆ ಬಂದೊಡನೆ ಅವರನ್ನು ಒಳಕ್ಕೆ ಬರಮಾಡಿಕೊಳ್ಳುವುದಕ್ಕಾಗಿ ಕೋಟೆಯ ಬಾಗಿಲನ್ನು ಅಗಲವಾಗಿ ತೆರೆದರು. ಬಳಿಕ ಎಲ್ಲರೂ ನಗರ ಪ್ರವೇಶಮಾಡಿದರು ಹಾಗೆ ಹೊಸ್ತಿಲನ್ನು ದಾಟಿ ಒಳಕ್ಕೆ ಹೊಕ್ಕಕೂಡಲೆ ಅವರೆಲ್ಲರೂ ತಾವು ಹಿಂದೆ ಸಮಕಟ್ಟು ಮಾಡಿಕೊಂಡಿದ್ದ ರೀತಿಯಲ್ಲಿ ಗಕ್ಕನೆ ತಮ್ಮ ವೇಷವನ್ನು ಮಾರ್ಪಡಿಸತೊಡಗಿದರು. ಮೊದಲು ಏಳು ಪಲ್ಲಕ್ಕಿಗಳನ್ನೂ ಇಳುಹಿಸಿದರು. ಮಧ್ಯದ ಪಲ್ಲಕ್ಕಿಯಿಂದ ಪದ್ಮಿನಿಯು ಧನುರ್ಧಾರಿಯಾಗಿ ಕೆಳಕ್ಕಿಳಿದು ಪ್ರತಾಪಸಿಂಗನು ಸಿದ್ಧವಾಗಿ ಹಿಡಿದುಕೊಂಡಿದ್ದ ತನ್ನ ಕುದುರೆಯ ಮೇಲೆ ಏರಿದಳು. ಅದೇ ಕಾಲದಲ್ಲಿಯೇ ವೇಷಾಂತರದಿಂದ ಬಂದಿದ್ದ ರಾಜಪುತ್ರರು ಪಲ್ಲಕ್ಕಿಗಳಿಂದಿಳಿದು ಕೈಗೆ ಶಸ್ತ್ರಗಳನ್ನು ತೆಗೆದುಕೊಂಡರು. ಇತರರು ಅಂಗರಕ್ಷೆಗಾಗಿ ಬಂದಿದ್ದ ಸೈನಿಕರಲ್ಲಿದ್ದ ಹೆಚ್ಚು ಕತ್ತಿಗಳನ್ನು ತೆಗೆದುಕೊಂಡರು. ಈ ಕಡೆ ಹೀಗೆ ನಡೆಯುತ್ತಿರಲು ಆ ಕಡೆ ದಾವೂದನು ಇದನ್ನು ಕಂಡು ಸ್ವಲ್ಪಕಾಲ ವಿಭ್ರಾಂತನಾಗಿದ್ದು ಒಡನೆ ಚೇತರಿಸಿಕೊಂಡು ತನ್ನೊಡನೆ ಬಂದಿದ್ದ ಸವಾರರನ್ನು ತನ್ನ ಹಿಂದುಗಡೆ ವ್ಯೂಹರಚನೆಯಲ್ಲಿ ನಿಲ್ಲಿಸಿ ಕೂಡಲೆ ಕಾಹಳೆಯವರನ್ನು ಕರೆದು ಮಹಮ್ಮದೀಯ ಸೈನಿಕರು ಜಾಗ್ರತೆಯಾಗಿ ತನ್ನ ಸಹಾಯಕ್ಕೆ ಬರುವಂತೆ ದನಿಮಾಡೆಂದು ಆಜ್ಞಾಪಿಸಿದನು. ಈ ವಿಚಿತ್ರವಾದ ವ್ಯಾಪಾರವನ್ನು ನೋಡಿ ಅಲ್ಲಿ ಮದುವೆಯ ಮೆರವಣಿಗೆಯನ್ನು ನೋಡುವುದಕ್ಕಾಗಿ ನಾನಾ ವಿಧವಾಗಿ ಶೃಂಗರಿಸಿಕೊಂಡು ಬಂದಿದ್ದ ಅನೇಕ ಜನರು ತಮ್ಮ ತಮ್ಮ ಆಯುಧಗಳನ್ನು ತೆಗೆದುಕೊಳ್ಳಲು ಓಡಿಹೋದರು. ಇವರಲ್ಲಿ ಮಹಮ್ಮದೀಯರೆಲ್ಲಿಯೋ ಸ್ವಲ್ಪಮಂದಿ ಇದ್ದರು. ಉಳಿದವರೆಲ್ಲರೂ ಆ ನಗರದ ಪೂರ್ವನಿವಾಸಿಗಳಾದ ಹಿಂದೂಜನರು. ಅವರೆಲ್ಲರೂ ತಮ್ಮ ರಾಜನ ಪರವಾಗಿಯೂ ತಮ್ಮ ಮತದವರ ಪರವಾಗಿಯೂ ಕಡಿದಾಡಲು ಸಿದ್ಧರಾಗಿದ್ದರು

ಬಳಿಕ ಪದ್ಮಿನಿಯೇ ಕಲಹವನ್ನು ಉಪಕ್ರಮಿಸಿದಳು. ಅವಳು ತನ್ನ ಕುದುರೆಯನ್ನು ಹತ್ತಿದ ಕೂಡಲೆ ಬಿಲ್ಲಿನಲ್ಲಿ ಬಾಣವನ್ನು ಹೂಡಿ ದಾವೂದನ ಎದೆಗೆ ಗುರಿಯಿಟ್ಟಳು. ಅನಂತರ ತಟ್ಟನೆ ಮನಸ್ಸನ್ನು ತಿರುಗಿಸಿ, ಬಾಣದ ಮೊನೆಯನು

ಕೆಳಪೊಗವಾಗಿ ಮಾಡಿ, ಅವನನ್ನು ಹೊಡೆವುದಕ್ಕೆ ಪ್ರತಿಯಾಗಿ ಅವನ ಕುದುರೆಗೆ ಗುರಿಯಿಟ್ಟು ಹೊಡೆದಳು. ಇವಳು ಬಹುಶಃ ದಾವೂದನಲ್ಲಿ ಉಂಟಾದ ಕರುಣೆಯಿಂದ ಹೀಗೆ ಮಾಡಿರಬಹುದು ಅನೇಕಜನ ಸ್ತ್ರೀಯರು ತಮ್ಮಲ್ಲಿ ಅನುರಕ್ತನಾದ ಪುರುಷರಲ್ಲಿ ಗುಣದೋಷವಿಚಾರವಿಲ್ಲದೆ ಕನಿಕರಪಡುವರು. ಇದೂ ಹಾಗೆಯೇ ಇರಬಹುದು. ಆದರೂ ಪದ್ಮಿನಿಯ ಈ ರೀತಿಯಾದ ಕನಿಕರದಿಂದ ಒಟ್ಟು ಕೆಲಸವೇ ಕೆಟ್ಟುಹೋಗುವುದರಲ್ಲಿತ್ತು. ಪದ್ಮಿನಿಯ ಬಾಣತಾಕಿದ ಕೂಡಲೆ ನೆಲಕ್ಕೆ ಬಿದ್ದ ಕುದುರೆಯೊಡನೆ ದಾವೂದನೂ ನೆಲಕ್ಕೆ ಬಿದ್ದು, ಕ್ಷಣಮಾತ್ರದಲ್ಲೇ ಪುನಃ ಎದ್ದು ನಿಂತುಕೊಂಡು, ನಾಲ್ಕು ಕಡೆಗೂ ತಿರುಗಿನೋಡಿದನು. ಆ ವೇಳೆಗೆ ರಾಜಪುತ್ರರು ಅಫ್ಘಾನರನ್ನು ಹಿಂದಕ್ಕೆ ಅಟ್ಟುತ್ತ, ವಿಜಯೋದ್ರೇಕದಿಂದ ಮೈಮರೆತು ಅವರನ್ನು ಬೆಂಬತ್ತಿ ಪಟ್ಟಣದ ಮಧ್ಯಕ್ಕೆ ಹೋಗಿದ್ದರು. ಅವರು ಮಾಡಿದ ಪ್ರಮಾದವನ್ನು ನೋಡಿದ ದಾವೂದನು, ಅದ್ಭುತವಾದ ಚಿತ್ತಸ್ಥೈರ್ಯದಿಂದಲೂ ಸಮಯೋಚಿತವಾಗಿ ನಡೆದ ಬುದ್ಧಿ ಕೌಶಲದಿಂದಲೂ ಹೀಗೆಯೇ ಮಾಡಬೇಕೆಂದು ಕ್ಷಣಮಾತ್ರದಲ್ಲಿ ನಿಶ್ಚಯಿಸಿ. ರಂಗಕ್ಕೆ ಹೋದಲ್ಲಿ ತನ್ನೊಬ್ಬನ ಕೈಯಿಂದ ಏನೂ ಸಾಗದೆಂದು ತಿಳಿದು ಅಲ್ಲಿಗೆ ಹೋಗದೆ ನೆಟ್ಟನೆ ಕೋಟೆಯ ಬಾಗಿಲ ಬಳಿಗೆ ಹೋಗಿ, ಅಲ್ಲಿ ಯಾರೂ ಇಲ್ಲದಿದ್ದುದನ್ನು ಕಂಡು ಕಾವಲುಗಾರರ ಜತೆಗೆ ತಾನೂ ಕೈಹಾಕಿ ಕೋಟೆಯ ಬಾಗಿಲನ್ನು ಮುಚ್ಚಲು ಯತ್ನಿಸಿದನು. ಈ ಕೆಲಸ ಮಾತ್ರ ಕೈಗೂಡಿದ್ದರೆ ಪಟ್ಟಣದಲ್ಲಿ ಸಿಕ್ಕಿಹೋದ ಅಲ್ಪಸ್ವಲ್ಪಮಂದಿ ರಾಜಪುತ್ರರು ತಮಗೆ ಸಹಾಯವೊದಗುವ ಆಸೆಯನ್ನೇ ತೊರೆದು, ಬೋನಿನಲ್ಲಿ ಸಿಕ್ಕಿದ ಇಲಿಗಳಂತೆ ಸತ್ತುಹೋಗಿ ಕೊನೆಗೆ ಪದ್ಮಿನಿಯು ಮಹಮ್ಮದೀಯನ ಅಂತಃಪುರಕ್ಕೆ ಸೇರಬೇಕಾಗುತ್ತಿತ್ತು. ಆದರೆ ದಾವೂದನು ಬಾಗಿಲ ಬಳಿಗೆ ಬರುವ ವೇಳೆಗೆ ಕೆಲಸವು ಕೈಮಿಂಚಿಹೋಗಿತ್ತು. ಆ ಕೋಟೆಬಾಗಿಲ ದೊಡ್ಡದಾದ ಕದಗಳೆರಡೂ ಸಂಧಿಸುವುದರೊಳಗಾಗಿ ಒಂದು ಬಲವಾದ ರಾಜಪುತ್ರದಳವು ಬಂದು ಬಿದ್ದು ಬಾಗಿಲನ್ನು ತೆರೆದುಕೊಂಡು ಒಳಹೊಕ್ಕಿತು. ಈ ದಳದವರು ಹೊರಗೆ ದೂರವಾಗಿದ್ದುಕೊಂಡು ಪದ್ಮಿನಿಯ ಕಡೆಯವರು ಪ್ರವೇಶಮಾಡಿದ ಕೂಡಲೆ ತಾವು ಕೋಟೆಯೊಳಕ್ಕೆ ನುಗ್ಗಿ ಬಂದು ಸಹಾಯುಮಾಡುವುದಾಗಿ ಸಿದ್ಧವಾಗಿ ಕಾದುಕೊಂಡಿದ್ದರು ಇವರು ಹೀಗೆ ಸಮಯವೊದಗಿದ ಕ್ಷಣವೇ ಪಟ್ಟಣವನ್ನು ಪ್ರವೇಶಿಸಿಬಿಟ್ಟರು.

ಈ ಮೇರೆಗೆ ತನ್ನ ಪ್ರಯತ್ನವು ಕೈಗೂಡದೆ ಹೋಗಲು ದಾವೂದನು ಬೇರೇನೂ ಉಪಾಯವನ್ನು ಕಾಣದೆ ಅಲ್ಲಿ ಸವಾರನಿಲ್ಲದೆ ತಿರುಗುತ್ತಿದ್ದ ಒಂದು ಕುದುರೆಯನ್ನು ಹಿಡಿದು ಹತ್ತಿಕೊಂಡು, ಆ ವೇಳೆಗೆ ಸಿದ್ಧವಾಗಿ ಬಂದಿದ್ದ ತನ್ನ ಸೇನೆಯನ್ನು ನಡಿಸಿಕೊಂಡು ಪ್ರತಾಪಸಿಂಗನ ಮೇಲಾರೈಕೆಯಲ್ಲಿದ್ದ ರಾಜಪುತ್ರದಳದ ಬಳಿಗೆ ಹೋಗಿ ಅದನ್ನು ಸುತ್ತಿಕೊಂಡನು. ಆ ದಿನ ರಾಜಪುತ್ರ ರಾಜಕುಮಾರನು ಬಹು ಸಾಹಸಕಾರ್ಯಗಳನ್ನು ಮಾಡಿದ್ದನು. ಆದರೆ ಅವನು ಈಗ

ಬಲವಾಗಿ ಗಾಯಪಟ್ಟಿದ್ದನು, ಅವನ ಸೈನಿಕರಲ್ಲಿ ಮಹಾ ಧೈರ್ಯಶಾಲಿಗಳಾದ ವರನೇಕರು ಹತರಾಗಿ ಬಿದ್ದುಹೋಗಿದ್ದರು. ಅವರ ನಡುವೆ ವೀರಲಕ್ಷ್ಮಿಯಂತೆ ಪ್ರಕಾಶಿಸುತ್ತ ಪದ್ಮಿನಿಯು ತನ್ನ ಕುದುರೆಯ ಮೇಲಿನಿಂದ ತನ್ನ ಬಾಣಗಳನ್ನು ಗುರಿತಪ್ಪದೆ ಪ್ರಯೋಗಿಸುತ್ತ ತನ್ನ ಸುತ್ತಲೂ ಸುತ್ತಿಕೊಂಡಿದ್ದ ಶತ್ರುಗಳನ್ನು ಕೊಂದು ಕೊಂದು ಮೆದೆಗೆಡಹುತ್ತಿದ್ದಳು. ಈ ವೇಳೆಗೆ ಸರಿಯಾಗಿ ಪದ್ಮಿನಿಗೆ, ಸಮುದ್ರಮಧ್ಯದಲ್ಲಿ ಹಡಗೊಡೆದ ನಾವಿಕರಿಗೆ ಹೊಸನಾವೆಯ ಧ್ವಜಪಟವು ಕಾಣಿಸುವಂತೆ ತೆರೆದಿದ್ದ ಕೋಟೆಬಾಗಿಲ ಮೂಲಕವಾಗಿ ಸಹಾಯಸಂಪತ್ತು ಬಂದೊದಗಲಾರಂಭಿಸಿತು. ಹೀಗೆ ಬಂದ ರಾಜಪುತ್ರಬಲದೊಡನೆ ಅಲ್ಲಿಯ ಹಿಂದೂನಿವಾಸಿಗಳೂ ಸೇರಿಕೊಂಡು ಹೊಡೆದಾಡತೊಡಗಿದರು. ಅಲ್ಲಿಂದಾಚೆ ಶತ್ರುಗಳು ಬಲಗುಂದಿ ಹಿಂಜರಿಯಲಾರಂಭಿಸಿದರು. ಆಗ ದಾವೂದನು ಹೇಗಾದರೂ ಸರಿಯೆ ಅಂದಿನ ವಿಜಯಲಕ್ಷ್ಮಿಯನ್ನೊಲಿಸಕೊಳ್ಳಬೇಕೆಂದೆಣಿಸಿ, ಬಹು ಸಾಹಸಮಾಡಿ ಶತ್ರುಸೇನಾಪತಿಯಾದ ಪ್ರತಾಪಸಿಂಗನ ಮೇಲೆ ಕುದುರೆಯನ್ನು ಬಿಟ್ಟುಕೊಂಡು ಬಂದನು. ಅದನ್ನು ಕಂಡು ಪ್ರತಾಪಸಿಂಗನು ತಟ್ಟನೆ ಪಕ್ಕಕ್ಕೆ ಓಸರಿಸಿ ಆ ಸಂಘಟ್ಟನದ ವೇಗಕ್ಕೆ ಸಿಕ್ಕದೆ ತಪ್ಪಿಸಿಕೊಂಡು, ಅದೇ ಕಾಲದಲ್ಲಿಯೇ ದಾವೂದನ ನಡುಕಟ್ಟನ್ನು ಹಿಡಿದು ಅವನನ್ನು ಬಲಾತ್ಕಾರದಿಂದ ಕೆಳಕ್ಕೆಳೆದುಹಾಕಿದನು. ಆ ರೀತಿಯಾಗಿ ದಾವೂದನು ಕೈಸೆರೆಯಾದುದನ್ನು ನೋಡಿ, ಅವನ ಕಡೆಯವರು ಭೀತರಾಗಿ ಯುದ್ಧವನ್ನು ನಿಲ್ಲಿಸಿ, ಶರಣಾಗತರಾಗಿ ಅಭಯವನ್ನು ಪಡೆದುಕೊಂಡರು.

ಈ ವೀರ ಪ್ರತಾಪಸಿಂಗನು ಆ ದಿವಸ ತನಗೆ ಪದ್ಮಿನಿಯನ್ನೂ ತನ್ನ ಮಾವನಿಗೆ ರಾಜಗೃಹವನ್ನೂ ಗಳಿಸಿದನು. ಪದ್ಮಿನಿಯ ಪ್ರಾರ್ಥನೆಯಿಂದ ದಾವೂದನು ತನ್ನ ಪ್ರಾಣವನ್ನು ಉಳಿಸಿಕೊಂಡನು. ಈಗ ಪದ್ಮಿನಿಯನ್ನು ಕಣ್ಣಾರೆ ನೋಡಿದುದರಿಂದ ದಾವೂದನಿಗೆ ಆಕೆಯಲ್ಲಿದ್ದ ಅನುರಾಗವು ಮತ್ತಷ್ಟು ಹೆಚ್ಚಿತು. ಕೂಡಲೆ ಅವನು—ನನ್ನ ದೇಶಕೋಶಗಳು ಹೋದರೂ ಬಾಧೆಯಿಲ್ಲ ಪದ್ಮಿನಿಯ ಜಾಜ್ವಲ್ಯಮಾನವಾದ ಸೌಂದರ್ಯವನ್ನು ಕಣ್ಣಾರೆ ನೋಡಿದೆನಲ್ಲಾ, ಇಷ್ಟೇಸಾಕು— ಎಂದು ಅವಳ ಕಿವಿಗೆ ಕೇಳಿಸುವಹಾಗೆ ಗಟ್ಟಿಯಾಗಿ ಹೇಳಿದನು. ಆದರೆ ತನ್ನ ಮನಸ್ಸಿನಲ್ಲಿ ಮಾತ್ರ 'ಇವಳನ್ನು ಎಂದಾದರೂ ಒಂದುದಿನ ಅಪಹರಿಸಿಕೊಂಡು ಹೋಗಿ ನನ್ನ ರಾಣಿ ಮಾಡಿಕೊಂಡು ಅಂತಃಪುರಕ್ಕೆ ಸೇರಿಸಿಕೊಳ್ಳುವೆನು' ಎಂದು ಪ್ರತಿಜ್ಞೆಮಾಡಿಕೊಂಡನು. ಆದರೂ ಆ ಪ್ರತಿಜ್ಞೆಯನ್ನು ನೆರವೇರಿಸಲಾಗಲಿಲ್ಲ. ಇದಾದ ನಂತರ ಅವನು ಬಹು ವರ್ಷಕಾಲ ಬದುಕಿದ್ದನು. ಅನೇಕ ಯುದ್ಧಗಳಲ್ಲಿ ತನ್ನ ಪರಾಕ್ರಮದಿಂದಲೂ ತಂತ್ರಗಳಿಂದಲೂ ಪ್ರಖ್ಯಾತಿಯನ್ನು ಕೂಡ ಪಡೆದನು. ಆದರೂ ಆಗ ಮನಸ್ಸಿನಲ್ಲಿ ಮಾಡಿಕೊಂಡ ಪ್ರತಿಜ್ಞೆಯನ್ನು ಮಾತ್ರ ನೆರವೇರಿಸಲಾಗಲಿಲ್ಲ.

ಬಳಿಕ ಪ್ರತಾಪಸಿಂಗನಿಗೂ ಪದ್ಮಿನಿಗೂ ಕ್ರಮವಾಗಿ ವಿವಾಹಮಹೋತ್ಸವವು ಬೆಳೆಯಿತು. ಅವರು ವಿಶೇಷವಾದ ಸಂತಾನ ಸಂಪತ್ತಿಯನ್ನು ಪಡೆದರು. ಅವ-

ಬ್ಬರೂ ಬಹು ಸುಂದರರಾಗಿಯೂ ಧೀರರಾಗಿಯೂ ಇದ್ದುದರಿಂದ, ಅವರ ಹೆಣ್ಣು ಮಕ್ಕಳು ರೂಪವತಿಯರಾಗಿಯೂ ಗಂಡುಮಕ್ಕಳು ಶೂರರಾಗಿಯೂ ಇದ್ದರೆಂಬುದೇನೂ ಆಶ್ಚರ್ಯವಲ್ಲ. ಮಕ್ಕಳೆಲ್ಲರೂ ಮುಂದೆ ಮಹಾ ಪರಾಕ್ರಮಶಾಲಿಗಳಾಗಿ, ವಜ್ರ ಪ್ರಾಕಾರದಂತೆ ನಿಂತು, ಪ್ರತಿಕ್ಷಣವೂ ತರಂಗರೂಪವಾಗಿ ಉಕ್ಕಿ ಬಂದು ಬೀಳುತ್ತಿದ್ದ ಮಹಮ್ಮದೀಯರ ಉದ್ದುರುಟತನವನ್ನು ತಡೆದು, ತಮ್ಮ ಸ್ವಾತಂತ್ರ್ಯಸಂಪತ್ತನ್ನು ಚಿರಕಾಲ ರಕ್ಷಿಸಿಕೊಂಡರು.

---

## ಹಜಾರತ್ತಿನ ಪದ್ಮರಾಗ.

ಈಗ ಅಫ್ಘಾನಿಸ್ಥಾನವೆಂದು ಹೆಸರುಗೊಂಡಿರುವ ದೇಶದಲ್ಲಿ ಹಜಾರತ್ ಎಂಬ ಒಂದು ಸಣ್ಣ ಸಂಸ್ಥಾನವಿದೆ. ಹಿಂದೆ ಅದು ಒಬ್ಬ ಮೊಗಲಾಯಿ ಸರದಾರನ ಆಳಿಕೆಗೆ ಸೇರಿದ್ದಿತು. ಆ ಸರದಾರನ ತಮ್ಮನಾದ ಮೊಖರಾಬ್‌ಖಾನನು ಒಂದಾನೊಂದು ಕಾಲದಲ್ಲಿ ದೂರದೇಶಕ್ಕೆ ರಾಯಭಾರಿಯಾಗಿ ಹೋಗಿದ್ದು 1526 ನೆಯ ಸಂವತ್ಸರದ ವಸಂತಕಾಲದಲ್ಲಿ ಹಿಂತಿರುಗಿ ಬರುತ್ತಿದ್ದನು. ಆ ಕಾಲದಲ್ಲಿ ಅವನು ತನ್ನ ಅಂಗರಕ್ಷೆಗಾಗಿ ಕರೆದುಕೊಂಡು ಹೋಗಿದ್ದ ಆರುಮಂದಿ ಸವಾರರನ್ನೂ ಹಿಂದಿಟ್ಟುಕೊಂಡು, ಮಾರ್ಗದಲ್ಲಿ ಎಲ್ಲಿಯೂ ನಿಲ್ಲದೆ ಕುದುರೆಯನ್ನು ವೇಗವಾಗಿ ಓಡಿಸುತ್ತಾ ಬಂದು, ಹಜಾರತ್ ನಗರದ ಹೊರಭಾಗದಲ್ಲಿದ್ದ ತಮ್ಮ ಅಣ್ಣನ ದಿವಾನ್‌ಖಾನೆಯ ಬಾಗಿಲಲ್ಲಿ ಕುದುರೆಯನ್ನು ನಿಲ್ಲಿಸಿ ನೋಡಿದನು.

ಹಾಗೆ ನಿಲ್ಲಿಸಿಕೊಂಡು ನೋಡುವಾಗ ಅರಮನೆಯೆಲ್ಲವೂ ನಿಶ್ಶಬ್ದವಾಗಿತ್ತು; ಆದರೂ ಎಲ್ಲವೂ ಸಮಾಧಾನಸ್ಥಿತಿಯಲ್ಲಿದ್ದಂತೆ ಕಾಣಬರಲಿಲ್ಲ. ಅದರಿಂದ ಸ್ವಲ್ಪ ದಿಗಿಲುಪಟ್ಟವನಾಗಿ ಅವನು ಹೆಬ್ಬಾಗಿಲ ಬಳಿಗೆ ಹೋಗಿ ನೋಡಿದನು. ಅದರ ಕದಗಳು ಪುಡಿಪುಡಿಯಾಗಿ ಒಡೆದುಹೋಗಿ ಒಂದೆರಡು ಮುರುಕುಗಳು ಮಾತ್ರ ಕೀಲುಗಳಿಗೆ ಹತ್ತಿಕೊಂಡಿದ್ದುವು. ಅದನ್ನು ನೋಡಿ ಇನ್ನಷ್ಟು ದಿಗಿಲುಬಿದ್ದು ತಟ್ಟನೆ ಕುದುರೆಯಿಂದಿಳಿದು ಶಸ್ತ್ರಪಾಣಿಯಾಗಿ ಅತುರದಿಂದ ಒಳಹೊಕ್ಕನು. ಅಲ್ಲಿ ಅವನನ್ನು ಯಾರೂ ತಡೆಯಲಿಲ್ಲ: ಆದುದರಿಂದ ಬೇಗನೆ ಒಳಹೊಕ್ಕು ನೋಡಿದನು. ಅಲ್ಲಿ ಯಾವ ಕಡೆ ನೋಡಿದರೂ ಕೊಲೆ ಕೊಳ್ಳೆಗಳ ಚಿಹ್ನಗಳೇ ಕಾಣಬಂದುವು. ಕೊಠಡಿಗಳಲ್ಲಿ ಕಟ್ಟಿದ್ದ ಚಿತ್ರಗೆಲಸದ ಪರದೆಗಳೆಲ್ಲವೂ ಹರಿದುಬಿದ್ದಿದ್ದುವು. ಇಟ್ಟಿದ್ದ ಸಿಂಗರಗೆಲಸದ ಮರಮುಟ್ಟುಗಳೆಲ್ಲವೂ ಮುರಿದುಬಿದ್ದುವು. ಎಲ್ಲೆಲ್ಲಿಯೂ ಒಡೆದು ಹಾಕಿದ ಪೆಟ್ಟಿಗೆಗಳ ಮುರುಕುಗಳು ಇಟ್ಟಾಡುತಿದ್ದುವು. ಯಾವ ಕಡೆ ನೋಡಿದರೂ ಗಂಡಸರು ಹೆಂಗಸರು ಮಕ್ಕಳು ಸಹ ನೆಲದ ಮೇಲೆ ರಕ್ತದಲ್ಲಿ ಹೊರಳಾಡುತ್ತ ಬಿದ್ದಿದ್ದರು. ಇದನ್ನೆಲ್ಲಾ ನೋಡಿ ದಿಗ್ಭ್ರಮೆ ಹುಟ್ಟಿ ಉಪ್ಪರಿಗೆಯನ್ನು ಹತ್ತಿ ಮೇಲಕ್ಕೆ ಹೋಗಿ ನೋಡಿದನು. ಅಲ್ಲಿ ಒಂದು ಕೊಟಡಿಯಲ್ಲಿ

ಸುತ್ತಲೂ ಅಪ್ತಭೃತ್ಯರು ಸತ್ತುಬಿದ್ದಿದ್ದಿರು, ನಡುವೆ ಅವನ ಅತ್ತಿಗೆಯು ಕೊಲೆಗ ಡಿಗರಿಂದ ಹತವಾಗಿದ್ದ ತನ್ನ ಮಗುವಿನ ಪಕ್ಕದಲ್ಲಿ ಸತ್ತು ಬಿದ್ದಿದ್ದಳು. ಅವಳೆದೆ ಯಲ್ಲಿ ಅವಳ ಸ್ವಂತ ಕಠಾರಿಯೇ ನಾಟಿಕೊಂಡಿದ್ದಿತು. ಅದನ್ನು ನೋಡಿದರೆ ಅವಳು ಸಾವನ್ನು ಕೋರಿ ತಾನೇ ಕೈಯಾರ ಪ್ರಾಣವನ್ನು ಬಿಟ್ಟಿದ್ದಂತೆ ಕಾಣು ತ್ತಿತ್ತು. ಬಳೆಗಳು ಓಲೆಗಳು ಮೊದಲಾದ ಆಭರಣಗಳನ್ನು ಇಟ್ಟುಕೊಳ್ಳುವ ಭಾಗ ಗಳಲ್ಲೆಲ್ಲಾ ಗಾಯವಾಗಿದ್ದುದರಿಂದ, ಅವುಗಳನ್ನೆಲ್ಲಾ ಮೈಯಿಂದ ಬಲಾತ್ಕಾರ ವಾಗಿ ಕಿತ್ತುಕೊಂಡು ಹೋಗಿದ್ದಂತೆ ತೋರುತ್ತಿತ್ತು. ಈ ಘೋರವಾದ ಸನ್ನಿವೇ ಶವನ್ನು ನೋಡಿ ಮೂಖರಾಬ್‌ಖಾನನು ದಿಕ್ಕುದೆಸೆ ತೋಚದೆ ಸ್ವಲ್ಪಕಾಲ ಬೆಪ್ಪಾಗಿ ಹೋಗಿ ಬಳಿಕ ಮೆಲ್ಲಗೆ ಚೇತರಿಸಿಕೊಂಡು ಆ ಘೋರಕೃತ್ಯವು ಹೇಗೆ ನಡೆಯಿತೋ ತಿಳಿಯಹೇಳುವರು ಯಾರಾದರೂ ಉಂಟೋ ನೋಡೋಣ ಎಂದು ಬಹಳಹೊತ್ತು ಸುತ್ತಲೂ ನೋಡುತ್ತ ನಿಂತುಕೊಂಡನು. ಅಲ್ಲಿ ಒಂದು ಪಿಳ್ಳೆಕೂಡ ಸುಳಿಯಲಿಲ್ಲ. ಹಾಗೆ ಬಹಳ ಕಾಲ ಕಳೆದ ಮೇಲೆ ಒಂದು ಮೂಲೆಯಲ್ಲಿ ಬಲು ಹೊತ್ತಿನಿಂದ ಮೂರ್ಛೆಹೋಗಿ ಬಿದ್ದಿದ್ದ ಒಬ್ಬ ಬಿಳಿಯಗಡ್ಡದ ಮುದಿ ಮುಲ್ಲನು ಮೆಲ್ಲನೆದ್ದು ತಡ ವರಿಸುತ್ತ ಅವನ ಬಳಿಗೆ ಬಂದನು. ಈ ಮುಲ್ಲನು ಬಹಳ ಮುದುಕನಾಗಿಯೂ ಆ ಮನೆತನದವರಲ್ಲಿ ಬಹಳ ವಿಶ್ವಾಸವುಳ್ಳವನಾಗಿಯೂ ಇದ್ದನು, ಈಗ ಅವನ ಬಲಗೈಯಲ್ಲಿ ಮೂರು ಬೆರಳುಗಳು ಕತ್ತರಿಸಿಹೋಗಿದ್ದುವು. ಅವನ ಪಕ್ಕದಲ್ಲಿ ಬಲ ವಾದ ಗಾಯವಾಗಿ ಅವನು ಮರಣಾವಸ್ಥೆಯಲ್ಲಿದ್ದಂತೆ ಕಾಣುತ್ತಿದ್ದನು. ಹಾಗೆ ದುರವಸ್ಥೆಯಲ್ಲಿದ್ದರೂ ಅವನು ಮೆಲ್ಲಗೆ ತಡವರಿಸುತ್ತ ಬಂದು ಉಬ್ಬಸದಿಂದಲೂ ನಿಟ್ಟುಸಿರಿನಿಂದಲೂ ನಡುವೆ ನಡುವೆ ಸ್ವಲ್ಪ ಸ್ವಲ್ಪ ತಡೆದು ತಡೆದು ನಿಲ್ಲುತ್ತ ಮೆಲ್ಲ ಮೆಲ್ಲನೆ ನಡೆದ ಸಂಗತಿಯನ್ನೆಲ್ಲಾ ಈ ರೀತಿಯಾಗಿ ಹೇಳಿ ತಿಳಿಸಿದನು.

''ನಮ್ಮ ಸರದಾರನು ಒಬ್ಬ ಪ್ರಬಲವಾದ ಶತ್ರುವಿನೊಡನೆ ಯುದ್ಧಮಾಡುವು ದಕ್ಕಾಗಿ ಪರಿಜನದೊಡನೆ ಹೊರಟನು. ಆ ಕಾಲದಲ್ಲಿ ಅವನು ಶತ್ರುಗಳಿಂದ ವಂಚಿ ತನಾಗಿ ಒಂದುಕಡೆ ಸಿಕ್ಕಿಕೊಂಡು ಪರಿಜನದೊಡನೆ ಸಂಹೃತನಾದನು. ಈ ಘೋರವಾದ ಸಮಾಚಾರವು ಇಲ್ಲಿಗೆ ಬಂದು ಮುಟ್ಟಿತೋ ಇಲ್ಲವೋ ಎನ್ನುವ ವೇಳೆಗೆ ಸರಿಯಾಗಿ ಕಳ್ಳರ ಯಜಮಾನನಾದ ಮಾನ್ಸೂರ್ ಎಂಬುವನು ಗೊಂಡಾರ ಣ್ಯದ ಬೆಟ್ಟಗಳ ಕಿಬ್ಬಿಯಿಂದ ಬಂದು ನಮ್ಮಮೇಲೆ ಬಿದ್ದನು. ಅದನ್ನು ಕಂಡು ಕೋಟೆಗಾವಲಲ್ಲಿದ್ದ ನಾಲ್ಕಾರು ಮಂದಿ ಸೈನಿಕರು ಮಹಾ ಪರಾಕ್ರಮದಿಂದ ಯುದ್ಧಮಾಡಿದರು ; ಆದರೂ ಚೋರರ ಸಂಖ್ಯೆ ಹೆಚ್ಚಾಗಿದ್ದುದರಿಂದ ನಮ್ಮವರೇ ಪರಾಜಿತರಾಗಿ ಹೋದರು. ತರುವಾಯ ಕಳ್ಳರು ನುಗ್ಗಿ ಕೋಟೆಯಲ್ಲಿದ್ದಬದ್ದುದ ನ್ನೆಲ್ಲಾ ದೋಚಿಕೊಂಡು ನಡುಗಾಡಿಗೆ ಹೊರಟುಹೋದರು :—ಆದರೂ ಅವರಿಗೆ ಸಿಕ್ಕದಂತೆ ಒಂದು ಪದಾರ್ಥವನ್ನು ರಕ್ಷಿಸಿಟ್ಟಿದ್ದೇನೆ. ಅದನ್ನು ಸಂಗ್ರಹಿಸಿಕೊಳ್ಳು ವುದಕ್ಕಾಗಿ ಕಳ್ಳರು ಈ ಕೋಟೆಯ ಮೂಲೆ ಮುದುಕುಗಳನ್ನೆಲ್ಲಾ ಹುಡುಕಾಡಿ

ನೋಡಿದರು. ಆದರೂ ನಮ್ಮ ಹಜಾರತ್ ಮನೆತನಕ್ಕೆ ಬಂದ ಈ ರತ್ನವು ಮಾತ್ರ ಅವರಿಗೆ ದೊರಕಲಿಲ್ಲ. ನಾನು ದೇವಭಕ್ತನಾದ ಪ್ರಯುಕ್ತ ಆ ಕೊಲೆಪಾತಕರು ನನ್ನನ್ನು ಕೊಲ್ಲರೆಂದು ನಂಬಿ ನಿಮ್ಮ ಅತ್ತಿಗೆಯು ಈ ರತ್ನವನ್ನು ಯಾರಿಗೂ ತಿಳಿಯದಂತೆ ನನ್ನ ಕೈಯ್ಯಲ್ಲಿಟ್ಟಳು. ಇದು ನಡೆದ ಸ್ವಲ್ಪ ಹೊತ್ತಿಗೆಲ್ಲಾ ಕಳ್ಳರು ಬಂದು ಕೊನೆಯಾವೃತ್ತಿ ಮೇಲೆ ಬಿದ್ದು ನಿಮ್ಮ ಅತ್ತಿಗೆಯನ್ನೂ ಕೊಂದುಬಿಟ್ಟರು. ಬಳಿಕ ಅವರು ನನ್ನನ್ನು ಸಾಯಬಡಿದರೂ ಕೂಡ ನಾನು ಈ ರತ್ನವನ್ನು ಅವರ ಕೈಗೆ ಕೊಡದೆ ರಕ್ಷಿಸಿಕೊಂಡಿದ್ದೆನು. ಇನ್ನು ಈ ಮನೆತನಕ್ಕೆ ನೀನೇ ಉತ್ತರಾಧಿಕಾರಿಯಾಗಿರುವುದರಿಂದ ಇದನ್ನು ನಿನಗೆ ಒಪ್ಪಿಸುತ್ತೇನೆ. ನಾನು ಈ ಮನೆತನದವರ ಉಪ್ಪುತಿಂದು ಬೆಳೆದವನು. ಇವರ ಸೇವೆಯಲ್ಲಿಯೇ ಪ್ರಾಣವನ್ನು ಬಿಡುವೆನು.'' ಎಂದು ಹೇಳಿ ಆ ರತ್ನವನ್ನು ಮೂಖರಾಬ್‌ಖಾನನ ಕೈಗೆ ಕೊಡುತ್ತ ಕಣ್ಣಿನಲ್ಲಿ ಕಾವಳ ಕವಿದು ಸತ್ತುಬಿದ್ದನು. ಬಳಿಕ ಮೂಖರಾಬ್‌ಖಾನನು ಆ ರತ್ನವನ್ನು ಬೇಗನೆ ತೆಗೆದುಕೊಂಡು ತನ್ನ ನಡುಕಟ್ಟಿನಲ್ಲಿ ಭದ್ರವಾಗಿ ಬಚ್ಚಿಟ್ಟು, ಅರಮನೆಯಿಂದ ಹೊರಗೆ ಬಂದು ನೋಡಿದನು. ಅಲ್ಲಿ ಅವನ ಮೈಗಾವಲಿನವರಲ್ಲಿ ಐವರು ಮಾತ್ರ ಕಾದಿದ್ದರು. ಉಳಿದವನೆಲ್ಲಿ ಎಂದು ವಿಚಾರಿಸಿದನು. ಅವನು ತನ್ನ ಹಿಂದೆ ಕಾಡಿಗೆ ಬಂದಹಾಗೂ, ಕೂಡಲೆ ಕಾಡಿನಿಂದ ಹಿಂದುರುಗಿ ಬಂದು ತಟ್ಟನೆ ಕುದುರೆಯನ್ನು ಹತ್ತಿಕೊಂಡು ಬೆಟ್ಟಗಳ ಕಡೆಗೆ ಓಡಿಸಿಕೊಂಡು ಹೋದ ಹಾಗೂ ಅವರು ತಿಳಿಸಿದರು. ಅದನ್ನು ಕೇಳಿದ ಕೂಡಲೆ ಮೂಖರಾಬ್‌ಖಾನನು ತನ್ನ ಅಂಗರಕ್ಷಕನು ದ್ರೋಹಮಾಡಿರಬಹುದೆಂದೆಣಿಸಿ ಯಾವ ಕೆಡಕು ಬಂದರೂ ಬರಲಿ ಎಂದು ಸಿದ್ಧಮಾಡಿಕೊಂಡವನಾಗಿ ಆ ವೇಳೆಗೆ ಅಲ್ಲಿ ಬಂದು ಸೇರಿದ್ದ ಆ ಊರಿನವರನ್ನು ಕುರಿತು—ನಾನು ಒಂದುವೇಳೆ ಇಲ್ಲಿಂದ ಹೊರಟುಹೋಗಬೇಕಾಗಿ ಬಂದರೂ ನೀವು ಮಾತ್ರ ಇಲ್ಲಿ ಮೃತರಾದವರಿಗೆ ಮರ್ಯಾದೆಯೊಡನೆ ಉತ್ತರಕ್ರಿಯೆಗಳನ್ನು ಮಾಡಿರಿ—ಎಂದು ಆಜ್ಞಾಪಿಸಿ, ತನ್ನ ಮೈಗಾವಲವರನ್ನು ನೋಡಿ—ನಿಮ್ಮ ಕುದುರೆಗಳಿಗೆ ಕಡಿವಾಣಹಾಕಿಟ್ಟು ಯಾವ ನಿಮಿಷದಲ್ಲಿ ಹೇಳಿದರೆ ಆ ನಿಮಿಷ ಹತ್ತಿಕೊಂಡು ಹೊರಡಲು ಸಿದ್ಧವಾಗಿರಿ—ಎಂದು ತಿಳಿಸಿದನು.

ಈಗ ನಾವು ಹಿಂದೆ ಓಡಿಹೋದ ಮೈಗಾವಲಿನವನಗತಿ ಏನಾಯಿತೋ ವಿಚಾರಿಸೋಣ. ಅವನು ಮೂಖರಾಬ್‌ಖಾನನಿಗೂ ಮುಲ್ಲನಿಗೂ ನಡೆದ ಮಾತು ಕಥೆಗಳನ್ನೆಲ್ಲಾ ಕೇಳಿ ಆ ರತ್ನವನ್ನು ತಾನು ಎತ್ತಿಹಾಕಿಕೊಳ್ಳಬೇಕೆಂದೂ, ಅದು ಸಾಧ್ಯವಾಗದೆ ಹೋದರೆ ತನಗೆ ತಿಳಿದ ಸಂಗತಿಯಿಂದ ಕೂಡಿದಮಟ್ಟಿಗಾದರೂ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದೂ, ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡನು.

ಹೀಗೆ ದುರಾಲೋಚನೆ ಮಾಡಿಕೊಂಡು ಆ ದ್ರೋಹಿಯು ಕಳ್ಳರೊಡನೆ ಸೇರಿದರೆ ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಬಹುದೆಂದೆಣಿಸಿ ಪರ್ವತಶ್ರೇಣಿಗಳ ಕಡೆಗೆ ತ್ವರೆಯಾಗಿ ಕುದುರೆಯನ್ನು ಬಿಟ್ಟುಕೊಂಡು ಹೋದನು. ಅವನಿಗೆ ದೈವ

ಸಹಾಯವೂ ಬಂದೊದಗಿತು. ಏಕೆಂದರೆ, ಅವನು ಸ್ವಲ್ಪದೂರ ಹೋಗುವುದರೊಳಗಾಗಿ ತಾನು ಹುಡುಕುತ್ತಿದ್ದ ಕಳ್ಳಬಂಟರ ಕೈಗೆ ಸಿಕ್ಕುಬಿದ್ದನು ಕೂಡಲೆ ಅವರು ಇವನನ್ನು ತಮ್ಮ ಯಜಮಾನನ ಬಳಿಗೆ ಕರೆದುಕೊಂಡು ಹೋದರು. ಅವರ ಯಜಮಾನನಾದ ಆಫ್ಘಾನಿಯವನು ಕರ್ರಗೆ ಜೋಲುಗಡ್ಡವನ್ನು ಬಿಟ್ಟುಕೊಂಡು, ಕಾಡುಕೋತಿಯ ಹಾಗೆ ಉಬ್ಬಿದೆಯನ್ನೂ ಚಾಚಿಕೊಂಡು, ತನ್ನಂತೆಯೇ ವಿಕಾರವಾಗಿ ಬಲವಾಗಿದ್ದ ಒಂದು ತುರ್ಕೋಮಾನ್‌ಜಾತಿಯ ಕಾಡುಕುದುರೆಯ ಮೇಲೆ ಹತ್ತಿಕೊಂಡು ಹೋಗುತ್ತಿದ್ದನು.

ಅವನು ಈ ದ್ರೋಹಿಯನ್ನು ನೋಡಿದ ಕೂಡಲೆ ನೀನು ಯಾರು? ಎಂದು ಕೇಳಿದನು. ಅದಕ್ಕೆ ಇವನು—ನನಗೆ ಒಂದು ಗುಟ್ಟು ತಿಳಿದಿದೆ. ಅದನ್ನು ನಿನ್ನ ವಿನಾ ಇನ್ನು ಯಾರಿಗೂ ಹೇಳಲೊಲ್ಲೆನು—ಎಂದನು. ಕೂಡಲೆ ಕಳ್ಳರ ಯಜಮಾನನು ತನ್ನವರನ್ನೆಲ್ಲ ದೂರವಾಗಿ ಇರುವಂತೆ ಅಜ್ಞಾಪಿಸಿ ಬಳಿಕ ದ್ರೋಹಿಯ ಕಡೆಗೆ ತಿರುಗಿ—ನೀನು ಹೇಳತಕ್ಕುದನ್ನು ಬೇಗ ಹೇಳು ಎಂದು ನುಡಿದನು.

ಅದಕ್ಕೆ ದ್ರೋಹಿಯು "ಹಜಾರತ್ತಿನ ರತ್ನವು ಇಂಥಕಡೆ ಇದೆಯೆಂಬದಾಗಿ ನನಗೆ ಗೊತ್ತುಂಟು. ಅದನ್ನು ಪಡೆದುಕೊಳ್ಳುವುದರಲ್ಲಿ ನೀನೂ ನಿನ್ನ ಗುಂಪಿನವರೂ ನನಗೆ ಸಹಾಯಮಾಡಿದರೆ ನಿಮಗೆ 1,000 ರೂಪಾಯಿಗಳನ್ನು ಹಂಚಿಕೊಡುವೆನು" ಎಂದನು.

ಅದಕ್ಕೆ ಕಳ್ಳರೊಡೆಯನಿಂತೆಂದನು :—ಛೆ! ಛೆ! ಇಷ್ಟೇನೆ? ನಮ್ಮ ಕಷ್ಟವನ್ನೂ ರತ್ನದ ಬೆಲೆಯನ್ನೂ ಲೆಕ್ಕಮಾಡಿ ನೋಡಿದರೆ ನೀನು ಏನು ಕೊಟ್ಟಹಾಗಾಯಿತು? ಅಬ್ಬ! ಅದು ಎಂಥ ರತ್ನ! ಅದರಂಥ ರತ್ನವು ಪರ್ಷಿಯಾದೇಶದ ಷಾಹನ ಕಿರೀಟದಲ್ಲುಂಟೆ? ಇಲ್ಲ. ರೊಮಿನ ಸುಲ್ತಾನನ ಕಿರೀಟದಲ್ಲಿದೆಯೆ? ಅದು ಸಿಕ್ಕಿದರೆ 1,000 ರೂಪಾಯಿ ಹಂಚುತಾನಂತೆ? ಛೆ! ಇದು ಎಲ್ಲಿಯ ಮಾತು—ಎಂದು ಹೀಯಾಳಿಸಿದನು.

ಈ ರೀತಿಯಲ್ಲಿ ಆ ದುಷ್ಟರಿಬ್ಬರೂ ಹೆಣಗಾಡಲಿಕ್ಕೆ ಮೊದಲುಮಾಡಿದರು. ತರುವಾಯ ಕಳ್ಳರ ಯಜಮಾನನು—ನಾನು ಜನರ ಸಹಾಯವನ್ನು ಒದಗಿಸಿಕೊಡುವ ಪ್ರಯುಕ್ತ ಆ ರತ್ನವು ನನಗೇ ಸೇರತಕ್ಕುದು—ಎಂದು ವಾದಿಸಲಾರಂಭಿಸಿದನು. ಕೊನೆಗೆ ವ್ಯಾಜ್ಯವನ್ನು ಬಗೆಹರಿಸುವುದಕ್ಕಾಗಿ ಕಳ್ಳನು ಆ ದ್ರೋಹಿಗೆ ಕೂಡಲೆ 50 ಚಿನ್ನದ ಮೊಹರೆಗಳನ್ನು ಕೊಡಬೇಕೆಂದೂ, ಅದು ಸಂದಾಯವಾದ ಮೇಲೆ ದ್ರೋಹಿಯು ರತ್ನವಿರುವ ಕಡೆಯನ್ನು ತಿಳಿಸಬೇಕೆಂದೂ, ಆ ರತ್ನವು ಕೈಗೆ ಬಂದಕೂಡಲೆ ಕಳ್ಳರು ಇನ್ನು ನೂರು ಚಿನ್ನದ ಮೊಹರೆಗಳನ್ನು ಕೊಡಬೇಕೆಂದೂ ವ್ಯವಸ್ಥೆಮಾಡಿಕೊಂಡರು. ಈ ಒಪ್ಪಂದಕ್ಕೆ ಸರಿಯಾಗಿ ಕಳ್ಳರ ಗೊತ್ತುಗಾರನು ತನ್ನ ನಡುಕಟ್ಟಿನಲ್ಲಿದ್ದ ಚೀಲದಿಂದ 50 ಮೊಹರೆಗಳನ್ನು ತೆಗೆದು ದ್ರೋಹಿಯಲ್ಲಿಟ್ಟನು. ಆ ದ್ರೋಹಿಯು ಅದನ್ನು ತೆಗೆದುಕೊಂಡು ರತ್ನವು ಮೂಖರಾಬ್‌ಖಾ

ನಿನ ಹತ್ತಿರ ಇದೆ; ಅವನು ಇನ್ನೂ ಹಜಾರತ್ತಿನಲ್ಲಿಯೇ ಇದ್ದಾನೆ— ಎಂದು ಹೇಳಿ ಬಿಟ್ಟನು.

ತರುವಾಯ ಕಳ್ಳನು ತನ್ನ ಬೆನ್ನಿನ ಬಳಿ ಕೈಯಿಟ್ಟುಕೊಂಡು ನೀನು ತಿಳಿಸಿದ ಗುಟ್ಟಿಗಾಗಿ ಮುಂದಾಗಿಯೇ ನಿನಗೆ 50 ಮೊಹರೆಗಳನ್ನು ಕೊಟ್ಟಿದ್ದೇನೆ. ಇನ್ನು ನೀನು ನಿನ್ನ ಯಜಮಾನನಿಗೆ ಮಾಡಿರುವ ದ್ರೋಹಕ್ಕಾಗಿ ನಿನಗೆ ತಕ್ಕ ಮರ್ಯಾದೆ ಮಾಡಬೇಕಾಗಿದೆ—ಎಂದು ಹೇಳಿ—ನಿನ್ನಂತೆ ಮಾಡುವವರೆಲ್ಲಾ ಹೀಗೆಯೇ ಸಾಯುವರು—ಎಂಬದಾಗಿ ತನ್ನವರಿಗೆಲ್ಲಾ ಕೇಳಿಸುವಂತೆ ಗಟ್ಟಿಯಾಗಿ ಕೂಗಿ ಹೇಳಿ ತನ್ನ ಬೆನ್ನಿನ ಬಳಿ ತೂಗಹಾಕಿದ್ದ ಮುಚ್ಚುಕತ್ತಿಯನ್ನು ತೆಗೆದುಕೊಂಡು ಆ ಸವಾರನ ತಲೆಯಿಂದ ಗಡ್ಡದವರೆಗೂ ಸೀಳಿಹೋಗುವ ಹಾಗೆ ಒಂದೇ ಪೆಟ್ಟಿಗೆ ಹೊಡೆದುಹಾಕಿದನು. ಹಾಗೆ ಹೊಡೆದ ಬಳಿಕ ಅವನು ಮನಸ್ಸಿನಲ್ಲಿ ಸ್ವಲ್ಪವೂ ಅಳುಕಿಲ್ಲದೆ ಆ ದ್ರೋಹಿಯ ಬಳಿಯಿದ್ದ ಮೊಹರೆಗಳನ್ನು ತೆಗೆದುಕೊಂಡು ಅವನ ಹೆಣವನ್ನು ನರಿ ಹದ್ದುಗಳ ಪಾಲಿಗೆ ಬಿಟ್ಟು ತನ್ನ ಪರಿಜನರೊಡನೆ ಹಜಾರತ್ತಿನ ಕಡೆಗೆ ಬಹುವೇಗವಾಗಿ ಸವಾರಿಮಾಡಿಕೊಂಡು ಹೊರಟನು.

ಹೀಗಾದ ಪ್ರಯುಕ್ತ ಇತ್ತ ಮೂಖರಾಬ್‌ಖಾನನು ಹಜಾರತ್ತಿನಲ್ಲಿ ಸತ್ತುಹೋದವರ ಉತ್ತರಕ್ರಿಯೆಯ ವಿಷಯವಾಗಿ ಇನ್ನೂ ಆಜ್ಞೆ ಮಾಡುತ್ತಿದ್ದಾಗಲೇ ಬೆಟ್ಟಗಳ ಕಡೆಯಿಂದ ಮೂವತ್ತುಮಂದಿ ಸವಾರರು ಬರುತ್ತಿದ್ದುದನ್ನು ಕಂಡನು. ಅವರನ್ನು ಕಂಡಕೂಡಲೆ ತನ್ನ ಅಂಗರಕ್ಷಕನು ದ್ರೋಹಮಾಡಿ ತನ್ನನ್ನು ಕಳ್ಳರಕೈಗೆ ಒಪ್ಪಿಸಿದನೆಂಬ ಅಂಶವು ಅವನ ಮನಸ್ಸಿಗೆ ಗೊತ್ತಾಯಿತು. ಆದುದರಿಂದ ತಟ್ಟನೆ ತನ್ನ ಕುದುರೆಯನ್ನು ಹತ್ತಿಕೊಂಡು ಅವಗವರ ಕುದುರೆಗಳನ್ನು ಹತ್ತಿಕೊಳ್ಳುವಂತೆ ತನ್ನವರಿಗೆ ಅಪ್ಪಣೆ ಮಾಡಿದನು. ಮೂಖರಾಬ್‌ಖಾನನ ಮುಂಜಾಗರೂಕತೆಯಿಂದ ಅವರೆಲ್ಲಾ ಮುಂದೆಯೇ ಸಿದ್ಧರಾಗಿದ್ದಕಾರಣ, ಸ್ವಲ್ಪವೂ ತಡೆಮಾಡದೆ ಕಣ್ಮುಚ್ಚಿ ತೆಗೆಯುವುದರೊಳಗಾಗಿ ಕುದುರೆಗಳನ್ನು ಹತ್ತಿ, ತಮ್ಮನ್ನು ಬೆನ್ನಟ್ಟಿ ಬರುವ ಕಳ್ಳರು ಇನ್ನೂ ದೂರದಲ್ಲಿರುವಾಗಲೇ ಅವರೆಲ್ಲರೂ ಹೊರಟುಬಿಟ್ಟರು.

ಮೂಖರಾಬ್‌ಖಾನನು ಆ ಕಾಲದಲ್ಲಿ ಬಾಬರನ ರಾಜಧಾನಿಯಾದ ಕಾಬುಲ್ ಪಟ್ಟಣಕ್ಕೆ ಹೋಗಬೇಕೆಂದೆಣಿಸಿ ದಕ್ಷಿಣಾಭಿಮುಖವಾಗಿ ಹೊರಟನು. ಅವನೂ ಅವನ ಐವರು ಪರಿಜನರೂ, ಶತ್ರುಗಳು ಬರುವುದಕ್ಕೆ ಮುಂಚೆಯೇ ವಿಶೇಷ ಶ್ರಮವಿಲ್ಲದೆ ಕಣಿವೆಹಾದಿಯ ಬಳಿ ಹೋಗಿ ಸೇರಿದರು. ಅಲ್ಲಿಂದತ್ತ ಮುಂದೋಡುವವರೂ ಹಿಂದಟ್ಟುವವರೂ ಸಹ ಕಣಿವೆಯ ಕಲ್ಲುದಾರಿಯಲ್ಲಿ ನಾಗಾಲೋಟದಲ್ಲಿ ಹೋಗುತ್ತಿದ್ದರು. ಕಳ್ಳರ ಯಜಮಾನನು ತನ್ನ ಕರಿಯ ಕುದುರೆಯಮೇಲೆ ಹತ್ತಿಕೊಂಡು ತನ್ನ ಪರಿಜನರಿಗಿಂತ ಮುಂಚೆ ಬಹುವೇಗವಾಗಿ ಹೋಗುತ್ತ ಮುಂದಿನವರಿಗೂ ಹಿಂದಿನವರಿಗೂ ನಡುವೆ ಸಂದುಸೇರಿಸುವ ಕೊಂಡಿಯಂತೆ ಕಾಣಿಸುತ್ತಿದ್ದನು. ಆ ಜನಗಳ ಓಟವು ಪ್ರಾಣಾಂತಕವಾದ ಓಟವಾಗಿತ್ತು. ಆ ಕಾಲದಲ್ಲಿ

ಮೂಖರಾಬನ ಸವಾರರಲ್ಲಿ ಒಬ್ಬನ ಕುದುರೆಯು ಒಂದು ಕಲ್ಲಮೇಲೆ ಕಾಲಿಟ್ಟು ಜಾರಿ ಸವಾರನನ್ನು ಎತ್ತಿಹಾಕಿಕೊಂಡು ದೊಪ್ಪನೆ ಬಿದ್ದುಬಿಟ್ಟಿತು. ಸವಾರನು ಏಳುವುದರೊಳಗಾಗಿ ಹಿಂದಟ್ಟಿ ಬರುತ್ತಿದ್ದವರು ಬಿದ್ದವನ ಆಯುಧಗಳನ್ನು ತೆಗೆದುಕೊಳ್ಳುವುದಕ್ಕಾಗಿ ಸುದಾ ನಿಲ್ಲದೆ, ಅವನ ಮೇಲೂ ಅವನ ಕುದುರೆಯ ಮೇಲೂ ತಮ್ಮ ಕುದುರೆಗಳನ್ನು ಓಡಿಸುತ್ತ, ಮುಂದೆ ಕೆಂಪು ಬಟ್ಟೆಯನ್ನೂ ಪರ್ಷಿಯಾ ದೇಶದ ಅಂಗರಕ್ಷೆಯನ್ನೂ ತೊಟ್ಟು ವೇಗವಾಗಿ ಹೋಗುತ್ತಿದ್ದ ರಾಜಕುಮಾರನನ್ನು ಹಿಡಿಯಬೇಕೆಂದು ನಾಗಾಲೋಟದಲ್ಲಿಯೇ ಹೋಗುತ್ತಿದ್ದರು.

ಈ ಮೇರೆಗೆ ಆ ಎರಡು ಪಂಗಡದವರೂ ಕಣಿವೆಯ ಹಾದಿಯನ್ನು ಕಳೆದು ಮುಂದೆ ತೆಂಕಣದಲ್ಲಿದ್ದ ಬಯಲಿಗೆ ಬಂದು ಸೇರಿದರು. ಅಲ್ಲಿಗೆ ಬಂದೊಡನೆ ಮೂಖರಾಬನು ತನ್ನ ನಾಲ್ವರು ಪರಿಜನರಿಗೂ ತನ್ನನ್ನು ಬಿಟ್ಟುಹೋಗುವಂತೆ ಹೇಳಿದನು. ಆ ಕಾಲದಲ್ಲಿ ಅವನು ತನ್ನ ಪ್ರಾಣವನ್ನೂ ಅವರ ಪ್ರಾಣವನ್ನೂ ಉಳಿಸಿಕೊಳ್ಳಲು ಇದಕ್ಕಿಂತಲೂ ಒಳ್ಳೆಯುಪಾಯವಿರಲಿಲ್ಲ. ಖಾನನು ದಿವ್ಯವಾದ ಅರಬ್ಬೀ ಠಾಕಣವನ್ನು ಹತ್ತಿದ್ದನು. ಆದರೂ ನಾಡುತಟ್ಟುಗಳನ್ನು ಹತ್ತಿದ್ದ ತನ್ನ ಜನದೊಡನೆ ಹೋಗುವವರೆಗೂ ಅದರ ವೇಗವನ್ನು ತಡೆದುಕೊಂಡಿರಬೇಕಾಗಿತ್ತು. ಇದೂ ಅಲ್ಲದೆ ತನ್ನಲ್ಲಿದ್ದ ರತ್ನಕ್ಕಾಗಿಯೇ ಕಳ್ಳರು ತನ್ನನ್ನು ಬಿಡದೆ ಬೆನ್ನಟ್ಟಿಬರುತ್ತಿದ್ದಾರೆಂಬ ಅಂಶವೂ ಅವನಿಗ ಚೆನ್ನಾಗಿ ತಿಳಿದಿದ್ದಿತು. ಅವನು ಕಣಿವೆಯ ಹಾದಿಯಲ್ಲಿ ತಡೆಬಡೆಯಿಲ್ಲದೆ ಹುಚ್ಚೋಟ ಓಡಿಸುತ್ತಿದ್ದಾಗ ಇದೆಲ್ಲವೂ ಅವನ ಮನಸ್ಸಿನಲ್ಲಿ ಹೊಳೆಯಿತು. ಆದುದರಿಂದಲೇ ಅವರನ್ನು ಬೇರೆ ಹೋಗಹೇಳಿದನು. ಬಳಿಕ ಎಲ್ಲವೂ ಅವನು ಊಹಿಸಿದಂತೆಯೇ ನಡೆಯಿತು. ಅವನ ಸವಾರರು ಅವನನ್ನು ಬಿಟ್ಟು ಬೇರೆ ಹಾದಿಯನ್ನು ಹಿಡಿದಾಗ, ಕಳ್ಳರು, ಅವರ ಗೋಜಿಗೆ ಹೋಗದೆ ಬಿಟ್ಟುಕೊಟ್ಟು, ತಾವೆಲ್ಲರೂ ಒಮ್ಮೊಗವಾಗಿ ಹೊರಟು ತಮ್ಮ ಯಜಮಾನನ ಕರಿಯ ಕುದುರೆಯ ಹಿಂದೆ ಮೂಖರಾಬನ ಹಾದಿಯನ್ನೇ ಹಿಡಿದು ಬೆನ್ನಟ್ಟಿ ಬರುತ್ತಿದ್ದರು.

ಮೂಖರಾಬ್‌ಖಾನನು ತಾನು ಏಕಾಂಗಿಯಾಗಿ ನಿಂತ ಕೂಡಲೆ ಕುದುರೆಯ ಕಡಿವಾಣವನ್ನು ಸಡಿಲಬಿಟ್ಟನು. ಒಡನೆ ಆ ಕುದುರೆಯು ಕಡಿವಾಣದ ತಡೆ ತಪ್ಪಿತಲ್ಲಾ ಎಂದು ಹಿಗ್ಗುತ್ತ ತನ್ನ ಹೆಡತಲೆಯ ಕೂದಲನ್ನು ಕುಣಿಸುತ್ತ ಮೃದುವಾದ ಹುಲ್ಲುಹಸಲೆಯಮೇಲೆ ಮಿಂಚಿನ ವೇಗದಲ್ಲಿ ಹಾರಿ ಹೋಗಲಾರಂಭಿಸಿತು. ಈ ಮೇರೆ ಹಠಾತ್ತಾಗಿ ವೇಗವು ಹೆಚ್ಚಿದುದರಿಂದ ಆತನಿಗೂ ಕಳ್ಳರಿಗೂ ನಡುವೆ ಬಹಳ ಅಂತರವುಂಟಾಯಿತು. ಕಳ್ಳರ ಯಜಮಾನನ ಕುದುರೆಯೂ ಕೂಡ ಸ್ವಾಮಿಯ ಇಷ್ಟಪ್ರಕಾರ ತನ್ನ ವೇಗವನ್ನು ಇಮ್ಮಡಿಮಾಡಿ ತನ್ನ ಸಂಗಡ ಬರುತ್ತಿದ್ದ ಸಣ್ಣ ಕುದುರೆಗಳನೆಲ್ಲ ಕ್ಷಣಮಾತ್ರದಲ್ಲಿ ಹಿಂದೆಬಿಟ್ಟು ಮಹಾವೇಗದಿಂದ ಮುಂದುವರಿಯುತ್ತಿದ್ದಿತು. ಹೀಗಾಗಿ ಎರಡು ಮೂರು ಘಂಟೆ ಕಾಲಗಳೊಳಗಾಗಿ ಆ ಸನ್ನಿವೇಶವೆಲ್ಲ ತೀರ ಬದಲಾಯಿಸಿ ಹೋಯಿತು, ಆ ವೇಳೆಗೆ ಸೂರ್ಯನು ಮುಳುಗುವ

ಹೊತ್ತಾಯಿತು. ಆಗ ಉತ್ತರದಿಕ್ಕಿನಲ್ಲಿ ಬಲುದೂರದಲ್ಲಿ ಬಳಲಿ ಬೇಸತ್ತು ನಿರಾಶೆಯಾಗಿ ಕಾಲೆಳೆದುಕೊಂಡು ಬರುತ್ತ ಮಂಜುಮಂಜಾಗಿ ಕಾಣಿಸುತ್ತಿದ್ದ ಒಬ್ಬರಿಬ್ಬರು ವಿನಾ ಉಳಿದ ಕಳ್ಳರೆಲ್ಲಾ ಹಿಂದೆಬಿದ್ದುಹೋದರು. ಆ ಬಳಿಕ ರಾಜಕುಮಾರನ ಕುದುರೆಗೂ ಕಳ್ಳನ ಕುದುರೆಗೂ ವೇಗದಲ್ಲಿ ಮೀರಿದುದು ಯಾವುದು ದಣಿವುತಾಳುವುದರಲ್ಲಿ ಮೇಲುಗೈಯಾದುದುಯಾವುದು? ಎಂಬದಾಗಿ ಹೆಣಗಾಟವು ಬಿತ್ತು.

ಮಧ್ಯೆ ಅಕಸ್ಮಾತ್ತಾಗಿ ಯಾವ ವಿಪತ್ತೂ ಬಾರದಿದ್ದಲ್ಲಿ ಠಾಕಣವೇ ಗೆಲ್ಲಬಹುದಾಗಿ ತೋರಿತು. ಕರಿಯ ಕುದುರೆಯು ದೊಡ್ಡರಾಸಾಗಿ ಬಲವಾಗಿದ್ದರೂ ಕೂಡ ತನ್ನ ಅಂಗರಕ್ಷೆಯ ಹೊರೆಯಿಂದಲೂ ಸವಾರನ ಹೊರೆಯಿಂದಲೂ ಕುಸಿದು ಬಳಲಿದಂತೆ ಕಾಣಿಸಿತು. ಈ ಅನನುಕೂಲತಯನ್ನು ತಪ್ಪಿಸುವುದಕ್ಕಾಗಿ ಕಳ್ಳನು ತನ್ನ ನಿಲವಂಗಿಯನ್ನು ಮಾತ್ರವೇ ಅಲ್ಲದೆ ತನ್ನ ಎದೆಪಟ್ಟಿಯನ್ನೂ ತಲೆಪಟ್ಟಿಯನ್ನೂ ಸಹ ಅಲಕ್ಷ್ಯವಾಗಿ ತೆಗೆದು ಬಿಸುಟು, ತನಗೂ ಶತ್ರುವಿಗೂ ಒಂದುವೇಳೆ ದ್ವಂದ್ವಯುದ್ಧದಲ್ಲಿ ಕೈಕೈ ಸೇರಿದರೂಕೂಡ ಇವುಗಳ ಸಹಾಯವಿಲ್ಲದೆಯೇ ಮೂಖರಾಬನಂತಹ ಬಡಕಲು ಹುಡುಗನನ್ನು ಸುಲಭವಾಗಿ ಹಿಡಿದುಬಿಡಬಹುದೆಂದು ನಂಬಿಕೊಂಡಿದ್ದನು. ಹೀಗೆ ಮಾಡಿದರೂಕೂಡ ತನ್ನ ಕುದುರೆಯು ಇನ್ನೂ ಸ್ವಲ್ಪವಾದರೂ ಶತ್ರುವಿನ ಕುದುರೆಯ ಸಮೀಪಕ್ಕೆ ಸೇರದೆ ಹೋದುದನ್ನು ನೋಡಿ ಶತ್ರುವು ತನ್ನ ಕೈಮೀರಿ ತಪ್ಪಿಸಿಕೊಂಡು ಹೋಗಬಹುದೆಂಬದಾಗಿ ಎಣಿಸಿದನು.

ಈ ಸಮಯಕ್ಕೆ ಸರಿಯಾಗಿ ಮೂಖರಾಬ್‌ಖಾನನು ಹಿಂತಿರುಗಿ ನೋಡಿ ತನ್ನ ಹಿಂದೆ ಒಬ್ಬನೇ ಒಬ್ಬನು ಬೆಂಬತ್ತಿ ಬರುತ್ತಿದ್ದುದನ್ನು ಕಂಡನು. ಕೂಡಲೆ ಅವನ ಜಾತಿ ಸ್ವಭಾವವಾದ ಯುದ್ಧಾಸಕ್ತಿಯೂ, ಅಷ್ಟೊಂದು ದೂರ ಮಹಾ ವೇಗದಿಂದ ಓಡಬೇಕಾಗಿಬಂದ ಅವಮಾನದಿಂದುಂಟಾದ ಕೋಪವೂ ತಲೆಯೆತ್ತಿ, ಶತ್ರುವನ್ನು ಎದುರಿಸಿ ಮೇಲೆ ಬೀಳುವುದಾಗಿ ಸಂಕಲ್ಪಮಾಡಿಕೊಂಡು, ಕುದುರೆಯ ವೇಗವನ್ನು ಕಡಿಮೆಮಾಡಿ, ಬಿಲ್ಲನ್ನು ಕೈಗೆ ತೆಗೆದುಕೊಂಡು, ಬತ್ತಳಿಕೆಯಿಂದ ಒಂದು ಅಂಬನ್ನು ಸೆಳೆದು ಹೂಡಿ, ತಟ್ಟನೆ ಕುದುರೆಯನ್ನು ತಿರುಗಿಸಿ ಶತ್ರುವಿಗೆ ಎದುರಾಗಿ ನಿಂತನು. ಮಹಾವೇಗವಾಗಿ ಬರುತ್ತಿದ್ದ ಆಪ್ಘಾನನು ಮೂಖರಾಬನ ಕೈಯಲ್ಲಿದ್ದ ಧನುರ್ಬಾಣಗಳನ್ನು ನೋಡಿ ತಾನು ತನ್ನ ಅಂಗರಕ್ಷೆಗಳನ್ನು ಅನ್ಯಾಯವಾಗಿ ಎಸೆದುಬಿಟ್ಟೆನಲ್ಲಾ ಎಂದು ಚಿಂತಿಸಿ, ತನ್ನ ಮೇಲೆಬರುತ್ತಿದ್ದ ಬಾಣಕ್ಕೆ ಗುರಿಯಾಗಬಾರದೆಂದೆಣಿಸಿ ತನ್ನ ಕುದುರೆಯ ಕೊರಳಿಗೆ ಹತ್ತಿದಹಾಗೆ ತಬ್ಬಿಕೊಂಡು ಮಲಗಿದನು. ಬಾಣವು ಗಾಳಿಯಲ್ಲಿ ಭಾಂಕರಿಸುತ್ತ ಬಂದಿತು. ಅವನ ಮೇಲೆ ಬೀಳದೆ ಗುರಿತಪ್ಪಿ ಕುದುರೆಯ ಭುಜದಬಳಿ ನಾಟಿಕೊಂಡಿತು. ಕೂಡಲೆ ಕುದುರೆಯು ಹಿಂಗಾಲುಗಳ ಮೇಲೆ ಎದ್ದು ನಿಂತಿತು. ಅದನ್ನು ನೋಡುತ್ತಿದ್ದ ಮೂಖರಾಬ್‌ಖಾನನಿಗೆ ಆಶ್ಚರ್ಯವೂ ಆನಂದವೂ ಹುಟ್ಟುವಂತೆ ಆ ಕಳ್ಳಸವಾರನು ಕುದು

ರೆಯಿಂದ ಧೊಪ್ಪನೆ ನೆಲಕ್ಕೆ ಬಿದ್ದು, ಆ ಬಿದ್ದಪೆಟ್ಟಿಗೆ ಮೂರ್ಛೆ ಹೋದವನಂತೆ ನಿಶ್ಚೇಷ್ಟನಾಗಿ ಬಿದ್ದುಕೊಂಡನು.

ಅದನ್ನು ಕಂಡು ಮೊಗಲನು ತನ್ನ ಶತ್ರುವಿಗೆ ಏನಾಯಿತೋ ನೋಡಬೇಕೆಂದೂ, ಆವಶ್ಯಕಬಿದ್ದಲ್ಲಿ ಅವನನ್ನು ಕೊಂದು ಬಿಡಬೇಕೆಂದೂ ಎಣಿಸಿ, ತನ್ನ ಕುದುರೆಯಿಂದ ಮೆಲ್ಲಗೆ ಕೆಳಕ್ಕೆ ಧುಮಿಕಿದನು. ಕಳ್ಳನು ಬಿದ್ದುದೂ ಮೂರ್ಛೆಹೋದಂತೆ ಇದ್ದುದೂ ಬರಿಯ ನಟನೆ. ಯಾವಾಗ ಕುದುರೆಗೆ ಪೆಟ್ಟುಬಿದ್ದಿತೋ ಆಗಲೇ ಆ ಕಳ್ಳನು ತಾನು ಬಲು ಚಟುವಟಿಕೆಯುಳ್ಳವನಾಗಿ ಕುದುರೆಯ ಮೇಲೆ ಹತ್ತಿ, ಬಿಲ್ಲುಬಾಣಗಳನ್ನು ಧರಿಸಿದ್ದ ತನ್ನ ಶತ್ರುವಿನ ಕೈಗೆ ಸಿಕ್ಕು ಬಿದ್ದೆನೆಂದು ಗೊತ್ತು ಮಾಡಿಕೊಂಡನು. ಹಾಗೆ ಗೊತ್ತು ಮಾಡಿಕೊಂಡ ಬಳಿಕ ತನ್ನ ಶತ್ರುವನ್ನು ಸಮೀಪಕ್ಕ ಬರಮಾಡಿಕೊಂಡು ಹಿಡಿಯುವ ರಕ್ಷಣೋಪಾಯವು ಒಂದು ಮಾತ್ರವೇ ಉಳಿಯಿತು. ಅದನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಅವನು ನೆಲದಮೇಲೆ ಬಿದ್ದು ಸತ್ತವನಂತೆ ನಟಿಸಿದನು. ಆದ ಪ್ರಯುಕ್ತ ಮೊಗಲ ತರುಣನು ಸಮೀಪಕ್ಕೆ ಬಂದು ಬಗ್ಗಿನೋಡುತ್ತಿದ್ದಾಗ ಸತ್ತಹಾಗೆ ಬಿದ್ದಿದ್ದ ಕಳ್ಳನು ತನ್ನ ಬಲಗೈಯನ್ನು ಗಕ್ಕನೆ ನೀಡಿ ಅವನ ನಡುಕಟ್ಟಿನಲ್ಲಿ ರತ್ನವಿದ್ದ ಭಾಗವನ್ನು ಗಟ್ಟಿಯಾಗಿ ಹಿಡಿದುಕೊಂಡನು.

ಈಗ ಎಲ್ಲವೂ ತಾರುಮಾರಾಯಿತು. ಆ ಲಾಘವವುಳ್ಳ ಮೊಗಲನು ಒಂದು ಮುಹೂರ್ತಕಾಲ ಚೋರನ ಕೈಯಲ್ಲಿ ಒಂದು ಮಗು ಸಿಕ್ಕಿದಂತೆ ಸಿಕ್ಕುಬಿದ್ದು ನಾಯಿಯ ಕೈಗೆ ಸಿಕ್ಕಿದ ಇಲಿಯಂತೆ ಆಗಿಹೋದನು. ಆದರೂ ಅವನು ಚಿತ್ತಸ್ಥೈರ್ಯವನ್ನು ಕಳೆದುಕೊಳ್ಳದೆ ತನ್ನ ಕಠಾರಿಯನ್ನು ಹಿರಿದುಕೊಂಡು ಕಳ್ಳನ ಮೈಯಲ್ಲಿ ಮರಳಿಮರಳಿ ತಿವಿದನು. ಕೂಡಲೆ ಚೋರನುಕೂಡ ತನ್ನ ನಡುಕಟ್ಟಿಗೆ ನೇತುಹಾಕಿದ್ದ ಕತ್ತಿಯನ್ನು ಹಿಡಿದುಕೊಳ್ಳುವುದಕ್ಕಾಗಿ ಕೈಬಿಡಬೇಕಾಯಿತು. ಅದನ್ನು ನೋಡಿ ಮುಖರಾಬ್‌ಖಾನನು ತನ್ನ ಕತ್ತಿಯನ್ನು ಹಿಡಿದುಕೊಂಡನು. ಬಳಿಕ ಆ ಸಂಜೆಮಬ್ಬಿನಲ್ಲಿ ಅವರಿಬ್ಬರಿಗೂ ದ್ವಂದ್ವಯುದ್ಧವು ಪ್ರಾರಂಭವಾಯಿತು. ಮುಖರಾಬಿನ ದುರದೃಷ್ಟಕ್ಕೆ ಸರಿಯಾಗಿ ತನ್ನ ಶತ್ರುವು ಘಾಯಗಳ ರಕ್ತಸ್ರಾವದಿಂದ ಬಳಲಿ ಬೀಳುವ ವರೆಗೂ ಹೆಣಗಾಡುತ್ತಿರಲವಕಾಶವಿರಲಿಲ್ಲ. ಸ್ವಲ್ಪ ಕಾಲ ವಿಳಂಬವಾದಲ್ಲಿ ಶತ್ರುವಿನ ಪರಿವಾರದವರು ಯಾರಾದರೂ ಬಂದುಬಿಡಬಹುದು. ಬಳಿಕ ಮುಖರಾಬ್‌ಖಾನನಿಗೆ ತಪ್ಪಿಸಿಕೊಂಡುಹೋಗುವ ಆಶೆಯೆಲ್ಲಿ? ಆದಕಾರಣ ಅವನು ಶತ್ರುವಿನ ಬೋಳುದಲೆಯಮೇಲೂ ಬರಿಯೆದೆಯಮೇಲೂ ಗುರಿಯಿಟ್ಟು ನಿಲಗಾಲ ವಿಲ್ಲದೆ ಕತ್ತಿಯಿಂದ ಹೊಡೆಯುತ್ತಲೂ ಇರಿಯುತ್ತಲೂ ಇದ್ದನು.

ಆ ಹೊಡೆತವನ್ನು ತಾಳಲಾರದೆ ಚೋರನು ಕಲಹವನ್ನು ಬೇಗನೆ ಮುಗಿಸಿಬಿಡಬೇಕೆಂದು ಬಗೆದು ಮುಖರಾಬಿನ ತಲೆಗೆ ಗುರಿಕಟ್ಟಿ ಬಲವಾಗಿ ಒಂದು ಪೆಟ್ಟು ಹೊಡೆದನು. ಮೊಗಲನು ತನ್ನ ಕತ್ತಿಯನ್ನೊಡ್ಡಿ ಆಪೆಟ್ಟನ್ನು ತಪ್ಪಿಸಿಕೊಂಡನು.

ಆ ಘಾತದಲ್ಲಿ ಚೋರನ ಕತ್ತಿಯು ರಾಜಕುಮಾರನ ಉತ್ತಮವಾದ ಕತ್ತಿಗೆ ತಗುಲಿ ಹಿಡಿಯವರೆಗೆ ಮುರಿದು ಚೂರುಚೂರಾಗಿ ಒಡೆದುಹೋಯಿತು. ಹಾಗೆ ಕತ್ತಿಯು ಮುರಿದುಹೋದಕೂಡಲೆ ಚೋರನು ಹಿಡಿಯನ್ನು ಬಿಸುಟು ತನ್ನ ಗಂಡುಗೊಡಲಿಯನ್ನು ತೆಗೆದುಕೊಂಡು ಮತ್ತೊಂದುವೇಳೆ ರಾಜಕುಮಾರನ ಮೇಲೆಕಾಣಿಸಿಕೊಂಡು ತನ್ನ ಯಾವಚ್ಛಕ್ತಿಯಿಂದಲೂ ಹೊಡೆದನು. ಅಷ್ಟು ಪ್ರಬಲವಾದಪೆಟ್ಟನ್ನು ಡಮಾಸ್ಕಸ್ಸಿನ ಕತ್ತಿಯುಲಗುತಾನೆ ತಡೆದೀತೆ ? ಆದಪ್ರಯುಕ್ತ ಮೂಖರಾಬ್‌ಖಾನನು ಅದಕ್ಕೆ ತನ್ನ ಕತ್ತಿಯನ್ನೊಡ್ಡದೆ ತಟ್ಟನೆ ಒಂದುಕಡೆಗೆ ಓರೆಯಾಗಿ ತಪ್ಪಿಸಿಕೊಂಡು, ಚೋರನು ಪುನಃ ಕೊಡಲಿಯನ್ನು ಎತ್ತುವುದಕ್ಕೆ ಮುಂಚಿತವಾಗಿ ಮುಂದೆ ಹಾರಿಬಂದು, ಶತ್ರುವಿನ ಎದೆಯಲ್ಲಿ ತನ್ನ ಕತ್ತಿಯನ್ನು ನಾಟಿ ಹಿಡಿಯವರೆಗೆ ದೂರಿಸಿಬಿಟ್ಟನು. ಒಡನೆ ಚೋರನು ನಿಶ್ಶಬ್ದವಾಗಿ ಸತ್ತುಬಿದ್ದನು.

ಈ ವೇಳೆಗೆ ಚೆನ್ನಾಗಿ ಕತ್ತಲಾಯಿತು. ಮೂಖರಾಬ್‌ಖಾನನು ಅಂದಿನ ಸಾಹಸ ಕಾರ್ಯಗಳಿಂದ ವಿಶೇಷವಾಗಿ ಬಳಲಿದ್ದನು. ಆದರೂ ಶತ್ರುಗಳು ಏನಾದರೂ ಬರುವರೋ ಎಂದು ತಿಳಿವುದಕ್ಕಾಗಿ ನೆಲದಮೇಲೆ ಕಿವಿಯಿಟ್ಟು ಕೇಳಿನೋಡಿದನು. ಯಾವಸದ್ದೂ ಕೇಳಲಿಲ್ಲ, ಅದರಿಂದ ತನ್ನ ಶತ್ರುಗಳು ದಾರಿ ತಪ್ಪಿಹೋದರೆಂಬುದಾಗಿ ಧೈರ್ಯಮಾಡಿಕೊಂಡು, ಇನ್ನು ಮುಂದೆ ಹೋಗದೆ ರಾತ್ರಿ ತಾನಿದ್ದ ಬಳಿಯಲ್ಲಿಯೇ ತಂಗುವುದಾಗಿ ನಿಶ್ಚಯಮಾಡಿಕೊಂಡನು. ಅನಂತರ ತನ್ನ ಕುದುರೆಯನ್ನು ಕರೆದನು. ಅದು ಸಮೀಪಕ್ಕೆ ಬಂದಿತು. ಅದನ್ನು ಹಿಡಿದುಕೊಂಡು ದಾರಿಗೆ ಪಕ್ಕವಾಗಿದ್ದ ಒಂದು ಕಾಡಿಗೆ ಹೋಗಿ ಅಲ್ಲಿ ಗಾಳಿಗೆ ಮರೆಯಾಗಿ ಒಂದು ದೊಡ್ಡ ಕೋಟೆಗೋಡೆಯ ಪಕ್ಕದಲ್ಲಿ ಜೀನನ್ನು ತಲೆಗಿಟ್ಟು ಮಲಗಿಕೊಂಡನು. ನೆಲದ ಮೇಲೆ ತಲೆಯಿಟ್ಟಕೂಡಲೆ ಅವನಿಗೆ ನಿದ್ದೆ ಬಂದುಬಿಟ್ಟಿತು.

ಮರುದಿನ ಬೆಳಗ್ಗೆ ಸೂರ್ಯನು ಜಾಜ್ವಲ್ಯಮಾನವಾಗಿ ಉದಯಿಸಿದನು. ಆಫ್ಘಾನಿಸ್ಥಾನದಲ್ಲೆಲ್ಲಾ ಅತಿಮನೋಹರವಾದ ಘಾಲ್ಮರ್‌ಕಣಿವೆಯಲ್ಲಿ ಪಕ್ಷಿಗಳೆಲ್ಲವೂ ಕರ್ಣಾನಂದಕರವಾಗಿ ಹಾಡುತ್ತಿದ್ದುವು. ಆ ಕಣಿವೆಯ ನಡುವೆ ಪ್ರವಹಿಸುತ್ತಿದ್ದ ನದಿಯ ಉಭಯತೀರಗಳಲ್ಲಿಯೂ ಹಿಪ್ಪಲಿನೇರಳೆಯೇ ಮೊದಲಾದ ಹಲವು ಫಲವೃಕ್ಷಗಳು ಸಮೃದ್ಧಿವಾಗಿ ಬೆಳೆದಿದ್ದುವು. ಇವುಗಳೆಲ್ಲವೂ ಸಮೀಪದ ಗಿರಿದುರ್ಗದಲ್ಲಿ ವಾಸಮಾಡುತ್ತಿದ್ದ ದೊಸ್ತ್‌ಮಹಮ್ಮದ್‌ ಎಂಬ ಪಾಳೆಯಗಾರನಿಗೆ ಸೇರಿದ್ದುವು. ಆ ಪಾಳೆಯಗಾರನು ಆ ನದಿಯಲ್ಲಿ ದೊಡ್ಡ ದೊಡ್ಡ ಕಂಬಳಿಗಳನ್ನು ಹಾಸಿ ಅವುಗಳ ಮೇಲೆ ಭಾರವಾದ ಕಲ್ಲುಗಳನ್ನು ಹೇರಿ ಅಲ್ಲಿ ಉರುಳಿಬರುತ್ತಿದ್ದ ಚಿನ್ನದ ಅದುರುಗಳನ್ನು ಶೇಖರಿಸಿ ಶೇಖರಿಸಿ ಬಹಳ ಶ್ರೀಮಂತನಾಗಿದ್ದನು. ಆಗ್ಗೆ ವಸಂತಕಾಲವಾದುದರಿಂದ ಎಲ್ಲಾ ವೃಕ್ಷಗಳೂ ಹೂಗಳಿಂದ ತುಂಬಿಕೊಂಡು ಕಣ್ಣಿಗೆ ಸೊಗಸುತ್ತಿದ್ದುವು. ಅದರಲ್ಲಿಯೂ ಆ ಪಾಳೆಯಗಾರನ ತೋಟಗಳ ವೃಕ್ಷಗಳು ಪುಷ್ಪಗುಚ್ಛಗಳಿಂದ ಜಗ್ಗುತ್ತ ಮುಂದೆ ದೊರೆಕುವ ಫಲಸಮೃದ್ಧಿಯನ್ನು ಸೂಚಿಸುತ್ತ ಕಂಗೊಳಿಸುತ್ತಿದ್ದುವು.

ಆ ಕಾಲದಲ್ಲಿ ಆ ವನದ ಒಳಗಡೆಯಲ್ಲಿ ದೊಸ್ತ್‌ಮಹಮ್ಮದನ ಏಕಪುತ್ರಿಯಾದ ಜುಲ್ಯೈಕಾ ಎಂಬ ತರುಣಿಯು ತನ್ನ ಇಷ್ಟದಾಸಿಯರೊಡನೆ ವಿನೋದವಾಗಿ ಸಂಚಾರ ಮಾಡುತ್ತಿದ್ದಳು. ಹಾಗೆ ಹಿಂದಕ್ಕೂ ಮುಂದಕ್ಕೂ ಸುಳಿದಾಡುತ್ತಿರುವಾಗ ಆಕೆಯು ತನ್ನ ದಾಸಿಯರಲ್ಲಿ ಹಿರಿಯಳಾದವಳನ್ನು ನೋಡಿ— ಎಲೌ ದಾಸಿ, ತೋಟದ ಗೋಡೆಯಲ್ಲಿರುವ ಹೊರಬಾಗಿಲನ್ನು ತೆರೆದು ನನಗೆ ಹೊರಗಣ ಪ್ರಪಂಚದ ಸೊಬಗನ್ನು ತೋರಿಸು. ಇಷ್ಟಹೊತ್ತಿನಲ್ಲಿ ಹೊರಗಣ ಕಾಡಿನಲ್ಲಿ ಯಾರುತಾನೆ ಇದ್ದಾರು ? ಇದೂ ಅಲ್ಲದೆ ನನಗೆ ಹುಟ್ಟಿದುದುಮೊದಲು ಈ ಉಪವನದ ಕಾಲುಹಾದಿಯಲ್ಲಿ ಹಿಂದಕ್ಕೂ ಮುಂದಕ್ಕೂ ತಿರುಗಿತಿರುಗಿ ಬೇಸರಿಕೆಯುಂಟಾಗಿದೆ—ಎಂದು ಹೇಳಿದಳು. ಕೊನೆಗೆ ಆ ದಾಸಿಯು ಒಪ್ಪಿಕೊಂಡು—ಯಜಮಾನರಿಗೆ ಈ ವಿಷಯವು ತಿಳಿದರೆ ಬಹಳ ಕೋಪ ಮಾಡಿಕೊಳ್ಳುವರು—ಎಂದು ಸೂಚಿಸಿ ಅದರ ಭಾರಿ ಅಗುಳಿಗಳನ್ನು ಎಳೆದು ಬಾಗಿಲನ್ನು ತೆರೆದಳು. ಕೂಡಲೆ ಜುಲ್ಯೈಕಳು ಮುಂದೆ ಅಡಿಯೆತ್ತಿ ಅದರ ಹಂತದ ಮೇಲೆ ಕಾಲಿಟ್ಟು ಚೆಲುವಿನ ಪುತ್ತಳಿಯೋ ಎಂಬಂತೆ ನಿಂತುಕೊಂಡಳು. ಅಲ್ಲಿ ತನ್ನನ್ನು ಕಾಣುವವರು ಯಾರು ಇಲ್ಲವೆಂಬ ಧೈರ್ಯದಿಂದ ಆ ಕಾಲದಲ್ಲಿ ಮುಖದ ಪರದೆಯನ್ನು ಕೂಡ ತೆಗೆದುಬಿಟ್ಟಿದ್ದಳು. ಉದಯಕಾಲದ ಎಳಗಾಳಿಗಳು ಅವಳ ಮುಖದಮೇಲೆ ಆಡುತ್ತ ಅವಳ ಸುಳಿಗುರುಳುಗಳನ್ನು ಮೆಲ್ಲಮೆಲ್ಲಗೆ ಅಲುಗಾಡಿಸುತ್ತಾ ಇದ್ದುವು. ಅವಳ ಕಣ್ಣುಗಳು ಕಾಫೀರ ಸ್ತ್ರೀಯರ ನೇತ್ರಗಳಂತೆ ನೀಲವರ್ಣವಾಗಿ ಸೊಗಸುತ್ತಿದ್ದುವು. ಅವಳ ದೇಹಕಾಂತಿಯು ಮೇಲುಗಡೆ ಕೊಂಬೆಗಳಲ್ಲಿಯೂ ಕೆಳಗೆ ಹಸುರು ಹುಲ್ಲಿನ ಮೇಲೆಯೂ ತುಂಬಿಕೊಂಡಿದ್ದ ಹೂಗಳ ಎಳಗೆಂಪಿನ ಸೊಬಗನ್ನು ಅಣಕಿಸುತ್ತ ರಂಜಿಸುತ್ತಿದ್ದಿತು.

ಮುಖರಾಬ್‌ಖಾನನು ಆ ವಸಂತಋತುವಿನ ಮನೋಹರವಾದ ಪ್ರಾತಃಕಾಲದಲ್ಲಿ ತನ್ನ ನೆಲದ ಹಾಸಿಗೆಯಿಂದೆದ್ದು ಕಣ್ಣುತೆರೆದು ನೋಡುವ ಸಮಯದಲ್ಲಿ ಇಂಥ ರೂಪರಾಶಿಯು ಅವನ ದೃಷ್ಟಿಗೆ ಗೋಚರವಾಯಿತು. ಇವನನ್ನು ಕಂಡ ಕೂಡಲೆ ಆಕೆಯು ತನ್ನ ಮುಖದ ಪರದೆಯನ್ನು ಎಳೆದುಕೊಂಡಳು. ಅಷ್ಟರಲ್ಲಿಯೇ ಮುಖರಾಬ್‌ಖಾನನು ತನ್ನ ಎದೆಯಮೇಲೆ ಬಲಗೈಯನ್ನಿಟ್ಟು ಮರ್ಯಾದೆಯಿಂದ ತಲೆಬಾಗಿ "ಸಲಾಮ್ ಆಲೇಖುಂ ಎಂದರೆ ತಮಗೆ ಶುಭವಾಗಲಿ" ಎಂದು ಹೇಳಿದನು. ಅದನ್ನು ಕೇಳಿ ಆಕೆಯು ನಡವಳಿಕೆಯ ಪ್ರಕಾರ "ತಮಗೆ ಶುಭವಾಗಲಿ; ತಮಗೆ ಭಗವದನುಗ್ರಹವುಂಟಾಗಲಿ" ಎಂಬದಾಗಿ ಮೆಲ್ಲಗೆ ಹೇಳಿ, ಅಂತಃಪುರದ ಕನ್ನೆಯರಿಗೆ ಸಹಜವಾದ ರೀತಿಯಲ್ಲಿ ನಾಚಿಕೆಪಟ್ಟುಕೊಂಡುತೋಟದೊಳಕ್ಕೆ ಹೊರಟುಹೋದಳು.

ಆಕೆಯು ಕಣ್ಮರೆಯಾದಕೂಡಲೆ ಮುಖರಾಬ್ ಖಾನನ ಭಾಗಕ್ಕೆ ಅಂದಿನ ಸೂರ್ಯನ ಬೆಳಕೂ ಮಂಕಾಯಿತು, ಪಕ್ಷಿಗಳ ಕರ್ಣಾನಂದಕರವಾದ ಹಾಡು ಕರ್ಣ

ಕಠೋರವಾಯಿತು. ಬಲುಮಾತಿನಿಂದೇನು ? ಆ ಬೆಳಿಗ್ಗೆ ಎರಡು ಮೂರು ನಿಮಿಷಕಾಲ ಕಂಡ ಆ ತರುಣಿಯಲ್ಲಿ ಅವನಿಗೆ ಪ್ರೀತಿಯುಂಟಾಗಿಬಿಟ್ಟಿತು. "ಅಯ್ಯೋ, ಮನೆ ಮಠವಿಲ್ಲದ ದಾರಿಹೋಕನಾದ ನಾನೆಲ್ಲಿ ? ಆ ಧನಿಕನಾದ ಫಾಲ್ಮಕ್ ಪ್ರಭುವಿನ ಮಗಳೆಲ್ಲಿ ? ನಾನು ಅವಳನ್ನು ಮದುವೆಯಾಗವುದೆಂದರೇನು" ಎಂದು ಮೊದಲಾಗಿ ಅವನಿಗೆ ಚಿಂತೆಯುಂಟಾಯಿತು. ಹಾಗೆ ಚಿಂತಿಸುತ್ತಿರುವಾಗ ಹಜಾರತ್ ರತ್ನವು ಜ್ಞಾಪಕಕ್ಕೆ ಬಂದಿತು. ಕೂಡಲೆ ತನ್ನ ನಡುಕಟ್ಟನ್ನು ಮುಟ್ಟಿನೋಡಿದನು. ಅಲ್ಲಿ ರತ್ನವು ಭದ್ರವಾಗಿದ್ದಿತು. ಅಲ್ಲಿಂದ ಮುಂದೆ ಅವನಿಗೆ ಪ್ರತ್ಯಾಶೆಯುಂಟಾಯಿತು. ಆ ಅನರ್ಘವಾದ ರತ್ನವು ಅನೇಕ ಕಾಲದಿಂದ ಅವರ ವಂಶಪಾರಂಪರ್ಯವಾಗಿ ಬಂದಿದ್ದಿತು. ಒಂದಾನೊಂದು ಕಾಲದಲ್ಲಿ ಪ್ರಬಲವಾದ ಒಂದು ಕಷ್ಟ ಸಂಭವಿಸಿ ಆ ವಂಶವೇ ನಷ್ಟವಾಗುವ ಸಂದರ್ಭ ಬರುವುದೆಂದೂ ಆ ಕಾಲದಲ್ಲಿ ಅದನ್ನು ಉಪಯೋಗಿಸಿಕೊಳ್ಳಬೇಕೆಂದೂ ಕರ್ಣಪರಂಪರೆಯಿಂದ ಕೇಳಿ ಆ ಮನೆತನದವರು ಅದನ್ನು ಬಹುಕಾಲದಿಂದ ಜಾಗರೂಕತೆಯಿಂದ ರಕ್ಷಿಸಿಕೊಂಡು ಬಂದಿದ್ದರು. ಇನ್ನೂರು ವರ್ಷಗಳ ಹಿಂದೆ ಒಬ್ಬ ಸತ್ಯವಾದಿಯಾದ ಜೋಯಿಸನು "ಎಂದು ಹಜಾರತ್ತಿನ ವನಗಳೆಲ್ಲಾ ಸುಟ್ಟುಹೋಗಿ ಅದರ ಸಂಪತ್ತಿನಲ್ಲೆಲ್ಲಾ ಒಂದು ಸಣ್ಣ ಶಾಖೆಮಾತ್ರ ಉಳಿದುಕೊಳ್ಳುವುದೋ ಅಂದು ಹಜಾರತ್ತಿನ ರತ್ನವು ಆ ವಂಶಕ್ಕೆ ತಿಲಕಪ್ರಾಯನಾದ ಒಬ್ಬನಲ್ಲಿ ನಿಂತು ಸೂರ್ಯನಂತೆ ಪ್ರಕಾಶಮಾನವಾಗಿ ಹಜಾರತ್‌ವನದ ಸೌಂದರ್ಯವನ್ನು ಹತ್ತುಪಾಲು ವೃದ್ಧಿಗೊಳಿಸುವುದು"— ಎಂದು ಬರೆದಿಟ್ಟಿದ್ದನು.

ಈ ಸಂಗತಿಯನ್ನು ತಿಳಿದಿದ್ದುದರಿಂದಲೇ ಆ ವಂಶೀಯರು ಆ ರತ್ನವನ್ನು ಎಂಥಾ ಆಪತ್ತಿನಲ್ಲಿಯೂ ಉಪಯೋಗಿಸದೆ ರಕ್ಷಿಸಿಕೊಂಡು ಬಂದಿದ್ದರು. ಈಗ ಅಂಥಾ ವಿಪತ್ಕಾಲವು ಒದಗಿಬಂದುದರಿಂದ, ಮೂಖರಾಬ್‌ಖಾನನು ತಾನು ಅದನ್ನು ಉಪಯೋಗಿಸಿ ತನ್ನ ಮನೆತನದ ಸಂಪತ್ತನ್ನು ಜೀರ್ಣೋದ್ಧಾರ ಮಾಡುವುದು ನ್ಯಾಯವೆಂದು ಭಾವಿಸಿ, ಒಡನೆ ಕುದುರೆಯನ್ನು ಹತ್ತಿ ನಿರ್ಭಯವಾಗಿ ಕೋಟೆಯ ಬಾಗಿಲಬಳಿಗೆ ಹೋದನು. ಫಾಲ್ಮಕ್‌ಪ್ರಭುವು ಹಜಾರತ್ತಿನವರ ಪೂರ್ವ ಸ್ನೇಹಿತನಾಗಿದ್ದ ಪ್ರಯುಕ್ತ ಈತನನ್ನು ಬರಮಾಡಿಕೊಂಡು ಈತನ ಕಷ್ಟಗಳನ್ನು ಕೇಳಿ ಬಹಳ ಅನುತಾಪಪಟ್ಟನು. ಅಂಥ ರತ್ನವನ್ನು ಪಡೆದಿದ್ದ ಪ್ರಯುಕ್ತ ಮೂಖರಾಬನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವ ವಿಷಯದಲ್ಲಿಯೂ ಆತನು ಅಸಮಾಧಾನವುಳ್ಳವನಾಗಿರಲಿಲ್ಲ. ಆದುದರಿಂದ ವೃಥಾ ಕಾಲಹರಣ ಮಾಡದೆ ಶೀಘ್ರದಲ್ಲಿಯೇ ವಿವಾಹ ಮಂಗಳವನ್ನು ನೆರವೇರಿಸಿದರು. ಆ ಕಾಲದಲ್ಲಿ ಹಿಂದೂಸ್ಥಾನಕ್ಕೆ ಮುತ್ತಿಗೆಹಾಕುವುದಕ್ಕಾಗಿ ಬಾಬರನು ದೊಡ್ಡ ಸೈನ್ಯವನ್ನು ಸೇರಿಸುತ್ತಿದ್ದನು. ಆ ಸೈನ್ಯಕ್ಕೆ ಸೇರಬೇಕೆಂದು ಮೂಖರಾಬ್‌ಖಾನನು ತಹತಹ ಪಡುತ್ತಿದ್ದನು. ಆದಕಾರಣ ಅವನು ತನ್ನ ರತ್ನವನ್ನು ತನ್ನ ಮಾವನಿಗೆ 5 ಲಕ್ಷ

ರೂಪಾಯಿಗಳಿಗೆ ಮಾರಿ, ಆ ಹಣದಿಂದ ಸಾವಿರ ಸವಾರರುಳ್ಳ ಒಂದು ಸೇನೆಯನ್ನು ಕಟ್ಟಿ ತಾನೇ ಅದಕ್ಕೆ ಯಜಮಾನನಾಗಿ ನಿಂತು, ಬಾಬರನ ಸೇನೆಯನ್ನು ಸೇರಿ, ಪಾಣಿಪಟ್ ಮತ್ತು ಸಿಕ್ರಿಯುದ್ಧಗಳಲ್ಲಿ ಬಹು ಪರಾಕ್ರಮದಿಂದ ಯುದ್ಧ ಮಾಡಿದನು.

ಅನಂತರ ಇವನು ಹಿಂದೂದೇಶದಲ್ಲಿ ತನಗೆ ಪ್ರಾಪ್ತವಾದ ವಿಜಯದಿಂದ ಲಭಿಸಿದ ಯಶಸ್ಸಿನಿಂದಲೂ ಸಂಪತ್ತಿನಿಂದಲೂ ಅತ್ಯುನ್ನತನಾಗಿ, ತನ್ನ ದೇಶಕ್ಕೆ ಮರಳಿ ಹೋಗಿ ಅಲ್ಲಿ ತನ್ನ ಅಣ್ಣನನ್ನು ಸಂಹರಿಸಿದ್ದ ನೆರೆಹೊರೆಯ ಪಾಳೆಯಗಾರರ ಕೊಬ್ಬನ್ನು ಮುರಿದು ಅವರ ಸಂಸ್ಥಾನಗಳನ್ನೆಲ್ಲಾ ತನ್ನ ಸಂಸ್ಥಾನಕ್ಕೆ ಸೇರಿಸಿಕೊಂಡು, ಅನುರಕ್ತವಾಗಿಯೂ ರೂಪಲಾವಣ್ಯಶೋಭಿತವಾಗಿಯೂ ಇದ್ದ ಕನ್ಯಾರತ್ನದ ಲಾಭದಿಂದ ಸಂತುಷ್ಟನಾಗಿ, ತನ್ನ ಪೂರ್ವಿಕರಿಗಿಂತಲೂ ಅಧಿಕವಾದ ವಿಭವದಿಂದ ರಾಜ್ಯವಾಳಿಕೊಂಡು ಸುಖವಾಗಿದ್ದನು.

---

## ಕಮಲಾವತೀ ಕಲ್ಯಾಣ.

ಚಂಬಲ್ ನದೀತೀರದಲ್ಲಿ ನಹರಘಡವೆಂಬ ಒಂದು ಕೋಟೆಯಿತ್ತು. ಆ ನದಿಯು ಆ ಕೋಟೆಯ ಗೋಡೆಯ ಅರ್ಧಭಾಗವನ್ನು ಸುತ್ತಿಕೊಂಡು ಅರ್ಧಚಂದ್ರಾಕೃತಿಯಾಗಿ ಬಾಗಿ ಹರಿದುಹೋಗುತ್ತಿತ್ತು. ಆ ಕೋಟೆಯೊಳಗಡೆ ಮತ್ತೊಂದು ಕೋಟೆಯ ನಡುವೆ ಅರಮನೆಯನ್ನು ಕಟ್ಟಿದ್ದರು. ಅದರ ಉಪ್ಪರಿಗೆಗಳು ಹೊಳೆಯ ಮೇಲೆ ಅತ್ಯುನ್ನತವಾಗಿ ಕಾಣಿಸುತ್ತಿದ್ದುವು. ಎರಡನೆಯ ಕೋಟೆಯ ಒಳಭಾಗದಲ್ಲಿ ಬಲವಾದ ಗೋಡೆಗಳನ್ನು ಹಾಕಿದ್ದರು. ಈಪ್ರಯುಕ್ತ ಪಟ್ಟಣದಕಡೆಯಿಂದ ಅರಮನೆಯ ಮೇಲೆ ಬೀಳುವುದಕ್ಕೆ ಅವಕಾಶವಿರಲಿಲ್ಲ. ಹೊರಗಡೆ ಆ ಕೋಟೆಗೋಡೆಯೂ ಪಟ್ಟಣದ ಕೋಟೆಗೋಡೆಯೂ ಒಂದಾಗಿ ಸೇರಿದ್ದವು. ಆದುದರಿಂದ ಆ ಭಾಗವು ಪಟ್ಟಣದಲ್ಲೆಲ್ಲಾ ಬಹು ದೃಢವಾದ ಭಾಗವಾಗಿತ್ತು. ಈ ಭಾಗದ ಗೋಡೆಗೆ ಸೇರಿದಹಾಗೆಯೇ ಅಂತಃಪುರದ ಉಪ್ಪರಿಗೆಯಿತ್ತು. ಆದಕಾರಣ ಅಲ್ಲಿದ್ದ ರಾಣೀವಾಸದವರು ಆ ನದಿಯ ಆಚೆ ಪಶ್ಚಿಮದಲ್ಲಿ ಬಹು ದೂರದಲ್ಲಿದ್ದ ಪರ್ವತಶ್ರೇಣಿಯವರೆಗೂ ಹರಡಿಕೊಂಡಿದ್ದ ವಿಸ್ತಾರವಾದ ಭೂಭಾಗವನ್ನೆಲ್ಲಾ ನೋಡಿ ಆನಂದಪಡಬಹುದಾಗಿತ್ತು. ಈಗ್ಗೆ ನಾನೂರು ವರ್ಷಗಳಿಗೆ ಹಿಂದೆ ಜ್ಯೇಷ್ಠಮಾಸದ ಕೃಷ್ಣಪಕ್ಷದಲ್ಲಿ ಒಂದು ದಿನ, ಬೆಳಗಿನ ಜಾವಕ್ಕೆ ಇನ್ನೂ ಒಂದೆರಡು ಗಳಿಗೆ ಇರುವಾಗ ಅಲ್ಲಿಯ ರಾಜನ ಮಗಳಾದ ಕಮಲಾವತಿಯು ತನ್ನ ಉಪ್ಪರಿಗೆಯ ಕಿಟಿಕಿಯಿಂದ ಕೆಳಗೆ ಬಗ್ಗಿನೋಡಿದಳು. ಆ ಕಾಲದಲ್ಲಿ ನದಿಯ ದಡವೆಲ್ಲಾ ಒಣಗಿ ಬರಿಯ ಮರಳೇ ಕಾಣಿಸುತ್ತಿತ್ತು. ಹಾಗೆ ನೋಡುತ್ತಿರುವಾಗ ಅಲ್ಲಿ ಕೋಟೆಗೋಡೆಯ ಬುಡದಲ್ಲಿ ಸಣ್ಣ ಸಣ್ಣ ಬೆಂಕಿಯ ಕಿಡಿಗಳೂ ಹಾರಾಡುತ್ತಿದ್ದಹಾಗೆ ಕಾಣಿ

ಸಿತು. ಅದನ್ನು ಕಂಡು ಅವಳು ಇದೇನಿರಬಹುದೆಂದು ಸ್ವಲ್ಪ ವಿಸ್ಮಯಪಟ್ಟವಳಾದರೂ, ಅದರ ವಿಷಯವಾಗಿ ಮತ್ತೇನೂ ವಿಚಾರಮಾಡದೆ ಪುನಃ ನಿದ್ದೆಮಾಡಲು ಹೊರಟುಹೋದಳು. ಆ ಕಿಡಿಗೆ ತಾನೇ ಕಾರಣವೆಂಬುದೂ ತಾನು ಆ ಸಂಗತಿಯನ್ನು ಮಾತ್ರ ತನ್ನ ತಂದೆಗೆ ತಿಳಿಸಿದ್ದರೆ ಅವನನ್ನೂ ತನ್ನನ್ನೂ ಅರಮನೆಯನ್ನೂ ಆಗ ಒದಗಿಬಂದಿದ್ದ ಆಪತ್ತಿನಿಂದ ತಾನು ರಕ್ಷಿಸಬಹುದಾಗಿತ್ತೆಂಬುದೂ, ಅವಳಿಗೆ ತಿಳಿಯಲಿಲ್ಲ. ಏಕೆಂದರೆ, ಆ ಕಿಡಿಗಳು ಈ ಅರಮನೆಯಮೇಲೆ ಬೀಳುವುದಕ್ಕಾಗಿ ಬಂದಿದ್ದ ಒಂದು ಬಲವಾದ ಮುಸಲ್ಮಾನ್ ಸೇನೆಯ ದಳಪತಿಗಳ ಹುಕ್ಕದಿಂದ ಹಾರುತ್ತಿದ್ದುವು. ಆ ಸೇನೆಯವರು ರಾಜನ ಅರಮನೆಯಮೇಲೆ ಹಠಾತ್ತಾಗಿ ಬೀಳಬೇಕೆಂದೆಣಿಸಿ ಏಣಿಗಳನ್ನು ತೆಗೆದುಕೊಂಡು ಪಯಣದಮೇಲೆ ಪಯಣವಾಗಿ ನದಿಯ ತೀರದಲ್ಲಿಯೇ ಬಂದಿದ್ದರು. ಇಲ್ಲಿ ಬರುವದರಲ್ಲಿ ಅವರಿಗೆ ಹಲವು ಉದ್ದೇಶಗಳಿದ್ದುವು. ಅವರಲ್ಲಿ ಕೆಲವರು ಯುದ್ಧದಲ್ಲಿ ಕೀರ್ತಿಯನ್ನು ಪಡೆಯಬೇಕೆಂದು ಬಂದಿದ್ದರು ; ಇನ್ನೂ ಕೆಲವರು ಕೊಳ್ಳೆಹೊಡೆದುಕೊಂಡು ಹೋಗುವ ಆಶೆಯಿಂದ ಬಂದಿದ್ದರು ; ಮತ್ತೆ ಕೆಲವರು ಅರಮನೆಯ ದೇವಸ್ಥಾನದಲ್ಲಿ ಕೃಷ್ಣದೇವರ ಮೇಲೂ ರುಕ್ಮಿಣಿಯಮ್ಮನವರ ಮೇಲೂ ಅನರ್ಘ್ಯವಾದ ರತ್ನಗಳೂ ಸ್ವರ್ಣಾಭರಣಗಳೂ ಹಾಕಿರುವುದಾಗಿ ಕೇಳಿ ಆ ವಿಗ್ರಹಗಳನ್ನು ಒಡೆದು ಆಭರಣಗಳನ್ನು ತೆಗೆದುಕೊಳ್ಳಬೇಕೆಂದು ಬಂದಿದ್ದರು. ಆ ಸೇನೆಯ ದಳವಾಯಾದ ಫತ್ತೇಜಂಗ್ ಎಂಬ ತರುಣನು ರಾಜಪುಟಾನದಲ್ಲೆಲ್ಲಾ ಬಹುರೂಪವತಿಯೆಂದು ಪ್ರಸಿದ್ಧಳಾಗಿದ್ದ ಕಮಲಾವತಿಯನ್ನು ಪಡೆದು ಕೊಂಡು ಮದುವೆಯಾಗಬೇಕೆಂಬ ಹಾರೈಕೆಯಿಂದ ಬಂದಿದ್ದನು. ಅವನು ತನಗೆ ರಾಜಕುಮಾರಿ ಮಾತ್ರ ದೊರೆತರೆ ಅರಮನೆಯಲ್ಲಿಯೂ ಅದಕ್ಕೆ ಸೇರಿದ ದೇವಸ್ಥಾನಗಳಲ್ಲಿಯೂ ಸಿಕ್ಕುವ ಧನಕನಕರತ್ನಾಭರಣಾದಿಗಳನ್ನೇ ತನ್ನ ಪರಿವಾರದವರಿಗೆ ಕೊಟ್ಟುಬಿಡಲು ಸಿದ್ಧನಾಗಿದ್ದನು.

ಈ ಸೈನಿಕರು ಅಷ್ಟೊಂದು ದೀರ್ಘವಾಗಿಯೂ ಪ್ರಯಾಸಕರವಾಗಿಯೂ ಇದ್ದ ದಾರಿಯನ್ನು ನಡೆದು ಉದ್ದಕ್ಕೂ ನದೀತೀರದಲ್ಲಿಯೇ ಬಂದಿದ್ದರು. ಇವರು ಬರುವ ವೇಳೆ ಹಾದಿಯಲ್ಲಿ ಒಬ್ಬರಿಬ್ಬರು ಹಿಂದೂ ರೈತರು ಸಿಕ್ಕಿದರು; ಅವರು ಎಲ್ಲಿ ಗುಲ್ಲೆಬ್ಬಿಸಿ ಊರಿಗೆಲ್ಲಾ ತಿಳಿಸಿ ಬಿಡುವರೋ ಎಂದೆಣಿಸಿ, ಅವರನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಬಿಟ್ಟರು ; ಅವರು ಹೀಗೆ ಬಂದು ಸೇರಿ ಇಲ್ಲಿ ತಮ್ಮ ಕಷ್ಟಸಾಧ್ಯವಾದ ಉದ್ದೇಶವನ್ನು ನೆರವೇರಿಸುವುದಕ್ಕೆ ಮುಂಚೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಆತುರಾತುರದಿಂದ ಸ್ವಲ್ಪ ತಿಂಡಿತಿಂದು ಒಂದೆರಡು ಸಲ ಹುಕ್ಕ ಸೇದುತ್ತಿದ್ದರು. ಅವರ ಪಾಳೆಯವು ಭಯಂಕರವಾಗಿದ್ದರೂ ಮನೋಹರವಾಗಿತ್ತು. ಬೆಳ್ಳನೆಯುಡುಪು ಹಾಕಿಕೊಂಡಿದ್ದ ಆ ಜೋಲುಗಡ್ಡದ ಸೈನಿಕರು ಹೊಳೆಯ ನಡುವೆ ಬಂಡೆಗಳ ಮೇಲೆ ದಿಕ್ಕಾಪಾಲಾಗಿ ಮಲಗಿ ನಿದ್ದೆಹೋಗುತ್ತಿದ್ದರು. ಒಂದು ಕಡೆಯಲ್ಲಿ ತಲೆಯಮೇಲೆ ಕವಿದುಕೊಂಡಿದ್ದ ಬಂಡೆಗಳೂ, ನಹರ್‌ಘಡದ ಎತ್ತರವಾದ

ಕೊತ್ತಳಗಳೂ, ಅವರನ್ನು ಧ್ವಂಸಮಾಡಿಬಿಡುವುವೋ ಎಂಬಂತೆ ಭಯಂಕರವಾಗಿ ಕಾಣಿಸುತ್ತಿದ್ದುವು; ಹೊಳೆಯ ಆಚೆಕಡೆಯ ದಡವು ದೂರದಲ್ಲಿ ಕಪ್ಪನೆಯ ಪರದೆಯಂತೆ ಕಾಣಿಸುತ್ತಿತ್ತು; ಮೇಲುಗಡೆಯಲ್ಲಿ ಅಂತರಿಕ್ಷವು ಥಳಥಳಿಸುತ್ತಿದ್ದ ನಕ್ಷತ್ರಗಳಿಂದ ಜಾಜ್ವಲ್ಯಮಾನವಾಗಿ ಕಂಗೊಳಿಸುತ್ತಿತ್ತು; ಕೆಳಗಡೆಯಲ್ಲಿ ಆ ಸೈನಿಕರ ಕಾಲಕೆಳಗೆ ಬಿದ್ದಿದ್ದ ಬೆಣಚುಕಲ್ಲುಗಳು ಆ ನಕ್ಷತ್ರಗಳ ಕಾಂತಿಯಿಂದ ಮಂಕುಮಂಕಾಗಿ ಮಿನುಗುಟ್ಟುತ್ತಿದ್ದುವು. ಆಗ ಹುಕ್ಕದ ಗುಡುಗುಡುಧ್ವನಿಯೂ ನಡುವೆ ಎಲ್ಲೋ ದೂರದಲ್ಲಿ ಸೊಟ್ಟಪಟ್ಟನೆ ಹರಿದುಹೋಗುತಿದ್ದ ನದೀನೀರಿನ ಗುಳುಗುಳು ಧ್ವನಿಯೂ ವಿನಾ ಬೇರೆ ಯಾವ ಶಬ್ದವೂ ಇಲ್ಲದೆ ಎಲ್ಲವೂ ನಿಶ್ಶಬ್ದವಾಗಿತ್ತು.

ಅವರು ಆ ರೀತಿಯಾಗಿ ಬಹಳಕಾಲ ವಿಶ್ರಾಂತಿ ತೆಗೆದುಕೊಳ್ಳಲವಕಾಶವಿರಲಿಲ್ಲ. ಕಾಲವಿಳಂಬ ವಾದಹಾಗೆಲ್ಲಾ ಅವರು ಕಾವಲುಗಾರರ ಕಣ್ಣಿಗೆ ಬಿದ್ದು ಕೊನೆಗೆ ಕೆಲಸವೇ ನಷ್ಟವಾಗಿಹೋಗುವ ಸಂಭವವು ಹೆಚ್ಚಾಗುತ್ತಿತ್ತು. ಹೀಗಿರುತ್ತಿರಲು ಅವರ ಸೇನಾನಾಯಕನಾದ ಫತ್ತೇಜಂಗನು ನಿಶ್ಶಬ್ದವಾಗಿ ತನ್ನ ಸ್ಥಳದಿಂದ ಎದ್ದು ತನ್ನವರಿಗೆಲ್ಲಾ ಕಾರ್ಯಭಾಗಮಾಡಲುಪ್ರಕ್ರಮಿಸುವಂತೆ ಸನ್ನೆಮಾಡಿದನು. ಕೂಡಲೆ ಅವನ ಸೈನಿಕರು ದೊಡ್ಡದೊಡ್ಡ ಏಣಿಗಳನ್ನು ಎಳೆದುಕೊಂಡು ಕಡಿದಾಗಿದ್ದ ದಡಗಳಮೇಲಕ್ಕೆ ಹತ್ತಿ ಗೋಡೆಯತಳಕ್ಕೆ ಬಂದು ಅವುಗಳನ್ನು ಸದ್ದುಗಲಗಿಲ್ಲದೆ ಕೋಟೆಗೋಡೆಗೆ ಹಾಕಿ ಮೇಲಕ್ಕೆ ಹತ್ತತೊಡಗಿದರು

ಆ ಮುಂಜಾನೆಯ ಮಬ್ಬಿನಲ್ಲಿ ಫತ್ತೇಜಂಗನು, ಕಾವಲುಗಾರರಿಗೆ ಯಾರಿಗೂ ಗೋಚರವಾಗದಂತೆ ಕೋಟೆಯ ಮೇಲೆ ಹತ್ತಿ ನಿಂತು ತಟ್ಟನೆ ಕೈಪಿಡಿಗೋಡೆಯ ಹಿಂದುಗಡೆಗೆ ದುಮಿಕಿ ಅಲ್ಲಿದ್ದ ನಾಲ್ಕಾರು ಜನ ಕಾವಲುಗಾರರ ಮೇಲೆ ಬಿದ್ದನು. ಅಷ್ಟರೊಳಗೆ ಅವನ ಸೈನಿಕರು ಕೆಲವರು ಮೇಲಕ್ಕೆ ಬಂದು ಸೇರಿದರು. ಅವರ ಸಹಾಯದಿಂದ ಅವನು ಕಾವಲುಗಾರರನ್ನು ಸೆರೆಹಿಡಿದುಬಿಟ್ಟನು. ಈ ವೇಳೆಗೆ ಅವನ ಕಡೆಯ 2,000 ಮಂದಿ ಸೈನಿಕರೂ ಮೇಲಕ್ಕೆ ಹತ್ತಿಬಂದರು. ಬಳಿಕ ಎಲ್ಲರೂ ಒಮ್ಮೊಗವಾಗಿ ಹೊರಟು ಅರಮನೆಯ ನಡುವಣ ಅಂಗಳಕ್ಕೆ ನುಗ್ಗಿದರು.

ಈ ವೇಳೆಗೆ ಎಲ್ಲೆಲ್ಲಿಯೂ ಗುಲ್ಲಾಯಿತು. ನಾಲ್ಕು ಕಡೆಯಲ್ಲಿಯೂ ಭೋರೆಂದು ಊದುತ್ತಿದ್ದ ಕೊಂಬುಕಾಳೆಗಳ ಸದ್ದಿನಿಂದ ಅರಮನೆಯಲ್ಲಿ ಮಲಗಿದ್ದ ರಾಜಪುತ್ರರೆಲ್ಲರೂ ಎಚ್ಚತ್ತು ಎಲ್ಲಾ ಕೊಟಡಿಗಳಿಂದಲೂ ಅಂಗಳದ ಕಡೆಗೆ ಓಡೋಡಿ ನುಗ್ಗಿಬರುತ್ತಿದ್ದರು. ಆ ಕಾಲದಲ್ಲಿ ಅನುಭವವಿಲ್ಲದ ತರುಣರೂ ಆತುರಗಾರರೂ ಕತ್ತಿಗುರಾಣಿಗಳನ್ನು ಮಾತ್ರವೇ ಧರಿಸಿಬಂದರು; ಸ್ವಲ್ಪ ವಯಸ್ಸಾದವರೂ ಅನುಭವಶಾಲಿಗಳೂ ಲೋಹಕವಚಗಳನ್ನು ತೊಟ್ಟುಕೊಂಡು ಬಂದು ಸೇರಿದರು. ಕೂಡಲೆ ಅಂಗಳದಲ್ಲಿ ತೀವ್ರವಾದ ಯುದ್ಧಕ್ಕೆ ಆರಂಭವಾಯಿತು. ಮಹಮ್ಮದೀಯರು ಸಂಖ್ಯೆಯಲ್ಲಿ ಕಡಿಮೆಯಾಗಿದ್ದಾಗ್ಯೂ ವ್ಯೂಹವಾಗಿ ನಿಂತಿದ್ದರು. ರಾಜಪು

ತ್ರರು ಪಂಗಡಪಂಗಡವಾಗಿ ಚದರಿಹೋಗಿದ್ದ ಪ್ರಯುಕ್ತ ಅವರವೇಲೆ ಬಲವಾಗಿ ಕೈಮಾಡಲಾಗಲಿಲ್ಲ. ಹೀಗಾಗಿ ಹಿಂದುಗಳು ಸ್ವಲ್ಪ ಕಾಲದಲ್ಲಿಯೇ ಅಂಗಳದಿಂದ ಹಿಮ್ಮೆಟ್ಟಿ ದೇವಸ್ಥಾನಗಳಿಗೂ ಆಸ್ಥಾನಮಂಟಪಕ್ಕೂ ಇತರ ತೊಟ್ಟಿಗಳಿಗೂ ಹೋಗ ಬೇಕಾಯಿತು. ಆದರೆ ಸ್ವಲ್ಪ ಬಲವಾಗಿ ಕೂಡಿದ್ದ ಒಂದು ಗುಂಪಿನವರು ಮಾತ್ರ ದೀರ್ಘಾಕಾರನಾಗಿ ಲೋಹಕವಚಧರನಾಗಿದ್ದ ಒಬ್ಬ ರಾಜಪುತ್ರವೀರನ ಕೈಕೆಳಗೆ ನಿಂತು ಅಂತಃಪುರದ ಕಡೆಗೆ ಹಿಮ್ಮೆಟ್ಟಿ ಅಲ್ಲಿಯ ಇಕ್ಕಟ್ಟಾದ ಹಂತದಮೇಲೆ ಜಿಗಿಬಿಗಿ ಯಾಗಿ ನಿಂತುಕೊಂಡರು.

ಎಂದೂ ಅರಿಯದ ಆ ಮಹಮ್ಮದೀಯ ಸೈನಿಕರು ಆ ಶೋಭಾಯಮಾನ ವಾದ ಆಸ್ಥಾನಮಂಟಪದ ಗೋಡೆಗಳಲ್ಲಿಯೂ ಮೇಲುಚಾವಣಿಯಲ್ಲಿಯೂ ಸಹಸ್ರೋಪಸಹಸ್ರವಾಗಿ ಕೆತ್ತಿದ್ದ ಸಣ್ಣಸಣ್ಣ ಕನ್ನಡಿಗಳಲ್ಲಿ ಸಹಸ್ರೋಪಸಹಸ್ರವಾಗಿ ಕಾಣಿಸುತ್ತಿದ್ದ ತಮ್ಮ ನೆಳಲನ್ನೂ ತಮ್ಮ ಶತ್ರುಗಳ ಪ್ರತಿಬಿಂಬಗಳನ್ನೂ ನೋಡಿ ಒಂದು ಮುಹೂರ್ತಕಾಲ ದಿಗ್ಭ್ರಮೆಯಿಂದ ಮಂಕಾಗಿ ನಿಂತಿದ್ದರು. ಬಳಿಕ ಸಂಹಾರಕೃತ್ಯವು ಪುನಃ ಪ್ರಾರಂಭವಾಗಿ ಅಮೃತಶಿಲಾಮಯ ವಾದ ನೆಲಕಟ್ಟೆಲ್ಲವೂ ರಾಜಪುತ್ರರ ರಕ್ತದಿಂದ ಕಲೆಗಟ್ಟಿ ಹೋಯಿತು. ಇದೇ ವೇಳೆ ಒಂದು ಗುಂಪು ಮಹಮ್ಮದೀಯರು ದೇವಸ್ಥಾನಕ್ಕೆ ನುಗ್ಗಿ, ಅರ್ಚಕರನ್ನೆಲ್ಲಾ ಕೊಂದು, ಅಲ್ಲಿದ್ದ ವಿಗ್ರಹಗಳನ್ನೆಲ್ಲಾ ಒಡೆದುಹಾಕಿ ತಮ್ಮ ರಕ್ತಾಭಿಲಾಷೆಯನ್ನೂ ಮತದ್ವೇಷವನ್ನೂ ತೀರಿಸಿಕೊಂಡಬಳಿಕ ಅಲ್ಲಿ ಬಹುಕಾಲದಿಂದ ಸೇರುತ್ತ ಬಂದಿದ್ದ ಅನರ್ಘ್ಯವಾದ ರತ್ನಾಭರಣಗಳನ್ನೂ ಚಿನ್ನ ಬೆಳ್ಳಿಯ ವಸ್ತುಗಳನ್ನೂ ನಿಶ್ಶೇಷವಾಗಿ ಸುಲಿದು ಕೊಂಡರು. ಇನ್ನೊಂದು ಗುಂಪಿನವರು ಅಂತಃಪುರಕ್ಕೆ ನುಗ್ಗಬೇಕೆಂದು ಯತ್ನಿಸಿ ದರು. ಆದರೆ ಅವರ ಪ್ರಯತ್ನವು ಕೈಗೂಡಲಿಲ್ಲ. ಆ ಉದ್ಧವಾದ ರಾಜಪುತ್ರ ಶೂರನ ಕೈಕೆಳಗೆ ನಿಂತು ಆ ಭಾಗವನ್ನು ರಕ್ಷಿಸಿಕೊಳ್ಳುತ್ತಿದ್ದವರು, ಮಹಮ್ಮದೀ ಯರು ಹಂತದಮೇಲೆ ಸ್ವಲ್ಪದೂರ ಬರುವ ವರೆಗೂ ಸುಮ್ಮನಿದ್ದು, ಬಳಿಕ ಮಹಾ ರಭಸದಿಂದ ಅವರಮೇಲೆ ಬಿದ್ದು ಅವರಲ್ಲಿ ಒಬ್ಬಿಬ್ಬರನ್ನು ಕೊಂದು ಕೆಡಹಿ ಉಳಿದವ ರನ್ನು ಚದರಿಸಿ ನೂಕಿಬಿಟ್ಟರು.

ಈ ವೇಳೆಗೆ ಸರಿಯಾಗಿ ಪತ್ತೇಜಂಗನು ತನ್ನ ಪರಿವಾರದವರೆಲ್ಲಾ ಅಂಗಳದ ನಡುವೆ ಬಂದು ಸೇರಬೇಕೆಂದು ಆಜ್ಞೆಮಾಡಿ ಕಹಳೆಹಿಡಿಸಿದನು. ಹಿಂದೆ ಸಂಕೇತ ಮಾಡಿಕೊಂಡಿದ್ದ ಮೇರೆ ಈಗ ಅವರು ತಾವು ಸುಲಿದುಕೊಂಡ ಚಿನ್ನಬೆಳ್ಳಿಗಳ ಸಮೇತ ಏಣಿಗಳ ಮೂಲಕ ಕೋಟೆಯಿಂದಿಳಿದು ಹೊರಟುಹೋಗಬೇಕಾಗಿತ್ತು. ಅಂತಃಪುರದ ಮುತ್ತಿಗೆಯೊಂದು ವಿನಾ ಇದುವರೆಗೆ ಅವರು ಮಾಡಿದ ಪ್ರಯತ್ನಗಳೆ ಲ್ಲವೂ ನಿರ್ವಿಘ್ನವಾಗಿ ನೆರವೇರಿದುವು. ಅವರು ತಮ್ಮ ಮತಕ್ಕೆ ವಿರುದ್ಧವಾದ ವಿಗ್ರಹಗಳ ಮಂದಿರಗಳನ್ನೆಲ್ಲಾ ಒಡೆದುಬಿಟ್ಟಿದ್ದರು. ಸುಲಭವಾಗಿ ಸಾಗಿಸಬಹು ದಾಗಿದ್ದ ಅನರ್ಘ್ಯವಾದ ಬಹು ಪದಾರ್ಥಗಳನ್ನು ಶೇಖರಮಾಡಿಕೊಂಡಿದ್ದರು.

ಆದರೆ ಫತ್ತೇಜಂಗನ ಮನಸ್ಸಿನಲ್ಲಿದ್ದ ರಾಜಪುತ್ರ ಕನ್ಯೆಮಾತ್ರ ಅಂತಃಪುರದಲ್ಲಿ ಇನ್ನೂ ಸುರಕ್ಷಿತೆಯಾಗಿ ಉಳಿದಿದ್ದಳು. ಅದರ ಬಾಗಿಲನ್ನು 20 ಮಂದಿ ರಾಜಪುತ್ರವೀರರು ಇನ್ನೂ ರಕ್ಷಿಸಿಕೊಂಡಿದ್ದರು.

ಈ ಸಂದರ್ಭದಲ್ಲಿ ಫತ್ತೇಜಂಗನು ಏನು ಮಾಡಬೇಕು ? ಹಿಂದಿರುಗಿ ಹೋಗಲವಕಾಶವಿರುವಾಗಲೇ ತನ್ನವರನ್ನೆಲ್ಲಾ ಕರೆದುಕೊಂಡು ಹೋಗಿ ಅವರ ಪ್ರಾಣಗಳನ್ನು ರಕ್ಷಿಸಬೇಕೇ, ಇಲ್ಲವೇ ತಾನು ಎಂದೂ ಕಾಣದ ಒಬ್ಬ ಅನ್ಯಜಾತಿ ಸ್ತ್ರೀಯ ವ್ಯಾಮೋಹಕ್ಕಾಗಿ ಎಲ್ಲರನ್ನೂ ಬಲಿಕೊಡಬೇಕೇ ? ಇದನ್ನು ಫತ್ತೇಜಂಗನು ಸ್ವಲ್ಪ ಕಾಲ ತನ್ನ ಮನಸ್ಸಿನಲ್ಲಿಯೇ ವಿಚಾರಮಾಡಿದನು. ಕೂಡಲೆ ಅವನು ಉತ್ತಮ ಸೇನಾನಾಯಕನಾಗಿದ್ದ ಕಾರಣ ತನ್ನವರ ಹಿತಕ್ಕಾಗಿ ತನ್ನ ಇಷ್ಟಾರ್ಥವನ್ನೇ ತೊರೆದುಬಿಡುವುದಾಗಿ ನಿಶ್ಚಯಿಸಿ, ಹಿಂದೆ ತಾವು ಹತ್ತಿಬಂದ ಏಣಿಗಳ ಬಳಿಗೆ ಹೋಗುವಹಾಗೆ ತನ್ನ ಸೈನಿಕರಿಗೆ ಅಪ್ಪಣೆಮಾಡಿದನು. ಕೂಡಲೆ ಅವರು ಹಿಂತಿರುಗಿ ಬಂದು ನೋಡಿದರು, ಅವರು ಹಾಗೆ ಬಂದು ನೋಡುವ ವೇಳೆಗೆ, ಅರಮನೆಯಿಂದ ಮೊದಲೇ ತಲೆತಪ್ಪಿಸಿಕೊಂಡು ಅಲ್ಲಿಗೆ ಬಂದಿದ್ದ ಕೆಲ ರಾಜಪುತ್ರರು ಏಣಿಗಳ ಬಳಿ ಕಾವಲಿದ್ದವರನ್ನು ಹಿಡಿದು ಏಣಿಗಳನ್ನು ಹೊಳೆಗೆ ತಳ್ಳಿಬಿಟ್ಟಿದ್ದರು. ಈ ರೀತಿಯಾಗಿ ಮಹಮ್ಮದೀಯರು ಹಿಂತಿರುಗುವುದಕ್ಕೆ ಹಠಾತ್ತಾಗಿ ತಡೆ ಬಂದೊದಗಲು ಅವರು ಉಪಾಯಾಂತರವಿಲ್ಲದೆ ಪುನಃ ಹೊರಟು ತತ್ಕಾಲದಲ್ಲಿ ತಮ್ಮ ವಶದಲ್ಲಿದ್ದ ಅರಮನೆಯನ್ನೇ ಹೊಕ್ಕು ಅದನ್ನು ರಕ್ಷಿ ಕೊಳ್ಳಬೇಕಾಯಿತು. ಆದ್ದರಿಂದ ಅವರು ಅಲ್ಲಿಗೆ ಹೋಗಿ ಮುಂದೆ ಎಲ್ಲವೂ ಕೆಟ್ಟುಹೋಗುವ ಸಂದರ್ಭ ಬಂದಲ್ಲಿ ತಮ್ಮ ಜೀವಕ್ಕೆ ಸರಿಯಾದ ಬೆಲೆಯನ್ನು ತೆಗೆದುಕೊಂಡೇ ತಾವು ಪ್ರಾಣ ಬಿಡುವುದಾಗಿ ಸಂಕಲ್ಪ ಮಾಡಿಕೊಂಡರು.

ಹಾಗೆ ದೃಢಮಾಡಿಕೊಂಡ ತರುವಾಯ ಅವರು ಕೋಟೆ ಗೋಡೆಯಮೇಲೆ ಪಹರೆಯಿಟ್ಟರು. ಪಹರೆಯವರು ಅಲ್ಲಿ ಪಹರೆ ತಿರುಗುವಾಗ, ತಮ್ಮನ್ನು ಅರಮನೆಯಿಂದ ಅಟ್ಟುವುದಕ್ಕಾಗಿ ಆ ಪಟ್ಟಣವೇ ಆಯುಧಸಮೇತವಾಗಿ ಬರುತಿದ್ದುದು ಕಾಣಬಂದಿತು. ಬಳಿಕ ಸ್ವಲ್ಪ ಕಾಲದಲ್ಲಿಯೇ ಯುದ್ಧಸನ್ನದ್ಧವಾದ ಒಂದು ಭಾರಿ ರಾಜಪುತ್ರ ಸೈನ್ಯವು ಬಂದು ಅರಮನೆಯ ಮುಂದೆ ನಿಂತಿತು. ಅರಮನೆಯೊಳಗೆ ಅಂತಃಪುರವೊಂದೇ ಇನ್ನೂ ರಾಜಪುತ್ರರವಶದಲ್ಲಿತ್ತು. ಈಗ ಮಹಮ್ಮದೀಯರು ಅರಮನೆಯ ಹೊರಗಡೆ ಸೇರಿದ್ದ ಭಾರಿ ಸೇನೆಯಿಂದ ಮುತ್ತಿಗೆ ಹಾಕಲ್ಪಟ್ಟು, ಒಳಗಡೆ ಅಂತಃಪುರದ ಬಾಗಿಲನ್ನು ಕಾದಿದ್ದ ಉನ್ನತಾಕಾರನಾದ ರಾಜಪುತ್ರನನ್ನೂ ಅವನ ಆಪ್ತಭೃತ್ಯರಾದ 20 ಮಂದಿ ರಾಜಪುತ್ರರನ್ನೂ ಮುತ್ತಿಗೆಹಾಕಿ, ಏಕಕಾಲದಲ್ಲಿಯೇ ಮುತ್ತಲ್ಪಟ್ಟವರೂ ಮುತ್ತುವವರೂ ಆಗಿದ್ದರು.

ಹಾಗೆ ಉಭಯಪಕ್ಷದವರೂ ಪ್ರತಿಭಟಿಸಿ ನಿಂತ ಬಳಿಕ ಯಾರೂ ಬಾಣಪ್ರಯೋಗಮಾಡುವುದಕ್ಕೆ ಮುಂಚೆ ರಾಜನ ಕಡೆಯ ನಿಯೋಗಿಯೊಬ್ಬನು ಅರಮನೆಯ

ಬಾಗಿಲಿಗೆ ಬಂದು ಸಂಧಿಮಾಡಿಕೊಳ್ಳುವುದಕ್ಕಾಗಿ ತನ್ನನ್ನು ಅರಮನೆಯೊಳಕ್ಕೆ ಬಿಡಬೇಕೆಂದು ಪ್ರಾರ್ಥಿಸಿದನು. ಅವನ ಯೋಗ್ಯತಾಪತ್ರಗಳನ್ನು ಪರೀಕ್ಷಿಸಿದ ಬಳಿಕ ಅವನನ್ನು ಫತ್ತೇಜಂಗನ ಬಳಿಗೆ ಕರೆದುಕೊಂಡು ಹೋಗಿ ತಂದ ಸುದಿಯನ್ನು ಅರಿಕೆಮಾಡುವಂತೆ ಹೇಳಿದರು. ಕೂಡಲೆ ಅವನು ತನ್ನ ರಾಜನ ಪರಾಕ್ರಮವನ್ನೂ ಶಕ್ತಿಯನ್ನೂ ಅಪಾರವಾಗಿ ವರ್ಣಿಸಿ—ನೀವು ಅರಮನೆಯನ್ನು ಹಿಡಿದುದು ತಪ್ಪು ಈಗಲೇ ಎಲ್ಲವನ್ನೂ ಒಂದೇಸಲ ಒಪ್ಪಿಸಿಬಿಡಿ ಎಂಬದಾಗಿ ಹೇಳಿದನು. ಆದರೂ ಫತ್ತೇಜಂಗನ ಕೈಯಲ್ಲಿ ಕೀಲಿತ್ತು; ಅವನು ಅದನ್ನು ಪೂರ್ತಿಯಾಗಿ ತಿರುಗಿಸಬೇಕೆಂದು ನಿಶ್ಚಯಮಾಡಿಕೊಂಡನು. ರಾಜಪುತ್ರರ ಹೆಂಡಿರೂ ಮಕ್ಕಳೂ ಮಾತ್ರ ತಮ್ಮ ಕೈಗೆ ಸಿಕ್ಕಿಹೋಗುವ ಸಂದರ್ಭವಿಲ್ಲದಿದ್ದರೆ ಅವರು ಕನಸಿನಲ್ಲಿ ಕೂಡ ಸಂಧಾನದ ಯೋಚನೆಯನ್ನು ಮಾಡುತ್ತಿರಲಿಲ್ಲವೆಂಬುದು ಫತ್ತೇಜಂಗನಿಗೆ ತಿಳಿದೇ ಇತ್ತು. ಆಗ ಅಂತಃಪುರವನ್ನು ಕಾಪಾಡಿಕೊಳ್ಳುತ್ತಿದ್ದ 20 ಮಂದಿ ರಾಜಪುತ್ರರು ಎಷ್ಟೇ ವೀರರಾಗಿದ್ದರೂ, ದೇಹದ ಹಂಗು ತೊರೆದು ಪುಂಖಾನುಪುಂಖವಾಗಿ ತಮ್ಮ ಮೇಲೆ ಬಂದು ಬೀಳುವ ಮಹಮ್ಮದೀಯರೊಡನೆ ಹೋರಾಡುತ್ತ ಎಷ್ಟು ಕಾಲತಾನೆ ತಮ್ಮ ನೆಲೆಯನ್ನು ಕಾಪಾಡಿಕೊಳ್ಳಬಲ್ಲರು? ಫತ್ತೇಜಂಗನು ಈ ಸಂಗತಿಯನ್ನೆಲ್ಲಾ ಆ ನಿಯೋಗಿಗೆ ಚೆನ್ನಾಗಿ ತಿಳಿಸಿ, ಬಳಿಕ ಇಂತೆಂದನು :- ನಾವು ನಮ್ಮ ಆಯುಧಗಳೊಡನೆ ನಮ್ಮ ಮುಸಲ್ಮಾನಿ ಹಸುರು ಬಾವುಟವನ್ನು ಹಿಡಿದು ನಿಮ್ಮ ಎಲ್ಲೆ ದಾಟುವವರೆಗೆ ನಿರಾತಂಕವಾಗಿ ಹೋಗುವಂತೆ ಏರ್ಪಾಡು ಮಾಡಿಕೊಡಬೇಕು. ಅಲ್ಲದೆ ನಿಮ್ಮ ರಾಜಕುಮಾರಿಯನ್ನು ನನಗೆ ಮದುವೆಮಾಡಿಯೂ ಕೊಡಬೇಕು. ಈ ನಮ್ಮ ಸೇನೆಯು ಹಿಂದೆ ಬರುತ್ತಿರುವ ಭಾರಿ ಮುಸಲ್ಮಾನ ಸೇನೆಯ ತುಕಡಿಯಾಗಿದೆ. ಆ ಸೇನೆಯು ಸ್ವಲ್ಪ ಕಾಲದಲ್ಲಿಯೇ ನಹರಘುಡದಮೇಲೆ ಬಂದು ಬೀಳಬಹುದು. ಈಗಲೇ ನಮ್ಮ ಹಸ್ತಗತವಾಗಿರುವ ಈ ಕೋಟೆಯು ಮುಂದೆ ನಮ್ಮ ವಶವಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಇದ್ದ ಸಂಗತಿಯನ್ನು ನಿಮಗೆ ತಿಳಿಸಿದ್ದೇನೆ. ಈಗ ನಿಮಗಿಷ್ಟವಿದ್ದರೆ ರಾಜಪುತ್ರ ವೀರನೊಬ್ಬನನ್ನು ಗೊತ್ತುಮಾಡಿ ನನ್ನೊಡನೆ ದ್ವಂದ್ವಯುದ್ಧಕ್ಕೆ ಕಳುಹಿಸಿರಿ. ಅವರಲ್ಲಿ ನಾನು ಸೋತರೂ ಸರಿಯೆ, ಸತ್ತರೂ ಸರಿಯೆ, ಕಮಲಾವತಿಯ ಮಾತನ್ನು ಬಿಟ್ಟುಬಿಡುವೆನು—ಎಂದು ಹೇಳಿದನು.

ಈ ವರ್ತಮಾನವನ್ನೆಲ್ಲಾ ಕೊಂಡುಹೋಗಿ ನಿಯೋಗಿಯು ತನ್ನ ರಾಜನಿಗೆ ತಿಳಿಸಿದನು. ದ್ವಂದ್ವಯುದ್ಧದ ಮಾತನ್ನು ಕೇಳಿ ಯುದ್ಧಪ್ರಿಯರಾದ ರಾಜಪುತ್ರರು ಪರಮಾನಂದಭರಿತರಾದರು. ಅವರಲ್ಲಿ ಪ್ರಖ್ಯಾತನಾಗಿದ್ದ ಪ್ರತಿಯೊಬ್ಬ ಶೂರನೂ ರಾಜನಿಗೂ ನಹರ್‌ಘಡಕ್ಕೂ ಪ್ರತಿನಿಧಿಯಾಗಿ ನಿಂತು ದ್ವಂದ್ವಯುದ್ಧ ಮಾಡುವ ಭಾಗ್ಯಗೌರವವು ತನಗೆ ಲಭಿಸೀತೇ ಎಂದು ಹಾರೈಸುತ್ತಿದ್ದನು. ಆದರೆ ಕಮಲಾವತಿಯನ್ನು ಮಹಮ್ಮದೀಯನಿಗೆ ಮದುವೆಮಾಡಿಕೊಡುವ ಮಾತನ್ನು

ಮಾತ್ರ ಎಷ್ಟು ಮಾತ್ರವೂ ಒಪ್ಪದೆ ಎಲ್ಲರೂ ತುಚ್ಛವಾಗಿ ನಿರಾಕರಿಸಿಬಿಟ್ಟರು. ದ್ವಂದ್ವಯುದ್ಧಕ್ಕೆ ಮತ್ತಾವುದನ್ನು ಬೇಕಾದರೂ ಪಣವಾಗಿ ಒಡ್ಡಲು ಸಿದ್ಧವಾದ್ದರು; ಆದರೆ ಅಂತಃಪುರದವರ ಪ್ರಾಣಮಾನಗಳ ರಕ್ಷಣೆಗಾಗಿ ರಾಣಿವಾಸಕ್ಕೇ ಕಮಲಪ್ರಾಯಳಾಗಿದ್ದ ಕಮಲಾವತಿಯನ್ನು ಮಾತ್ರ ಆ ವಿಧವಾದ ಹೀನತ್ವಕ್ಕೂ ಅವಮರ್ಯಾದೆಗೂ ಗುರಿಮಾಡಲು ಎಷ್ಟುಮಾತ್ರವೂ ಒಡಂಬಡಲಿಲ್ಲ. ಈ ವಿಷಯದಲ್ಲಿ ರಾಜಪುತ್ರರು ಬಹು ಖಂಡಿತವಾಗಿದ್ದುದನ್ನು ನೋಡಿ ಫತ್ತೇಜಂಗನು ನಿರ್ವಾಹವಿಲ್ಲದೆ ಆ ಮಾತನ್ನು ಬಿಟ್ಟುಬಿಡಬೇಕಾಯಿತು. ಅನಂತರ ಬಹಳಕಾಲ ವಿಚಾರ ಮಾಡಿ ಕೊನೆಗೆ ಈ ರೀತಿಯಾಗಿ ನಿಶ್ಚಯಮಾಡಿಕೊಂಡರು. ಅದೇನಂದರೆ— ಫತ್ತೇಜಂಗನು ಗೆದ್ದರೆ ಅವನನ್ನೂ ಅವನ ಪರಿವಾರದವರನ್ನೂ ನಹರಘಡ್ ಸಂಸ್ಥಾನದಿಂದ ನಿರಪಾಯವಾಗಿ ಕಳುಹಿಸಿಕೊಡುವುದು ಮಾತ್ರವಲ್ಲದೆ ಅವರು ದೇವಸ್ಥಾನದಿಂದ ಅಪಹರಿಸಿದ ಚಿನ್ನಬೆಳ್ಳಿಗಳನ್ನೂ ಒಡವೆಗಳನ್ನೂ ಸಹ ಕೊಟ್ಟು ಕಳುಹಿಸಬೇಕು; ಹಾಗಾಗದೆ ಅವನು ಸೋತರೆ ಮಹಮ್ಮದೀಯರು ತಮ್ಮ ಶಸ್ತ್ರಾಸ್ತ್ರಗಳನ್ನೂ ಕೊಳ್ಳೆ ಹೊಡೆದ ಪದಾರ್ಥಗಳನ್ನೂ ಬಿಟ್ಟು ಜೀವಕ್ಕೆ ಮಾತ್ರ ಅಪೋಹವಿಲ್ಲದೆ ಹೊರಟುಹೋಗಬೇಕು; ಅಲ್ಲದೆ ಆ ದ್ವಂದ್ವಿಪ್ರತಿದ್ವಂದ್ವಿಗಳಲ್ಲಿ ಯಾರು ಗೆದ್ದರೂ ಸೋತವರ ಲೋಹಕವಚವನ್ನು ವಿಜಯಚಿಹ್ನವಾಗಿ ತೆಗೆದಿಟ್ಟುಕೊಳ್ಳಬಹುದು.

ಹೀಗೆ ಎಲ್ಲವೂ ನಿಷ್ಕರ್ಷೆಯಾದಬಳಿಕ ಉಭಯಪಕ್ಷದವರೂ ಆ ಒಪ್ಪಂದದ ಮೇರೆ ನಡೆದುಕೊಳ್ಳುವುದಾಗಿ ಒಪ್ಪಿಕೊಂಡು, ಮಹಮ್ಮದೀಯರು ಖೊರಾನನ್ನು ಮುಟ್ಟಿಯೂ ರಾಜಪುತ್ರರು ಗಂಗಾಭವಾನಿಯನ್ನು ಮುಟ್ಟಿಯೂ ಪ್ರಮಾಣ ಮಾಡಿದರು. ತರುವಾಯ ರಾಜನು ತನ್ನ ಪಕ್ಷವಾಗಿ ಫತ್ತೇಜಂಗನೊಡನೆ ದ್ವಂದ್ವಯುದ್ಧ ಮಾಡಲು ಯಾವ ವೀರನನ್ನು ಕಳುಹಿಸಬೇಕೆಂದು ನಿಶ್ಚಯಿಸುವುದಕ್ಕಾಗಿ ಒಂದು ಮಂತ್ರಾಲೋಚನ ಸಭೆಯನ್ನು ಕೂಡಿಸಿದನು. ಆ ಸಭೆಯಲ್ಲಿ ಸೇರಿದ್ದ ಪ್ರತಿಯೊಬ್ಬ ಸರದಾರನೂ ತಾನೇ ದ್ವಂದ್ವಯುದ್ಧಕ್ಕೆ ತಕ್ಕವನೆಂದು ತಿಳಿದುಕೊಂಡಿದ್ದುದರಿಂದ ತನ್ನನ್ನೇ ಗೊತ್ತುಮಾಡಬೇಕೆಂದು ಅಪೇಕ್ಷಿಸಿದನು. ಆದರೆ ಇತರರನ್ನು ಗೊತ್ತುಮಾಡುವ ಪಕ್ಷಕ್ಕೆ ಅಂತಃಪುರವನ್ನು ರಕ್ಷಿಸಿದ ಆ ದೀರ್ಘಾಕಾರನಾದ ರಾಮಸಿಂಗನೊಬ್ಬನೇ ಸರ್ವೋತ್ತಮನೆಂದು ಎಲ್ಲರೂ ಏಕಕಂಠರಾಗಿ ಹೇಳಿದರು. ಆದುದರಿಂದ ರಾಜನು ತನ್ನ ಪರವಾಗಿ ಒಬ್ಬ ವೀರನನ್ನು ಗೊತ್ತು ಮಾಡಬೇಕಾಗಿ ಬಂದಾಗ ರಾಮಸಿಂಗನನ್ನೇ ಗೊತ್ತು ಮಾಡಿದನು.

ತರುವಾಯ ಅರಮನೆಯ ಹೊರಬಾಗಿಲ ಮುಂದೆ ಸಮತಳವಾದ ಒಂದು ಪ್ರದೇಶದಲ್ಲಿ ದ್ವಂದ್ವಯುದ್ಧವು ನಡೆಯಬೇಕೆಂದು ಗೊತ್ತುಮಾಡಿದರು. ಆ ವೀರರಿಬ್ಬರೂ ಕತ್ತಿಗುರಾಣಿಗಳನ್ನು ಧರಿಸಿ ಯುದ್ಧಮಾಡಬೇಕೆಂದು ಗೊತ್ತಾಯಿತು. ಆ ದ್ವಂದ್ವಯುದ್ಧವನ್ನು ನೋಡಲು ಮಹಮ್ಮದೀಯರೆಲ್ಲರೂ ಅರಮನೆಯ ಬಾಗಿಲ

ಮುಂದೆ ಸಾಲಾಗಿ ಕುಳಿತುಕೊಂಡರು. ಎದಿರು ಕಡೆಯಲ್ಲಿ ನಹರ್‌ಘಡದ ಹಿಂದೂ ನಿವಾಸಿಗಳು ಬಂದು ರಂಗದಸುತ್ತಲೂ ಬಳಸಿಕೊಂಡು ಗುಂಪಾಗಿ ನಿಂತರು. ಅವರ ನಡುವೆ ಅರಮನೆಯ ಬಾಗಿಲೆದುರಿಗೆ ಹಾಕಿದ್ದ ಸಿಂಹಾಸನದಲ್ಲಿ ಮಹಾರಾಜನು ಜರತಾರಿ ದುಕೂಲವನ್ನು ಹೊದೆದು ಅನರ್ಘವಾದ ಕೆಂಪು ವಜ್ರಗಳಿಂದ ಥಳಥಳಿಸುತ್ತಿದ್ದ ದಿವ್ಯವಾದ ಕಿರೀಟವನ್ನು ಧರಿಸಿ ಮುಹೂರ್ತಮಾಡಿದನು. ರಾಣಿವಾಸದ ಮಹಿಳೆಯರೆಲ್ಲರೂ ಅರಮನೆಯ ಬಾಗಿಲ ಮೇಲಣ ಉಪ್ಪರಿಗೆಯಲ್ಲಿ ಕಣ್ಮರೆಯಾಗಿ ಕುಳಿತು ಅಮೃತಶಿಲಾಮಯವಾದ ಜಾಲಂದರಗಳಿಂದ ನೋಡುತ್ತ, ಕೆಳಗೆ ಯುದ್ಧಾಭಿಲಾಷಿಗಳಾಗಿ ನಿಂತಿದ್ದವರ ಮೇಲೆಯೂ ಇತರ ವೀರತರುಣರ ಮೇಲೆಯೂ ತಮ್ಮ ಕಟಾಕ್ಷಾಮೃತ ವರ್ಷವನ್ನು ಕರೆಯುತ್ತಿದ್ದರು.

ಹೀಗೆ ಎಲ್ಲವೂ ಸಿದ್ಧವಾದ ಮೇಲೆ ವೀರರಿಬ್ಬರೂ ಯುದ್ಧರಂಗಕ್ಕೆ ಬಂದು ನಿಂತರು. ಅವರು ಕತ್ತಿಗೆ ಕತ್ತಿಯನ್ನು ಸೋಕಿಸುವದರಲ್ಲಿದ್ದರು. ಅಷ್ಟರಲ್ಲಿಯೇ ರಾಣಿವಾಸದ ಆರ್ಯಮಹಿಳೆಯರಲ್ಲಿ ಯಾರಿಗೋ ಒಬ್ಬರಿಗೆ ಆ ದ್ವಂದ್ವಯುದ್ಧಲ್ಲಿದ್ದ ವಿಶೇಷವಾದ ಅಭಿನಿವೇಶವನ್ನು ತೋರ್ಪಡಿಸುವಂತೆ ಒಂದು ಅಸಮಾಧಾನಕರವಾದ ಸಂಗತಿ ನಡೆಯಿತು ಅದೇನಂದರೆ :—ಪತ್ತೇಜಂಗನು ಅಖಾಡಕ್ಕೆ ಬರುತ್ತ ಮಧ್ಯೆ ತನ್ನ ಕಡೆಯವರಿಗೆ ಏನೋ ಹೇಳಲು ಹಿಂತಿರುಗಿ ನಿಂತುಕೊಂಡನು. ಆ ವೇಳೆಗೆ ಸರಿಯಾಗಿ ಮೇಲೆ ಹೆಂಗಸರಿದ್ದ ಉಪ್ಪರಿಗೆಯ ಕಿಟಿಕಿಯಿಂದ ಒಂದ ಬಾಣವು ಹಾರಿಬಂದು ಅವನ ಲೋಹಕವಚದ ಮೇಲೆ ಹೃದಯದ ಬಳಿ ತಾಗಿ ಪಕ್ಕಕ್ಕೆ ಹಾರಿಬಿತ್ತು. ಇದನ್ನು ಕಂಡಕೂಡಲೆ ಮಹಮ್ಮದೀಯರು ಕತ್ತಿಗಳನ್ನು ಹಿರಿದುಕೊಂಡು ಗಟ್ಟಿಯಾಗಿ ಆರ್ಭಟಿಸುತ್ತ ಆ ವಿಧವಾದ ದ್ರೋಹಕಾರ್ಯದಿಂದ ತಮಗುಂಟಾದ ರೋಷವನ್ನು ವ್ಯಕ್ತಗೊಳಿಸಿದರು. ಆಚೆಯ ಪಾರ್ಶ್ವದಲ್ಲಿದ್ದ ಹಿಂದುಗಳೂ ಕೂಡ ಹುಚ್ಚಾಬಟ್ಟೆ ರೇಗಿಹೋದರು. ಹೀಗಾಗಿ ಎರಡು ಪಂಗಡದವರಿಗೂ ಕೈಕೈ ಸೇರಿಬಿಡುವಹಾಗೆ ತೋರಿತು. ಆದರೆ ಫತ್ತೇಜಂಗನು ಆ ಗಲಭೆಯನ್ನು ಅಡಗಿಸಿ, ತನ್ನ ಪರಿವಾರದವರ ಕೋಪವನ್ನು ಸಮಾಧಾನಮಾಡಿ, ಬಳಿಕ ಅಲ್ಲಿ ನೆರೆದಿದ್ದ ಜನರಕಡೆಗೆ ತಿರುಗಿಕೊಂಡು—ಇಗೋ ಈ ಬಾಣಕ್ಕೆ ಕಟ್ಟಿರುವ ಕಾಗದವನ್ನು ನೋಡಲಾಗಿ ಇದು ಕಮಲಾವತಿಯಿಂದ ಹೊಡೆಯಲ್ಪಟ್ಟುದೆಂದು ಗೊತ್ತಾಯಿತು. ರಾಜಪುತ್ರವೀರನು ಯಾವನೂ ತಾನು ಪ್ರಮಾಣಪೂರ್ವಕವಾಗಿ ಮಾಡಿಕೊಂಡ ನಿಯಮಗಳಿಗೆ ವಿರುದ್ಧವಾಗಿ ಹೀಗೆ ಮಾಡಲಾರನೆಂದು ನಮಗೆ ಸಂಪೂರ್ಣವಾದ ಭರವಸೆಯುಂಟು. ನಾವು ಯಾವ ಮಹಿಳಾಮಣಿಯ ಸೌಂದರ್ಯಾತಿಶಯದಿಂದ ಪ್ರೇರಿತರಾಗಿ ಈ ಸಾಹಸ ಕಾರ್ಯವನ್ನು ಕೈಕೊಂಡೆವೋ ಆ ನಾರೀಶಿರೋಮಣಿಯ ಹಸ್ತದಿಂದಲೇ ಇದು ಬಂದಿದೆ. ನಾವು ಕಮಲಾವತಿಯ ಸೌಂಧರ್ಯಾತಿಶಯವನ್ನು ಕೇಳಿದಾಗ ನಮ್ಮ ಹೃದಯವನ್ನು ಬಂದು ತಾಗಿದ

ಮನ್ಮಥಾಸ್ತ್ರ ವೇಗಕ್ಕೆ ಇದೇ ಸ್ಮಾರಕವೆಂದು ಭಾವಿಸುತ್ತೇವೆ—ಎಂದು ಗಟ್ಟಿಯಾಗಿ ಕೂಗಿ ಹೇಳಿದನು.

ಇದಾದ ತರುವಾಯ ಇಬ್ಬರು ವೀರರೂ ಕಳದೊಳಗೆ ಪ್ರವೇಶಿಸಿದರು. ಅವರಿಬ್ಬರೂ ತಮ್ಮ ತಮ್ಮ ಜಾತಿಯವರಲ್ಲಿ ಶ್ರೇಷ್ಠರಾಗಿದ್ದರು. ಇಬ್ಬರೂ ತಮ್ಮ ತಮ್ಮ ಶತ್ರುವು ಸಾಮಾನ್ಯನಲ್ಲವೆಂದು ಚೆನ್ನಾಗಿ ತಿಳಿದುಕೊಂಡಿದ್ದರು. ಆ ಇಬ್ಬರಲ್ಲಿ ರಾಜಪುತ್ರನೇ ಎತ್ತರವಾಗಿಯೂ ಜರುಬಾಗಿಯೂ ಇದ್ದನು. ಅವನು ತನ್ನ ಮೈ ಕೈಕಾಲುಗಳ ತುಂಬ ಕಬ್ಬಿಣದ ಸರಪಳಿಯಿಂದ ಮಾಡಿದ ಲೋಹದ ಕವಚವನ್ನು ತೊಟ್ಟಿದ್ದನು. ಅವನ ಕತ್ತಿಗೆಯ ಹಿಡಿಯು ವಿಚಿತ್ರವಾದ ಲೋಹಕಾರ್ಯದಿಂದ ಅಲಂಕೃತವಾಗಿತ್ತು. ಅದರಲ್ಲಿ ಸೊಗಸುತ್ತಿದ್ದ ಚಿತ್ರಗಳು ಕೂಡ ಅವನ ಹಿಡಿಯನ್ನು ಮತ್ತಷ್ಟು ಬಿಗಿಮಾಡವನುಕೂಲಿಸುವಂತೆ ಬಹು ಚಮತ್ಕಾರವಾಗಿ ರಚಿಸಲ್ಪಟ್ಟಿದ್ದುವು. ಬಾಗಿಕೊಂಡಿದ್ದ ಆ ಕತ್ತಿಯಲಗಿನಲ್ಲಿದ್ದ ಮೃಗಗಳ ಚಿತ್ರಗಳೆಲ್ಲಾ ಚಿನ್ನದ ಮಿರುಗಿನಿಂದ ಮಿರುಗುತ್ತಿದ್ದುವು. ಅವನು ಕಾಶ್ಮೀರದಲ್ಲಿ ಮಾಡಿದ ಗುರಾಣಿಯನ್ನು ಹಿಡಿದಿದ್ದನು. ಅದರ ಮಧ್ಯದಲ್ಲಿ ಮೊನೆಯಾದ ಒಂದು ಅಲಗನ್ನು ಬಲವಾಗಿ ನಾಟಿತ್ತು. ಆದಕಾರಣ ಅದನ್ನು ರಕ್ಷಣೋಪಾಯವಾಗಿ ಮಾತ್ರವಲ್ಲದೆ ಸಮಯಬಂದಾಗ ಶಸ್ತ್ರದಂತೆ ಕೂಡ ಉಪಯೋಗಿಸಿಕೊಳ್ಳಬಹುದಾಗಿತ್ತು. ಅವನು ಲೋಹದಿಂದ ಮಾಡಿದ ಸೀಸಕವನ್ನು ತಲೆಗೆಹಾಕಿಕೊಂಡಿದ್ದನು. ಅದರಿಂದ ಮರಸಿಹೋಗದೆ ಕಾಣುತ್ತಿದ್ದ ಅವನ ಮುಖಭಾಗವು ಪ್ರತಿಮೆಗಳಲ್ಲಿ ದೊರಕುವ ಮುಖಭಾವದಂತೆ ಸಮಪ್ರಮಾಣವಾಗಿ ರಂಜಿಸುತ್ತಿತ್ತು. ಅವನು ಪಶ್ಚಿಮಪ್ರಾಂತದ ರಾಜಪುತ್ರರ ಪದ್ಧತಿಗಳನುಸಾರವಾಗಿ ತನ್ನ ಗಡ್ಡದ ಕೂದಲಿನ ನಡುವೆ ಸ್ವಲ್ಪ ಭಾಗವನ್ನು ತೆಗಿಸಿ ಗಡ್ಡವನ್ನು ಎರಡುಭಾಗವಾಗಿ ಬಿಟ್ಟುಕೊಂಡಿದ್ದನು. ಹೆಚ್ಚು ವರ್ಣಿಸಲೇಕೆ? ಆತನು ರಾಜಪುತ್ರವೀರನಿಗಿರಬೇಕಾದ ಎಲ್ಲಾ ಲಕ್ಷಣಗಳನ್ನೂ ತಳೆದಿದ್ದನು. ಆದ ಪ್ರಯುಕ್ತವೇ ಕಮಲಾವತಿಯು ಆತನಲ್ಲಿ ವಿಶೇಷ ಪ್ರೇಮವನ್ನು ತೋರಿಸುತ್ತಿದುದು ಏನೂ ಆಶ್ಚರ್ಯವಲ್ಲ.

ಫತ್ತೇಜಂಗನು ಮುಖಭಾವದಲ್ಲಿಯೂ ಆಕೃತಿಯಲ್ಲಿಯೂ ಬೇರೆ ವಿಧವಾಗಿದ್ದನು. ಅವನ ಯುದ್ಧೋಪಕರಣವು ಬೇರೆ ತರವಾಗಿತ್ತು. ಅವನ ಮುಖವುಸಮಪ್ರಮಾಣವಾಗಿಲ್ಲದಿದ್ದರೂ ಅದರಲ್ಲಿದ್ದ ರೇಖೆಗಳೆಲ್ಲವೂ ಪರಾಕ್ರಮವನ್ನೂ ಮನೋದಾರ್ಢ್ಯವನ್ನೂ ಸೂಚಿಸುತ್ತಿದ್ದುವು ಅವನ ಕತ್ತಿಗುರಾಣಿಗಳೂ ಲೋಹಕವಚವೂ ಯಾವ ವಿಧವಾದ ಅಲಂಕಾರಗಳಿಂದ ಒಪ್ಪುತ್ತಿರಲಿಲ್ಲವಾದರೂ, ಸರ್ವೋತ್ತಮವಾದ ಲೋಹನಿರ್ಮಿತವಾಗಿ ತಳತಳನೆ ಹೊಳೆಯುತ್ತ, ಸೀಸಕದಲ್ಲಿಯೂ ಗುರಾಣಿಯಲ್ಲಿಯೂ ಎದೆಪಟ್ಟಿಯಲ್ಲಿಯೂ ಇನ್ನೂ ಕಾಣಿಸುತ್ತಿದ್ದ ಗುರುತುಗಳಿಂದ ಅನೇಕ ಕಠೋರಕದನಗಳಲ್ಲಿ ಹೊಡೆದಾಡಿ ಇನ್ನೂ ದೃಢವಾಗಿ ಬಂದುದನ್ನು ಸೂಚಿಸುತ್ತಿದ್ದುವು. ಅವನು ಉದ್ದದಲ್ಲಿ ಮಾತ್ರ ರಾಮಸಿಂಗನಿಗಿಂತ ಅರೆತಲೆಯಷ್ಟು

ಕುಳ್ಳಾಗಿದ್ದನು ; ಆದರೆ ಅವನ ಎದೆ ವಿಶಾಲವಾಗಿಯೂ ತೋಳುಗಳು ನೀಳವಾಗಿಯೂ ಬಲವಾಗಿಯೂ ಇದ್ದುವು. ಲೋಹಕವಚದಲ್ಲಿ ಅಡಗಿದ್ದ ರಾಜಪುತ್ರನ ದೇಹವು ಮುಂದೆ ಬೊಜ್ಜು ಬರುವುದಕ್ಕೆ ತಕ್ಕ ಮೈಯಂತೆ ಕಾಣಿಸುತ್ತಿತ್ತು ; ಆದರೆ ಮುಸಲ್ಮಾನನ ಮೈಯಲ್ಲಾ ಬರಿ ಮೂಳೆಯೂ ಮಾಂಸಖಂಡವೂ ಆಗಿತ್ತು.

ಪ್ರಾಣಾಂತಿಕವಾದ ಕಲಹಕ್ಕೆ ಸನ್ನದ್ಧರಾಗಿ ನಿಂತಿದ್ದ ಆ ಇಬ್ಬರು ವೀರರೂ ಈರೀತಿಯಾಗಿದ್ದರು. ಅವರಿಬ್ಬರೂ ರಂಗವನ್ನು ಹೊಕ್ಕಬಳಿಕ ಒಬ್ಬರೊಬ್ಬರ ಸಮೀಪಕ್ಕೆ ಹೋಗಿ ಸಂಧಿಸಿದರು. ಆಗ ರಾಜಪುತ್ರನು ಮುಸಲ್ಮಾನನ್ನು ಕುರಿತು—ನೀನು ಮೊದಲನೆಯ ಪೆಟ್ಟು ಹೊಡೆ—ಎಂದು ಹೇಳಿದನು. ಈ ಮಾತನ್ನು ಅವನು ವೀರಜನೋಚಿತವಾದ ಉದಾರಹೃದಯದಿಂದ ಹೇಳಿದನೋ ಇಲ್ಲವೇ ತಾನೇ ಮೇಲುಗೈಯೆಂಬ ಹೆಮ್ಮೆಯಿಂದ ಹೇಳಿದನೋ ತಿಳಿಯಲಿಲ್ಲ. ಆದರೂ ಕೈಗಾರನಾದ ಪತ್ತೇಜಂಗನು ತಾನು ಯುದ್ಧರಂಗವನ್ನು ಹೊಕ್ಕಮೇಲೆ ಸರ್ವಸಾಹಸವನ್ನೂ ಮಾಡಿ ನ್ಯಾಯಮಾರ್ಗದಲ್ಲಿ ಶತ್ರುಸಂಹಾರಮಾಡುವುದೇ ತನ್ನ ಧರ್ಮವೆಂದು ತಿಳಿದಿದ್ದಕಾರಣ, ಆ ಮಾತಿಗೆ ಒಪ್ಪಿ ತನ್ನ ಖಡ್ಗದಿಂದ ಶತ್ರುವನ್ನು ಬಲವಾಗಿ ಪ್ರಹರಿಸಿದನು. ರಾಜಪುತ್ರನು ತನ್ನ ಖಡ್ಗದಿಂದ ಆ ಪ್ರಹಾರದ ವೇಗವನ್ನು ತಡೆದರೂ ಕೂಡ ಅದು ಅವನ ಸೀಸಕದಲ್ಲಿದ್ದ ಶಿರ್‌ಪೇಷ್ ತುರಾಯನ್ನು ಕತ್ತರಿಸಿಬಿಟ್ಟಿತು. ಅನಂತರ ಇಬ್ಬರೂ ಮಹಾವೇಗದಿಂದ ಪ್ರಹಾರ ಮಾಡುತ್ತ ಒಬ್ಬರೊಬ್ಬರ ಮೈಯಲ್ಲಿ ಗಾಯಗಳನ್ನು ಕಾಣಿಸುತ್ತ ಹೋರಾಡ ತೊಡಗಿದರು. ಮಹಮ್ಮದೀಯನು ಮಹಾರಭಸದಿಂದ ಖಡ್ಗಪ್ರಯೋಗ ಮಾಡುತಿದ್ದಕಾರಣ ರಾಜಪುತ್ರನು ಬಹುಕಾಲದ ವರೆಗೆ ಆತ್ಮರಕ್ಷಣವ್ಯಾಪಾರದಲ್ಲಿಯೇ ತೃಪ್ತನಾಗಿರಬೇಕಾಯಿತು. ಆದರೂ ಯುದ್ಧವು ಸರಿಗೈಯಾಗಿರುತ್ತಿತ್ತು. ರಾಮಸಿಂಗನೂ ಖಡ್ಗಪ್ರಯೋಗದಲ್ಲಿ ಪ್ರಚಂಡನಾಗಿದ್ದನು. ಅವನ ದೀರ್ಘಾಕಾರವು ಅವನಿಗೆ ಸ್ವಲ್ಪ ಸಹಾಯವಾಗಿತ್ತು. ಈಗ ಅವನು ಇಕ್ಕಟ್ಟಿನಲ್ಲಿ ಸಿಕ್ಕಿದ್ದರೂಕೂಡ ವೀರಜನೋಚಿತವಾದ ತನ್ನ ಉದಾರಭಾವವನ್ನು ಬಿಡಲಿಲ್ಲ. ಹೇಗೆಂದರೆ ಫತ್ತೇಜಂಗನು ಖಡ್ಗಪ್ರಯೋಗಮಾಡುತ್ತ ಬರುವಾಗ ಒಂದು ಕಲ್ಲಿನಮೇಲೆ ಕಾಲಿಟ್ಟು ಜಾರಿ ಬಿದ್ದುಬಿಟ್ಟನು. ಆಗ ರಾಮಸಿಂಗನು ಶತ್ರುವನ್ನು ಸಂಹರಿಸದೆ ಏಳುವವರೆಗೂ ತನ್ನ ಕತ್ತಿಯನ್ನು ತಗ್ಗಿಸಿ, ಯುದ್ಧಾರಂಭದಲ್ಲಿ ತೋರಿಸಿದಂತೆಯೇ ಈಗಲೂ ತನ್ನ ಉದಾರಾತಿಶಯವನ್ನು ಪ್ರಕಟಪಡಿಸಿದನು. ಈ ಕಾರ್ಯವನ್ನು ನೋಡಿ ನೋಟಕರೆಲ್ಲರೂ ಹಲವರು ಹಲವು ವಿಧವಾಗಿ ಆಡಿಕೊಂಡರು. ಉದಾರಮನಸ್ಕರಾದ ಕೆಲವರು ಅದನ್ನು ಶ್ಲಾಘಿಸಿದರು ; ಮತ್ತೆ ಹಲವರು ಇಂಥ ಪ್ರಬಲಶತ್ರುವಿನೊಡನೆ ಹೋರಾಡುವಾಗ ಅಪ್ರಾರ್ಥಿತವಾಗಿ ದೊರಕಿದ ಸಮಯವನ್ನು ಕಳೆದುಕೊಂಡುದು ಶುದ್ಧ ಮುಠ್ಠಾಳತನವೆಂದು ಹೀಯಾಳಿಸಿದರು. ಇದಾದ ಸ್ವಲ್ಪಕಾಲಕ್ಕೆಲ್ಲಾ ರಾಮಸಿಂಗನು ಶತ್ರುವಿನ ನಿರಂತರವಾದ ಖಡ್ಗಪ್ರಹಾರದಿಂದ

ಬಳಲಿ, ಮೈಯೆಲ್ಲಾ ಬೆವತು, ಉಸಿರು ಬಿಡುವುದಕ್ಕೆ ಕೂಡ ಬಿಡುವಿಲ್ಲದೆ ಕಂಗೆಟ್ಟು ಹೋದನು. ಆಗ ತಾನು ಸಮಯವನ್ನು ಕಳೆದುಕೊಂಡುದು ತಪ್ಪೆಂದು ಅವನೂ ಕೂಡ ಯೋಚಿಸಿರಬಹುದು. ಬಳಿಕ ಯುದ್ಧವು ಹಾಗೆಯೇ ಇನ್ನು ಸ್ವಲ್ಪಕಾಲ ನಡೆದರೆ ಬಳಲಿಕೆಯಿಂದ ತಾನು ಸೋತುಹೋಗಬಹುದೆಂದು ಅಂಜಿ, ರಾಮಸಿಂಗನು ಕೊನೆಗೆ ಸರ್ವಪ್ರಯತ್ನದಿಂದಲೂ ಕಲಹವನ್ನು ಕ್ಷಿಪ್ರದಲ್ಲಿಯೇ ಕೊನೆಗಾಣಿಸಬೇಕೆಂದು ಸಂಕಲ್ಪಮಾಡಿಕೊಂಡು, ಮೊಗಲನ ಕತ್ತಿಯ ಪೆಟ್ಟನ್ನು ತಪ್ಪಿಸಿ ಅವನು ಹೊಡೆದರೂ ತಿರುಗಿ ಹೊಡೆಯದೆ ತನ್ನ ಗುರಾಣಿಯ ಮರೆಯಲ್ಲಿ ಮೈಯನ್ನು ಅಡಗಿಸಿಕೊಂಡು, ತನ್ನ ಭಾರವನ್ನೆಲ್ಲಾ ಬಿಟ್ಟು ಮಹಾರಭಸದಿಂದ ಹೋಗಿ ನೆಟ್ಟಗೆ ಶತ್ರುವಿನಮೇಲೆ ಬಿದ್ದನು. ಅಷ್ಟೊಂದು ರಭಸದಿಂದ ಹಠಾತ್ತಾಗಿ ಮೇಲೆ ಬಂದು ಬಿದ್ದ ಶತ್ರುವನ್ನು ಫತ್ತೇಜಂಗನ ಕತ್ತಿಯೂ ಕೂಡ ತಡೆಯಲಾರದೆ ಹೋಯಿತು. ರಾಮಸಿಂಗನ ಗುರಾಣಿಯ ನಡುವೆ ನಟ್ಟಿದ್ದ ಅಲಗು ಮೊಗಲನ ಕೊರಳಿನಲ್ಲಿ ನಾಟಿಕೊಂಡು ಭಯಂಕರವಾದ ಗಾಯವನ್ನು ಉಂಟುಮಾಡಿತು. ರಾಜಪುತ್ರನ ಭಾರದಿಂದ ಮುಸಲ್ಮಾನನು ನಾಲ್ಕಾರು ಹೆಜ್ಜೆ ಹಿಮ್ಮೆಟ್ಟಿ ಕೆಳಗೆ ಬೀಳುವುದರಲ್ಲಿದ್ದು ಬಹು ಪ್ರಯಾಸದಿಂದ ಬೀಳದೆ ನಿಂತನು. ಆದರೂ ಕೊನೆಗೆ ಅವನು ಹೇಗೆಯೋ ತಪ್ಪಿಸಿಕೊಂಡು ತಟ್ಟನೆ ಒಂದು ಪಕ್ಕಕ್ಕೆ ಹಾರಿ, ಹಾರುವಾಗಲೇ ತನ್ನ ಶತ್ರುವಿನ ಸೀಸಕದ ಮೇಲೆ ಬಹು ದೃಢವಾಗಿ ಪ್ರಹಾರಮಾಡಿದನು. ಆ ಪೆಟ್ಟಿನ ವೇಗವನ್ನು ಸಹಿಸಲಾರದೆ ರಾಜಪುತ್ರನು ಮೂರ್ಛಾಕ್ರಾಂತನಾಗಿ ನೆಲದಲ್ಲಿ ಬಿದ್ದುಬಿಟ್ಟನು. ಕೊರಳ ಗಾಯದಿಂದ ರಕ್ತಹರಿದು ಎದೆಪಟ್ಟೆಯೆಲ್ಲವೂ ತೊಯ್ದುಹೋಗಿ ಫತ್ತೇಜಂಗನು ಮೃತ್ಯುಮುಖದಲ್ಲಿ ಸಿಕ್ಕಿದವನಂತೆ ಕಾಣುತ್ತಿದ್ದರೂ, ಕೊನೆಗೆ ಅವನೇ ಜಯಶಾಲಿಯಾಗಿ ನಿಂತನು.

ಹೀಗಾದರೂಕೂಡ ರಾಜಪುತ್ರರು ತಮ್ಮ ಮಾತಿಗೆ ಸ್ವಲ್ಪವೂ ತಪ್ಪದೆ ಒಪ್ಪಂದದ ಪ್ರಕಾರ ಎಲ್ಲವನ್ನೂ ನಡಿಸಿಕೊಟ್ಟರು. ಫತ್ತೇಜಂಗನೂ ಅವನ ಪರಿಜನರೂ ತಮ್ಮ ಶಾಸ್ತ್ರಗಳನ್ನೂ ತಾವು ಅರಮನೆಯನ್ನು ಪ್ರವೇಶಿಸಿದ ಕೂಡಲೆ ಅಲ್ಲಿ ಕೊಳ್ಳೆ ಮಾಡಿದ್ದ ವಸ್ತುಗಳನ್ನೂ ತೆಗೆದುಕೊಂಡು ನಹರಘಡದಿಂದ ನಿರಪಾಯವಾಗಿ ಹೊರಟುಹೋದರು. ಅನಂತರ ಶತ್ರುವಿನ ಖಡ್ಗಪ್ರಹಾರದಿಂದ ಮೂರ್ಛಿತನಾಗಿ ಬಿದ್ದಿದ್ದ ರಾಮಸಿಂಗನುಕೂಡ ಸ್ವಲ್ಪಹೊತ್ತಿಗೆ ಚೇತರಿಸಿಕೊಂಡನು. ಇದಾದ ಕೆಲವುಕಾಲದಲ್ಲಿಯೇ ರಾಮಸಿಂಗನಿಗೂ ಕಮಲಾವತಿಗೂ ವಿವಾಹ ಮಹೋತ್ಸವವು ಬೆಳೆಯಿತು.

---

## ದೇಶಭ್ರಷ್ಟ.

ಅನೇಕವರ್ಷಗಳಿಗೆ ಹಿಂದೆ ಒಂದಾನೊಂದು ದಿವಸ ರಾಜಪುಟಾಣದ ಒಂದು ದೊಡ್ಡ ಪಟ್ಟಣದ ದಕ್ಷಿಣದ್ವಾರದಿಂದ ಸುಮಾರು ಒಂದು ಸಾವಿರಮಂದಿ ಸೈನಿಕರು ಹೊರಟುಬರುತ್ತಿದ್ದರು. ಅವರ ಮುಖದಲ್ಲಿ ಆಹ್ಲಾದದ ಚಿಹ್ನೆಯಾಗಲಿ ಪರಾಕ್ರಮದ ಲಕ್ಷಣವಾಗಲಿ ಪ್ರತಾಪದ ಸೂಚನೆಯಾಗಲಿ ಯಾವುದೂ ಕಾಣಬರುತ್ತಿರಲಿಲ್ಲ. ಅವರು ಯುದ್ಧರಂಗವನ್ನು ಹೊಕ್ಕು ತಮ್ಮ ದೇಶದ ಸ್ವಾತಂತ್ರ್ಯವನ್ನು ಪಡೆದು ಕೊಳ್ಳುವುದಕ್ಕೂ ಯಶಸ್ಸನ್ನು ಅರ್ಜಿಸಿ ಕೊಳ್ಳುವುದಕ್ಕೂ ತಕ್ಕ ವೀರರಾಗಿದ್ದಾಗ್ಯೂ, ಈಗ ಅವರ ಮುಖವು ದುಃಖದಿಂದ ಮಲಿನವಾಗಿತ್ತು. ಅವರು ರಣಗೀತಿಯನ್ನೂ ಹಾಡದೆ ಒಂದು ಮಾತನ್ನು ಕೂಡ ಆಡದೆ ಮೌನವಾಗಿ ಹೋಗುತ್ತಿದ್ದರು. ಅದರಲ್ಲೂ ಅವರ ಸೇನಾನಾಯಕನಾದ ರಾಜಕುಮಾರನು ಅತ್ಯಂತ ದುಃಖಾಕ್ರಾಂತನಾಗಿದ್ದನು. ಆತನ ಉಡುಪಿನಿಂದಲೇ ಆತನಿಗೂ ಆತನ ಪರಿಜನಕ್ಕೂ ಪ್ರಾಪ್ತವಾದ ದುಃಖಕ್ಕೆ ಕಾರಣವೇನೆಂಬುದು ಗೊತ್ತಾಗುತ್ತಿತ್ತು. ಅವನು ಕರಿಯಬಟ್ಟೆಯ ಉಡುಪನ್ನು ಹಾಕಿಕೊಂಡಿದ್ದನು. ಅವನ ಗುರಾಣಿಗೂ ಕತ್ತಿಯ ಒರೆಗೂ ಕರಿಯಬಣ್ಣ ಹಾಕಿತ್ತು. ಅವನು ಸವಾರಿ ಮಾಡುತ್ತಿದ್ದ ಕುದುರೆ ಸಹ ಕರಿಯ ಬಣ್ಣದ್ದಾಗಿತ್ತು. ಇದನ್ನೆಲ್ಲಾ ನೋಡಿದರೆ ಅವನಿಗೆ ದೇಶಪರಿತ್ಯಾಗವನ್ನು ವಿಧಿಸಿದ್ದಂತೆ ವ್ಯಕ್ತವಾಗಿ ಕಾಣುತ್ತಿತ್ತು. ಈ ಕಾರಣದಿಂದ ಅವನು ತಾನು ಹುಟ್ಟಿ ಬೆಳೆದ ಸೀಮೆಯನ್ನು ಬಿಟ್ಟು ಬಿಟ್ಟು ಯಾವಜ್ಜೀವವೂ ಬೇರೆಕಡೆ ಇರಬೇಕಾಯಿತು. ಇಂಥ ಘೋರವಾದ ಶಿಕ್ಷೆಯನ್ನನುಭವಿಸಲು ಅವನು ಮಾಡಿದ ತಪ್ಪೇನು ? ಧೀರ ದೇಶದ ರಾಜನ ಹಿರಿಯಮಗನಾಗಿ ಹುಟ್ಟಿದುದೇ ಅವನ ತಪ್ಪು. ಅವನು ಉದಾರವಾದ ಆಕಾರವಿಶೇಷದಿಂದಲೂ, ಶ್ಲಾಘ್ಯವಾದ ಶೀಲದಿಂದಲೂ, ಘೋರವಾದ ಅನೇಕ ಯುದ್ಧರಂಗಗಳಲ್ಲಿ ಪ್ರಕಟಪಡಿಸಿದ ಅನ್ಯಾದೃಶವಾದ ಪ್ರತಾಪದಿಂದಲೂ, ಸರ್ವಪ್ರಕಾರದಲ್ಲಿಯೂ ಸಿಂಹಾಸನಕ್ಕೆ ಯೋಗ್ಯನಾಗಿದ್ದನು. ಆದರೂ ಅವನ ತಂದೆಯು ತನ್ನ ಕಿರಿಯಹೆಂಡತಿಯಾದ ಸೂಜಾಬಾಯಿಯ ಮೇಲಣ ವಿಶ್ವಾಸದಿಂದಲೂ ಅವಳ ಹೊಟ್ಟೆಯಲ್ಲಿ ಹುಟ್ಟಿದ ತನ್ನ ಕಿರಿಯ ಮಗನ ಮೇಲಣ ಮೋಹದಿಂದಲೂ ಅವಳ ಮಾತಿಗೆ ಮರುಳಾಗಿ ತನ್ನ ಹಿರಿಯ ಮಗನ ಹಕ್ಕನ್ನು ತಪ್ಪಿಸಿ, ತನ್ನ ಕಿರಿಯ ಮಗ ಬಪ್ಪಲಾಲನನ್ನೇ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ ಗೊತ್ತುಮಾಡಿದನು. ಹೀಗಾಗಿ ಬಪ್ಪಲಾಲನು ಇನ್ನೂ ಹದಿನೈದು ವಯಸ್ಸಾಗುವುದಕ್ಕೆ ಮುಂಚೆಯೇ ತನ್ನ ಮುದಿತಂದೆಯು ಎಂದಿಗೆ ಸತ್ತು ತನಗೆ ಪಟ್ಟವಾಗುವುದೋ ಎಂದು ತಹತಹಪಡುತ್ತ ಅರಮನೆಯಲ್ಲಿರುತ್ತಿದ್ದನು ; ಅವನ ಅಣ್ಣನಾದ ಹಿಮ್ಮತ್‌ಸಿಂಗನು ತನ್ನ ಭಾಗ್ಯದೇವತೆಯನ್ನು ಅರಸುತ್ತ ಅನ್ಯದೇಶಕ್ಕೆ ಹೋಗುತ್ತಿದನು. ಆದರೂ ಈಗ

ಹಿಮ್ಮತ್‌ಸಿಂಗನು ಏಕಾಕಿಯಾಗಿ ಒಬ್ಬನೇ ಹಾಗೆ ಹೋಗುತ್ತಿರಲಿಲ್ಲ ; ಅವನ ಪಕ್ಕದಲ್ಲಿದ್ದು ಯುದ್ಧಮಾಡಿ ಅನೇಕ ರಣರಂಗಗಳಲ್ಲಿ ವಿಜಯಲಕ್ಷ್ಮಿಯನ್ನು ಒಲಿಸಿದ ಸಾವಿರ ಮಂದಿ ವೀರರು ಇಂಥ ವಿಪತ್ಕಾಲದಲ್ಲಿ ಸ್ವಾಮಿಯನ್ನು ಬಿಟ್ಟಿರಲೊಲ್ಲದೆ, ತಾವೂ ದೇಶಪರಿತ್ಯಾಗಮಾಡಿ ಅವನ ಸಂಗಡ ಹೊರಟು ಬರುತ್ತಿದ್ದರು. ಇಂಥ ಆಪ್ತಭೃತ್ಯರು ಊರಲ್ಲಿ ನಿಂತರೆ ಮುಂದೆ ಬಪ್ಪಲಾಲನ ಪಟ್ಟಾಭಿಷೇಕಕ್ಕೆ ಏನಾದರೂ ಅಡಚನೆಯುಂಟಾಗಬಹುದೆಂದು ಯೋಚನೆಮಾಡುತ್ತಿದ್ದ ವೃದ್ಧರಾಜನು ಆ ಸೈನಿಕರ ಅನುಗಮನ ವಿಷಯದಲ್ಲಿ ಇಷ್ಟವುಳ್ಳವನಾಗಿಯೇ ಇದ್ದನು

ಆ ದೇಶಭ್ರಷ್ಟರಾದವರಲ್ಲ ಅನೇಕರು ಇನ್ನೂ ಪ್ರಾಯದವರಾಗಿದ್ದರು. ಪ್ರಾಯದವರ ಮನಸ್ಸು ಎಲ್ಲಾದರೂ ಶೋಕಪಾಶಕ್ಕೆ ದೀರ್ಘಕಾಲ ಒಳಗಾಗಿರುವುದುಂಟೋ ? ಹಾಗೆಯೇ ಸ್ವಲ್ಪದೂರ ಹೋದ ಬಳಿಕ, ತಮ್ಮೂರಿನ ಗುಡಿಗೋಪುರಗಳೂ ಅರಮನೆಯ ಶಿಖರವೂ ಕಣ್ಮರೆಯಾದುವೋ ಇಲ್ಲವೋ ಎನ್ನುವ ವೇಳೆಗೆ, ಅವರೆದೆಯಲ್ಲಿ ಉಲ್ಲಾಸವು ತಲೆಯೆತ್ತಲಾರಂಭಿಸಿತು. ಅವರಲ್ಲಿ ಸಾಹಸಗಾರರಾದವರು ತಮ್ಮ ದೇಶದಲ್ಲಿ ತಮಗೆ ತಪ್ಪಿಹೋದ ಮಾನ ಮರ್ಯಾದೆಗಳನ್ನೂ ಸಂಪತ್ತನ್ನೂ ಮುಂದೆ ಅನ್ಯದೇಶಗಳಲ್ಲಿ ತಮ್ಮ ಖಡ್ಗಸಹಾಯದಿಂದ ಸಂಪಾದಿಸಿಕೊಳ್ಳಬಹುದೆಂದು ಉತ್ಸಾಹಯುಕ್ತರಾದರು. ಆ ರೀತಿಯಲ್ಲಿ ಅವರು ಬಹುದೂರ ಪ್ರಯಾಣಮಾಡಿ ಮಾರ್ಗದಲ್ಲಿ ಸಿಕ್ಕಿದ ಒಂದು ಮಹಾರಣ್ಯದಲ್ಲಿ ನಿರ್ಮಲವಾದ ಒಂದು ನದೀತೀರದಲ್ಲಿ ಬೀಡಾರಬಿಟ್ಟರು. ಕೂಡಲೆ ಕೆಲವರು ಧನುರ್ಬಾಣಗಳನ್ನು ತೆಗೆದುಕೊಂಡು ಕಾಡನ್ನು ಹೊಕ್ಕು ಬೇಟೆಯಾಡಿ ಮಧ್ಯಾಹ್ನದ ಆಹಾರಕ್ಕೆ ಬೇಕಾದಹಾಗೆ ಸಂಪಾದಿಸಿಕೊಂಡು ಬಂದರು. ಊಟವಾದ ಬಳಿಕ ಎಲ್ಲರೂ ಕುಳಿತುಕೊಂಡು ತಾವು ಮುಂದೆ ಏನು ಮಾಡಬೇಕು ? ಎಲ್ಲಿಗೆ ಹೋಗಬೇಕು ? ಎಂದು ಮೊದಲಾಗಿ ವಿಚಾರ ಮಾಡಿದರು. ಅವರು ಊರಬಿಟ್ಟು ಹೊರಡುವ ಕಾಲದಲ್ಲಿ ಅತ್ಯಂತ ಖಿನ್ನರಾಗಿದ್ದ ಕಾರಣ ಈ ವಿಷಯವನ್ನು ವಿಚಾರ ಮಾಡಿ ನಿಷ್ಕರ್ಷಿಸಿರಲಿಲ್ಲ. ಈಗ ವಿಚಾರಮಾಡುವಲ್ಲಿ ಕೆಲವರು ಪುನಃ ನಗರಪ್ರವೇಶವನ್ನು ಪಡೆದುಕೊಳ್ಳುವ ತಾತ್ಪರ್ಯದಿಂದ ಪರ್ವತಪ್ರಾಂತಗಳನ್ನು ಹೊಕ್ಕು ದೇಶಕ್ಕೆ ವಿರೋಧವಾಗಿ ಸೈನ್ಯವನ್ನು ಕಟ್ಟಬೇಕೆಂದು ಅಭಿಪ್ರಾಯಪಟ್ಟರು. ಹಿಮ್ಮತ್‌ಸಿಂಗನು ಆ ಮಾತನ್ನು ಕೇಳಿ—ಏನು ? ನಾವು ನಮ್ಮ ದೇಶಾಭಿಮಾನವನ್ನೂ ದೇಶಪ್ರವೇಶಾಸಕ್ತಿಯನ್ನೂ ಒಳನಾಡ ಜಗಳ ವೆಬ್ಬಿಸುವುದರಮೂಲಕ ತಿಳಿಯಪಡಿಸಬೇಕೆ ? ಛೆ, ಛೆ, ಇದು ಇಷ್ಟುಮಾತ್ರವೂ ಸರಿಯಲ್ಲ ! ಹೀಗೆ ಮಾಡುವುದಕ್ಕೆ ಪ್ರತಿಯಾಗಿ ನಾವೆಲ್ಲರೂ ನಮ್ಮ ದೇಶಕ್ಕೂ ನಮ್ಮ ಮತಕ್ಕೂ ವೈರಿಗಳಾದವರ ಮೇಲೆ ನಮ್ಮ ಖಡ್ಗವನ್ನು ಪ್ರಯೋಗಿಸಿ ನಮ್ಮ ಜನ್ಮವನ್ನು ಸಾರ್ಥಕಗೊಳಿಸೋಣ. ಇಂಡಿಯಾ ದೇಶದಲ್ಲಿ ಬಂದು ತುಂಬಿಕೊಂಡಿರುವ ಅಪ್ಘಾನರನ್ನೂ ಮೊಗಲರನ್ನೂ ಹೊಡೆದಟ್ಟುವುದಕ್ಕೆ ಪ್ರತಿಯಾಗಿ ರಾಜಪುತ್ರರು ನಾವೇ ಒಬ್ಬರೊಬ್ಬರನ್ನು ಕೊಂದು ಹಿಗ್ಗ

ಬೇಕೆ ?—ಎಂದು ಹೇಳಿದನು. ಈ ಉದಾರವಾದ ವಾಕ್ಯಗಳನ್ನು ಕೇಳಿ ಅವರ ಎದೆಯಲ್ಲಿ ಅಡಗಿಹೋಗಿದ್ದ ಉತ್ಸಾಹವು ಮತ್ತೆ ಹುರಿಗೊಂಡಿತು. ಕೂಡಲೆ ಅವರೆಲ್ಲರೂ ಎದ್ದು ನಿಂತು ತಮ್ಮ ಕತ್ತಿಗಳನ್ನು ಝಳಪಿಸುತ್ತ ಮಹಾ ಪ್ರಭೂ, ನಾವೆಲ್ಲರೂ ತಮ್ಮ ಆಜ್ಞಾಧಾರಕರಾಗಿ ಎಲ್ಲಿಗೆ ಎಂದರ ಅಲ್ಲಿಗೆ ಯುದ್ಧಕ್ಕೆ ತೆರಳುವೆವು. ತಾವು ಮೊಗಲಾಯಿ ರಾಜ್ಯದ ನಟ್ಟನಡುವಿಗೆ ಕರೆದುಕೊಂಡು ಹೋದರೂ ತಮ್ಮ ಬೆಂಬಳಿಯಲ್ಲಿ ಬರಲು ಸಿದ್ಧರಾಗಿರುವೆವು—ಎಂಬುದಾಗಿ ಸಿಂಹನಾದಮಾಡಿ ಹೇಳಿದರು.

ಅನಂತರ ಈ ಉದ್ದೇಶಾನುಸಾರವಾಗಿ ಅವರೆಲ್ಲರೂ ರಾಜಪುಟಾಣದ ಹೊರಗೆ ಮೊಗಲ್ ಸಂಸ್ಥಾನದಲ್ಲಿ ಮೂರು ದಿವಸ ಪಯಣದಲ್ಲಿದ್ದ ಬಾರ್ ಎಂಬ ಬಲವಾದ ಗಿರಿದುರ್ಗದಮೇಲೆ ಹೋಗಿ ಬೀಳಬೇಕೆಂದು ನಿಷ್ಕರ್ಷೆಯಾಯಿತು. ಆಗ ಮೊಗಲಾಯಿ ಚಕ್ರವರ್ತಿಯು ರಾಜಪುಟಾನ ಪ್ರಾಂತದಿಂದ ತನಗೆ ಯಾವ ಅಪಾಯವೂ ಬರಲಾರದೆಂದೆಣಿಸಿ ನೆರೆಹೊರೆಯಲ್ಲಿಟ್ಟಿದ್ದ ಸೇನೆಯನ್ನೆಲ್ಲಾ ತೆಗೆದುಕೊಂಡು ಒಂದು ಭಾರಿ ಸೇನೆಯೊಡನೆ ಗುಜರಾತಿಗೆ ಹೋಗಿದ್ದನು. ಆದರಿಂದ ರಾಜಪುಟಾಣದ ಪಾರ್ಶ್ವದಲ್ಲಿದ್ದ ಮೊಗಲಾಯ್ ಕೋಟೆಗಳಲ್ಲಿ ಬಲವಾದ ಕಾವಲಿರಲಿಲ್ಲವೆಂದು ಊಹಿಸುವುದಕ್ಕೆ ಸಾಕಾದಷ್ಟು ಕಾರಣವಿತ್ತು. ಆ ಸಮಯದಲ್ಲಿ ಹಿಮ್ಮತ್‌ಸಿಂಗನೂ ಅವನ ರಾಜಪುತ್ರ ಸೈನಿಕರೂ ಧೈರ್ಯವಾಗಿ ನುಗ್ಗಿ ಬಾರ್ ದುರ್ಗದ ಮೇಲೆ ಹಠಾತ್ತಾಗಿ ಕಾಣಿಸಿಕೊಂಡಲ್ಲಿ ಅವರು ವಿಶೇಷ ಪ್ರಯಾಸವಿಲ್ಲದೆ ಆ ದುರ್ಗವನ್ನು ಹಿಡಿದುಕೊಳ್ಳಬಹುದಾಗಿತ್ತು. ಅವರು ದುರ್ಭೇದ್ಯವಾದ ಆ ದುರ್ಗದ ದೃಢವಾದ ಕೋಟೆಯೊಳಕ್ಕೆ ಹೊಕ್ಕರು ಎಂದರೆ ಸಾಕು ; ಅಲ್ಲಿಂದ ಮುಂದೆ ಮೊಗಲರ ಸೇನೆಯನ್ನು ಬಹುಕಾಲ ಪರೆದಾಡಿಸುವುದು ಮಾತ್ರವೇ ಅಲ್ಲದೆ ಸುತ್ತುಮುತ್ತಿನ ಸೀಮೆಯಮೇಲೆ ಬಿದ್ದು ಬೇಕಾದಹಾಗೆ ಕೊಳ್ಳೆ ಹೊಡೆದುಕೊಂಡು ಕೂಡ ಬರಬಹುದು. ಆದರೂ ಕೊನೆಗೆ ಅವರನ್ನೆಲ್ಲಾ ಶತ್ರುಗಳು ಕೊಂದುಹಾಕಿ ಬಿಡುವುದೇನೋ ಖಂಡಿತ; ಆದರೆ ಅವರೆಲ್ಲರೂ ಶತ್ರುಗಳಿಂದ ಹತರಾಗುವುದಕ್ಕೆ ಮುಂಚಿತವಾಗಿ ಕನಿಷ್ಠಪಕ್ಷ ತಮ್ಮಷ್ಟುಮಂದಿ ಮುಸಲ್ಮಾನರನ್ನಾದರೂ ಭೂಗತಮಾಡುವುದಾದರೆ ತಾವೆಲ್ಲರೂ ಮೊಗಲರ ಕೈಯಲ್ಲಿ ಸಾಯುವುದಕ್ಕೆ ಸಿದ್ಧರಾಗಿಯೇ ಇದ್ದರು.

ಅವರು ಈ ರೀತಿಯಾಗಿ ತಾವು ಇಂಥ ಕೆಲಸವನ್ನು ಮಾಡಬೇಕು ಎಂಬುದಾಗಿ ಸಂಕಲ್ಪಮಾಡಿಕೊಂಡು, ಅರಣ್ಯಭಾಗದಿಂದ ಮುಂದೆ ನಡೆದು ರಾಜಪುಟಾನದ ಎಲ್ಲೆಯನ್ನು ದಾಟಿ ದಕ್ಷಿಣಾಭಿಮುಖವಾಗಿ ಪ್ರಯಾಣ ಹೊರಟು, ಅತ್ಯಾವಶ್ಯಕವಾದಲ್ಲಿ ಮಾತ್ರ ಸ್ವಲ್ಪಕಾಲ ತಂಗುತ್ತ. ಹಗಲೆನ್ನದೆ ರಾತ್ರಿಯೆನ್ನದೆ ಪಯಣದ ಮೇಲೆ ಪಯಣ ನಡೆಯುತ್ತ ಬಾರ್ ದುರ್ಗದ ಕಡೆಗೆ ಹೋದರು, ಆ ಕಾಲದಲ್ಲಿ ಅವರಿಗೆ ಭಾಗ್ಯಲಕ್ಷ್ಮಿಯೂ ಒಲಿದಿದ್ದಳು. ಆದುದರಿಂದ ದಾರಿಯಲ್ಲಿ ಅವರಿಗೆ

ಯಾವ ಮೊಗಲಾಯಿ ಸೇನೆಯೂ ಅಡ್ಡವಾಗಿ ಬರಲಿಲ್ಲ. ಹೀಗಾಗಿ ಮೂರನೆಯ ದಿನ ಬೆಳಗ್ಗೆ ಉನ್ನತವಾದ ಬಾರ್‌ದುರ್ಗದ ಕೋಟೆಯೂ ಆ ದುರ್ಗವಿದ್ದ ಕಲ್ಲು ಬೆಟ್ಟವೂ ಕಣ್ಣೆದಿರಿಗೆ ಕಾಣಿಸಿದುವು. ಇಲ್ಲಿಯೂ ಕೂಡ ಆ ವೀರರಿಗೆ ಭಾಗ್ಯ ಲಕ್ಷ್ಮಿಯು ಸಹಾಯವಾದಳು. ಅಂದಿನ ದಿನ ಆ ಕೋಟೆಯ ಕಾವಲಲ್ಲಿದ್ದವರು ಹಲವರು ತತ್ಕಾಲದಲ್ಲಿ ಯಾವ ವಿಧವಾದ ಶತ್ರುಭೀತಿಯೂ ಇಲ್ಲವೆಂದು ಭಾವಿಸಿ ಕೊಂಡು ಪ್ರಬಲವಾದ ಬೇಟೆಗಾರರ ಗುಂಪಿನೊಡನೆ ಸೇರಿ ಬೇಟೆಯಾಡಲು ಹೊರಟುಹೋಗಿದ್ದರು. ರಾಜಪುತ್ರರು ಈ ಸಮಾಚಾರವನ್ನು ಕೇಳಿ ಬೇಟೆಗಾರ ರೆಲ್ಲರೂ ತಾವು ತಾವು ಗಳಿಸಿದ ಪದಾರ್ಥಗಳನ್ನು ಹೊತ್ತುಕೊಂಡು ಹಿಂತಿರುಗಿ ಬರುವವರೆಗೂ ಒಂದು ಕಡೆ ಮರಸಿಕೊಂಡು ಕಾದಿದ್ದರು. ಸ್ವಲ್ಪ ಕಾಲಕ್ಕೆಲ್ಲಾ ಬೇಟೆಗೆ ಹೋಗಿದ್ದವರು ಬಂದರು. ಬಳಿಕ ಅವರನ್ನು ಒಳಗೆ ಬಿಡುವುದಕ್ಕಾಗಿ ಕೋಟೆಯ ಬಾಗಿಲನ್ನು ತೆರೆದರು. ಆ ಕಾಲಕ್ಕೆ ಸರಿಯಾಗಿ ರಾಜಪುತ್ರರು ತಾವು ಮರಸಿಕೊಂಡಿದ್ದ ಸ್ಥಳದಿಂದ ಹೊರಬಿದ್ದು ಶತ್ರುಗಳ ಮೇಲೆ ಹಠಾತ್ತಾಗಿ ಕಾಣಿಸಿ ಕೊಂಡು ಅವರನ್ನು ಕೋಟೆಗೆ ಬಿಡದೆ ತಡೆದರು. ರಾಜಪುತ್ರರು ಹಾಗೆ ತಟ್ಟನೆ ಮೇಲೆ ಬಿದ್ದುದನ್ನು ಕಂಡು ಮೊಗಲರು ಪರಮಾಶ್ಚರ್ಯದಿಂದ ಬೆರಗಾಗಿ ಮುಂದುಗೆಟ್ಟು ಅನೇಕವಾಗಿ ಹತರಾದರು ಕಳೆದುಳಿದವರು ಸುತ್ತಮುತ್ತಣ ಸ್ಥಳಗಳಿಗೆ ಪಲಾಯನಮಾಡಿಬಿಟ್ಟರು. ಕೋಟೆಯಲ್ಲಿ ನಿಂತವರು ನುಗ್ಗುನುಸಿ ಯಾಗಿ ಬಾಗಿಲಬಳಿಗೆ ಬಂದು ರಾಜಪುತ್ರರು ಒಳಗೆ ಬರುವುದಕ್ಕೆ ಮುಂಚಿತವಾಗಿ ತಟ್ಟನೆ ಕದವನ್ನು ಹಾಕಿಕೊಂಡರು. ರಾಜಪುತ್ರರ ಸೇನಾನಾಯಕನು ಇಂಥ ಸಂದರ್ಭದಲ್ಲಿ ತಾನು ಏನು ಮಾಡಬೇಕೆಂದು ಮೊದಲೇ ಆಲೋಚಿಸಿ ಕೊಂಡಿದ್ದನು ಈಗ ಒಳಗಿದ್ದವರೆಲ್ಲ ಬಾಗಿಲಬಳಿಗೆ ಓಡಿಬಂದಿದ್ದ ಕಾರಣ ಕೋಟೆಯ ಹಿಂದುಗಡೆ ಯಲ್ಲಿ ಯಾರೂ ಕಾವಲಿಲ್ಲವೆಂದು ತಿಳಿದು ಆತನು ಆ ಬಳಿ ಹೋಗಿ ಲಗ್ಗೆ ಹತ್ತು ವಂತೆ ತನ್ನ ಕಾಲ್ಬಲಕ್ಕೆ ಆಜ್ಞೆಮಾಡಿದನು. ಕೂಡಲೆ ರಾಜಪುತ್ರರು ಅಲ್ಲಿಗೆಹೋಗಿ ಕೋತಿಗಳಂತೆ ಬಂಡೆಯಮೇಲೇರಿ ಅಲ್ಲಿಂದ ಕೋಟೆಯ ಗೋಡೆಯಮೇಲಕ್ಕೆ ಹತ್ತ ಲಾರಂಭಿಸಿದರು. ಹಾಗೆ ಸಾಕಾದಷ್ಟು ಜನ ಹತ್ತಿಬಂದ ಬಳಿಕ ಅವರು ಕೋಟೆ ಬಾಗಿಲಕಡೆಗೆ ಹೊರಟು ಅಲ್ಲಿದ್ದವರನ್ನೆಲ್ಲಾ ಕ್ಷಣಮಾತ್ರದಲ್ಲಿ ಸೋಲಿಸಿ ಕೋಟೆಯ ಬಾಗಿಲನ್ನು ತೆರೆದರು. ಕೂಡಲೆ ಹಿಮ್ಮತ್‌ಸಿಂಗನೂ ಅವನ ಕುದುರೆ ಸವಾರರೂ ಒಳಗೆ ಪ್ರವೇಶಿಸಿಬಿಟ್ಟರು, ಈ ಮೇರೆ ಆ ದೇಶಭ್ರಷ್ಟರಾದ ಶೂರರು ತಮಗೆ ಯಾವ ಅಪಾಯವೂ ಇಲ್ಲದೆ ಮೊಗಲ್ ದೇಶದಲ್ಲೆಲ್ಲಾ ಪ್ರಬಲವಾದ ಗಡಿಗೋಟೆ ಯೆಂದೆನಿಸಿಕೊಂಡಿದ್ದ ಬಾರ್‌ದುರ್ಗಕ್ಕೆ ಪ್ರಭುಗಳಾದರು.

ಬಾರ್‌ದುರ್ಗವು ಫಲವತ್ತಾಗಿಯೂ ಜನಭರಿತವಾಗಿಯೂ ಇದ್ದ ಸವಿಸ್ತಾರ ವಾದ ಭೂ ಪ್ರದೇಶದ ಮಧ್ಯಭಾಗದಲ್ಲಿ ಒಂದು ಕಲ್ಲು ಬೆಟ್ಟದ ಮೇಲೆ ನೆಲಸಿತ್ತು. ಅದು ಮೂರು ಕಡೆಗಳಲ್ಲಿ ಬಹು ದೃಢವಾಗಿತ್ತು. ಅದರ ನಾಲ್ಕನೆಯ ಕಡೆಯಲ್ಲಿದ್ದ

ಕಲ್ಲುಬಂಡೆಗಳು ಬಲು ಎತ್ತರವಾಗಿಯೂ ಕಡಿದಾಗಿಯೂ ಇದ್ದ ಪ್ರಯುಕ್ತ ಆ ಭಾಗದ ಕೋಟೆಯನ್ನು ವಿಶೇಷವಾಗಿ ದೃಢಪಡಿಸುವ ಆವಶ್ಯಕವಿರಲಿಲ್ಲ. ಮೇಲೂ ಆಕಡೆ ಹರಿದು ಹೋಗುತ್ತಿದ್ದ ಒಂದು ಹೊಳೆಯು ಪ್ರವಾಹಕಾಲದಲ್ಲಿ ತಳವನ್ನು ಆಳವಾಗಿ ಕೊರೆದು ಕೊರೆದು ಬೆಟ್ಟದ ಕಿಬ್ಬಿಯನ್ನು ಮತ್ತಷ್ಟು ಕಡಿದಾಗಿ ಮಾಡಿಬಿಟ್ಟಿತ್ತು. ಅಂಥ ಕೋಟೆಯನ್ನು ಹಿಡಿದು ರಾಜಪುತ್ರರು ಅಲ್ಲಲ್ಲಿದ್ದ ಹಲವು ಕಣಜಗಳನ್ನೆಲ್ಲಾ ಹೋಗಿ ನೋಡಿದರು. ಅವುಗಳೆಲ್ಲಾ ಹಲವು ಬಗೆಯ ದವಸಗಳಿಂದ ತುಂಬಿದ್ದುದನ್ನು ಕಂಡು ಆನಂದಭರಿತರಾದರು. ಅಲ್ಲಿ ಅನೇಕ ಹಸುಗಳೂ ಇದ್ದುವು. ಅವುಗಳನ್ನು ನೋಡಿದಾಗ ನೀಚರಾದ ಮೊಗಲರು ಪವಿತ್ರವಾದ ಗೋವುಗಳನ್ನು ಕೊಂದು ತಿನ್ನುತ್ತಾರಲ್ಲಾ ಎಂದು ಅವರಿಗೆ ಕೋಪವುಂಟಾಯಿತು. ಅಲ್ಲಿ ಸಾಕಾದಮಟ್ಟಿಗೆ ಯುದ್ಧಸಾಮಗ್ರಿಗಳು ಕೂಡ ಸಿಕ್ಕಿದುವು. ಅಲ್ಲದೆ ಶತ್ರುಗಳ ಮೇಲೆ ಉರುಳಿಸುವುದಕ್ಕಾಗಿ ಕೋಟೆಯ ಮೇಲೆ ಅಡಕಿದ್ದ ಹಲವು ದೊಡ್ಡದೊಡ್ಡ ಕಲ್ಲುಗಳು ಸಹ ದೊರೆತವು.

ಹೀಗೆ ಪಡೆದುಕೊಂಡ ಕೋಟೆಯಲ್ಲಿ ರಾಜಪುತ್ರರು ಸ್ವಲ್ಪಕಾಲ ಶತ್ರುಗಳಿಂದ ಯಾವ ಬಾಧೆಯೂ ಇಲ್ಲದೆ ಇರುತ್ತಿದ್ದರು. ಆ ಕಾಲದಲ್ಲಿ ಅವರು ಸುಮ್ಮನೆ ಕುಳಿತಿರದೆ ಹಲವುಬಾರಿ ಸುತ್ತುಮುತ್ತಿನ ಊರುಗಳ ಮೇಲೆ ಬಿದ್ದು ಕೊಳ್ಳೆ ಹೊಡೆದುಕೊಂಡು ಬಂದರು. ಸ್ವಲ್ಪ ಕಾಲಕ್ಕೆಲ್ಲಾ ಇವರ ಹಾವಳಿಯನ್ನು ಅಡಗಿಸುವುದಕ್ಕಾಗಿ ಮೊಗಲ್‌ಪಡೆಯ ಒಂದು ಸಣ್ಣ ತುಕಡಿ ಬಂದಿಳಿಯಿತು. ಕಾಲಕ್ರಮೇಣ ಹೆಚ್ಚು ತುಕಡಿಗಳು ಬಂದು ಬಂದು ಸೇರುತ್ತ ಸೇರುತ್ತ ಅದೇ ಒಂದು ಸಣ್ಣಸೇನೆಯಾಯಿತು. ಆ ಬಳಿಕ ಅದು ರಾಜಪುತ್ರರನ್ನು ಕೋಟೆಯಿಂದ ಹೊರಕ್ಕೆ ಬಿಡದೆ ಸುತ್ತಲೂ ಮುತ್ತಿಗೆ ಹಾಕಿಕೊಂಡಿತು. ಕೆಲವು ಕಾಲಾನಂತರ ಅದೇ ಸೇನೆಯೇ ಆ ಕಾಲದ ಕೆಲವು ಫಿರಂಗಿಗಳನ್ನು ತಂದು ಕೋಟೆಗೆ ಕಟ್ಟಿ ಹೊಡೆಯುತ್ತ ಕೋಟೆಯನ್ನು ಹಿಡಿದುಕೊಳ್ಳಲು ಹಲವು ಪ್ರಯತ್ನಗಳನ್ನು ಮಾಡಿತು. ಆದರೆ ರಾಜಪುತ್ರರು ಬಹು ಪರಾಕ್ರಮದಿಂದ ಹೊಡೆದಾಡಿ ಶತ್ರುಗಳಿಗೆ ಅವಕಾಶ ಕೊಡದೆ ಕೋಟೆಯನ್ನು ರಕ್ಷಿಸಿಕೊಂಡರು. ಆ ಬಳಿಕ ಕೋಟೆಯನ್ನು ಹಿಡಿದುಕೊಳ್ಳುವುದು ಸುಲಭಸಾಧ್ಯವಲ್ಲವೆಂದು ಮೊಗಲರಿಗೆ ಸ್ವಲ್ಪಕಾಲದಲ್ಲಿಯೇ ಗೊತ್ತಾಯಿತು. ಕೋಟೆಯ ಗೋಡೆಗಳು ಬಲು ಎತ್ತರವಾಗಿದ್ದುದರಿಂದಲೂ, ಗೋಡೆಗಳಿಗೆ ಆಸರೆಯಾಗಿದ್ದ ಬಂಡೆಗಳು ಬಲು ಕಡಿದಾಗಿದ್ದುದರಿಂದಲೂ, ಕೋಟೆಯಮೇಲೆ ನೆಟ್ಟಗೆ ಲಗ್ಗೆ ಹತ್ತಲಾಗುತ್ತಿರಲಿಲ್ಲ. ಆ ಪ್ರಾಂತದ ಮೊಗಲ್ ಸುಬೇದಾರನು ತಂದ ಫಿರಂಗಿಗಳೆಲ್ಲ ಸೇರಿದರೂ ಆ ಕೋಟೆಯ ಗೋಡೆಯನ್ನು ನಲ್ಲುಮೊನೆಯಷ್ಟು ಕೂಡ ಕದಲಿಸಲಾಗುತ್ತಿರಲಿಲ್ಲ. ಯಂತ್ರಗಳಿಂದ ಹೊಡೆದ ಕಲ್ಲುಗಳೂ ಕೂಡ ನಿರಪಾಯವಾಗಿ ಬಂಡೆಗಳಿಗೆ ತಗಲಿ ಪುಟಹಾರಿ ಹಿಂದಕ್ಕೆ ಬೀಳುತ್ತಿದ್ದುವು. ಕೋಟೆಯ ಗೋಡೆಗೆ ಗುರಿಕಟ್ಟಿ ಹೊಡೆಯುತ್ತಿದ್ದ ಹಳೆ ಕರ್ಣಾಟಕದ ಎರಡು ಮೂರು ಫಿರಂಗಿ

ಗಳಲ್ಲಿ ಒಂದು ಫಿರಂಗಿಯು ಒಂದಾನೊಂದು ದಿನ ಸಿಡಿಲಿನ ರಭಸದಿಂದ ಒಡೆದು ಹತ್ತಿರದಲ್ಲಿದ್ದ ಆರುಮಂದಿ ಫಿರಂಗಿಯವರನ್ನು ಕೊಂದು ಹಾಕಿಬಿಟ್ಟಿತು. ಇದೊಂದು ವಿನಾ ಅವುಗಳಿಂದ ಮತ್ತಾವ ಪ್ರಯೋಜನವೂ ಉಂಟಾಗಲಿಲ್ಲ.

ಈ ಅಪಾಯವು ಸಂಭವಿಸಿದ ಬಳಿಕ ಮೊಗಲ್ ಸೇನಾಧಿಪನಾದ ಆಸಫ್ ಖಾನನು ಈ ಏರ್ಪಾಡನ್ನು ಬಿಟ್ಟು ಇನ್ನೂ ಹಳೆಕರ್ಣಾಟಕವಾದ ಏರ್ಪಾಡು ಮಾಡಿ ಕೋಟೆಯನ್ನು ಹಿಡಿಯುವುದಾಗಿ ನಿಶ್ಚಯಿಸಿ ತನ್ನಲ್ಲಿದ್ದ ಯುದ್ಧದಾನೆಗಳನ್ನು ಉಪಯೋಗಿಸಿ ಕೋಟೆಯ ಬಾಗಿಲನ್ನು ಬಡಿಸುವಂತೆ ಅಪ್ಪಣೆಮಾಡಿದನು. ಆದರೆ ಮೇಲಿಂದ ನಿಲಗಾಲವಿಲ್ಲದೆ ಬಂದು ಬಂದು ಬೀಳುತ್ತಿದ್ದ ಕಲ್ಲು ಕಣೆಗಳ ಹೊಡೆತದಲ್ಲಿ ಆನೆಗಳನ್ನು ಬಾಗಿಲ ಬಳಿಗೆ ತೆಗೆದುಕೊಂಡು ಹೋಗುವುದೆಲ್ಲಿ? ಈ ಆಪತ್ತನ್ನು ತಪ್ಪಿಸುವುದಕ್ಕಾಗಿ ಆಸಫ್‌ಖಾನನು ಆನೆಹೋಗುವ ದಾರಿಯುದ್ದಕ್ಕೂ ದೃಢವಾಗಿ ಚಪ್ಪರ ಹಾಕುವಂತೆ ಆಜ್ಞೆಮಾಡಿದನು.

ಆದರೆ ಈ ಕೆಲಸವನ್ನು ಹೇಳಿದಷ್ಟು ಸುಲಭವಾಗಿ ಮಾಡಲಾಗಲಿಲ್ಲ ಚಪ್ಪರವನ್ನು ಹಾಕುವುದಕ್ಕಾಗಿ ನೆರೆಹೊರೆಯ ಹಳ್ಳಿಗಳಿಂದ ಹಿಡಿತಂದಿದ್ದ ರೈತರೆಲ್ಲರೂ ಸಿಪಾಯಿಗಳ ಕೊರಡೆಯೇಟನ್ನು ತಡೆಯಲಾರದೆ ಸಮಯ ಸಿಕ್ಕಿದಾಗ ತಪ್ಪಿಸಿಕೊಂಡು ಓಡಿಹೋಗುತ್ತಿದ್ದರು. ಈ ಹಳ್ಳಿಯವರು ಅನೇಕವಾಗಿ ಹಿಂದೂಜನಗಳಾಗಿದ್ದುದರಿಂದ ಅವರಿಗೆಲ್ಲಾ ಸ್ವಮತಸ್ಥರಿಗೆ ವಿರೋಧವಾಗಿ ಕೆಲಸಮಾಡಲಿಷ್ಟವಿರಲಿಲ್ಲ. ಮೇಲೆಯೂ ಆ ಕೆಲಸವು ಅಪಾಯಕರವಾಗಿದ್ದುದರಿಂದಲೂ, ಅದನು ಬಿಟ್ಟಿಯಾಗಿ ಮಾಡಬೇಕಾಗಿದ್ದುದರಿಂದಲೂ ಅದು ಅವರಿಗೆ ಮತ್ತಷ್ಟು ಅಸಹ್ಯವಾಯಿತು. ಹೀಗಿದ್ದಾಗ್ಯೂ ಕೂಡ ಆ ಕೆಲಸವು ಹಾಗೂ ಹೀಗೂ ಮೆಲ್ಲಗೆ ಸಾಗುತ್ತ ಬಂದಿತು. ಸ್ವಲ್ಪ ದೂರ ಚಪ್ಪರ ಹಾಕಿದ ಬಳಿಕ ಆದರ ಮೇಲೆ ಎಮ್ಮೆಯ ತೊಗಲನ್ನೂ ಎತ್ತಿನ ತೊಗಲನ್ನೂ ಹೊದಿಸಿದರು. ಇದರಿಂದ ಮುಂದುಗಡೆ ಚಪ್ಪರಕಟ್ಟುವುದಕ್ಕಾಗಿ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುವವರಿಗೆ ಬಹಳಮಟ್ಟಿಗೆ ಸಹಾಯವಾಯಿತು. ಆದರೆ ಚಪ್ಪರವು ಕೋಟೆಯ ಗೋಡೆಯ ಸಮೀಪಕ್ಕೆ ಬಂದಹಾಗೆಲ್ಲಾ ಆದನ್ನು ಕಟ್ಟುತ್ತಿದ್ದವರಿಗೆ ಅಪಾಯವು ಹೆಚ್ಚುತ್ತ ಬಂದಿತು. ಅವರ ಮೇಲೆ ಮೊದಲು ಮೊದಲು ಬಾಣಗಳೂ ಅನಂತರ ಈಟಿಗಳೂ ತರುವಾಯ ಕಲ್ಲುಗಳೂ ಕೋಟೆಯ ಗೋಡೆಗಳ ಮೇಲಿಂದ ಬಂದು ಬೀಳಲಾರಂಭಿಸಿದುವು ಹೀಗೆ ಏಳೆಂಟು ದಿವಸ ಹಗಲೂ ರಾತ್ರಿಯೂ ಕೆಲಸಮಾಡಿ ಚಪ್ಪರವನ್ನು ಕೋಟೆಯ ಗೋಡೆಯ ಸಮೀಪದ ವರೆಗೂ ಹಾಕಿದರು ; ಆದರೆ ಕೋಟೆಯ ಬಾಗಿಲಮೇಲೆ ಬೇಕಾದಾಗ ಕೆಳಕ್ಕೆ ಉರುಳಿಸುವ ಹಾಗೆ ಒಂದು ದೊಡ್ಡ ಗುಂಡನ್ನು ನಿಲ್ಲಿಸಿದ್ದ ಕಾರಣ, ಅದಕ್ಕೆ ಸಿಕ್ಕಿ ನುಜ್ಜು ಗುಜ್ಜಾಗದ ಹಾಗೆ ಚಪ್ಪರವನ್ನು ಗೋಡೆಗೆ ಸ್ವಲ್ಪ ದೂರದಲ್ಲಿಯೇ ಮುಗಿಸಬೇಕಾಯಿತು.

ಆ ಪ್ರಕಾರ ಚಪ್ಪರವನ್ನು ಮುಗಿಸಿದ ಮೇಲೆ ಮೊಗಲರು ಮಾರನೆಯ ದಿವಸ ಬೆಳಗ್ಗೆ ಚಪ್ಪರದ ಕೆಳಗೆ ಆನೆಗಳನ್ನು ಸಾಗಿಸಿಕೊಂಡು ಹೋಗಿ ಕೋಟೆಯ ಬಾಗಿ

ಲನ್ನು ಒಡೆಯುವಂತೆ ಏರ್ಪಾಡುಮಾಡಿ, ಬಳಿಕ ಈ ಮಹಾಕಾರ್ಯವನ್ನು ನೆರವೇರಿಸಿದುದಕ್ಕಾಗಿ ಅಂದಿನ ರಾತ್ರಿ ತಮ್ಮ ಪಾಳೆಯದಲ್ಲಿ ಮಹೋತ್ಸವವನ್ನು ಮಾಡಿದರು. ಆದರೆ ಈ ವಿಷಯದಲ್ಲಿ ಮಹಮ್ಮದೀಯರು ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ ಎಂಬ ಗಾದೆಯ ಅನುಭವವನ್ನು ಇನ್ನೂ ಚೆನ್ನಾಗಿ ತಿಳಿಯತಕ್ಕವರಾಗಿದ್ದರು. ಬಾರ್ ದುರ್ಗವು ಹಿಂದೆ ರಾಜಪುತ್ರರ ಪ್ರಬಲವಾದ ಕೋಟೆಗಳಲ್ಲಿ ಒಂದಾಗಿತ್ತು. ಅದರಲ್ಲಿ ದಿಡ್ಡಿಯ ಬಾಗಲಿಗೆ ಹೋಗುವ ಕಳ್ಳದಾರಿಯೊಂದಿತ್ತು. ಆದನ್ನು ರಾಜಪುತ್ರರು ಮಾತ್ರ ತಿಳಿದಿದ್ದರು. ಅವರು ಶತ್ರುಗಳಿಗೆ ತಿಳಿಯದಂತೆ ಅದನ್ನು ಬಹು ಜಾಗರೂಕತೆಯಿಂದ ಮರಸಿಟ್ಟಿದ್ದರು. ಹಿಮ್ಮತ್‌ಸಿಂಗನು ಎಷ್ಟು ಸಾಹಸಿಯೋ ಅಷ್ಟು ಸೂಕ್ಷ್ಮಬುದ್ಧಿಯೂ ಆಗಿದ್ದುದರಿಂದ ತಾನು ಸಮಯಬರುವವರೆಗೂ ಆ ಕಳ್ಳಹಾದಿಯನ್ನು ಉಪಯೋಗಿಸಬಾರದೆಂದು ಸುಮ್ಮನಿರುತ್ತಿದ್ದನು. ಈಗ ಅಂಥ ಸಮಯ ಬಂದೊದಗಿತು.

ಅಂದಿನ ರಾತ್ರಿಯ ಮಹೋತ್ಸವದಲ್ಲಿ ಮಹಮ್ಮದೀಯರು ತಮ್ಮ ಚಪ್ಪರವನ್ನು ಅಷ್ಟೊಂದು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ಒಳಗೆ ಸಿಕ್ಕಿದವರು ಇದುವರೆಗೂ ಹೊರಗೆ ಬಾರದೆ ಕೋಟೆಯನ್ನು ಕಾಯುವುದೇ ಕೆಲಸವಾಗಿದ್ದ ಕಾರಣ ಅವರು ಇನ್ನು ಹೊರಗೆ ಬರಲಾರರೆಂದು ನಂಬಿಕೊಂಡು ಕೋಟೆಯ ಹತ್ತಿರದಲ್ಲಿ ಮಾತ್ರ ಚಪ್ಪರಕ್ಕೆ ನಾಲ್ಕಾರು ಮಂದಿಯನ್ನು ಕಾವಲಿಟ್ಟು ಉಳಿದವರೆಲ್ಲರೂ ಬೇಕಾದಹಾಗೆ ತಿಂದು ಕುಡಿದು ನಲಿದಾಡುತ್ತ ಮೈಮರೆತಿದ್ದರು. ಇವರು ಮೈಮರೆವುದಕ್ಕಾಗಿಯೇ ಹಿಮ್ಮತ್‌ಸಿಂಗನು ಈ ತಂತ್ರವನ್ನು ಮಾಡಿದ್ದನು. ಅವನ ಸೈನಿಕರು ತಮ್ಮ ನಾಯಕನ ಈ ವಿಧವಾದ ನಿರ್ಬಂಧಕ್ಕಾಗಿ ಕಿಡಿಕಿಡಿಯಾಗಿ ಹೋಗಿದ್ದರು. ಬಳಿಕ ಸುಮಾರು ಸಮರಾತ್ರಿಯ ವೇಳೆಯಲ್ಲಿ ಮಹಮ್ಮದೀಯರ ಪಾಳೆಯದಲ್ಲಿ, ಆಟಪಾಟಗಳು ತಲೆಮೀರಿ ಹೋಗಿದ್ದ ಸಮಯದಲ್ಲಿ, ಹಿಮ್ಮತ್‌ಸಿಂಗನು 200 ಮಂದಿ ವೀರರನ್ನು ಸಂಗಡ ಕರೆದುಕೊಂಡು ದಿಡ್ಡಿಬಾಗಿಲಿನಿಂದ ಹೊರಹೊರಟು ಬಂದು, ಚಪ್ಪರದ ಮುಂದುಗಡೆ ಕಾವಲವರಿರಬಹುದೆಂದು ತಿಳಿದು ಆ ಭಾಗವನ್ನು ಬಿಟ್ಟು ಬೇರೆ ಕಡೆಯಲ್ಲೆಲ್ಲಾ ಚಪ್ಪರಕ್ಕೆ ಎಣ್ಣೆ ಸುರಿದು ಬೆಂಕಿಹೊತ್ತಿಸಿಬಿಟ್ಟನು. ಆ ಕಾಲದಲ್ಲಿ ಗಾಳಿಯು ಕೋಟೆಯ ಕಡೆಗೆ ಬೀಸುತ್ತಿದ್ದುದರಿಂದ, ಭಗ್ಗನೆ ಹೊತ್ತಿದ ಉರಿಯು ಎಣ್ಣೆಯ ಬಲದಿಂದ ಜಾಜ್ವಲ್ಯಮಾನವಾಗಿ ಎದ್ದು ಮಹಾ ರಭಸದಿಂದ ಚಪ್ಪರದುದ್ದಕ್ಕೂ ಹಬ್ಬಿಕೊಂಡು ಬಿಟ್ಟಿತು. ಹೀಗಾಗಿ "ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ" ಎಂಬಂತೆ ಅಷ್ಟು ದಿವಸ ಶ್ರಮಪಟ್ಟು ಕಟ್ಟಿದ ಚಪ್ಪರವು ಹೊತ್ತಿಕೊಂಡ ಕಾಲದಲ್ಲಿ ಮೊಗಲರ ಪಾಳೆಯದಲ್ಲಿ ಎಲ್ಲಿ ನೋಡಿದರೂ ಗಲಭೆಯೆದ್ದಿತು. ಶತ್ರುಗಳು ಇಂಥ ಕಡೆಯಲ್ಲಿದ್ದಾರೆಂದರಿಯದೆ ಮೊಗಲ ಸೈನಿಕರು ಹಿಂದಕ್ಕೂ ಮುಂದಕ್ಕೂ ಓಡಾಡತೊಡಗಿದರು. ಅವರಲ್ಲಿ ಅನೇಕರು ಕೈಯಲ್ಲಿ ಉರಿಯುವ ಪಂಜನ್ನು ಹಿಡಿದುಕೊಂಡು ಬಂದು ಕತ್ತಲೆಯಲ್ಲಿ ಮರಸಿಕೊಂಡಿದ್ದ ಶತ್ರುಗಳಬಾಣ

ಗಳಿಗೂ ಛರ್ಜಿಗಳಿಗೂ ತುತ್ತಾಗಿ ಹೋದರು. ಈ ರೀತಿಯಾಗಿ ಸ್ವಲ್ಪಕಾಲ ನಡೆದ ಬಳಿಕ ಮೊಗಲರೆಲ್ಲರೂ ಸ್ವಲ್ಪ ತಿಳಿವಳಿಕೆ ತಂದುಕೊಂಡು ಒಮ್ಮೊಗವಾಗಿ ಕೆಲಸ ಮಾಡತೊಡಗಿದರು. ಕೂಡಲೆ ಹಿಮ್ಮತ್‌ಸಿಂಗನು ತಾನು ಮೊದಲು ಸಂಕೇತಮಾಡಿಕೊಂಡಿದ್ದ ಪ್ರಕಾರ ಘಂಟೆ ಬಾರಿಸಿದನು. ಆ ಧ್ವನಿಯನ್ನು ಕೇಳಿದೊಡನೆ ರಾಜಪುತ್ರರೆಲ್ಲರೂ ಅಲ್ಲಿಂದ ತಪ್ಪಿಸಿಕೊಂಡು ಹೊರಟು ದಿಡ್ಡಿಯ ಬಾಗಿಲ ಮೂಲಕ ಪ್ರವೇಶಿಸಿ ಕೋಟೆಯೊಳಕ್ಕೆ ಹೋಗಿ ಸೇರಿಕೊಂಡರು. ಈ ವೇಳೆಗೆ ರಾಜಪುತ್ರ ಸೈನಿಕರು ಚಪ್ಪರವನ್ನು ಸುಟ್ಟು ಹಾಕಿದುದು ಮಾತ್ರವೇ ಅಲ್ಲದೆ ತಮ್ಮಲ್ಲಿ ಒಬ್ಬೊಬ್ಬನೂ ಒಬ್ಬೊಬ್ಬ ಮೊಗಲ ಸೈನಿಕನನ್ನು ಸಂಹಾರಮಾಡಿ ತಮಗೇನೂ ವಿಶೇಷ ಘಾತಪಾತಗಳಿಲ್ಲದೆ ಬಂದು ಸೇರಿದ್ದರು.

ಇಷ್ಟಾದರೂ ಮಹಮ್ಮದೀಯರು ಬಿಡಲಿಲ್ಲ. ಅವರು ಬಲು ಛಲಗಾರರು. ಅಲ್ಪಸ್ವಲ್ಪಕ್ಕೆ ಎದೆಗುಂದುವವರಲ್ಲ. ಒಂದು ಚಪ್ಪರ ಹೋದಮಾತ್ರಕ್ಕೆ ಏನಾದ ಹಾಗಾಯಿತು ? ಮತ್ತೊಂದನ್ನು ಕಟ್ಟಕೂಡದೇನು ? ಅವರು ಪುನಃ ಮತ್ತೊಂದನ್ನು ಕಟ್ಟತೊಡಗಿದರು. ಆದರೆ ಈಗ ಅವರು ತಮಗುಂಟಾದ ಅನುಭವದಿಂದ ಶತ್ರುಗಳ ಧೈರ್ಯವನ್ನೂ ಸಾಹಸವನ್ನೂ ತಿಳಿದು, ತಮ್ಮ ಹೊಸ ಚಪ್ಪರವನ್ನು ಕಟ್ಟುತ್ತ ಅದರ ಬಳಿಯಲ್ಲಿ ಹಗಲೂ ಇರುಳೂ ಬಲವಾದ ಕಾವಲಿಡತೊಡಗಿದರು. ಈ ಸಲ ರಾಜಪುತ್ರರು ಒಳಗೆ ಇದ್ದುಕೊಂಡು ಚಪ್ಪರವನ್ನು ಹೊತ್ತಿಸುವ ಉದ್ದೇಶದಿಂದ ಅನೇಕವಾಗಿ ಕೊಳ್ಳಿಗಳನ್ನೂ ಉರಿವ ಬಾಣಗಳನ್ನೂ ಪ್ರಯೋಗಿಸಿದರೇ ಹೊರತು ಹಿಂದಿನಂತೆ ಹೊರಗೆ ಬರಲಿಲ್ಲ. ಹೀಗಾಗಿ ಮೊಗಲರು ಪುನಃ ಚಪ್ಪರವನ್ನು ಹಾಕಿ ಮುಗಿಸಿ, ತರುವಾಯ ಕೋಟೆಯ ಬಾಗಿಲನ್ನು ಗುದ್ದರಿಸಿ ನೂಕಿಸುವುದಕ್ಕಾಗಿ ಆನೆಗಳನ್ನು ತೆಗೆದುಕೊಂಡು ಬಂದರು.

ಮೊಗಲರ ಸೇನೆಯಲ್ಲಿ ಪ್ರಬಲವಾದ ಮೂರು ಯುದ್ಧದಾನೆಗಳಿದ್ದುವು. ಅವುಗಳ ಗಾತ್ರವನ್ನೂ ಬಲವನ್ನೂ ನೋಡಿದರೆ ಅವು ಎಂಥ ತಡೆಯಿದ್ದರೂ ಮುರಿದುಕೊಂಡುಹೋಗುವಂತೆ ತೋರುತ್ತಿತ್ತು. ಆದರೂ ಆನೆಗಳಿಂದ ಗುದ್ದರಿಸುವುದಕ್ಕೆ ಆಗದಹಾಗೆ ಬಾರ್‌ದುರ್ಗದ ಕೋಟೆಯ ಕದಗಳಿಗೆಲ್ಲ ಮೊನೆಯಾದ ಕಬ್ಬಿಣದ ಗಡಾರಿಗಳನ್ನು ನಾಟಿದ್ದರು. ಆದಕಾರಣ ಅವುಗಳಿಂದ ನೋವಾಗದಂತೆ ಈ ಆನೆಗಳಿಗೆ ದಪ್ಪವಾದ ಕಬ್ಬಿಣದ ಮೊಗವಾಡಗಳನ್ನು ಹಾಕಿದ್ದರು. ಅದೇಮೇರೆ ಆನೆಗಳ ಮಾವತಿಗರಿಗೂ ಕೋಟೆಯ ಮೇಲಿಂದ ಬಂದು ಬೀಳುವ ಶಲ್ಯಗಳಿಂದ ಅಪಾಯವಾಗದಂತೆ ಇರುವುದಕ್ಕಾಗಿ ಅವುಗಳಮೇಲೆ ಕಬ್ಬಿಣದ ತಗಡಿನ ಅಂಬಾರಿಗಳಲ್ಲಿ ಕುಳ್ಳಿರಿಸಿದ್ದರು.

ಆ ಆನೆಗಳನ್ನು ಚಪ್ಪರದಮೂಲಕವಾಗಿ ಒಂದೊಂದನ್ನಾಗಿ ಕೋಟೆಯ ಬಾಗಿಲ ಬಳಿಗೆ ತೆಗೆದುಕೊಂಡು ಬಂದರು. ಮೊದಲನೆಯ ಆನೆಯು ಚಪ್ಪರದಿಂದ ಹೊರಕ್ಕೆ ಬಂದಕೂಡಲೆ ಅದರಮೇಲೆ ನೂರಾರು ಶಲ್ಯಗಳು ಬಂದು ಬಿದ್ದು ವೈರಿಯ

ಳ್ಲೆಲ್ಲಾ ನಾಟಿಕೊಂಡುವು. ಆದರೂ ಕಬ್ಬಿಣದ ಅಂಬಾರಿಯು ಮರೆಯಲ್ಲಿದ್ದ ಮಾವ ತಿಗನು ಯಾವ ಶಲ್ಯಕ್ಕೂ ಗುರಿಯಾಗದೆ ಇದ್ದುದರಿಂದ ಆನೆಯನ್ನು ಮುಂದಕ್ಕೆ ಬಿಟ್ಟನು. ಅದು ಬಾಗಿಲಿಗೆ ಬಂದು ಅಲ್ಲಿ ಹಾದುಕೊಂಡಿದ್ದ ಗಡಾರಿಗಳನ್ನು ಲಕ್ಷ್ಯ ಮಾಡದೆ ತಲೆಯನ್ನು ಬಗ್ಗಿಸಿಕೊಂಡು ಕದಗಳನ್ನು ಗುದ್ದರಿಸಲಾರಂಭಿಸಿತು. ಈ ವೇಳೆಗೆ ಸರಿಯಾಗಿ, ಕೋಟೆಯಮೇಲೆ ಬಹುಕಾಲದಿಂದ ನಿಲ್ಲಿಸಿದ್ದ ಕೂಟುಗಲ್ಲು ಉರುಳಿಬಂದು ಅದರ ಹೆಗಲಮೇಲೆ ಬಿದ್ದುಬಿಟ್ಟಿತು. ಈ ಘಾತದಿಂದ ಬಲವಾಗಿ ನೊಂದುಹೋಗಿ ಆನೆಯು ಮರಣ ಸಂಕಟದಿಂದ ಹಿಂದು ಮುಂದರಿಯದೆ ಚಪ್ಪರದ ಮುಂದಲ ಭಾಗವನ್ನು ನೂಕಿಕೊಂಡು ಹುಚ್ಚಾಬಟ್ಟೆಯಾಗಿ ಕಿತ್ತುಕೊಂಡು ಹೊರ ಟುಹೋಯಿತು.

ಆ ಆನೆಯು ಈ ಮೇರೆ ಚಪ್ಪರದ ಸ್ವಲ್ಪಭಾಗವನ್ನು ಕಿತ್ತುಕೊಂಡು ಹೋದ ಕಾರಣ, ಆ ತರುವಾಯ ಬರುವ ಆನೆಗಳಿಗೆ ಕೋಟೆಯ ಸೈನಿಕರು ಪ್ರಯೋಗಿ ಸುವ ಬಾಣಗಳಿಂದಲೂ ಉರುಳಿಸುವ ಕಲ್ಲುಗುಂಡುಗಳಿಂದಲೂ ಹೆಚ್ಚು ಅಪಾ ಯವು ಸಂಭವಿಸುವಂತಾಯಿತು. ಆದರೂ ಕೂಡ ರಾಜಪುತ್ರರು ಮತ್ತೊಂದು ದೊಡ್ಡ ಬಂಡೆಯನ್ನು ತಂದು ಉರುಳಿಸಲವಕಾಶಕೊಡದೆ ಇರುವುದಕ್ಕಾಗಿ ಮಹ ಮ್ಮದೀಯರು ಕೂಡಲೆ ಇನ್ನೊಂದಾನೆಯಿಂದ ಬಾಗಿಲನ್ನು ಒಡೆಯಿಸಬೇಕೆಂದು ನಿಶ್ಚಯಿಸಿ ಮತ್ತೊಂದು ಆನೆಯನ್ನು ಮುಂದಕ್ಕೆ ಅಟ್ಟಿಸಿದರು. ಅದೂ ಕೂಡ ಮೊದಲನೆಯ ಆನೆಯಂತೆಯೇ ಕೋಟೆಯಮೇಲಿನಿಂದ ಬಂದು ಬಿದ್ದ ಬಾಣಗಳಿಗೂ ಈಟಿಗಳಿಗೂ ಸ್ವಲ್ಪವೂ ಲಕ್ಷ್ಯಮಾಡದೆ ಬಾಗಿಲಬಳಿಗೆ ಬಂದಿತು. ಅಲ್ಲಿಗೆ ಬಂದ ಬಳಿಕ ಅದು ಕದಗಳಲ್ಲಿ ನಾಟಿಕೊಂಡಿದ್ದ ಗಡಾರಿಗಳನ್ನು ನೋಡಿ ಭಯಪಟ್ಟು ಹಿಮ್ಮೆಟ್ಟಿ ಸ್ವಲ್ಪಕಾಲ ಮಾವತಿಗನೊಡನೆ ಹೋರಾಡಿ ಬಳಿಕ ಬೆನ್ನು ತೋರಿಸಿ ಕಾಲಿಗೆ ಬುದ್ಧಿ ಹೇಳಿಬಿಟ್ಟಿತು.

ಹೀಗಾದ ಪ್ರಯುಕ್ತ ಮೊಗಲರ ಆಶೆಯೆಲ್ಲಾ ಉಳಿದ ಒಂದಾನೆಯಲ್ಲಿ ನಿಂತಿತು ಅದೂ ಕೆಲಸಕ್ಕೆ ಬಾರದೆ ಹೋದಲ್ಲಿ, ಅವರು ಇಷ್ಟೊಂದು ಶ್ರಮಪ ಟ್ಟುದೂ ಇಷ್ಟೊಂದು ಮಂದಿಯನ್ನು ಬಲಿಕೊಟ್ಟುದೂ ನಿಷ್ಫಲವಾಗಿ ಹೋಗುವುದು ಆದರೆ ಅವರ ಭಾಗ್ಯವಶದಿಂದ ಮೂರನೆಯ ಆನೆಯು ತನ್ನ ಕೆಲಸಕ್ಕೆ ಹಿಂದೆಗೆ ದಂತೆ ಕಾಣಲಿಲ್ಲ. ಅದು ಬಾಣಕ್ಕೂ ಕಲ್ಲುಗುಂಡುಗಳಿಗೂ ಸ್ವಲ್ಪವೂ ಅಂಜದೆ ನಿರ್ಭಯವಾಗಿ ಹೋಗಿ ತನ್ನ ಕಬ್ಬಿಣದ ಮೊಗವಾಡದಿಂದ ಹೊಡೆದು ಕದಗಳ ಗಡಾ ರಿಗಳನ್ನು ಮಟ್ಟಮಾಡಿ ತನ್ನ ಮೈಭಾರವನ್ನೆಲ್ಲಾ ಬಿಟ್ಟು ಕದಗಳಮೇಲೆ ಬಿದ್ದು ಅವುಗಳ ಗಂದವಟಿಗೆಗಳೂ ಗಡಾರಿಗಳೂ ಜರ್ಜರಿತವಾಗುವಹಾಗೆ ಗುದ್ದರಿಸಿತು. ರಾಜಪುತ್ರರು ಎಂದಾದರೂ ನಡುಗುವುದುಂಟಾದರೆ ಈಗ ಆನೆಯ ಹೊಡೆತದಿಂದ ನಡುಗುತ್ತಿದ್ದ ತಮ್ಮ ಕೋಟೆಯ ರಕ್ಷಣೆಗಾಗಿ ನಡುಗಬೇಕಾಗಿತ್ತು.

ಆದರೆ ಇನ್ನೂ ಕೋಟೆ ಬೀಳುವ ಕಾಲ ಬಂದಿರಲಿಲ್ಲ. ಆನೆಯು ತನ್ನ ಮೇಲೆ

ಬೀಳುತ್ತಿದ್ದ ಬಾಣಗಳನ್ನೂ ಶಲ್ಯಗಳನ್ನೂ ಲಕ್ಷ್ಯಕ್ಕೆ ತಾರದೆ ಬಾಗಿಲನ್ನು ಗುದ್ದರಿಸುತ್ತಿತ್ತು. ಈ ಕಾಲದಲ್ಲಿ ಅದರ ಕೊರಳಿನ ಬಳಿಯಲ್ಲಿ ಒಂದು ಹಗ್ಗವು ನೇತಬಿಟ್ಟಿತ್ತು. ಆನೆಯು ಆ ಹಗ್ಗದ ತುದಿಯಿಂದುಂಟಾದ ಸೋಂಕನ್ನು ಲಕ್ಷ್ಯಮಾಡೀತೇ ? ಆದರೂ ಆ ಹಗ್ಗವೇ ವ್ಯತ್ಯಯವಾಯಿತು. ಹೇಗೆಂದರೆ ಹಿಮ್ಮತ್‌ಸಿಂಗನು ಆ ಹಗ್ಗದ ಮತ್ತೊಂದು ತುದಿಯನ್ನು ಕೋಟೆಯಮೇಲೆ ಒಂದು ದೃಢವಾದ ತೆನೆಗೆ ಕಟ್ಟಿ ತನ್ನ ಬಾಯಲ್ಲಿ ಒಂದು ಮೊನಚಾದ ಕಠಾರಿಯನ್ನು ಕಚ್ಚಿಕೊಂಡು ಆ ಹಗ್ಗದ ಮೂಲಕ ಆನೆಯ ಬೆನ್ನಮೇಲಕ್ಕೆ ಇಳಿದುಬಂದನು.

ಆ ಧೀರನಾದ ರಾಜಪುತ್ರನು ಹಾಗೆ ಇಳಿದಕೂಡಲೆ, ಅಲ್ಲಿ ಅಂಬಾರಿಯಲ್ಲಿ ಅಂಕುಶವೊಂದು ವಿನಾ ಮತ್ತಾವ ಆಯುಧಗಳೂ ಇಲ್ಲದೆ ಕುಳಿತಿದ್ದ ಮಾವತಿಗನನ್ನು ಸಂಹರಿಸಿಬಿಟ್ಟನು. ಬಾಗಿಲೊಡೆಯುವ ಕೆಲಸದಲ್ಲಿದ್ದ ಆನೆಯು ಇದೊಂದನ್ನೂ ಅರಿಯದೆ ತನ್ನ ಕೆಲಸದಲ್ಲಿ ತಾನಿರುತ್ತಿದ್ದಿತು. ಮಾವತಿಗನನ್ನು ಕೊಂದ ಬಳಿಕ ಹಿಮ್ಮತ್‌ಸಿಂಗನು ಮೆಲ್ಲಗೆ ಆನೆಯ ತಲೆಯ ಮೇಲಕ್ಕೆ ಬಾಗಿಕೊಂಡು ಕುಂಭಸ್ಥಳದ ನಡುವೆ ಒಂದು ದೊಡ್ಡ ಮೊಳೆಯನ್ನಿಟ್ಟು ತಾನು ತಂದಿದ್ದ ಕೊಡತಿಯಿಂದ ಬಡಿದುಪೆಟ್ಟಿದನು. ಅವನು ಹಾಗೆ ಬಾಗಿಕೊಂಡು ಮೊಳೆಹೊಡೆಯುತ್ತಿರುವಾಗ ಗಾಯವಡೆದ ಆನೆಯು ತನ್ನ ತಲೆಯನ್ನು ಬಲವಾಗಿ ಕೊಡಹಿತು. ಅದರಿಂದ ದಾಯತಪ್ಪಿ ಹಿಮ್ಮತ್‌ಸಿಂಗನು ನೆಲಕ್ಕೆ ಬಿದ್ದುಬಿಟ್ಟನು. ಆದರೂ ರಾಜಪುತ್ರನು ಆ ವೇಳೆಗೆ ಆನೆಯನ್ನು ತೀರ ಗಾಯಪಡಿಸಿ ತನ್ನ ಕೆಲಸವನ್ನು ಪೂರ್ತಿಮಾಡಿದ್ದನು ಆದ ಪ್ರಯುಕ್ತ ಅವನು ನಿರ್ಭಯವಾಗಿ ಮರಣಕ್ಕೆ ಸಿದ್ಧಮಾಡಿಕೊಂಡನು. ಅವನು ಬಿದ್ದುದನ್ನು ಕಂಡು ಚಪ್ಪರದಲ್ಲಿದ್ದ ನೂರುಮಂದಿ ಮೊಗಲರು ಏಕಾಕಿಯಾಗಿದ್ದ ಅವನಮೇಲೆ ಬೀಳಬಂದರು. ಆದರೆ ಅವರು ಬರುವಷ್ಟರೊಳಗಾಗಿ ರಾಜಪುತ್ರನು ತಾನಿಳಿದು ಬಂದ ಹಗ್ಗವು ತನ್ನ ಕೈಗೆ ಎಟುಕುವಹಾಗೆ ನೇತಾಡುತ್ತಿದ್ದದ್ದನ್ನು ಕಂಡು ಅದನ್ನು ತಟ್ಟನೆ ಹಿಡಿದುಕೊಂಡು ಲಂಘನೆಯಿಂದ ಅದರಮೇಲೆ ಹತ್ತಿಹೋಗಲಾರಂಭಿಸಿದನು. ಅದನ್ನು ಕಂಡು ಮುಸಲ್ಮಾನರು ಅವನ ಮೇಲೆ ಬಾಣಗಳನ್ನು ಪ್ರಯೋಗಮಾಡಿದರು. ಪುಣ್ಯವಶದಿಂದ ಅವನು ಯಾವ ಘಾತವೂ ಇಲ್ಲದೆ ಕೋಟೆಯ ಮೇಲಕ್ಕೆ ಹತ್ತಿ ಹೋಗಿ ತನ್ನ ಆಪ್ತಮಿತ್ರರ ನಡುವೆ ನಿಂತನು.

ಈ ರೀತಿಯಾಗಿ ಮಹಮ್ಮದೀಯರ ಪ್ರಬಲವಾದ ಪ್ರಯತ್ನಗಳು ಯಾವುವೂ ಕೈಗೂಡದೆ ಹೋದಬಳಿಕ, ಮುತ್ತಿಗೆಯ ಕೆಲಸಗಳು ಸ್ವಲ್ಪ ವಿಳಂಬಕ್ಕೆ ಬಿದ್ದುವು ಅವರು ಬೇರೆ ಏರ್ಪಾಡು ಮಾಡುವುದಾಗಿ ಆಲೋಚಿಸಿ ಗೋಡೆಗಿಂತಲೂ ಎತ್ತರವಾಗಿ ಒಂದು ಮಣ್ಣುದಿಣ್ಣೆಯನ್ನು ಕಟ್ಟಬೇಕೆಂದು ನಿಶ್ಚಯಿಸಿ ಆ ಕೆಲಸಕ್ಕೆ ಮೊದಲುಮಾಡಿದರು. ಈಗ ಎದುರಾಳಿಗಳು ಈ ದಿಣ್ಣೆಯಮೇಲೆ ವಿಶೇಷವಾಗಿ ದೃಷ್ಟಿಯಿಟ್ಟರು. ಈಗಿನ ಸನ್ನಿವೇಶದಲ್ಲಿ ಮಣ್ಣುದಿಣ್ಣೆಯು ಸಾಕಾದಷ್ಟು ಎತ್ತರಕ್ಕೆ ಏಳುವುದಕ್ಕೆ ಮುಂಚೆಯಾಗಲಿ ಮಹಮ್ಮದೀಯರು ಭಾವಿಸಿಕೊಂಡಿದ್ದ ಹಾಗೆ

ಕೋಟೆಯೊಳಗಣ ಕಣಜಗಳೆಲ್ಲಾ ಕ್ಷಿಪ್ರದಲ್ಲಿಯೇ ಬರಿದಾಗಿ ತಿಂಡಿಗೆ ಮಾರ್ಗವಿಲ್ಲದೆ ರಾಜಪುತ್ರರು ಬಂದು ಶರಣಾಗತರಾಗುವುದಕ್ಕೆ ಮುಂಚೆಯಾಗಲಿ ಯಾವ ಪ್ರಬಲವಾದ ಕಾರ್ಯಭಾಗಗಳೂ ನಡೆಯುವುದಾಗಿ ತೋರಿಬರಲಿಲ್ಲ.

ಹೀಗಿರುತ್ತಿರಲು ಒಂದು ದಿವಸರಾತ್ರಿ ಬಾರ್ ದುರ್ಗದ ದನಕಾಯುವವನೊಬ್ಬನು ಮೊಗಲ್ ಸೇನಾಪತಿಯ ಗುಡಾರಕ್ಕೆ ಬಂದು, ಅದುವರೆಗೂ ಒಂದೇ ವಿಧವಾಗಿದ್ದ ಅಲ್ಲಿಯ ಸನ್ನಿವೇಶವನ್ನೆಲ್ಲಾ ಮಾರ್ಪಡಿಸಿಬಿಟ್ಟನು. ಈ ಗೋವಳಿಗನು ಹಿಂದುವಾಗಿದ್ದರೂಕೂಡ ದುಡ್ಡಿನ ದುರಾಶೆಗೊಳಗಾಗಿ, ಮಹಮ್ಮದೀಯರನ್ನು ಒಂದು ಕಳ್ಳದಾರಿಯಿಂದ ಕೋಟೆಯೊಳಕ್ಕೆ ಕರೆದುಕೊಂಡು ಹೋಗುವುದಾಗಿ ಮಾತುಕೊಟ್ಟನು. ಆದರೂ ಆ ಹಾದಿಯು ಕೋಟೆಗೆ ಉತ್ತರದಲ್ಲಿ ಬಲುಕಡಿದಾಗಿದ್ದ ಬಂಡೆಗಳಮೇಲೆ ಹೋಗುತ್ತಿದ್ದ ಕಾರಣ ಬಹಳ ಅಪಾಯಕರವೆಂಬದಾಗಿ ತಿಳಿಸಿದನು. ಅಲ್ಲಿ ಕಡಿದಾಗಿದ್ದುದರಿಂದಲೇ ಆ ಭಾಗದ ಕೋಟೆಗೋಡೆಯು ಎತ್ತರವಾಗಿರಲಿಲ್ಲ. ಶತ್ರುಗಳು ಆ ಬಂಡೆಯ ಮೇಲಕ್ಕೆ ಹೋದರೆಂದರೆ ಕೋಟೆಗೆ ನುಗ್ಗಲು ವಿಶೇಷ ಪ್ರಯಾಸವಾಗುತ್ತಿರಲಿಲ್ಲ. ಇದನ್ನೆಲ್ಲಾ ಕೇಳಿ ಅದುವರೆಗೂ ತನ್ನ ಪರಾಕ್ರಮವನ್ನು ತೋರಿಸಲು ಸಂದರ್ಭ ದೊರಗಲಿಲ್ಲವಲ್ಲಾ ಎಂದು ಮನಸ್ಸಿನಲ್ಲಿಯೇ ಕುದಿಯುತ್ತಿದ್ದ ಕಾಸಿಂಖಾನನೆಂಬ ಒಬ್ಬ ತರುಣಸೈನಿಕನು ತನ ಮಾವನಾದ ಸೇನಾಪತಿಯನ್ನು ನೋಡಿ ಈ ದುಷ್ಕರವಾದ ಪ್ರಯತ್ನದಲ್ಲಿ ತನ್ನನು ಮುಂದಾಳಾಗಿ ನೇಮಿಸಬೇಕೆಂದು ಪ್ರಾರ್ಥಿಸಿಕೊಂಡನು.

ಹಾಗೆಯೇ ಅವನ ಇಷ್ಟಾರ್ಥವೂ ಲಭಿಸಿತು, ಕೂಡಲೆ ಅವನು ರಾತ್ರಿ ಸರಿಹೊತ್ತಿನಲ್ಲಿ ಮಹಾಶೂರರಾಗಿಯೂ ಲಂಘನೆಯುಳ್ಳವರಾಗಿಯೂ ಇದ್ದ 500 ಮಂದಿ ಸೈನಿಕರನ್ನು ಸಂಗಡ ಕರೆದುಕೊಂಡು ಆ ದನಕಾಯುವವನನ್ನು ಮುಂದೆ ಬಿಟ್ಟುಕೊಂಡು ದುರ್ಗದ ಪಕ್ಕದಲ್ಲಿ ಹೊರಟು ಉತ್ತರ ಭಾಗದ ಬಂಡೆಯ ಬಳಿಗೆ ಬಂದು ಸೇರಿದನು.

ಬಳಿಕ ಅವರು ಆ ಬಂಡೆಗಳ ತಳದಲ್ಲಿ ಹರಿಯುತ್ತಿದ್ದ ಹೊಳೆಯನ್ನು ದಾಟಿ ಇಕ್ಕಟ್ಟಾಗಿದ್ದ ಬಂಡೆಯ ಡೊಗರಿನಲ್ಲಿ ಒಬ್ಬರ ಹಿಂದೆ ಒಬ್ಬರ ಮೇರೆ ಹತ್ತಲಾರಂಭಿಸಿದರು. ಎಲ್ಲರಿಗೂ ಮುಂದೆ ಗೋವಳಿಗನೂ ಅವನ ಹಿಂದೆ ಕಾಸಿಂಖಾನನೂ ಅವನ ಹಿಂದೆ ಸೈನಿಕರೂ ಈ ಮೇರೆಗೆ ಎಲ್ಲರೂ ಲಘುವಾದ ಆಯುಧಗಳನ್ನು ಧರಿಸಿ ಬರಿಯಕಾಲಿನಲ್ಲಿ ಹೋಗುತ್ತಿದ್ದರು. ಆ ಹಾದಿಯು ಓರೆಕೋರೆಗಳಿಲ್ಲದೆ ಸರಿಯಾಗಿ ನೆಟ್ಟಗೆ ಹೋಗುತ್ತಿತ್ತು. ಆ ದಾರಿಯುದ್ದಕ್ಕೂ ಕಾಲಿಟ್ಟುಕೊಳ್ಳಲ ಗುಳಿಗಳನ್ನು ಕೊರೆದು ಅಲ್ಲಲ್ಲಿ ಬಲು ಕಡಿದಾಗಿದ್ದ ಕಡೆಗಳಲ್ಲಿ ಬಂಡೆಗೆ ಬಲವಾದ ಗುಳಗಳನ್ನು ಬಿಗಿಯಾಗಿ ಜಡಿತಮಾಡಿ ಇಟ್ಟಿದ್ದರು. ಅಲ್ಲಿ ಹೋಗುವಾಗ ಅವರೆಲ್ಲರೂ ನಿಶ್ಶಬ್ದವಾಗಿದ್ದುಕೊಂಡು ಒಂದು ಸಣ್ಣಕಲ್ಲನ್ನು ಕೂಡ ಉರುಳಿಸದಂತೆ ಎಚ್ಚರಿಕೆಯಿಂದ ಹತ್ತಿ ನಡೆಯುತ್ತಿದ್ದರು. ಹಾಗೆ ಅವರು ಮೆಲ್ಲಮೆಲ್ಲಗೆ ಬಹು

ಜಾಗರೂಕತೆಯಿಂದ ಮೇಲಮೇಲಕ್ಕೆ ಹತ್ತಿಹೋದರು. ಕೊನೆಗೆ ಅವರ ಮುಖಂಡನಾದ ಕಾಸಿಂಖಾನನು ಬಂಡೆಯ ತುದಿಗೆ ಹತ್ತಿ ಕೋಟೆಯ ಬಳಿಗೆ ಬಂದು ನಿಂತನು. ತರುವಾಯ ಅವನು ಗೋವಳಿಗರವನನ್ನು ಒಂದು ಕಡೆಗೆ ತಳ್ಳಿ ತಾನೇ ಸೇನೆಗೆ ಮುಂದಾಳಾಗಿ ನಿಂತುಕೊಂಡನು. ಈ ಭಾಗದ ಕೋಟೆಗೋಡೆಯು ಬಹಳ ತಗ್ಗಾಗಿ ಚಟುವಟಿಕೆಯಾದವರು ಸುಲಭವಾಗಿ ಹತ್ತಬಹುದಾಗಿತ್ತೆಂದು ಹಿಂದೆಯೇ ತಿಳಿಸಿತಷ್ಟೆ. ಈಗ ಮಹಮ್ಮದೀಯರು ಬಂಡೆಯ ಮೇಲಕ್ಕೆ ಬಂದು ಬಿಟ್ಟಿದ್ದರು. ಈಗ ಅವರು ದುರ್ಗರಕ್ಷಕರ ಕಣ್ಣಿಗೆ ಬೀಳದಿದ್ದರೂ ಸರಿಯೆ, ಅಥವಾ ಬಿದ್ದರೂ ಅವರನ್ನು ಸದ್ದಿಲ್ಲದೆ ಸೆರೆ ಹಿಡಿದುಕೊಂಡರೂ ಸರಿಯೆ, ಕೋಟೆಯನ್ನು ಸುಲಭವಾಗಿ ಆಕ್ರಮಿಸಿಕೊಂಡು ಬಿಡಬಹುದಾಗಿತ್ತು.

ಈ ಸಮಯದಲ್ಲಿ ಕಾಸಿಂಖಾನನ ಎದೆ ಜಗ್ಗನೆ ಬಡಿದುಕೊಳ್ಳಲಾರಂಭಿಸಿತು. ಅವನು ಮೆಲ್ಲನೆ ಕೈಪಿಡಿ ಗೋಡೆಯ ಮೇಲಕ್ಕೆ ಹತ್ತಿ ಆ ಕತ್ತಲೆಯಲ್ಲಿ ಕಣ್ಣುಕಾಣುವವರೆಗೂ ದೃಷ್ಟಿಸಿ ನೋಡಿ ಬಳಿಕ ಮೆಲ್ಲಗೆ ಕೆಳಕ್ಕೆ ಕಾಲಿಟ್ಟನು. ಇನ್ನೇನು ಅವನು ಕಾಲೂರಿದನು ಎನ್ನುವ ವೇಳೆಗೆ ಯಾರೋ ಅವನೆದೆಯಮೇಲೆ ಕೈಯಿಟ್ಟು ಬಲವಾಗಿ ತಳ್ಳಿಬಿಟ್ಟರು. ಅವನು ಒಂದು ಕ್ಷಣಕಾಲ ಪಾಳಿಯಮೇಲೆ ತೂಗಾಡಿ ಬಳಿಕ ದಾಯತಪ್ಪಿ ತನ್ನ ಹಿಂದೆ ಬರುತ್ತಿದ್ದ ಸೈನಿಕನ ತಲೆಯಮೇಲೆ ದೊಪ್ಪನೆ ಬಿದ್ದು ಅವನನ್ನೂ ತಳ್ಳಿಕೊಂಡು ಕೆಳಕ್ಕೆ ಬಿದ್ದುಬಿಟ್ಟನು. ಇವರಿಬ್ಬರೂ ಉರುಳಿಕೊಂಡು ಮೇಲೆ ಬಿದ್ದ ರಭಸಕ್ಕೆ ಅವರ ಕೆಳಗಿದ್ದವರೆಲ್ಲಾ ಆಸರೆ ತಪ್ಪಿ ಬಿದ್ದು ಉರುಳಿಕೊಂಡು ಹೋದರು. ಇದನ್ನು ನೋಡಿ ತಪ್ಪಿಸಿಕೊಳ್ಳುವುದಕ್ಕಾಗಿ ಅತ್ತಿತ್ತ ಸಂದವರೂ ಕೂಡ ಕಾಲಿಗೆ ತಡೆತಪ್ಪಿ ಜಾರಿ ಬಿದ್ದುಬಿಟ್ಟರು. ಹೀಗಾಗಿ ಆ ಮಧ್ಯರಾತ್ರಿಯಲ್ಲಿ ಕೆಳಕ್ಕೆ ಬೀಳುತ್ತಿದ್ದ ಸೈನಿಕರ ಕತ್ತಿಗಳೂ ಲೋಹ ಕವಚಗಳೂ ಬಂಡೆಗೆ ತಾಗುವುದರಿಂದುಂಟಾದ ಶಬ್ದದಿಂದಲೂ ಸೈನಿಕರ ನಾನಾವಿಧವಾದ ಕೂಗಿನಿಂದಲೂ ಕೋಟೆಯ ಮೇಲಿಂದ ಪಹರೆಯವರು ಉರುಳಿಸುತ್ತಿದ್ದ ಕಲ್ಲುಗಳ ಸದ್ದಿನಿಂದಲೂ ಕೇಳಿದವರೆದೆ ತಲ್ಲಣಿಸುವಂತಾಯಿತು. ಕಾಸಿಂಖಾನನು ಯುದ್ಧಾಸಕ್ತಿಯಿಂದ ಉತ್ಸಾಹಿತನಾಗಿ ಒಂದು ನಿಮಿಷಕಾಲ ಕೋಟೆಯಮೇಲೆ ನಿಂತಿದ್ದನು; ಉತ್ತರಕ್ಷಣದಲ್ಲಿಯೇ ಅವನು ಸಾವಿರಾರು ಅಡಿಗಳ ಕೆಳಗೆ ಹರಿಯುತ್ತಿದ್ದ ಹೊಳೆಯ ದಡದಲ್ಲಿ ಸತ್ತೂ ಸಾಯುತ್ತಲೂ ಬಿದ್ದಿದ್ದ ತನ್ನ ಸೈನಿಕರ ನಡುವೆ ರೂಪಳಿದು ಮಾಂಸದ ಮುದ್ದೆಯಾಗಿ ಬಿದ್ದುಹೋದನು.

ಆ ಮೇರೆ ಸಕಾಲಕ್ಕೆ ಒದಗಿಬಂದು ಅಷ್ಟೊಂದು ಮಂದಿ ಮೊಗಲರಿಗೆ ನಿಮಿಷಮಾತ್ರದಲ್ಲಿ ಲೋಕಾಂತರ ಪ್ರಾಪ್ತಿಯನ್ನುಂಟುಮಾಡಿದುದು ಯಾವುದು? ಅದೇ ಹಿಮ್ಮತ್‌ಸಿಂಗನ ಕೈ. ಹಿಮ್ಮತ್‌ಸಿಂಗನು ಆಗಾಗ್ಗೆ ಹೊರಟು ತನ್ನ ಪಹರೆಯವರು ತಮ್ಮ ತಮ್ಮ ಠಾಣೆಗಳಲ್ಲಿ ಎಚ್ಚರವಾಗಿರುವರೋ ಇಲ್ಲವೋ ಎಂದು ನೋಡುವುದಕ್ಕಾಗಿ ರಾತ್ರಿ ಮೂವತ್ತುಗಳಿಗೆಯೂ ಬೇಹುತಿರುಗುವ ಪದ್ಧತಿಯನ್ನು

ಕೋಟೆಯೊಳಗಣ ಕಣಜಗಳೆಲ್ಲಾ ಕ್ಷಿಪ್ರದಲ್ಲಿಯೇ ಬರಿದಾಗಿ ತಿಂಡಿಗೆ ಮಾರ್ಗವಿಲ್ಲದೆ ರಾಜಪುತ್ರರು ಬಂದು ಶರಣಾಗತರಾಗುವುದಕ್ಕೆ ಮುಂಚೆಯಾಗಲಿ ಯಾವ ಪ್ರಬಲವಾದ ಕಾರ್ಯಭಾಗಗಳೂ ನಡೆಯುವುದಾಗಿ ತೋರಿಬರಲಿಲ್ಲ.

ಹೀಗಿರುತ್ತಿರಲು ಒಂದು ದಿವಸರಾತ್ರಿ ಬಾರ್ ದುರ್ಗದ ದನಕಾಯುವವನೊಬ್ಬನು ಮೊಗಲ್ ಸೇನಾಪತಿಯ ಗುಡಾರಕ್ಕೆ ಬಂದು, ಅದುವರೆಗೂ ಒಂದೇ ವಿಧವಾಗಿದ್ದ ಅಲ್ಲಿಯ ಸನ್ನಿವೇಶವನ್ನೆಲ್ಲಾ ಮಾರ್ಪಡಿಸಿಬಿಟ್ಟನು. ಈ ಗೋವಳಿಗನು ಹಿಂದುವಾಗಿದ್ದರೂಕೂಡ ದುಡ್ಡಿನ ದುರಾಶೆಗೊಳಗಾಗಿ, ಮಹಮ್ಮದೀಯರನ್ನು ಒಂದು ಕಳ್ಳದಾರಿಯಿಂದ ಕೋಟೆಯೊಳಕ್ಕೆ ಕರೆದುಕೊಂಡು ಹೋಗುವುದಾಗಿ ಮಾತುಕೊಟ್ಟನು. ಆದರೂ ಆ ಹಾದಿಯು ಕೋಟೆಗೆ ಉತ್ತರದಲ್ಲಿ ಬಲುಕಡಿದಾಗಿದ್ದ ಬಂಡೆಗಳಮೇಲೆ ಹೋಗುತ್ತಿದ್ದ ಕಾರಣ ಬಹಳ ಅಪಾಯಕರವೆಂಬದಾಗಿ ತಿಳಿಸಿದನು. ಅಲ್ಲಿ ಕಡಿದಾಗಿದ್ದುದರಿಂದಲೇ ಆ ಭಾಗದ ಕೋಟೆಗೋಡೆಯು ಎತ್ತರವಾಗಿರಲಿಲ್ಲ. ಶತ್ರುಗಳು ಆ ಬಂಡೆಯ ಮೇಲಕ್ಕೆ ಹೋದರೆಂದರೆ ಕೋಟೆಗೆ ನುಗ್ಗಲು ವಿಶೇಷ ಪ್ರಯಾಸವಾಗುತ್ತಿರಲಿಲ್ಲ. ಇದನ್ನೆಲ್ಲಾ ಕೇಳಿ ಅದುವರೆಗೂ ತನ್ನ ಪರಾಕ್ರಮವನ್ನು ತೋರಿಸಲು ಸಂದರ್ಭ ದೊರೆಯಲಿಲ್ಲವಲ್ಲಾ ಎಂದು ಮನಸ್ಸಿನಲ್ಲಿಯೇ ಕುದಿಯುತ್ತಿದ್ದ ಕಾಸಿಂಖಾನನೆಂಬ ಒಬ್ಬ ತರುಣಸೈನಿಕನು ತನ ಮಾವನಾದ ಸೇನಾಪತಿಯನ್ನು ನೋಡಿ ಈ ದುಷ್ಕರವಾದ ಪ್ರಯತ್ನದಲ್ಲಿ ತನ್ನನು ಮುಂದಾಳಾಗಿ ನೇಮಿಸಬೇಕೆಂದು ಪ್ರಾರ್ಥಿಸಿಕೊಂಡನು.

ಹಾಗೆಯೇ ಅವನ ಇಷ್ಟಾರ್ಥವೂ ಲಭಿಸಿತು, ಕೂಡಲೆ ಅವನು ರಾತ್ರಿ ಸರಿಹೊತ್ತಿನಲ್ಲಿ ಮಹಾಶೂರರಾಗಿಯೂ ಲಂಘನೆಯುಳ್ಳವರಾಗಿಯೂ ಇದ್ದ 500 ಮಂದಿ ಸೈನಿಕರನ್ನು ಸಂಗಡ ಕರೆದುಕೊಂಡು ಆ ದನಕಾಯುವವನನ್ನು ಮುಂದೆ ಬಿಟ್ಟುಕೊಂಡು ದುರ್ಗದ ಪಕ್ಕದಲ್ಲಿ ಹೊರಟು ಉತ್ತರ ಭಾಗದ ಬಂಡೆಯ ಬಳಿಗೆ ಬಂದು ಸೇರಿದನು.

ಬಳಿಕ ಅವರು ಆ ಬಂಡೆಗಳ ತಳದಲ್ಲಿ ಹರಿಯುತ್ತಿದ್ದ ಹೊಳೆಯನ್ನು ದಾಟಿ ಇಕ್ಕಟ್ಟಾಗಿದ್ದ ಬಂಡೆಯ ಡೊಗರಿನಲ್ಲಿ ಒಬ್ಬರ ಹಿಂದೆ ಒಬ್ಬರ ಮೇರೆ ಹತ್ತಲಾರಂಭಿಸಿದರು. ಎಲ್ಲರಿಗೂ ಮುಂದೆ ಗೋವಳಿಗನೂ ಅವನ ಹಿಂದೆ ಕಾಸಿಂಖಾನನೂ ಅವನ ಹಿಂದೆ ಸೈನಿಕರೂ ಈ ಮೇರೆಗೆ ಎಲ್ಲರೂ ಲಘುವಾದ ಆಯುಧಗಳನ್ನು ಧರಿಸಿ ಬರಿಯಕಾಲಿನಲ್ಲಿ ಹೋಗುತ್ತಿದ್ದರು. ಆ ಹಾದಿಯು ಓರೆಕೋರೆಗಳಿಲ್ಲದೆ ಸರಿಯಾಗಿ ನೆಟ್ಟಗೆ ಹೋಗುತ್ತಿತ್ತು. ಆ ದಾರಿಯುದ್ದಕ್ಕೂ ಕಾಲಿಟ್ಟುಕೊಳ್ಳಲ ಗುಳಿಗಳನ್ನು ಕೊರೆದು ಅಲ್ಲಲ್ಲಿ ಬಲು ಕಡಿದಾಗಿದ್ದ ಕಡೆಗಳಲ್ಲಿ ಬಂಡೆಗೆ ಬಲವಾದ ಗುಳಗಳನ್ನು ಬಿಗಿಯಾಗಿ ಜಡಿತಮಾಡಿ ಇಟ್ಟಿದ್ದರು. ಅಲ್ಲಿ ಹೋಗುವಾಗ ಅವರೆಲ್ಲರೂ ನಿಶ್ಶಬ್ದವಾಗಿದ್ದುಕೊಂಡು ಒಂದು ಸಣ್ಣಕಲ್ಲನ್ನು ಕೂಡ ಉರುಳಿಸದಂತೆ ಎಚ್ಚರಿಕೆಯಿಂದ ಹತ್ತಿ ನಡೆಯುತ್ತಿದ್ದರು. ಹಾಗೆ ಅವರು ಮೆಲ್ಲಮೆಲ್ಲಗೆ ಬಹು

ಜಾಗರೂಕತೆಯಿಂದ ಮೇಲಮೇಲಕ್ಕೆ ಹತ್ತಿಹೋದರು. ಕೊನೆಗೆ ಅವರ ಮುಖಂಡನಾದ ಕಾಸಿಂಖಾನನು ಬಂಡೆಯ ತುದಿಗೆ ಹತ್ತಿ ಕೋಟೆಯ ಬಳಿಗೆ ಬಂದು ನಿಂತನು. ತರುವಾಯ ಅವನು ಗೋವಳಿಗರವನನ್ನು ಒಂದು ಕಡೆಗೆ ತಳ್ಳಿ ತಾನೇ ಸೇನೆಗೆ ಮುಂದಾಳಾಗಿ ನಿಂತುಕೊಂಡನು. ಈ ಭಾಗದ ಕೋಟೆಗೋಡೆಯು ಬಹಳ ತಗ್ಗಾಗಿ ಚಟುವಟಿಕೆಯಾದವರು ಸುಲಭವಾಗಿ ಹತ್ತಬಹುದಾಗಿತ್ತೆಂದು ಹಿಂದೆಯೇ ತಿಳಿಸಿತಷ್ಟೆ. ಈಗ ಮಹಮ್ಮದೀಯರು ಬಂಡೆಯ ಮೇಲಕ್ಕೆ ಬಂದು ಬಿಟ್ಟಿದ್ದರು. ಈಗ ಅವರು ದುರ್ಗರಕ್ಷಕರ ಕಣ್ಣಿಗೆ ಬೀಳದಿದ್ದರೂ ಸರಿಯೆ, ಅಥವಾ ಬಿದ್ದರೂ ಅವರನ್ನು ಸದ್ದಿಲ್ಲದೆ ಸೆರೆ ಹಿಡಿದುಕೊಂಡರೂ ಸರಿಯೆ, ಕೋಟೆಯನ್ನು ಸುಲಭವಾಗಿ ಆಕ್ರಮಿಸಿಕೊಂಡು ಬಿಡಬಹುದಾಗಿತ್ತು.

ಈ ಸಮಯದಲ್ಲಿ ಕಾಸಿಂಖಾನನ ಎದೆ ಜಗ್ಗನೆ ಬಡಿದುಕೊಳ್ಳಲಾರಂಭಿಸಿತು. ಅವನು ಮೆಲ್ಲನೆ ಕೈಪಿಡಿ ಗೋಡೆಯ ಮೇಲಕ್ಕೆ ಹತ್ತಿ ಆ ಕತ್ತಲೆಯಲ್ಲಿ ಕಣ್ಣುಕಾಣುವವರೆಗೂ ದೃಷ್ಟಿಸಿ ನೋಡಿ ಬಳಿಕ ಮೆಲ್ಲಗೆ ಕೆಳಕ್ಕೆ ಕಾಲಿಟ್ಟನು. ಇನ್ನೇನು ಅವನು ಕಾಲೂರಿದನು ಎನ್ನುವ ವೇಳೆಗೆ ಯಾರೋ ಅವನೆದೆಯಮೇಲೆ ಕೈಯಿಟ್ಟು ಬಲವಾಗಿ ತಳ್ಳಿಬಿಟ್ಟರು. ಅವನು ಒಂದು ಕ್ಷಣಕಾಲ ಪಾಳಿಯಮೇಲೆ ತೂಗಾಡಿ ಬಳಿಕ ದಾಯತಪ್ಪಿ ತನ್ನ ಹಿಂದೆ ಬರುತ್ತಿದ್ದ ಸೈನಿಕನ ತಲೆಯಮೇಲೆ ದೊಪ್ಪನೆ ಬಿದ್ದು ಅವನನ್ನೂ ತಳ್ಳಿಕೊಂಡು ಕೆಳಕ್ಕೆ ಬಿದ್ದುಬಿಟ್ಟನು. ಇವರಿಬ್ಬರೂ ಉರುಳಿಕೊಂಡು ಮೇಲೆ ಬಿದ್ದ ರಭಸಕ್ಕೆ ಅವರ ಕೆಳಗಿದ್ದವರೆಲ್ಲಾ ಆಸರೆ ತಪ್ಪಿ ಬಿದ್ದು ಉರುಳಿಕೊಂಡು ಹೋದರು. ಇದನ್ನು ನೋಡಿ ತಪ್ಪಿಸಿಕೊಳ್ಳುವುದಕ್ಕಾಗಿ ಅತ್ತಿತ್ತ ಸಂದವರೂ ಕೂಡ ಕಾಲಿಗೆ ತಡೆತಪ್ಪಿ ಜಾರಿ ಬಿದ್ದುಬಿಟ್ಟರು. ಹೀಗಾಗಿ ಆ ಮಧ್ಯರಾತ್ರಿಯಲ್ಲಿ ಕೆಳಕ್ಕೆ ಬೀಳುತ್ತಿದ್ದ ಸೈನಿಕರ ಕತ್ತಿಗಳೂ ಲೋಹ ಕವಚಗಳೂ ಬಂಡೆಗೆ ತಾಗುವುದರಿಂದುಂಟಾದ ಶಬ್ದದಿಂದಲೂ ಸೈನಿಕರ ನಾನಾವಿಧವಾದ ಕೂಗಿನಿಂದಲೂ ಕೋಟೆಯ ಮೇಲಿಂದ ಪಹರೆಯವರು ಉರುಳಿಸುತ್ತಿದ್ದ ಕಲ್ಲುಗಳ ಸದ್ದಿನಿಂದಲೂ ಕೇಳಿದವರೆದೆ ತಲ್ಲಣಿಸುವಂತಾಯಿತು. ಕಾಸಿಂಖಾನನು ಯುದ್ಧಾಸಕ್ತಿಯಿಂದ ಉತ್ಸಾಹಿತನಾಗಿ ಒಂದು ನಿಮಿಷಕಾಲ ಕೋಟೆಯಮೇಲೆ ನಿಂತಿದ್ದನು; ಉತ್ತರಕ್ಷಣದಲ್ಲಿಯೇ ಅವನು ಸಾವಿರಾರು ಅಡಿಗಳ ಕೆಳಗೆ ಹರಿಯುತ್ತಿದ್ದ ಹೊಳೆಯ ದಡದಲ್ಲಿ ಸತ್ತೂ ಸಾಯುತ್ತಲೂ ಬಿದ್ದಿದ್ದ ತನ್ನ ಸೈನಿಕರ ನಡುವೆ ರೂಪಳಿದು ಮಾಂಸದ ಮುದ್ದೆಯಾಗಿ ಬಿದ್ದುಹೋದನು.

ಆ ಮೇರೆ ಸಕಾಲಕ್ಕೆ ಒದಗಿಬಂದು ಅಷ್ಟೊಂದು ಮಂದಿ ಮೊಗಲರಿಗೆ ನಿಮಿಷಮಾತ್ರದಲ್ಲಿ ಲೋಕಾಂತರ ಪ್ರಾಪ್ತಿಯನ್ನುಂಟುಮಾಡಿದುದು ಯಾವುದು? ಅದೇ ಹಿಮ್ಮತ್‌ಸಿಂಗನ ಕೈ. ಹಿಮ್ಮತ್‌ಸಿಂಗನು ಆಗಾಗ್ಗೆ ಹೊರಟು ತನ್ನ ಪಹರೆಯವರು ತಮ್ಮ ತಮ್ಮ ಠಾಣೆಗಳಲ್ಲಿ ಎಚ್ಚರವಾಗಿರುವರೋ ಇಲ್ಲವೋ ಎಂದು ನೋಡುವುದಕ್ಕಾಗಿ ರಾತ್ರಿ ಮೂವತ್ತುಗಳಿಗೆಯೂ ಬೇಹುತಿರುಗುವ ಪದ್ಧತಿಯನ್ನು

ಇಟ್ಟುಕೊಂಡಿದ್ದನು. ಈ ದಿನ ರಾತ್ರಿ ಆ ನಿಶ್ಶಬ್ದವಾದ ಮಧ್ಯರಾತ್ರಿಯಲ್ಲಿ ಅವನು ಉತ್ತರಭಾಗದ ಗೋಡೆಯಮೇಲೆ ಸುತ್ತಿಕೊಂಡು ಬರುವಾಗ ಬಲು ಚುರುಕಾದ ಅವನ ಕಿವಿಗೆ ಒಂದು ಸಣ್ಣಕಲ್ಲು ಉರುಳಿಸಿದ ಹಾಗೆ ಕೇಳಿಸಿತು. ಕಾಸಿಂಖಾನನು ಕೋಟೆಯ ಮೇಲಕ್ಕೆ ಹತ್ತುವಾಗ ಅವನ ಕಾಲು ತಗುಲಿ ಆ ಸಣ್ಣಕಲ್ಲು ಕೆಳಕ್ಕೆ ಬಿದ್ದಿತು. ಆ ಸದ್ದನ್ನು ಕೇಳಿ ಹಿಮತ್‌ಸಿಂಗನು ಸಕಾಲದಲ್ಲಿ ಆ ಸ್ಥಳಕ್ಕೆ ಬಂದು ತಾನು ಮಟ್ಟವಾದ ನೆಲದಮೇಲೆ ಕಾಲೂರಿ ಬಿಗಿಯಾಗಿ ನಿಂತಿದ್ದ ಕಾರಣ ತನ್ನ ಬಲವನ್ನೆಲ್ಲಾ ಬಿಟ್ಟು ಶತ್ರುವನ್ನು ಹಾಗೆ ಕೆಳಕ್ಕೆ ನೂಕಿಬಿಟ್ಟನು.

ಈ ರೀತಿಯಾಗಿ ರಾಜಪುತ್ರ ಸೇನೆಯವರು ತಮ್ಮಮೇಲೆ ಶತ್ರುಗಳು ಗೂಢವಾಗಿಯೂ ಪ್ರಕಾಶವಾಗಿಯೂ ಬಂದು ಬೀಳುವುದಕ್ಕಾಗಿ ಮಾಡಿದ ಅನೇಕ ಪ್ರಯತ್ನಗಳನ್ನು ಭಂಗಪಡಿಸಿದರು. ಆದಾಗ್ಗೂ ಶತ್ರುಗಳು ತಮ್ಮ ಸುತ್ತಲೂ ಬಿಗಿಬಿಗಿಯಾಗಿಮುತ್ತಿಗೆ ಹಾಕಿಕೊಂಡಿದ್ದ ಕಾರಣ ರಾಜಪುತ್ರರು ಹೊರಗಣಿಂದ ಆಹಾರ ಸಾಮಗ್ರಿಯನ್ನು ಪಡೆದುಕೊಳ್ಳಲಾರದೆ ಪೇಚಾಡುತ್ತಿದ್ದರು. ಈ ವೇಳೆಗೆ ದುರ್ಗದಲ್ಲಿದ್ದ ದವಸಗಳೆಲ್ಲಾ ಮುಗಿಯುತ್ತ ಬಂದುವು. ಇನ್ನುಮುಂದೆ ಹಿಮ್ಮತ್‌ಸಿಂಗನೂ ಅವನ ಸೈನಿಕರೂ ಅನ್ನವಿಲ್ಲದೆ ಸಾಯುವ ಘಟ್ಟಕ್ಕೆ ಬಂದಿತು ಇದು ಎಲ್ಲರಿಗೂ ಗೊತ್ತಾಯಿತು. ಈ ಸಂಧಿಯಲ್ಲಿ "ನಿಮ್ಮ ತಂದೆಯ ಜೀವವನ್ನು ಉಳಿಸಿಕೊಳ್ಳುವುದಕ್ಕಾಗಿ ನೀವು ಈಗಲೇ ಊರಿಗೆ ಬಂದುಬಿಡಬೇಕು" ಎಂಬದಾಗಿ ಹಿಮ್ಮತ್‌ಸಿಂಗನ ಹೆಂಡತಿಯು ಬರೆದು ಒಬ್ಬ ಆಪ್ತಭೃತ್ಯನ ಕೈಯಲ್ಲಿ ಕೊಟ್ಟು ಕಳುಹಿಸಿದ್ದ ಕಾಗದವೂ ಬಂದು ಸೇರಿತು. ಆ ಕಾಗದವು ಇನ್ನಾರ ಕೈಗಾದರೂ ಬೀಳಬಹುದೆಂಬ ಶಂಕೆಯಿಂದ ಅದರಲ್ಲಿ ಯಾವುದನ್ನೂ ವಿವರವಾಗಿ ಬರೆದಿರಲಿಲ್ಲ. ಹೀಗೆ ಪ್ರಾಪ್ತವಾದ ಉಭಯ ಕಾರಣಗಳಿಂದಲೂ ಹಿಮ್ಮತ್‌ಸಿಂಗನು ತನ್ನವರೊಡನೆ ಆ ಕೋಟೆಯನ್ನು ಬಿಟ್ಟು ಹೊರಟುಹೋಗುವ ಯತ್ನಮಾಡುವುದಾಗಿ ನಿಶ್ಚಯಿಸಿಕೊಂಡನು. ಬಳಿಕ ಒಂದು ದಿನ ಗಾಢಾಂಧಕಾರವಾದ ರಾತ್ರಿಯಲ್ಲಿ ಮೋಡಕವಿದು ಗುಡುಗುತ್ತಿದ್ದಾಗ ತಾವೆಲ್ಲರೂ ಸೂರಹೊರಡುವ ಏರ್ಪಾಡು ಮಾಡಿಕೊಂಡರು. ಈಚೆಗೆ ಮೊಗಲರು ಯಾವಾಗಲೂ ಮಣ್ಣುದಿಣ್ಣೆ ಕಟ್ಟುವುದರಲ್ಲೂ ಅದನ್ನು ಕಾಪಾಡಿಕೊಳ್ಳುವುದರಲ್ಲೂ ದೃಷ್ಟಿಯಿಟ್ಟು ಅಲ್ಲಿಯೇ ಇರುತ್ತಿದ್ದರು. ಈ ಮಣ್ಣುದಿಣ್ಣೆ ಮುಗಿಯುವುದರೊಳಗಾಗಿ ರಾಜಪುತ್ರರು ಅದನ್ನು ನೆಲಮಟ್ಟ ಮಾಡುವುದಾಗಿ ಪ್ರತಿಜ್ಞೆಮಾಡಿಕೊಂಡಿರುವಂತೆ ಮೊಗಲರಿಗೆ ನಂಬಿಕೆ ಹುಟ್ಟಿಸುವುದಕ್ಕಾಗಿ ಹಿಮ್ಮತ್‌ಸಿಂಗನು ಒಬ್ಬ ಹಿಂದೂ ರೈತನಿಗೆ ಲಂಚಕೊಟ್ಟು ಅವನನ್ನು ಗುಟ್ಟಾಗಿ ಮೊಗಲ್ ಸೇನಾಪತಿಯ ಶಿಬಿರಕ್ಕೆ ಹೋಗಿ ಹೇಳುವಂತೆ ತಿಳಿಸಿ ಕಳುಹಿಸಿದನು. ಅವನು ಹಾಗೆಯೇ ಮಾಡಿದನು. ಹಿಂದೆ ರಾಜಪುತ್ರರು ಚಪ್ಪರವನ್ನು ಸುಟ್ಟುಬಿಟ್ಟುದು ಇನ್ನೂ ತಮ್ಮ ಜ್ಞಾಪಕದಲ್ಲಿದ್ದಕಾರಣ ಮೊಗಲರು ಆ ಮಾತನು ಬರಿಯ ಗೊಡ್ಡು ಎದರಿಕೆಯೆಂಬದಾಗಿ ಅಸಡ್ಡೆಮಾಡಲಾರದೆ ಆ ಮಣ್ಣುದಿಣ್ಣೆಯ ಬಳಿಯಲ್ಲಿ ಸದಾ

ಯುದ್ಧಸನ್ನದ್ಧವಾಗಿ ನಿಲ್ಲಿಸಿದ್ದ ದೊಡ್ಡ ಪಹರೆಯನ್ನು ಮತ್ತಷ್ಟು ಬಲಪಡಿಸಿ ಕಣ್ಣೇ ಕಾವಲಾಗಿ ಕಾದುಕೊಂಡಿದ್ದರು.

ಹೀಗಿರುತ್ತಿರಲು ಆ ರಾತ್ರಿ ರಾಜಪುತ್ರರು ಕೋಟೆಯ ಉತ್ತರಪಾರ್ಶ್ವದಲ್ಲಿ ಹಿಂದೆ ಕಾಸಿಂಖಾನನು ತನ್ನ ಸೇನೆಯನ್ನು ತಂದ ಬಂಡೆಗಳಿಗೆ ಸಮೀಪವಾಗಿದ್ದ ಬೇರೊಂದು ಮಾರ್ಗದಲ್ಲಿ ಹೊರಹೊರಟರು. ಹೆಂಗಸರ ಮಕ್ಕಳ ತೊಡಕಿಲ್ಲದಿದ್ದುದರಿಂದ ಅವರೆಲ್ಲರೂ ಯಾವ ತೊಂದರೆಯೂ ಇಲ್ಲದೆ ನಿಶ್ಶಬ್ದವಾಗಿ ಬಂಡೆಯಿಳಿದು ನದಿಯ ದಡಕ್ಕೆ ಬಂದು ಸೇರಿದರು. ಇಲ್ಲಿಂದ ಮುಂದೆಯೂ ಸಹ ಅವರು ಯಾವ ಘಾತಪಾತಗಳೂ ಇಲ್ಲದೆ ಹೊರಟುಹೋಗಬಹುದಾಗಿತ್ತು. ಆದರೆ ಆ ಕಾಲಕ್ಕೆ ಸರಿಯಾಗಿ ಫಳಚ್ಚನೆ ಒಂದು ಮಿಂಚು ಮಿಂಚಿತು. ಆ ಬೆಳಕಿನಿಂದ ಅವರು ಬಂದಿರುವ ಸಂಗತಿಯು ಸಮೀಪದಲ್ಲಿ ಠಾಣೆಯನ್ನು ಹಾಕಿಕೊಂಡಿದ್ದ ಮೊಗಲರಿಗೆ ಗೊತ್ತಾಗಿ ಹೋಯಿತು. ಒಡನೆ ಅವರು ಗುಲ್ಲೆಬ್ಬಿಸಿದರು. ಅದನ್ನು ಕೇಳಿ ಮೊಗಲ್ ಪಾಳೆಯದಲ್ಲೆಲ್ಲಾ ಹಿಂದಕ್ಕೂ ಮುಂದಕ್ಕೂ ಓಡಾಟ ಹೆಚ್ಚಿ ಸೈನಿಕರೆದ್ದು ಆತುರಾತುರದಿಂದ ಶಸ್ತ್ರಗಳನ್ನು ಧರಿಸಿಕೊಳ್ಳತೊಡಗಿದರು. ಆದರೂ ಮೊಗಲರು ರಾತ್ರಿವೇಳೆಯಲ್ಲಿ ತಮ್ಮ ಮಣ್ಣಿ ದಿಣ್ಣೆಯಮೇಲೆ ಶತ್ರುಗಳು ಬಂದು ಬೀಳಬಹುದೆಂದು ಭಾವಿಸಿ ಆ ಬಳಿಯಲ್ಲೇ ಹೆಚ್ಚು ಸೇನೆಯನ್ನು ಇಟ್ಟುಕೊಂಡಿದ್ದ ಕಾರಣ ಇಲ್ಲಿ ರಾಜಪುತ್ರರನ್ನು ತಡೆದು ನಿಲ್ಲಿಸುವುದಕ್ಕೆ ಸಾಕಾದಷ್ಟು ಸೇನೆಯಿರಲಿಲ್ಲ. ಆದ ಪ್ರಯುಕ್ತ ರಾಜಪುತ್ರರು ತಮ್ಮ ಮಾರ್ಗಕ್ಕೆ ಅಡ್ಡವಾಗಿ ಬಂದ ಅಲ್ಪಸ್ವಲ್ಪ ಮೊಗಲ್ ಸೈನಿಕರನ್ನು ಸ್ವಲ್ಪದರಲ್ಲಿಯೇ ಬಡಿದಟ್ಟಿ ತಮ್ಮ ದೇಶದಕಡೆಗೆ ಹೊರಟುಹೋದರು. ಮರುದಿನ ಬೆಳಗ್ಗೆ ಮೊಗಲರು ಅಷ್ಟು ದಿವಸದಿಂದ ತಮಗೆ ವಶವಾಗದೆ ಪೀಡಾಡಿಸುತ್ತಿದ್ದ ಆ ವಿಜನವಾದ ಕೋಟೆಯನ್ನು ಪ್ರವೇಶಮಾಡಿದರು.

ಆ ಪ್ರಕಾರ ಹೊರಟುಬಂದ ರಾಜಪುತ್ರರು ಜಾಗ್ರತೆ ಜಾಗ್ರತೆಯಾಗಿ ಉತ್ತರಕ್ಕೆ ಪ್ರಯಾಣ ಮಾಡುತ್ತ ಕ್ಷಿಪ್ರದಲ್ಲಿಯೇ ಮೊಗಲ್ ಸೀಮೆಯ ಎಲ್ಲೆಯನ್ನು ದಾಟಿ ತಮ್ಮ ರಾಜ್ಯವನ್ನು ಪ್ರವೇಶಿಸಿದರು. ಅಲ್ಲಿಗೆ ಹೋದಕೂಡಲೆ ಅವರೆಲ್ಲರೂ ತಮಗೆ ಅಲಭ್ಯವಾಗಿಯೂ ಪವಿತ್ರವಾಗಿಯೂ ಇದ್ದ ಸ್ವದೇಶ ಭೂಮಿಯನ್ನು ಅತ್ಯಂತ ಭಕ್ತಿಯಿಂದ ಪೂಜಿಸಿದರು. ಈ ಕಾಲಕ್ಕೆ ಸರಿಯಾಗಿ ಆತುರಾತುರದಿಂದ ದಕ್ಷಿಣಾಭಿಮುಖವಾಗಿ ಸವಾರಿ ಹೋಗುತ್ತಿದ್ದ ಒಬ್ಬ ಸವಾರನು ಇವರಿದ್ದುದನ್ನು ಕಾಣದೆ ಇವರ ನಡುವೆ ಬಂದುಬಿಟ್ಟನು. ಆದರೂ ಅವನು ಪಾಳೆಯದಲ್ಲಿ ನುಗ್ಗಿಕೊಂಡು ತನ್ನ ಹಾದಿಹಿಡಿದು ಹೋಗಬೇಕೆಂದು ಮುಂದುವರಿದನು. ಅಷ್ಟರಲ್ಲೆ ಕಾವಲವರು ಅವನ ಕುದುರೆಯ ಲಗಾಮನ್ನು ಹಿಡಿದು ನಿಲ್ಲಿಸಿ—ನೀನು ಯಾರು ?' ಎಂದು ಕೇಳಿದರು. ಅವನು ಏನೋ ಒಂದು ಸುಳ್ಳುಹೇಳಿ ಹೊರಟು ಅಷ್ಟರಲ್ಲಿಯೇ ಹಿಮ್ಮತ್ ಸಿಂಗನನ್ನು ನೋಡಿ ಸಂತೋಷದಿಂದ ಕೂಗಿ ಆತನ ಕೈಯಲ್ಲಿ ಒಂದು ಕಾಗದವನ್ನಿಟ್ಟನು. ಆ ಸವಾರನು ಹಿಮ್ಮತ್‌ಸಿಂಗನ ಹೆಂಡತಿಯ ಕಡೆಯಿಂದ ಬಂದ

ದೂತನು. ಈಗ ಅವನು ತಂದ ಕಾಗದದಲ್ಲಿ ಒಂದು ಭಯಂಕರವಾದ ಸಮಾಚಾರವು ಗೂಢವಾದ ಲಿಪಿಯಲ್ಲಿ ಬರೆದಿತ್ತು. ಅದರಲ್ಲಿದ್ದ ಒಕ್ಕಣೆ ಏನೆಂದರೆ :—
"ನಿಮಗೆ ಎಷ್ಟೇ ಕಷ್ಟವಾದರೂ ಬಂದುಬಿಡಿರಿ. ನಿಮ್ಮ ತೀರ್ಥರೂಪುಗಳವರು ಸೂಜಾಬಾಯೊಡನೆಯೂ ಬಪ್ಪಾಲಾಲನೊಡನೆಯೂ ವಸಂತಮಹಲಿಗೆ ಹೋಗುವವರಾಗಿದ್ದಾರೆ. ಅಲ್ಲಿ ಅವರ ಪ್ರಾಣಕ್ಕೋ ಇಲ್ಲವೆ ಸ್ವಾತಂತ್ರ್ಯಕ್ಕೋ ಅಪಾಯ ವುಂಟಾಗುವಂತಿದೆ."

ಈ ಘೋರವಾದ ಸಮಾಚಾರವನ್ನು ಕೇಳಿದಕೂಡಲೆ ಹಿಮ್ಮತ್‌ಸಿಂಗನು ತನ್ನ ಪುಣ್ಯಕ್ಕೆ ಸರಿಯಾಗಿ ಚಾರನು ಅರ್ಧ ಮಾರ್ಗದಲ್ಲಿಯೇ ಸಿಕ್ಕಿದನಲ್ಲಾ ಎಂದು ಸಂತೋಷಪಟ್ಟು, ಸ್ವಲ್ಪವೂ ಕಾಲವಿಳಂಬ ಮಾಡದೆ ಪಯಣ ಹೊರಡಲು ನಿಶ್ಚಯಿಸಿದನು. ಆದರೆ ಈಗಲೇ ಕೆಲಸ ಕ್ಕೆಮಿಾರಬಹುದೋ ಏನೋ ? ಇದೊ ! ಆಗಲೇ ಮನೋಹರವಾದ ಫಾಲ್ಗುಣಮಾಸವು ಬಂದು ಕೆಲವು ದಿವಸಗಳಾಗಿವೆ. ಈ ಕಾಲದಲ್ಲಿ ತೀರ್ಥರೂಪುಗಳವರು ಪರಿವಾರದೊಡನೆ ಹಸುರುಡುಪುಗಳನ್ನುಟ್ಟು ನಮ್ಮ ಹಿರಿಯರು ಮಕ್ರಾನೋ ಎಂಬ ಗಣಿಯ ಅಮೃತಶಿಲೆಗಳಿಂದ ಕಟ್ಟಿಸಿರುವ ವಸಂತ ಮಹಲಿನ ಪಕ್ಕದಲ್ಲಿ ಬೇಟೆಗೆ ಹೋಗುವ ಪದ್ಧತಿಯಿದೆಯಲ್ಲ ; ಅವರು ಈ ವೇಳೆಗೆ ದುರಾಶಾಗ್ರಸ್ತಳಾದ ಪತ್ನಿಯ ಕೃತ್ರಿಮಕ್ಕೂ ಮಹಾ ಕೃತಘ್ನನಾದ ಮಗನ ಮೋಸಕ್ಕೂ ಗುರಿಯಾಗಿ ಆಗಲೇ ಅಲ್ಲಿಗೆ ಹೋಗಿರುವರೋ ಏನೋ ಎಂದು ಮನಸ್ಸಿನಲ್ಲಿ ಆಲೋಚನೆ ಮಾಡುತ್ತಾ ನಿಂತುಕೊಂಡನು.

ಅದೂ ಅಲ್ಲದೆ ಈ ಕಾಲದಲ್ಲಿ ಹಿಮ್ಮತ್‌ಸಿಂಗನ ಪರಿಜನರಲ್ಲಿ ಯಾರಲ್ಲಿಯೂ ಕುದುರೆ ಇರಲಿಲ್ಲ. ರಾಜಪುತ್ರರು ಕುದುರೆಯನ್ನು ಕಂಡರೆ ದೇವರನ್ನು ಕಂಡಂತೆ ವಿಶ್ವಾಸವುಳ್ಳವರೇ ಸರಿ—ಆದರೆ ಈಗ ಅವರು ಬಾರ್‌ದುರ್ಗದಿಂದ ಹೊರಟು ಬರುವಾಗ ಅಲ್ಲಿಯ ಕಡಿದಾದ ಬಂಡೆಗಳಮೇಲೆ ತಮ್ಮ ಪ್ರಿಯವಾದ ಯುದ್ಧಾಶ್ವಗಳನ್ನು ತರುವುದು ಸಾಧ್ಯವಾಗಿರಲಿಲ್ಲ. ಆ ರೀತಿಯಾಗಿ ಕುದುರೆಯನ್ನು ಹಿಂದೆ ಬಿಟ್ಟು ಬಂದಿದ್ದ ಕಾರಣ ಹಿಮ್ಮತ್‌ಸಿಂಗನು ಆ ದೂತನ ಕುದುರೆಯನ್ನೇ ಹತ್ತಿಕೊಂಡು ತನ್ನವರನ್ನೆಲ್ಲಾ ಆದಷ್ಟುಬೇಗ ಬಂದು ಸೇರಹೇಳಿ ಆಜ್ಞಾಪಿಸಿ, ಕುದುರೆಯ ಪಕ್ಕವನ್ನು ಹಿಮ್ಮಡಿಯಿಂದೊದೆದು ಮಹಾ ವೇಗದಿಂದ ಓಡಿಸಿಕೊಂಡು ವಸಂತಮಹಲಿನ ಕಡೆಗೆ ಹೋದನು.

ಆ ಮೇರೆ ಐದಾರು ಘಂಟೆಯಕಾಲ ವೇಗವಾಗಿ ಸವಾರಿಮಾಡಿ ಬಂದಾಗ ಅವನ ತಂದೆಯ ಪ್ರಿಯನಿವಾಸವಾದ ವಸಂತಮಹಲಿನ ವಿಚಿತ್ರವಾದ ಶಿಖರಗಳು ಅವನ ಕಣ್ಣಿಗೆ ಕಾಣಬಂದುವು. ಅಲ್ಲಿಂದ ಮುಂದೆ ಅವನು ಬಹು ಜಾಗರೂಕನಾಗಿ ಹೋಗಬೇಕಾಯಿತು. ಅವನು ದೇಶಭ್ರಷ್ಟನಾಗಿದ್ದ ಪ್ರಯುಕ್ತ ಅವನು ಇಂಥವನೆಂದು ಯಾರಿಗಾದರೂ ಗೊತ್ತಾದರೆ ಕೂಡಲೆ ಅವನಿಗೆ ಮರಣಶಿಕ್ಷೆಯೋ ಕಾರಾಗೃಹಪ್ರಾಪ್ತಿಯೋ ಆಗಿ ತಂದೆಯ ಜೀವರಕ್ಷಣೆಗೆ ಅವಕಾಶವಿಲ್ಲದೆ ಹೋಗಬ

ಹುದು. ಎಲ್ಲರಿಗೂ ತಿಳಿದಹಾಗೆ ಹೋಗುವುದಕ್ಕೂ ಇಲ್ಲ. ಆಗಿನ ಒಂದೊಂದು ನಿಮಿಷವೂ ಅನರ್ಘವಾಗಿದ್ದರೂ ಕೂಡ ನಿರ್ವಾಹವಿಲ್ಲದೆ ಅವನು ತನ್ನ ಕುದುರೆಯನ್ನು ಒಂದು ಮರಕ್ಕೆ ಕಟ್ಟಿಹಾಕಿ ಕಾಡಿನಲ್ಲಿ ಅಡ್ಡ ದಾರಿಯಲ್ಲಿ ನುಗ್ಗಿ ಕಾಲ್ನಡೆಯಲ್ಲಿಯೇ ವಸಂತಮಹಲಿಗೆ ಹೋಗುವುದಾಗಿ ನಿಶ್ಚಯಮಾಡಿ ಹೊರಟನು. ಆ ವೇಳೆಗೆ ರಾತ್ರಿಯ ಕತ್ತಲೆ ಬೇಗ ಬೇಗನೆ ಕವಿಯುತ್ತ ಬಂದುದರಿಂದ ಅವನು ಇತರರ ಕಣ್ಣಿಗೆ ಬೀಳದೆ ಹೋಗಲು ಅನುಕೂಲವಾಯಿತು. ಅಲ್ಲಿ ಅರಮನೆಯಲ್ಲಿ ಉರಿಯುತ್ತಿದ್ದ ನೂರಾರು ದೀಪಗಳಿಂದ ರಾಜನು ಆಗಲೇ ಅಲ್ಲಿಗೆ ಬಂದಿದ್ದ ಸಂಗತಿಯು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಹಿಮ್ಮತ್‌ಸಿಂಗನು ಎಚ್ಚರಿಕೆಯಿಂದ ಕತ್ತಲೆಯ ಮರೆಯಲ್ಲಿದ್ದುಕೊಂಡು ಮೆಲ್ಲಗೆ ಅರಮನೆ ಗೋಡೆಯ ಬಳಿಗೆ ಸೇರಿ ಅಲ್ಲಿ ಜಾಜ್ವಲ್ಯಮಾನವಾಗಿ ಬೆಳಕು ಬರುತ್ತಿದ್ದ ಮೊದಲನೆಯ ನೆಲೆಯ ಒಂದು ಕಿಟಿಕಿಯ ಬಳಿಗೆ ಹೋಗಿ ಸೇರಿದನು.

ಅವನು ಹಾಗೆ ಹೋಗಿ ಸೇರಿ ಕಿಟಿಕಿಯೊಳಗೆ ಬಗ್ಗಿ ನೋಡಿದನು. ಆ ಕಾಲದಲ್ಲಿ ಒಳಗೆ ನಡೆಯುತ್ತಿದ್ದ ಸಂಗತಿಯನ್ನು ಕಂಡು ಅವನ ಕಣ್ಣುಗಳು ಅಲ್ಲೇ ನಟ್ಟುಹೋದುವು. ಅಲ್ಲಿ ಅವನ ತಂದೆಯೂ ಬಪ್ಪಲಾಲನೂ ಬೇಟೆಮಾಂಸ, ಜೋಳ ಮೊದಲಾದವುಗಳಿಂದ ಮಾಡಿದ ಆಹಾರಪದಾರ್ಥಗಳನ್ನು ಊಟಮಾಡುತ್ತ ಕುಳಿತಿದ್ದರು. ಆಗ ವೃದ್ಧನಾದ ರಾಜನ ಮುಖದಲ್ಲಿ ಅಂಕುರಿಸಿದ್ದ ನಗೆಯನ್ನು ನೋಡಿದರೆ ಆತನು ರುಚಿರುಚಿಯಾಗಿ ಮಾಡಿದ್ದ ಆಹಾರಪದಾರ್ಥಗಳನ್ನು ಸವಿಸವಿದು ಸಂತೋಷಪಡುತ್ತಿದ್ದಂತೆ ಕಾಣಿಸಿತು. ಆತನು ಆದಿನ ಹಗಲೆಲ್ಲಾ ಹೊರಗೆ ಬೇಟೆಯಾಡಿ ಬಂದಿದ್ದುದರಿಂದ ಅಂದಿನ ಊಟವು ಮತ್ತಷ್ಟು ರುಚಿಯಾಗಿ ತೋರಿರಬೇಕು. ಅಂದು ಸೂಜಾಬಾಯಿಯೇ ಎದುರಿಗೆ ನಿಂತು ಅಡಿಗೆಯನ್ನೆಲ್ಲಾ ಮಾಡಿಸಿದ್ದಳು. ಈಗ ಆಕೆಯು ಕೈಯಲ್ಲಿ ಬೀಸಣಿಗೆಯನ್ನು ಹಿಡಿದುಕೊಂಡು ಅವರ ತಿಂಡಿಯಮೇಲೆ ನೊಣವೆರಗದಂತೆ ಎಚ್ಚರಿಕೆಯಾಗಿ ಬೀಸುತ್ತ, ತನ್ನ ಸ್ವಾಮಿಯ ಮೇಲೂ ಮಗನಮೇಲೂ ಯಥಾಸುಖವಾಗಿ ತಂಗಾಳಿ ಬೀಸುತ್ತಿದ್ದಳು. ರಾಜನು ಸಂತೋಷವಾಗಿ ಊಟಮಾಡುತ್ತ ನಡುನಡುವೆ ತನ್ನ ಪತ್ನಿಯೊಡನೆಯೂ ಮಗನೊಡನೆಯೂ ಪರಿಹಾಸವಚನಗಳನ್ನಾಡುತ್ತ ವಿನೋದವಾಗಿದ್ದನು. ಆದರೆ ಮಗನ ಮನಸ್ಸುಮಾತ್ರ ಸರಿಯಾಗಿರಲಿಲ್ಲವಾದುದರಿಂದ ಅವನು ತಂದೆಯ ವಿನೋದವಚನಗಳಿಗೆ ವಿಶೇಷವಾಗಿ ಪ್ರತ್ಯುತ್ತರ ಕೊಡದೆ ಜೋಲುಮುಖ ಹಾಕಿಕೊಂಡು ಹೇಗೋ ಇದ್ದನು. ಅಂದಿನ ರಾತ್ರಿ ಸೂಜಾಬಾಯಿಯು ಕೊರಳಲ್ಲಿ ದಿವ್ಯವಾದ ರತ್ನಗಳಿಂದ ಝುಗಝುಗಿಸುತ್ತಿದ್ದ ಅಡ್ಡಿಕೆಯನ್ನು ಹಾಕಿಕೊಂಡಿದ್ದಳು. ಅವಳು ಕಿವಿಯಲ್ಲಿ ಹಾಕಿಕೊಂಡಿದ್ದ ಕೆಂಪಿನೋಲೆಗಳು ನಾಲ್ಕುಕಡೆಗೂ ತಳತಳನೆ ಡಾಲುಹೊಡೆಯುತ್ತಿದ್ದುವು. ಅವಳುಟ್ಟಿದ್ದ ಹಸುರು ಹಳದೀಪಟ್ಟೆಯ ಕೆಂಪು ಸೀರೆಯು ಅವಳ ಲಾವಣ್ಯವನ್ನು ಮತ್ತಷ್ಟು ಮೋಹನಕರವಾಗಿ ಮಾಡಿತ್ತು. ಆ

ರೀತಿಯಲ್ಲಿ ಶೃಂಗಾರಮಾಡಿಕೊಂಡು ಬಳ್ಳಿಯಂತೆ ಬಳುಕುತ್ತ ನಿಂತಿದ್ದ ಸೂಜಾಬಾಯಿಯು ಹಿಮ್ಮತ್‌ಸಿಂಗನ ಕಣ್ಣಿಗೆ ನಾಗರಹಾವಿನಂತೆ ಅಂದವಾಗಿಯೂ ಅಪಾಯಕರವಾಗಿಯೂ ಕಾಣಿಸಿದಳು. ತಮ್ಮ ತಂದೆಯು ಅವಳ ರೂಪಕ್ಕೆ ಮರುಳಾಗಿದ್ದುದು ಏನೂ ಆಶ್ಚರ್ಯವಲ್ಲವೆಂದು ಅವನಿಗೆ ತೋರಿತು.

ಹೀಗೆ ಯೋಚಿಸುತ್ತ ಅವನು ನೋಡುತ್ತಿರುವಾಗ ಸೂಜಾಬಾಯಿಯು ತನ್ನ ಕೋಮಲಹಸ್ತದಿಂದ ತಾನೇ ಷರಬತ್ತನ್ನು ಮಾಡಿ ತರುವೆನೆಂದು ಹೇಳಿ ಆ ಕೊಟಡಿಯ ಒಂದು ಕಡೆಗೆ ಹೋದಳು. ಹಾಗೆ ಹೋಗುವಾಗ ಅವಳು ಅನುಮಾನಾಸ್ಪದವಾಗುವಂತೆ ಏನೋ ಒಂದು ವಿಧವಾದ ಕಳ್ಳನೋಟದಿಂದ ನೋಡಿದಳು ಅವಳ ಮಾಯೆಗೆ ಮರುಳಾಗಿದ್ದ ರಾಜನಿಗೆ ಅದು ಏಳ್ಳಷ್ಟೂ ಗೊತ್ತಾಗಲಿಲ್ಲ ; ಆದರೂ ಅದು ಸೂಕ್ಷ್ಮಬುದ್ಧಿಯಾದ ಹಿಮ್ಮತ್‌ಸಿಂಗನ ದೃಷ್ಟಿಗೆ ಗೋಚರವಾಗದೆ ಹೋಗಲಿಲ್ಲ. ಅವನು ಅವಳ ಮೇಲೆಯೇ ಕಣ್ಣಿಟ್ಟು ನೋಡುತ್ತಿದ್ದನು ಬಪ್ಪಲಾಲನೂ ಕೂಡ ಓರೆ ನೋಟದಿಂದ ಅವಳನ್ನೇ ನೋಡುತ್ತಿದ್ದಹಾಗೆ ಕಾಣಬಂದಿತು. ಆಗ ಅವಳು ರತ್ನಖಚಿತವಾದ ಒಂದು ಬಟ್ಟಲಿಗೆ ಸ್ವಲ್ಪ ಷರಬತ್ತನ್ನು ಹಾಕಿ ಬಳಿಕ ಬೇಗಬೇಗನೆ ತನ್ನ ಸೀರೆಯ ನಿರಿಯಿಂದ ಒಂದು ಕಾಗದದ ಪೊಟ್ಟಳವನ್ನು ತೆಗೆದು ಆ ಬಟ್ಟಲಿಗೆ ಏನನ್ನೋ ಸುರಿದಳು. ಅದರ ಭಾವವು ಹಿಮ್ಮತ್‌ಸಿಂಗನ ಮನಸ್ಸಿಗೆ ತಟ್ಟನೆ ಹೊಳೆಯಿತು. ಒಡನೆಯೇ ಅವನು ಮರ್‍ಯಾದೆಗಿರ್‍ಯಾದೆಗಳನ್ನು ನೋಡುತ್ತ ನಿಲ್ಲದೆ ಕಿಟಕಿಯ ಮಾರ್ಗವಾಗಿ ಗಕ್ಕನೆ ಒಳಹೊಕ್ಕು ಕೊಟಡಿಯ ನಡುವೆ ನಿಂತುಕೊಂಡನು.

ಅದನ್ನು ಕಂಡು ವೃದ್ಧರಾಜನು ಭೀತಿಯಿಂದಲೂ ಆಗ್ರಹದಿಂದಲೂ ಎದ್ದುನಿಂತು ಕೈ ತಪ್ಪಾಳೆಹೊಡೆದು ಮುಖಮಂಟಪದಲ್ಲಿದ್ದ ಆಳುಗಳನ್ನು ಕರೆದನು ಅವರು ಓಡಿಬಂದ ಕೂಡಲೇ ಅವರನ್ನು ಕುರಿತು "ಅತಿಕ್ರಮಪ್ರವೇಶ ಮಾಡಿದ ಇವನನ್ನು ಹಿಡಿದುಕೊಳ್ಳಿ" ಎಂದು ಹೇಳಿ ಅಪ್ಪಣೆಕೊಟ್ಟು ಬಳಿಕ ಹಿಮ್ಮತ್‌ಸಿಂಗನ ಕಡೆ ತಿರುಗಿ—"ಎಲಾ ದುಡುಕು ಹುಡುಗ, ನೀನು ದೇಶಭ್ರಷ್ಟನಾಗಿದ್ದು ಹಿಂತಿರುಗಿ ಬಂದುದಕ್ಕಾಗಿಯೂ ನಿನ್ನ ತಂದೆಯ ಏಕಾಂತಭವನವನ್ನು ಪ್ರವೇಶಿಸಿ ಹೊಲೆಗಲಸಿದುದಕ್ಕಾಗಿಯೂ ತಕ್ಕ ಫಲವನ್ನು ಅನುಭವಿಸುವೆ. ನಿನ್ನ ನಡತೆಯನ್ನು ನೋಡಿದರೆ ನೀನು ಹುಚ್ಚನೋ ಇಲ್ಲವೇ ರಾಜದ್ರೋಹಿಯೋ ಆಗಿರಬೇಕೆಂದು ತೋರುತ್ತದೆ." ಎಂದು ಹೇಳಿದನು. ಅದಕ್ಕೆ ಹಿಮ್ಮತ್‌ಸಿಂಗನು "ನಾನು ಹುಚ್ಚನೂ ಅಲ್ಲ ; ರಾಜದ್ರೋಹಿಯೂ ಅಲ್ಲ. ಈಗ ತಮಗಾಗಿ ಸಿದ್ಧವಾಗಿರುವ ಷರಬತ್ತನ್ನು ಬಪ್ಪಲಾಲನಿಗೆ ಕುಡಿಸುವಂತೆ ಸೂಜಾಬಾಯಿಯವರಿಗೆ ಆಜ್ಞಾಪಿಸಿದರೆ ರಾಜದ್ರೋಹಿಗಳು ಯಾರೋ ತಮಗೇ ವೇದ್ಯವಾಗುತ್ತದೆ" ಎಂದು ಪ್ರತ್ಯುತ್ತರ ಕೊಟ್ಟನು. ಈ ಮಾತನ್ನು ಕೇಳಿದಕೂಡಲೆ ಸೂಜಾಬಾಯಿಯ ಮುಖವು ವಿವರ್ಣವಾಗಿ ಅವಳು ಮೈಮರೆದು ನೆಲದಲ್ಲಿ ಬಿದ್ದುಬಿಟ್ಟಳು. ಅಂಗರಕ್ಷಕನೊ

ಬ್ಬನು ಆ ಬಟ್ಟಲನ್ನು ತೆಗೆದುಕೊಂಡು ಅದರಲ್ಲಿದ್ದ ದ್ರವಾಂಶವನ್ನು ಮೆಲ್ಲಗೆ ಸುರಿದನು. ಬಳಿಕ ನೋಡುವಲ್ಲಿ ಆ ಬಟ್ಟಳ ತಳದಲ್ಲಿ ತಳತಳನೆ ಹೊಳೆಯುತ್ತ ಆಕೆಯ ದುಷ್ಕೃತ್ಯಕ್ಕೆ ಸಾಕ್ಷಿಭೂತವಾದ ವಜ್ರದ ಪುಡಿಯ ಸಣ್ಣ ಗುಡ್ಡೆಯೊಂದು ಕಣ್ಣಿಗೆ ಕಾಣಬಂದಿತು. ಹಿಮ್ಮತ್ ಸಿಂಗನು ಮಾತ್ರ ಅಡ್ಡವಾಗಿ ಬಾರದಿದ್ದ ಪಕ್ಷದಲ್ಲಿ ಈ ಪುಡಿಯು ಧೀರ್ ಸಂಸ್ಥಾನಾಧಿಪನ ಕರುಳುಗಳನ್ನು ಕೊಯ್ದು ಆತನಿಗೆ ಬಹು ಸಂಕಟಕರವಾದ ಮರಣವನ್ನುಂಟುಮಾಡುತ್ತಿದ್ದಿತು.

ಈಗ ವೃದ್ಧರಾಜನು ತನಗುಂಟಾಗುತ್ತಿದ್ದ ವಿಪತ್ತನ್ನು ನೆನೆದು ವಿವರ್ಣನಾದನು. ಅವನಿಗೆ ಆ ಸುಂದರಸ್ತ್ರೀಯಲ್ಲಿದ್ದ ಪ್ರೀತಿಯೆಲ್ಲವೂ ಒಂದು ಕ್ಷಣಮಾತ್ರದಲ್ಲಿಯೇ ಜುಗುಪ್ಸೆಯಾಗಿಪರಿಣಮಿಸಿಹೋಯಿತು. ಅನಂತರ ಆತನು ತಾನು ಹಿಂದೆ ಅನ್ಯಾಯವಾಗಿ ದೇಶಾಂತರಕ್ಕೆ ಅಟ್ಟಿದ್ದ ತನ್ನ ಜ್ಯೇಷ್ಠಪುತ್ರನ ನಿಷ್ಕಳಂಕವಾದ ರಾಜಭಕ್ತಿಯನ್ನು ಅರಿತವನಾಗಿ ತಿರುಗಿ ಆತನಲ್ಲಿ ಎಂದಿನಂತೆ ಪ್ರೇಮವುಳ್ಳವನಾದನು ಬಪ್ಪಲಾಲನೂ ಸೂಜಾಬಾಯಿಯೂ ಮಾಡಿದ ರಾಜದ್ರೋಹಕ್ಕೆ ತಕ್ಕಹಾಗೆ ಅವರನ್ನು ಶಿಕ್ಷಿಸುವುದಕ್ಕಾಗಿ ಅವರನ್ನು ಕಟ್ಟುನಿಟ್ಟಾದ ಸೆರೆಯಲ್ಲಿಡಿಸಿದನು.

ಹಿಂದೆ ರಾಜನು ಹಿಮ್ಮತ್‌ಸಿಂಗನಿಗೆ ಸರ್ವಜನ ಸಮಕ್ಷಮವಾಗಿ ದೇಶತ್ಯಾಗವನ್ನು ವಿಧಿಸಿದ್ದನಾದಕಾರಣ ಈಗ ತಾನು ಆ ಅನ್ಯಾಯಕ್ಕೆ ತಕ್ಕಹಾಗೆ ಪ್ರತ್ಯಾಮ್ನಾಯ ಮಾಡಬೇಕೆಂದೆಣಿಸಿ ಮರುದಿನ ಬೆಳಗ್ಗೆ ಸರ್ವಜನ ಸಮಕ್ಷವಾಗಿ ತಾನು ಸಪರಿವಾರನಾದ ತನ್ನ ಜ್ಯೇಷ್ಠಪುತ್ರನೊಡನೆ ರಾಜಧಾನಿಯನ್ನು ಪ್ರವೇಶಮಾಡುವುದಾಗಿ ನಿಶ್ಚಯಮಾಡಿದನು. ಅದೇ ಮೇರೆ ಮರುದಿನ ದಿವ್ಯವಾದ ಅಶ್ವಗಳನ್ನೇರಿ ಎಲ್ಲರೂ ನಗರಾಭಿಮುಖವಾಗಿ ಹೊರಟರು. ಆ ಕಾಲದಲ್ಲಿ ಹಿಮ್ಮತ್ ಸಿಂಗನ ಪರಿವಾರದವರು ಎಂಟನೆ ಮೂರುತಿಂಗಳ ಕೆಳಗೆ ದೇಶಭ್ರಷ್ಟರಾಗಿ ಹೋಗುವ ಕಾಲದಲ್ಲಿ ಎಷ್ಟು ಶೋಕದಿಂದ ಕಾಂತಿಗುಂದಿದ್ದರೋ ಈಗ ಅವರು ಅಷ್ಟೂ ಅಷ್ಟು ಸಂತೋಷದಿಂದ ಕಳೆಯೇರಿ ಕಂಗೊಳಿಸುತ್ತಿದ್ದರು. ಹಿಮ್ಮತ್‌ಸಿಂಗನು ದಿವ್ಯವಾದ ಉಡುಪುಗಳನ್ನುಟ್ಟು ಅನರ್ಘ್ಯವಾದ ರತ್ನಾಭರಣಗಳಿಂದ ಅಲಂಕೃತನಾಗಿ ಮಹಾರಾಜನ ದಕ್ಷಿಣ ಪಾರ್ಶ್ವದಲ್ಲಿ ಹೋಗುತ್ತಿದ್ದನು. ಸ್ವದೇಶವನ್ನು ಮತ್ತೆ ನೋಡುವ ಆಶೆಯನ್ನೇ ತೊರೆದ ಒಬ್ಬ ದೇಶಾಭಿಮಾನಿಗೆ ಸ್ವದೇಶಾಗಮನದ ಸೌಭಾಗ್ಯವು ಲಭಿಸಿದರೆ ಎಷ್ಟೊಂದು ಸಂತೋಷಾತಿಶಯವುಂಟಾಗುವುದೋ ಅಷ್ಟೊಂದು ಸಂತೋಷ ಸಂಪತ್ತೂ ಈಗ ಹಿಮ್ಮತ್‌ಸಿಂಗನ ಮುಖರಂಗದಲ್ಲಿ ತಾಂಡವಾಡುತ್ತಿದ್ದಿತು. ದೇಶಭ್ರಷ್ಟನಾಗಿದ್ದ ಕಾಲದಲ್ಲಿ ಶತ್ರುಗಳಾದ ಮೊಗಲರೊಡನೆ ಯುದ್ಧಮಾಡಿ ದಿಗಂತ ವಿಖ್ಯಾತವಾದ ಯಶಸ್ಸನ್ನು ಪಡೆದು ಬಳಿಕ ತನಗೆ ದೇಶತ್ಯಾಗಶಿಕ್ಷೆಯನ್ನುವಿಧಿಸಿದ ತಂದೆಯ ಪ್ರಾಣವನ್ನುಳಿಸಿ ಪುಣ್ಯೈಕ ಭಾಜನನಾಗಿ ಈಗ ನಿಜನಗರಕ್ಕೆ ಬರುತ್ತಿದ್ದ ಹಿಮ್ಮತ್‌ಸಿಂಗನನ್ನು ಸಂತೋಷದಿಂದ ಎದುರುಗೊಳ್ಳುವುದಕ್ಕಾಗಿ ಕೋಟೆಯ ಬಾಗಿಲಿಂದ ತಂಡತಂಡವಾಗಿ ಬರುತ್ತಿದ್ದ ಸೈನಿಕರ

ಮುಖದಲ್ಲಿಯೂ ನಾಗರಿಕರ ಮುಖದಲ್ಲಿಯೂ ಕೂಡ ಒಂದೇರೀತಿಯಾದ ಆನಂದ ರಸವು ತುಂಬಿ ತುಳುಕಾಡುತ್ತಿತ್ತು. ಅಂದಿನ ರಾತ್ರಿ ನಗರವೆಲ್ಲಾ ದೀಪೋತ್ಸವ ದಿಂದ ಬೆಳಗಿತ್ತು; ಎಲ್ಲರ ಹೃದಯವೂ ಪರಮಾನಂದಭರಿತವಾಯಿತು, ಅದರ ಲ್ಲಿಯೂ ಪತಿಸಮಾಗಮ ಸೌಭಾಗ್ಯದಿಂದ ಹಿಮ್ಮತ್‌ಸಿಂಗನ ಧರ್ಮಪತ್ನಿಯ ಹೃದ ಯದಲ್ಲಿ ಆವಿರ್ಭವಿಸಿದ ಸಂತೋಷ ಪರಂಪರೆಗೆ ಪಾರವೇ ಇರಲಿಲ್ಲ.

---

## ಸೈನಿಕನ ಸೌಭಾಗ್ಯ.

ಬೊಂಬಾಯಿ ಮತ್ತು ಮದ್ರಾಸ್ ಆಧಿಪತ್ಯಗಳ ಎಲ್ಲೆಗೆ ದಕ್ಷಿಣೋತ್ತರ ಭಾಗಗಳಲ್ಲಿ ಸುಮಾರು ನೂರು ಮೈಲಿಯೊಳಗಾಗಿ ಹಾಳು ಬಿದ್ದ ಎರಡು ಪಟ್ಟಣಗ ಳಿವೆ. ಒಂದಾನೊಂದು ಕಾಲದಲ್ಲಿ ಆ ಎರಡು ನಗರಗಳೂ ಬಹು ಸಂಪದ್ಯುಕ್ತವಾ ಗಿಯೂ, ಜನಭರಿತವಾಗಿಯೂ ಬಹು ಪ್ರಬಲವಾಗಿಯೂ ಇದ್ದುವು. ಅವುಗಳಲ್ಲಿ ಒಂದಕ್ಕೆ ವಿಜಯನಗರವೆಂದೂ ಮತ್ತೊಂದಕ್ಕೆ ಬಿಜಾಪುರವೆಂದೂ ಹೆಸರು. ಈ ಎರಡು ಹೆಸರುಗಳೂ ಜಯದ ಪಟ್ಟಣವೆಂಬ ಒಂದೇ ಅರ್ಥವನ್ನು ಕೊಡುತ್ತವೆ. ಆ ನಗರಗಳಲ್ಲಿ ಬಿಜಾಪುರವು ಮಹಮ್ಮದೀಯರಿಗೂ ವಿಜಯನಗರವು ಹಿಂದುಗಳಿಗೂ ರಾಜಧಾನಿಯಾಗಿದ್ದುವು. ಈಗ ಪಾಳುಬಿದ್ದಿರುವ ಆ ಎರಡೂರುಗಳಲ್ಲಿಯೂ, ಆಯಾ ಜನಗಳ ಬೇರೆ ಬೇರೆ ಮತಗಳಿಗೂ ನಾಗರಿಕತೆಗೂ ಸೂಚಕವಾಗಿ ಹಲವು ಚಿಹ್ನಗಳು ಈಗಲೂ ದೊರಕುತ್ತವೆ. ಬಿಜಾಪುರದ ಮಸೀದಿಗಳು ಈಗ ಮಹಮ್ಮ ದೀಯ ಭಕ್ತರ ದೇವತಾಪ್ರಾರ್ಥನೆಯ ಸ್ಥಳಗಳಲ್ಲದಿದ್ದಾಗ್ಯೂ, ಮಹಮ್ಮದೀಯ ಶಿಲ್ಪಿಗಳ ವಿದ್ಯಾಕೌಶಲಕ್ಕೆ ಸರ್ವೋತ್ತಮವಾದ ನಿದರ್ಶನಗಳಾಗಿವೆ. ಮನುಷ್ಯ ರಂತೆಯೂ ಮೃಗಗಳಂತೆಯೂ ಗೊಂಬೆಗಳನ್ನು ಮಾಡಿ ಶೃಂಗರಿಸುವುದು ಮಹಮ್ಮ ದೀಯ ಮತಾಚಾರಕ್ಕೆ ವಿರುದ್ಧವಾದಕಾರಣ ಮಹಮ್ಮದೀಯ ಶಿಲ್ಪಿಗಳು ತಮ್ಮ ಬುದ್ಧಿಕೌಶಲವನ್ನೆಲ್ಲಾ ಕಟ್ಟಡದ ಒಟ್ಟಂದವನ್ನು ಹೆಚ್ಚಿಸುವುದರಲ್ಲಿಯೂ, ಚಮತ್ಕಾ ರವಾದ ರೇಖಾವಿನ್ಯಾಸಗಳಿಂದ ನಿರ್ದುಷ್ಟವಾದ ಸೌಂದರ್ಯಾತಿಶಯಗಳನ್ನು ಕಲ್ಪಿಸುವುದರಲ್ಲಿಯೂ ವಿನಿಯೋಗಿಸಬೇಕಾಗಿದೆ ಹೀಗಾಗಿ ಮಹಮ್ಮದೀಯ ಶಿಲ್ಪ ಕಲೆಗಳು ಗ್ರೀಕ್ ಜನರ ಶಿಲ್ಪವನ್ನು ಹೋಲುತ್ತದೆ. ಆ ಶಿಲ್ಪಸೂತ್ರಕ್ಕೆ ಅನುಸಾರ ವಾಗಿ ಮಿತವಾದ ಶೃಂಗಾರಗಳಿಂದ ಅಲಂಕರಿಸಲ್ಪಟ್ಟಿರುವ ಈ ಮಶೀತಿಗಳು. ಇಸ್ಲಾಮರು ಭಕ್ತಿಯಿಂದ ತಲೆಬಾಗಿ ತಮ್ಮ ಒಬ್ಬನೇ ದೇವರನ್ನು ಪ್ರಾರ್ಥಿಸುವು ದಕ್ಕೆ ತಕ್ಕ ಸ್ಥಳಗಳಾಗಿದ್ದುವು. ವಿದ್ಯಾನಗರದಲ್ಲಿ ಶಿವ, ಕೃಷ್ಣ, ರಾಮ ಮೊದ ಲಾದ ಹಿಂದೂ ದೇವರುಗಳ ವಿಸ್ತಾರವಾದ ದೇವಾಲಯಗಳು ಅತ್ಯುನ್ನತವಾಗಿ ಕಂಗೊಳಿಸುತ್ತ, ವಿಕಟಪ್ರಾಯವಾದ ವೈಭವ ವಿಶೇಷದಿಂದ ಅದ್ಭುತವಾಗಿದ್ದುವು, ಪ್ರಕೃತಕಾಲದಲ್ಲಿ ಪಾಳುಬಿದ್ದಿರುವ ದೇವಾಲಯಗಳಲ್ಲಿ ಮಧ್ಯೆ ಮಧ್ಯೆ ರೈತರು

ಹೊಲಗದ್ದೆಗಳನ್ನು ಮಾಡಿಕೊಂಡು, ಹಸಿದು ಬಂದೆರಗುವ ಕಾಗೆಗಳನ್ನು ಕರ್ಣ ಕಠೋರವಾದ ತಮ್ಮ ಕೂಗಿನಿಂದ ಎಬ್ಬಿಸಿ ಅಟ್ಟುತ್ತಾ ಇದ್ದರು.

ಈಗ ದಕ್ಷಿಣ ಮಹಾರಾಷ್ಟ್ರ ರೈಲುಮಾರ್ಗವಾಗಿ ಬಿಜಾಪುರಕ್ಕೆ ಹೋಗುವ ಒಬ್ಬ ಪ್ರಯಾಣಿಕನಿಗೆ ಆ ನಗರವು ಹೇಗೆ ಕಾಣಬರುತ್ತದೆಯೋ, ಈಗ್ಗೆ ಮುನ್ನೂರು ವರ್ಷಗಳ ಹಿಂದೆಯೂ ಅದೇ ರೀತಿಯಲ್ಲಿಯೇ ಕಾಣಬರುತ್ತಿತ್ತು. 1564ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಆಯುಧಸಮೇತನಾಗಿದ್ದ ಒಬ್ಬ ಸವಾರನು ಆ ಪಟ್ಟಣದ ನೈಋತ್ಯಭಾಗದ ಗುಡ್ಡಗಳ ಮಾರ್ಗವಾಗಿ ಸವಾರಿ ಬರುತ್ತಿದ್ದನು. ಈಗ ನಮಗೆ ಕಾಣಬರುವಂತೆಯೇ ಆಗ ಅವನಿಗೂ ಆ ಪಟ್ಟಣದ ಗೋರಿಗಳೂ ಮಸೀತಿಗಳೂ ಅರಮನೆಗಳೂ ಕಾಣಬಂದುವು. ಆದರೆ ಆ ಕಾಲದಲ್ಲಿ ಈಗ ಎಲ್ಲಕ್ಕೂ ಮೇಲಾಗಿ ಕಾಣಿಸುತ್ತಿರುವ ಗೋಲ್‌ಗುಮ್ಮಜಿನ ಭುವನೇಶ್ವರಿ ಮಾತ್ರ ಕಾಣುತ್ತಿರಲಿಲ್ಲ. ಇದನ್ನು ಆಗ್ಗೆ ಕಟ್ಟಿರಲಿಲ್ಲ. ಪ್ರಪಂಚದ ಆಶ್ಚರ್ಯಗಳಲ್ಲೊಂದಾದ ಈ ಮಶೀತಿಯನ್ನು ನೂರು ವರ್ಷಗಳಿಗೀಚೆ ಸುಲ್ತಾನ್ ಮಹಮ್ಮದನು ತನ್ನ ಮನೆತನದವರಿಗಾಗಿ ಕಟ್ಟಿಸಿದನು. ಈಗ ಬಿಜಾಪುರದ ಕಡೆ ಬರುತ್ತಿದ್ದ ಸವಾರನು ಕಾನ್‌ಸ್ಟಾಂಟಿನೋಪಲಿನಲ್ಲಿರುವ ಅಗಾಧವಾದ ಮಶೀದಿಗಳಲ್ಲಿ ದೇವತಾಪೂಜೆಯನ್ನು ಮಾಡಿದ್ದನು; ಅಲ್ಲದೆ ವೆನಿಸ್ಸಿನಲ್ಲಿರುವ ಸೆಯಿಂಟ್‌ಮಾರ್ಕ್ ದೇವಾಲಯವನ್ನೂ ರೋಮಿನಲ್ಲಿರುವ ಸೆಯಿಂಟ್‌ಪೀಟರ್ ಮತ್ತು ಪಾರ್ಥಿಯನ್ ದೇವಸ್ಥಾನಗಳನ್ನೂ ನೋಡಿದ್ದನು. ಆದರೂ ಅವನು ಕೋಟೆಯನ್ನು ಪ್ರವೇಶಿಸಿದಾಗ ಅವನ ಎದುರಿಗೆ ಕಂಗೊಳಿಸುತ್ತಿದ್ದ ಮನೋಹರವಾದ ಕಟ್ಟಡಗಳು, ಯೂರೋಪಿನಲ್ಲಿ ಶ್ಲಾಘ್ಯವಾದ ದೇವಾಲಯಗಳನ್ನು ನೋಡಿದ್ದರೂ ಕೂಡ, ಅವನಿಗೆ ಆಶ್ಚರ್ಯವನ್ನುಂಟುಮಾಡತಕ್ಕವಾಗಿದ್ದುವು. ಅಷ್ಟೇ ಅಲ್ಲ. ಆಗ ಉತ್ಸವಾಲೋಕನಕ್ಕಾಗಿಯೋ ಎಂಬಂತೆ ದಿವ್ಯವಸ್ತ್ರಾಭರಣ ಭೂಷಿತರಾಗಿ ಕಾಲ್ನಡೆಯಿಂದಲೂ ವಾಹನಾರೋಹಣ ಮಾಡಿಯೂ ಅಶ್ವಾರೂಢರಾಗಿಯೂ ನಗರಮಧ್ಯಕ್ಕೆ ಹೋಗುತ್ತಿದ್ದ ಜನಸಮುದಾಯವೂ ಕೂಡ ಆಶ್ಚರ್ಯಕರವಾಗಿತ್ತು. ಆತನು ಅಲ್ಲಿ ಹೋಗುತ್ತಿದ್ದವರಲ್ಲಿ ಒಬ್ಬನನ್ನು ಕುರಿತು—ಈ ಊರಲ್ಲಿ ಏನು ವಿಶೇಷ? ಎಂಬದಾಗಿ ಕೇಳಿದನು. ಆ ಮಾತನ್ನು ಕೇಳಿ ಅವನು ವಿಸ್ಮಯಪಟ್ಟು,—ಅಯ್ಯಾ ನೀನು ಈ ಊರಿಗೆ ಹೊಸಬನಾಗಿರಬೇಕೆಂದು ತೋರುತ್ತದೆ. ಇಲ್ಲದಿದ್ದಲ್ಲಿ ನಮ್ಮ ಸುಲ್ತಾನನಿಗೂ ಅಹಮ್ಮದ್‌ನಗರದ ಹುಸೇನ್ ನೈಜಾಮ್ ಷಾಹನ ಮಗಳು ಚಾಂದ್‌ಬೀಬಿಗೂ ನಡೆಯುವ ವಿವಾಹಮಹೋತ್ಸವವನ್ನು ನೀನು ಕೇಳದಿರುತ್ತಿರಲಿಲ್ಲ. ಈ ದಿವಸ ನಮ್ಮ ದೊಡ್ಡ ಅಖಾಡದಲ್ಲಿ ತಗರುಕಾಳಗಗಳೂ ಗೂಳಿಕಾಳಗವೂ ನಡೆಯುತ್ತವೆ. ಬಳಿಕ ನಿನ್ನಂಥವೀರರಾದ ಸವಾರರ ಭಾರಿಕಾಳಗವೊಂದು ನಡೆಯುತ್ತದೆ ಅದರಲ್ಲಿ ಗೆದ್ದವನಿಗೆ ಸುಲ್ತಾನನು ತನ್ನ ಮೈಗಾವಲರ ಮೇಲ್ವಿಚಾರಣೆಯ ಅಧಿಕಾರವನ್ನು ಕೊಡುವನು—ಎಂದು ಹೇಳಿದನು.

ಅದನ್ನು ಕೇಳಿ ಸವಾರನು ಆತನನ್ನು ವಂದಿಸಿ ಮುಂದೆ, ಹೊರಟು, ತಾನು ಆ ದಿವಸ ಸವಾರರ ಕಾಳಗದಲ್ಲಿ ಸೇರಿದರೆ ಬಿಜಾಪುರದ ರಾಜಕುಮಾರನ ಪರಿಚಯಕ್ಕೆ ಅನುಕೂಲವಾಗುವುದೆಂದು ಯೋಚಿಸಿ, ಅವರೊಡನೆ ಸೇರುವುದಾಗಿ ನಿಶ್ಚಯಿಸಿಕೊಂಡನು. ಅಂದಿನ ಕಾಳಗದಲ್ಲಿ ಅವನು ಗೆದ್ದರೆ ಅವನಿಗೆ ಸುಲ್ತಾನನ ಮೈಗಾವಲವರ ಮೇಲ್ವಿಚಾರಣೆಯ ಕೆಲಸವು ದೊರಕುವುದು. ಇದು ಸಾಮಾನ್ಯವಾದ ಪದವಿಯಲ್ಲ. ಇದರ ಮೇಲೆ ಈ ಆಸರೆಯಿಂದ ಅವನು ಇನ್ನೂ ಉತ್ತಮ ಪದವಿಗೂ ಗೌರವಕ್ಕೂ ಪಾತ್ರನಾಗಬಹುದು.

ಈ ಸವಾರನು ತುರುಕರವನು; ಕಾನ್ಸ್ಟೆಂಟಿನೋಪಲೀನಲ್ಲಿ ಹುಟ್ಟಿದವನು. ಇವನಿಗೆ ಯೂಸೂಫ್‌ಖಾನನೆಂದು ಹೆಸರು. ಇವನು ಸ್ವದೇಶದಲ್ಲಿ ಅನೇಕ ಸಾಹಸಗಳನ್ನು ಮಾಡಿ ಇಂಡಿಯ ದೇಶಕ್ಕೆ ಬಂದನು. ಇಲ್ಲಿ ಬಿಜಾಪುರ ಸಂಸ್ಥಾನವು ಸರ್ವದಾ ಯುದ್ಧಕಾರ್ಯದಲ್ಲಿ ನಿರುತವಾಗಿದ್ದುದರಿಂದ ತನ್ನಂತೆ ಮಹಾಶೂರನಿಗೆ ಕೆಲಸ ದೊರೆಯಬಹುದೆಂದು ಇಲ್ಲಿಗೆ ಬಂದನು. ಈತನು ಇನ್ನೂ ಪೂರ್ವವಯಸ್ಸಿನವನು; ತನ್ನ ಪರಾಕ್ರಮದಿಂದ ತುರ್ಕಿ ಸೈನಿಕರೆಲ್ಲರೊಳ್ಲಾ ಮಹಾಧೀರನೆಂದು ಹೆಸರುಗೊಂಡಿದ್ದನು. ಇವನು ಒಂದು ಕಾಲದಲ್ಲಿ ಉದಾರನಾದ ಸುಲೆಮಾನನು ಮತರಕ್ಷಕರಿಗೂ ದೇಶರಕ್ಷಕರಿಗೂ ಸಮೃದ್ಧಿಯಾಗಿ ಕೊಡುತ್ತಿದ್ದ ಸರ್ವೋತ್ತಮವಾದ ಗೌರವಗಳಿಗೆ ಪಾತ್ರನಾಗುತ್ತಿದ್ದನು. ಆದರೆ ಇವನಿಗೆ ಒಂದು ತುರ್ಕೀ ಸೈನಾಧಿಪತ್ಯವು ದೊರಕುವ ಸಂದರ್ಭ ಒದಗಿದಾಗ ಇವನು ದುರದೃಷ್ಟವಶದಿಂದ ಯುದ್ಧದಲ್ಲಿ ಗಾಯಪಟ್ಟು ಸಮುದ್ರದಲ್ಲಿ ನೈಟ್ಸ್ ಆಫ್ ಸೆಯಿಂಟ್ ಜಾನರವರಿಗೆ ಸೇರಿದ ಒಂದು ಹಡಗಿನವರಿಗೆ ಸೆರೆಸಿಕ್ಕಿ ಹೋದನು. ಅವರು ಇವನನ್ನು ತತ್ಕಾಲದಲ್ಲಿ ಪೋರ್ತುಗೀಸರ ಇಂಡಿಯ ದೇಶದ ರಾಜಧಾನಿಯಾದ ಗೋವೆಗ ಸಾಮಾನು ಸಾಗಿಸಿಕೊಂಡು ಹೋಗುತ್ತಿದ್ದ ಒಬ್ಬ ಪೋರ್ತುಗೀಸ್ ವರ್ತಕನಿಗೆ ಮಾರಿಬಿಟ್ಟರು. ಆ ಹಡಗಿನಲ್ಲಿ ಬರುವಾಗ ಯೂಸೂಫ್‌ಖಾನನು ತನ್ನನ್ನು ಹಡಗಿನ ಸೈನಿಕರೊಡನೆ ಸೈನಿಕ ಕಾರ್ಯದಲ್ಲಿ ನಿಲ್ಲಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡನು. ವರ್ತಕನು ಹಾಗೆಯೇ ನಡಿಸಿಕೊಟ್ಟನು. ಅವರು ಹಿಂದೂ ದೇಶದ ಸಮೀಪಕ್ಕೆ ಬರುವ ವರೆಗೂ ಪ್ರಯಾಣವು ದಿನದಿನವೂ ಒಂದೇ ರೀತಿಯಾಗಿದ್ದು ಬೇಸರಿಕೆಯನ್ನುಂಟು ಮಾಡುತ್ತಿತ್ತು. ಆದರೆ ಅವರು ಮಲೆಬಾರ್ ತೀರಕ್ಕೆ ಬಂದು ಸೇರಿ ಬೀಳುಗುಂಡನ್ನು ಇಳಿಸಿ ತಂಗಿದ ರಾತ್ರಿಯೇ ಕಡಲ್ಗಳ್ಳರು ಬಂದು ಮೇಲೆ ಬಿದ್ದರು. ಅವರು ರಾತ್ರಿಯ ಕತ್ತಲಲ್ಲಿ ತಮ್ಮ ಗವಿಗಳಿಂದ ಹೊರಟು ಒಂದು ಹಡಗಿನ ಮೇಲೆ ಹತ್ತಿ ಮೇಲಣ ಭಾಗವನ್ನು ಸ್ವಾಧೀನ ಮಾಡಿಕೊಂಡುಬಿಟ್ಟರು. ಯೂಸೂಫ್‌ಖಾನನು ಮಾತ್ರ ತಟ್ಟನೆ ಒಂದು ಉಪಾಯ ಮಾಡದಿದ್ದರೆ ಅವರು ಹಡಗನ್ನೇ ಹಿಡಿದುಬಿಡುತ್ತಿದ್ದರು. ಆದರೆ ಖಾನನು ಅಷ್ಟರೊಳಗಾಗಿ ಹಡಗಿನ ಫಿರಂಗಿಗಳಲ್ಲಿ ಒಂದನ್ನು ತಟ್ಟನೆ ತಿರುಗಿಸಿ ಕಡಲ್ಗಳ್ಳರು ಗುಂಪಾಗಿ ನಿಂತಿದ್ದ ಕಡೆಗೆ

ಗುರಿಕಟ್ಟಿ ಹೊಡೆಯಲಾರಂಭಿಸಿದನು. ಆ ಹೊಡೆತದಿಂದ ಅವರು ಸುದಾರಿಸಿಕೊಳ್ಳುವುದಕ್ಕೆ ಮುಂಚೆಯೇ ಯೂಸೂಫ್‌ಖಾನನು ಖಡ್ಗಪಾಣಿಯಾಗಿ ಅವರ ನಡುವೆ ನುಗ್ಗಿ ಉಭಯಪಾರ್ಶ್ವದಲ್ಲಿಯೂ ಕೊಚ್ಚಿ ಕೆಡಹ ತೊಡಗಿದನು ಈ ವೇಳೆಗೆ ಕೆಲವರು ಧೀರರಾದ ಪೋರ್ತುಗೀಸರು ಇವನಿಗೆ ಸಹಾಯವಾಗಿ ಬಂದು ಸೇರಿದರು. ಹೀಗಾಗಿ ಕಡಲ್ಗಳ್ಳರೆಲ್ಲರೂ ಕ್ಷಣಮಾತ್ರದಲ್ಲಿ ಸತ್ತೋ ಕೆಟ್ಟೋ ದಿಕ್ಕಾಪಾಲಾಗಿ ನೀರಿನಲ್ಲಿ ಬಿದ್ದು ಓಡಿಹೋದರು ಬಳಿಕ ಹಡಗು ಸುರಕ್ಷಿತವಾಗಿ ಉಳಿಯಿತು.

ಆ ಪೋರ್ತುಗೀಸ್ ವರ್ತಕನು ತನ್ನ ಆಪತ್ಕಾಲದಲ್ಲಿ ಯೂಸೂಫ್‌ಖಾನನು ಮಾಡಿದ ಈ ಉಪಕಾರವನ್ನು ನೆನಪಿನಲ್ಲಿಟ್ಟಿದ್ದು, ಹಡಗು ಗೋವೆಗೆ ಸೇರಿದ ಕೂಡಲೆ ಅವನನ್ನು ಬಿಡುಗಡೆ ಮಾಡಿ ಅವನಿಗೆ ಬೇಕಾದಹಾಗೆ ಹಣ ಕೊಟ್ಟುದಲ್ಲದೆ, ಅವನ್ನು ಕ್ರಿಸ್ತನಾಗಿ ಪೊರ್ತುಗೀಸರಲ್ಲಿ ಕೆಲಸಕ್ಕೆ ನಿಲ್ಲುವುದಾದರೆ ಅಲ್ಲಿಯ ವೈಸರಾಯಿಗೆ ಹೇಳಿ ಭಾರಿ ಕೆಲಸ ಮಾಡಿಸಿ ಕೊಡುವುದಾಗಿ ಸಹ ಹೇಳಿದನು. ಆದರೆ ಯೂಸೂಫ್‌ಖಾನನು ಒಳ್ಳೇ ಮಹಮ್ಮದೀಯನಾಗಿದ್ದುದರಿಂದ ದುಡ್ಡಿನಾಸೆಗಾಗಿ ಅನ್ಯಮತಕ್ಕೆ ಸೇರಿಕೊಳ್ಳಲೊಪ್ಪಲಿಲ್ಲ. ಆದಕಾರಣ ಅವನು ವರ್ತಕನನ್ನು ವಂದಿಸಿ ತಾನು ದಕ್ಷಿಣದಲ್ಲಿ ಯಾರಾದರೂ ಒಬ್ಬ ಮಹಮ್ಮದೀಯ ರಾಜನ ಸಂಸ್ಥಾನದಲ್ಲಿ ಕೆಲಸಕ್ಕೆ ಸೇರಿಕೊಳ್ಳುವುದಾಗಿ ಹೇಳಿ ಹೊರಟು ಬಂದನು. ಬಳಿಕ ತನಗೆ ವರ್ತಕನು ಕೊಟ್ಟ ಹಣಕ್ಕೆ, ಗೋವೆಯಲ್ಲಿ ದೊರಕುವ ವಸ್ತುಗಳಲ್ಲೆಲ್ಲಾ ಶ್ರೇಷ್ಠವಾದ ಒಂದು ಲೋಹಕವಚ, ಒಂದು ಕೈ ತುಪಾಕಿ, ಒಂದು ಕತ್ತಿ, ಒಂದು ಗುರಾಣ್, ಒಂದು ಸೊಗಸಾದ ಅರಬ್ಬಿಯತಾಕಣ ಇವುಗಳನ್ನು ಕೊಂಡುಕೊಂಡನು ಇವನ್ನೆಲ್ಲಾ ಕೊಂಡುಕೊಳ್ಳುವಾಗ ಬಿಜಾಪುರಕ್ಕೂ ವಿಜಯನಗರಕ್ಕೂ ಯುದ್ಧವಾಗುವುದಾಗಿ ಅವನಿಗೆ ತಿಳಿಯಬಂದಿತು. ಒಡನೆ ಅವನು ಬಿಜಾಪುರಕ್ಕೆ ಹೋಗಿ ಸೇರಿ ತನ್ನ ಮತಕ್ಕಾಗಿಯೂ ತನ್ನ ಅಭಿವೃದ್ಧಿಗಾಗಿಯೂ ಯುದ್ಧ ಮಾಡುವುದಾಗಿ ನಿಶ್ಚಯಿಸಿ ಗೋವೆಯಲ್ಲಿ ಹೊತ್ತುಕಳಿಯದೆ ಒಳನಾಡಿನ ಕಡೆಗೆಪಯಣಹೊರಟನು. ಈ ರೀತಿಯಾಗಿ ಯೂಸೂಫ್‌ಖಾನನು 1564ನೆಯ ಇಸವಿ ಡಿಸೆಂಬರ್ ತಿಂಗಳ ಕೊನೆಯಲ್ಲಿ ಬಿಜಾಪುರಕ್ಕೆ ಬಂದು, ಸುಲ್ತಾನ್ ಆಲಿ ಅದಿಲ್‌ಷಾಹ ಮತ್ತು ಅಹಮ್ಮದ್ ನಗರದ ಚಾಂದ್‌ಬೀಬಿ ಇವರ ಮದುವೆಯ ಮಹೋತ್ಸವದಲ್ಲಿ ನಡಿಸುತ್ತಿದ್ದ ಸವಾರರ ಕಾಳಗವನ್ನು ಸೇರಲು ಆ ನಗರದ ರಾಜಮಾರ್ಗದಲ್ಲಿ ಹೋಗುತ್ತಿದ್ದನು.

ಆತನು ರಂಗಭೂಮಿಯ ಸಮೀಪಕ್ಕೆ ಬಂದ ತರುವಾಯ ತಾನೂ ಸವಾರರ ಕಾಳಗದಲ್ಲಿ ಸೇರುವುದಾಗಿ ಅಲ್ಲಿಯ ಅಧಿಕಾರಿಗಳಿಗೆ ತಿಳಿಯಪಡಿಸಿದನು. ಕೂಡಲೆ ಅಧಿಕಾರಿಗಳು ಅನ್ಯದೇಶದ ವೀರರಿಗೆ ಮಾಡಬೇಕಾದ ಮಾನಮರ್ಯಾದೆಗಳನ್ನೆಲ್ಲಾ ಅವನಿಗೂ ಮಾಡಿ, ಸೈನಿಕರ ಕಾಳಗವು ಮಧ್ಯಾಹ್ನಾನಂತರದಲ್ಲಿ ನಡೆಯುವುದೆಂಬದಾಗಿ ತಿಳಿಸಿ, ಅದು ವರೆಗೆ ಅವನು ಎಲ್ಲವನ್ನೂ ನೋಡಲನುಕೂಲಿಸುವಂತೆ ಸುಲ್ತಾ

ನನೂ ದರ್ಬಾರಿನ ದೊಡ್ಡಮನುಷ್ಯರೂ ಕುಳಿತು ಕೊಳ್ಳುವ ಸ್ಥಳಕ್ಕೆ ಸಮೀಪವಾಗಿ ಒಂದು ಗೌರವವಾದ ಸ್ಥಳದಲ್ಲಿ ಅವನಿಗಾಗಿ ಒಂದು ಪೀಠವನ್ನು ಹಾಕಿಸಿಕೊಟ್ಟರು. ಹಾಗೆಯೇ ಅವನ ಕುದುರೆಗೆ ಬೇಕಾದ ಹಾಗೆ ತೀನಿ ಹಾಕಿ ಮೈತಿಕ್ಕುವುದ ಕ್ಕಾಗಿ ಅದನ್ನು ಸುಲ್ತಾನನ ಲಾಯಕ್ಕೆ ತೆಗೆಯಿಸಿಕೊಂಡು ಹೋದರು. ಯೂಸೂಫ್‌ಖಾನನ ಪುಣ್ಯಕ್ಕೆ ಸರಿಯಾಗಿ ಆದಿನ ಅವನ ಕುದುರೆಯು ವಿಶೇಷದೂರ ನಡೆದು ಬಳಲಿರಲಿಲ್ಲ; ಚುರುಕಾಗಿ ಚೆನ್ನಾಗಿತ್ತು. ಯೂಸೂಫ್‌ಖಾನನಿಗೂ ಕೂಡ ಗಗನ್‌ಮಹಲ್ ಎಂಬ ಹೊಸ ಅರಮನೆಯಲ್ಲಿ ಬೀಡಾರ ಮಾಡಿಕೊಟ್ಟರು. ಅಲ್ಲಿ ಅವನು ತನ್ನ ಲೋಹಕವಚಾದಿಗಳನ್ನು ಕಳೆದು ಸ್ವಲ್ಪ ಕಾಲ ಸೌಮ್ಯವೇಷವನ್ನು ತಾಳಿ ನೋಟಕನಾಗಿ ಬಂದು ರಂಗದ ಬಳಿ ತನಗೆ ನಿಯಮಿತವಾದ ಪೀಠದಲ್ಲಿ ಕುಳಿತುಕೊಂಡನು. ರಂಗದ ಸುತ್ತಲೂ ಕಲ್ಲುಗಳಿಂದ ಕಟ್ಟಿದ್ದ ಸೋಪಾನಗಳಲ್ಲಿ ಸಾವಿರಾರು ಮಂದಿ ನೋಟಕರು ಬಂದು ನೆರೆದಿದ್ದರು. ಅಲ್ಲಿ ಸ್ಥಳ ದೊರೆಯದೆ ಹಲವರು ನೆರೆಹೊರೆಯಲ್ಲಿದ್ದ ಎತ್ತರವಾದ ಮನೆಗಳ ಮಾಳಿಗೆಯಲ್ಲಿ ಸೇರಿದರು. ಬೇರೆ ಕೆಲವರು ರಂಗದ ಗೋಡೆಗಿಂತ ಎತ್ತರವಾಗಿ ಬೆಳೆದಿದ್ದ ಮರಗಳ ಮೇಲೆ ಹತ್ತಿ ಕೊಂಬೆಗಳಲ್ಲಿ ಕುಳಿತು ನೋಡುತ್ತಿದ್ದರು. ಸ್ವಲ್ಪಕಾಲಕ್ಕೆಲ್ಲಾ ಮೃಗಗಳ ಕಾಳಗಕ್ಕೆ ಆರಂಭವಾಯಿತು. ತಗರು ಕಾಳಗ ಮೊದಲ್ಗೊಂಡು ಆನೆಯ ಕಾಳಗದ ಪರ್ಯಂತವಾಗಿ ಎಲ್ಲಾ ವಿಧವಾದ ಕಾಳಗವೂ ನಡೆಯಿತು. ತಗರುಗಳು ಮಹಾರಭಸದಿಂದ ತಲೆ ತಲೆಗೆ ಡೀಕೊಟ್ಟು ಕಾದಿದುವು. ಅವುಗಳ ತಲೆ ತಾಗಿದ ಸದ್ದು ರಂಗದಲ್ಲೆಲ್ಲಾ ಕೇಳಿಸಿತು. ಅನಂತರ ಎರಡು ಕೋಣಗಳಿಗೆ ಕಾಳಗ ನಡೆಯಿತು. ಕೋಣಗಳು ವಿಕಾರವಾದ ಪ್ರಾಣಿಗಳು ; ಗಾತ್ರದಲ್ಲಿ ಎತ್ತಿಗಿಂತ ದೊಡ್ಡವಲ್ಲ. ಪಳಗಿದಾಗ ಬಹುಸಾಧುವಾಗಿ ಸಣ್ಣ ಮಕ್ಕಳು ಕೂಡ ಅಟ್ಟಿಕೊಂಡು ಹೋಗುವಂತಿರುತ್ತವೆ. ಆದರೂ ಕಾಡಿನಲ್ಲಿ ಮಂದೆಯಲ್ಲಿ ಗುಂಪುಗುಂಪಾಗಿರುವಾಗ ಅವು ಬಹು ಧೈರ್ಯವಾಗಿಯೂ ಬಲವಾಗಿಯೂ ಇರುತ್ತವೆ. ಆ ಕಾಲದಲ್ಲಿ ಹುಲಿ ಕೂಡ ಅವುಗಳ ಮೇಲೆ ಬೀಳಲು ಹೆದರುವುದು.. ಅವು ಮೇಲೆ ಬಿದ್ದ ಹುಲಿಯನ್ನು ಕೂಡ ಚೂರುಪಾರಾಗಿ ಸೀಳಿ ಸಿಗಿದುಹಾಕಿಬಿಡುತ್ತವೆ. ಇಲ್ಲಿ ಕಾಳಗ ಮಾಡುತ್ತಿದ್ದ ಕೋಣಗಳು ಒಂದರಮೇಲೊಂದು ಬಿದ್ದಾಗ ಒಂದು ಕೋಣವು ಪೆಟ್ಟಿನ ವೇಗವನ್ನು ತಾಳಲಾರದೆ ಹಿಂದಕ್ಕೆ ಕುಕ್ಕರಿಸಿ ಸತ್ತ ಹಾಗೆ ಬಿದ್ದುಬಿಟ್ಟಿತು. ಬಳಿಕ ಪಕ್ಕಲೆಗಳಲ್ಲಿ ನೀರನ್ನು ತಂದು ಅದರ ಮೇಲೆ ಸುರಿದು ಅದನ್ನು ಮೆಲ್ಲಗೆ ಎಬ್ಬಿಸಿ ಹೊರಕ್ಕೆ ಎಳೆದುಕೊಂಡು ಹೋದರು. ಇದಾದ ಬಳಿಕ ಗೂಳಿಗಳ ಕಾಳಗಕ್ಕೆ ಮೊದಲಾಯಿತು. ದಕ್ಷಿಣ ಹಿಂದೂ ದೇಶದಲ್ಲಿ ನಡೆಯುವ ಗೂಳಿಕಾಳಗವು ಸ್ಪೈಯಿನ್ ದೇಶದ ಗೂಳಿಕಾಳಗದಂತೆ ಕ್ರೂರವಾಗಿಯೂ ರಕ್ತಮಯವಾಗಿಯೂ ಇರದೆ ಸಾಮ್ಯವಾಗಿಯೂ ಪೌರುಷ ಪ್ರದರ್ಶಕವಾಗಿಯೂ ಇರುತ್ತದೆ. ಇಲ್ಲಿ ಒಳ್ಳೆ ಚುರುಕಾದ ಗೂಳಿಗಳ

ಕೊಂಬಿಗೆ ಹಣದ ಗಂಟನ್ನು ಕಟ್ಟಿ ಅಖಾಡಕ್ಕೆ ತರುತ್ತಾರೆ. ಈ ಗೂಳಿಗಳೊಡನೆ ಕಾಳಗವಾಡುವ ಶೂರರು ನೆಲದ ಮೇಲೆ ನಿಂತು ಕಾಳಗಮಾಡುತ್ತಾರೆ. ಅವರು ಗೂಳಿಗಳ ಕೊಂಬಿನಲ್ಲಿರುವ ಹಣದ ಗಂಟನ್ನು ತೆಗೆದು ಕೊಳ್ಳಬೇಕು. ಹಾಗೆ ತೆಗೆದುಕೊಂಡವರಿಗೆ ಅದರಲ್ಲಿ ಕಟ್ಟಿರು ವ ಹಣವನ್ನೇ ಬಹುಮಾನವಾಗಿ ಕೊಡುವರು. ಹೀಗಾಗಿ ಹಿಂದೂದೇಶದ ಗೂಳಿಕಾಳಗದಲ್ಲಿ, ಗೂಳಿಯ ತಿವಿತದಿಂದ ಸತ್ತ ಗೂಳಿಗಳೂ ಕುದುರೆಗಳೂ ಇಲ್ಲದೆ, ಕಾಳಗವು ಬಹಳ ಮಟ್ಟಿಗೆ ಸೌಮ್ಯವಾಗಿ ನೋಡಲರ್ಹವಾಗಿದೆ. ಇದರಲ್ಲೇನಾದರೂ ಅಪಾಯವಿದ್ದರೆ ಕಾಳಗಮಾಡುವವರಿಗೆ ಅಲ್ಪಸ್ವಲ್ಪ ಅಪಾಯವಿರಬಹುದು. ಹಣಕ್ಕೂ ಗೌರವಕ್ಕೂ ಆಸೆಪಡುವವರು ಆ ಅಪಾಯುವನ್ನು ತಿಳಿದೇ ಇದ್ದು ಅದಕ್ಕೆ ಹೆದರದೆ ಮುಂದವರಿಯುತ್ತಾರೆ. ಈ ಪ್ರಕಾರ ಗೂಳಿ ಕಾಳಗವಾದ ಬಳಿಕ ಎರಡಾನೆಯನ್ನು ತಂದು ಕಾಳಗಕ್ಕೆ ಬಿಟ್ಟರು, ಅವುಗಳಲ್ಲಿ ಒಂದು ಕಾದುವುದಕ್ಕೆ ಇಷ್ಟಪಡದೆ ಕಾಲಿಗೆ ಬುದ್ಧಿಹೇಳ ತೊಡಗಿತು. ಇದರಿಂದ ನೋಟಕರಿಗೆ ನಗುವೂ ಕೋಪವೂ ಉಂಟಾದವು. ಬಳಿಕ ಪಟಾಕಿ ಹಚ್ಚಿ ಆ ಅಂಜುಪುರಿಕಿಯಾದ ಆನೆಯನ್ನು ತಿರುಗಿ ರಂಗಕ್ಕೆ ತಂದು ನಿಲ್ಲಿಸಿದರು. ತರುವಾಯು ಅವೆರಡಕ್ಕೂ ಬಲವಾಗಿ ಕಾಳಗ ನಡೆಯಿತು. ಅವೆರಡೂ ತಮ್ಮ ದಂತಗಳನ್ನೂ ತಲೆಗಳನ್ನೂ ಒಂದಕೊಂದಕ್ಕೆ ಡೀ ಕೊಟ್ಟು ಕೊಟ್ಟು ಬಳಲಿ ಹೋದುವು. ಆ ತರುವಾಯ ಅವೆರಡನ್ನೂ ಲಾಯುಗಳಿಗೆ ತೆಗೆದುಕೊಂಡು ಹೋದರು. ಆನೆಗಳನ್ನು ತೆಗೆದುಕೊಂಡು ಹೋದ ಬಳಿಕ ಹಿಂದೂ ಜಟ್ಟಿಗಳೂ ಆಫ್ರಿಕಾದೇಶದ ಪೈಲವಾನರೂ ಮಟ್ಟಿಯಲ್ಲಿ ಕುಸ್ತಿಮಾಡುತ್ತ ಒಬ್ಬರನ್ನೊಬ್ಬರು ಎತ್ತಿ ಹಾಕಲು ಯತ್ನಿಸಿದರು. ಹಿಂದೂ ಕುಸ್ತಿಮುಗಿಯಬೇಕಾದರೆ ಬಲು ಹೊತ್ತು ಹಿಡಿದು ಬೇಸರವಾಗುತ್ತದೆ. ಇಬ್ಬರೇ ಒಬ್ಬನು ಬೆನ್ನಾದ ಹೊರತು ಕುಸ್ತಿ ಮುಗಿಯುವುದಿಲ್ಲ; ಅದುಕಾರಣ ಸ್ವಲ್ಪ ಬಲಗುಂದಿದವನು ನೆಲದ ಮೇಲೆ ಮೊಗವ ಡಿಯಾಗಿ ಬಿದ್ದು ಕೊಳ್ಳುತ್ತಾನೆ. ಅಂಥವನನ್ನು ಕದಲಿಸುವುದು ಅಸಾಧ್ಯವಾಗುತ್ತದೆ. ಹೀಗಾಗಿ ಆ ಕುಸ್ತಿಯ ಜೋಡಿಗಳೆಲ್ಲಾ ಮುಗಿಯುವ ಹೊತ್ತಿಗೆ ಯೂಸೂಫ್‌ಖಾನನಿಗೆ ಬರಿನೋಟವನ್ನು ನೋಡುತ್ತ ಕುಳಿತು ಕುಳಿತು ಬೇಸರಿಕೆಯುಂಟಾಯಿತು ; ಸ್ಪೈರಣೆಗೆ ಹೆಸರಾದ ಹಿಂದುಗಳು ಕೂಡ ಬೇಸತ್ತು ಹೋದರು.

ಇದಾದ ಬಳಿಕ ಅದ್ಭುತವಾದ ಮತ್ತೊಂದು ಸಾಹಸವು ನಡೆಯಿತು. ಅದೇನೆಂದರೆ —ಸಿಟ್ಟೆಬ್ಬಿಸಿದ್ದ ಒಂದಾನೆಯನ್ನು ರಂಗಕ್ಕೆ ತಂದರು ಆದರ ಸಂಗಡಲೇ ದಿವ್ಯವಾದ ತೇಜಿಯನ್ನೇರಿದ್ದ ಸುಲ್ತಾನನ ಮೈಗಾವಲ ಸವಾರನೊಬ್ಬನೂ ಬಂದನು. ಈ ಸವಾರನು ಆನೆಯ ಹತ್ತಿರಕ್ಕೆ ಸವಾರಿಮಾಡಿಕೊಂಡು ಹೋಗಿ ಅದರ ಮುಖಕ್ಕೆ ಸೋಕುವ ಹಾಗೆ ಬಂದು ಬಾವಟವನ್ನು ಅಲುಗಿಸಿ ಅದನ್ನು ರೇಗಿಸುವನು. ಅದು ಕೋಪದಿಂದ ಮೇಲೆ ಬೀಳುವುದಕ್ಕೆ ಬಂದು ತನ್ನ ಕೊಂಬನ್ನು ಕುದುರೆಯು ಬೆನ್ನಿಗೆ ಸೋಕಿಸುವ ಹೊತ್ತಿಗೆ ಸರಿಯಾಗಿ ಕುದುರೆಯನ್ನು ಚಿಮ್ಮಿಸಿ ಮುಂದಕ್ಕೆ ಹಾರಿ

ಹೊರಟುಹೋಗುವನು. ಹೀಗೆ ಅವನು ತಟ್ಟನೆ ಹೊರಟು ಹೋಗಲನುಕೂಲಿಸು ವಂತೆ ಆನೆಯು ಸಮೀಪದಲ್ಲಿರುವಾಗಲೆಲ್ಲಾ ತನ್ನ ಕುದುರೆಯನ್ನು ಹಿಂಗಾಲಿನ ಮೇಲೆ ಕುಣಿಸುತ್ತಿದ್ದನು. ಒಂದು ಬಾರಿ ಆನೆಯ ಕೊಂಬು ಕುದುರೆಯ ಪಕ್ಕಕ್ಕೆ ಸೋಕಿಯೂ ಸೋಕಿತು. ಅಂಥದರಲ್ಲಿಯೂ ಕೂಡ ಅವನು ತನ್ನ ಲಂಘನೆಯಿಂದ ಆ ಅಪಾಯವನ್ನು ತಪ್ಪಿಸಿಕೊಂಡನು. ಆ ಸೋಕಿನ ಪೆಟ್ಟಿಗೆ ಕುದುರೆಯು ನಡುಗಿ ಹೋಗಿ ಬಿದ್ದು ಬಿಡುವಹಾಗಾಡಿದರೂ ಕೂಡ, ಅವನು ಬಿಗಿಯಾಗಿ ಕುಳಿತಿದ್ದು ಆ ಆಪತ್ತಿನಲ್ಲಿಯೂ ಕೂಡ ಸುಖವಾಗಿ ಸವಾರಿಮಾಡಿಕೊಂಡು, ಬಂದುಬಿಟ್ಟನು. ತರುವಾಯ ಸುಲ್ತಾನನು ಆ ಸವಾರನನ್ನು ತನ್ನ ಸಿಂಹಾಸನದ ಬಳಿಗೆ ಬರಮಾಡಿ ಕೊಂಡು, ಅವನ ಕುದುರೆಯ ಬೆನ್ನಿನಲ್ಲಿ ಆನೆಯ ದಂತ ತಗುಲಿ ಕೆದರಿದ್ದ ಕೂದ ಲನ್ನು ನೋಡಿ ಅವನ ಸಾಮರ್ಥ್ಯಕ್ಕೆ ಮೆಚ್ಚಿ, ತನ್ನ ಕೊರಳಲ್ಲಿದ್ದ ಚಿನ್ನದ ಸರಪಣಿ ಯನ್ನು ತೆಗೆದು ಬಹುಮಾನವಾಗಿ ಕೊಟ್ಟನು. ಅದನ್ನು ಮರ್ಯಾದೆಯೊಡನೆ ತೆಗೆದು ಕೊಂಡ ಆ ಸವಾರನು ಜನದ ಕೋಲಾಹಲಧ್ವನಿಯೊಡನೆ ಹೊರಟುಹೋದನು,

ಈ ವೇಳೆಗೆ ಮಧ್ಯಾಹ್ನವಾಯಿತು. ಸೂರ್ಯನು ತಲೆ ಸಿಡಿದು ಹೋಗುವ ಹಾಗೆ ಉರಿಯುತೊಡಗಿದನು ಆದ ಪ್ರಯುಕ್ತ ಸುಲ್ತಾನನು ಫಲಾಹಾರಮಾಡಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಬಳಿಕ ಬಿಸಿಲು ತಂಪಿದ,ಕೂಡಲೆ ಮುಂದಿನ ವಿನೋದಗಳನ್ನು ನೋಡುವುದಾಗಿ ಹೇಳಿ ಹೊರಟುಹೋದನು ನೋಟಕರ ಲ್ಲಿಯೂ ಕೆಲವರು ಮನೆಗೆ ಹೋದರು. ಸ್ಥಳ ತಪ್ಪಿಹೋದೀತೆಂಬ ಭಯದಿಂದ ಅನೇಕರು ಅಲ್ಲಿಯೇ ಕುಳಿತಿದ್ದರು. ಯೂಸೂಫ್‌ಖಾನನೂ ಕೂಡ ತಾನು ಮುಂದೆ ಮಾಡಬೇಕಾದ ಸಾಹಸಕಾರ್ಯಗಳಿಗೆ ಸಿದ್ಧಪಡಿಸಿಕೊಳ್ಳುವುದಕ್ಕಾಗಿ ತನ್ನ ಬಿಡಾರಕ್ಕೆ ಹೋದನು ಅಲ್ಲಿ ಖಾನನು ತನ್ನ ಮಾಂಸಖಂಡಗಳಿಗೆಬಿಗಿ ಬರುವಂತೆ ಸ್ನಾನಮಾಡಿ, ಬಳಿಕ ಆಲಿ ಅದಿಲ್‌ಷಾಹನ ಅಪ್ಪಣೆಯು ಮೇರೆ ಪರ ಸ್ಥಳದವರಿಗಾಗಿ ಏರ್ಪಡಿಸಿದ್ದ ಭೋಜನಸ್ಥಳದಲ್ಲಿ ಲಘುವಾಗಿ ಫಲಾಹಾರ ಮಾಡಿ ತದನಂತರ ಸ್ವಲ್ಪ ವಿಶ್ರಮಿಸಿಕೊಂಡಿದ್ದು, ಬಳಿಕ ಎದ್ದು ತನ್ನ ಲೋಹ ಕವಚವನ್ನೂ ಕತ್ತಿ ಭಲ್ಲೆಯಗಳನ್ನೂ ಗುರಾಣಿಯನ್ನೂ ತಳೆದು, ಅಂದಿನ ಕಾಳಗದಲ್ಲಿ ತನಗೆ, ಜಯವಾಗುವುದೆಂದೂ ತನ್ನ ಭಾಗ್ಯ ಲಕ್ಷ್ಮಿಯೊಲಿದಲ್ಲಿ ತನಗೇ ಆ ಬಹುಮಾನವು ಲಭಿಸುವುದೆಂದೂ ಯೋಚನೆ ಮಾಡುತ್ತ ರಂಗಸ್ಥಳಕ್ಕೆ ಹೋದನು ಅಲ್ಲಿ ಹೋರಾಡು ವುದಕ್ಕಾಗಿ ಐವತ್ತು ಮಂದಿ ವೀರರು ಬಂದರು. ಅದುಕಾರಣ ಅವರೆಲ್ಲಾ ಮೊದಲು ನೆಲದಲ್ಲಿ ಹಾಕಿದ್ದ ಒಂದು ಉಂಗುರವನ್ನು ಎತ್ತಬೇಕೆಂದೂ, ಅದರಲ್ಲಿಗೆದ್ದವರು ಮಾತ್ರ ಮೇಲಿನ ಕಾಳಗದಲ್ಲಿ ಅನ್ವಯಿಸಬೇಕೆಂದೂ, ಏರ್ಪಾಡಾಯಿತು. ಈ ಕೆಲ ಸವನ್ನು ತ್ವರೆ ಪಡಿಸು ವುದಕ್ಕಾಗಿ ನಾಲ್ವರುನಾಲ್ವರಾಗಿ ಏಕಕಾಲದಲ್ಲಿ ಹೊರಟು ಉಂಗುರವನ್ನು ಎತ್ತುವಂತೆ ನಿಯಮಿಸಿಕೊಂಡರು. ಈ ನಾಲ್ವರಲ್ಲಿ ಒಬ್ಬೊಬ್ಬರೂ ಉಂಗುರವನ್ನು ನಾಲ್ಕು ಸಲ ಎತ್ತಲು ಪ್ರಯತ್ನಿಸಬಹುದೆಂದು ನಿಶ್ಚಯಿಸಿದರು.

ಅವರಲ್ಲಿ ಹಲವರು ಮೂರುಮೂರು ವೇಳೆ ಉಂಗುರಗಳನ್ನು ಎತ್ತಿದರು. ನಾಲ್ವರು ಮಾತ್ರ ನಾಲ್ಕು ಸಲವೂ ಉಂಗುರವನ್ನು ಎತ್ತಿದರು. ಈ ನಾಲ್ವರಲ್ಲಿ ಯೂಸೂಫ್ ಖಾನನೇ ಮೊದಲನೆಯವನು; ಎರಡನೆಯವನು ಸಿದ್ಧಿ ಪರ್ಸ್ ಎಂಬವನು. ಇವನು ಅಬಿಸೀನಿಯಾ ಜಾತಿಯವನು, ಒಳ್ಳೇ ಭಾರಿ ಆಳು. ಮೈಯ ಮಾಂಸಖಂಡಗಳೆಲ್ಲಾ ಬಲಿತು ಕೊಬ್ಬಿ ಇವನು ನೋಡುವುದಕ್ಕೆ ಭೀಮನಹಾಗೆ ಬಲವಾಗಿದ್ದನು. ಇವನು ಬಿಜಾಪುರದ ನಗರ ರಕ್ಷಕಸೇನೆಯಲ್ಲಿ ಒಂದು ಉನ್ನತಾಧಿಕಾರದಲ್ಲಿದ್ದನು ಹಿಂದೆ ಆನೆಯೊಡನೆ ಸರಸವಾಡಿದ ಸವಾರನೇ ಮೂರನೆಯವನು. ಈ ನಾಲ್ಕು ಮಂದಿ ಮಾತ್ರವೇ ಉಂಗುರವನ್ನು ಎತ್ತುವುದರಲ್ಲಿ ಮೇಲುಗೈಯಾದ ಪ್ರಯುಕ್ತ ಇವರು ವೀರಜನೋಚಿತವಾದ ಮುಂದಿನ ಸಾಹಸಕಾರ್ಯಗಳಲ್ಲಿ ಅನ್ವಯಿಸಬಹುದೆಂದು ನಿರ್ಣಯವಾಯಿತು. ಮಧ್ಯಕಾಲದಲ್ಲಿ ಕ್ರಿಸ್ತದೇಶದಲ್ಲಿಯೂ ಮಹಮ್ಮದೀಯ ದೇಶಗಳಲ್ಲಿಯೂ ನಡಿಸುತ್ತಿದ್ದ ನಿಯಮಗಳಿಗನುಸಾರವಾಗಿಯೇ ಈ ಕಾಳಗವನ್ನು ನಡಿಸಬೇಕೆಂದು ಗೊತ್ತುಮಾಡಿದರು. ವೀರರು ತಮ್ಮ ಭರ್ಜಿಗಳನ್ನು ಎದುರಾಳಿಗೆ ಗುರಿಯಿಟ್ಟು ಕಾಳಗಮಾಡಬೇಕೆಂದೂ, ಭರ್ಜಿಯೊಂದು ವಿನಾ ಮತ್ತಾವ ಆಯುಧವನ್ನೂ ಪ್ರಯೋಗಿಸಲಾಗದೆಂದೂ ನಿಷ್ಕರ್ಷೆಯಾಯಿತು. ಈ ಕಾಳಗದ ಜಯಾಪಜಯಗಳನ್ನು ನಿಶ್ಚಯಿಸುವುದಕ್ಕಾಗಿ ಅದಿಲ್‌ಷಾಹನ ಇಬ್ಬರು ಸೇನಾನಾಯಕರನ್ನು ಮಧ್ಯಸ್ಥಗಾರರನ್ನಾಗಿ ನೇಮಿಸಿದರು.

ಬಳಿಕ ಯಾರು ಮೊದಲು ಕಾಳಗಮಾಡಬೇಕೆಂದು ಚೀಟಿಹಾಕಿದರು. ಸಿದ್ಧಿ ಹಸನನೇ ಸುಲ್ತಾನನ ಅಂಗರಕ್ಷಕರ ಯಜಮಾನನೊಡನೆ ಮೊದಲು ಕಾಳಗಮಾಡಬೇಕೆಂದು ಗೊತ್ತಾಯಿತು. ಅವರಿಬ್ಬರೂ ಬಂದು ಅಖಾಡದ ಒಂದೊಂದುಕಡೆಯಲ್ಲಿ ಎದುರುಬದುರಾಗಿ ಕಾಳಗಕ್ಕೆ ಸಿದ್ಧವಾಗಿ ನಿಂತಾಗ, ನೋಟಕರೆಲ್ಲರೂ ಆ ಭಾರಿ ಅಪ್ಘಾನನಿಗೂ ಆ ಚಟುವಟಿಕೆಯಾದ ಹಿಂದೂದೇಶದವನಿಗೂ ಇದ್ದ ತಾರತಮ್ಯವನ್ನು ಚೆನ್ನಾಗಿ ಕಂಡುಕೊಂಡರು ಅವರಿಬ್ಬರೂ ಹತ್ತಿಕೊಂಡಿದ್ದ ಕುದುರೆಗಳಿಗೂ ಅದೇವಿಧವಾದ ಹೆಚ್ಚು ಕಡಿಮೆ ಇತ್ತು. ಅಬಿಸೀನಿಯದವನು ತನ್ನ ಭಾರವನ್ನು ಹೊರುವುದಕ್ಕೆ ತಕ್ಕಹಾಗೆ ಇದ್ದ ಒಂದು ಭಾರಿ ಕುದುರೆಯನ್ನು ಹತ್ತಿದ್ದನು. ಅವನ ಎದುರಾಳಿಯು ಸೊಗಸಾದ ಮುಖವೂ ಸಣ್ಣ ಕಾಲುಗಳೂ ಉಳ್ಳ ವೇಗಶಾಲಿಯಾದ ಒಂದು ಅರಬ್ಬಿ ತಾಕಣವನ್ನು ಏರಿಕೊಂಡಿದ್ದನು. ಸನ್ನೆಮಾತನ್ನು ಹೇಳಿದ ಕೂಡಲೆ ಆ ಇಬ್ಬರು ಸವಾರರೂ ಮಹಾ ರಭಸದಿಂದ ಕುದುರೆಯನ್ನು ಬಿಟ್ಟು ರಂಗಮಧ್ಯದಲ್ಲಿ ಬಂದು ಸಂಧಿಸಿದರು. ಆ ಕಾಲದಲ್ಲಿ ಹಿಂದೂದೇಶದ ಸವಾರನ ಭರ್ಜಿಯು ಸಿದ್ಧಿಹಸನನ ಗುರಾಣಿಯ ಮಧ್ಯಭಾಗಕ್ಕೆ ಸರಿಯಾಗಿ ತಗುಲಿತು. ಅದೇ ಸಮಯದಲ್ಲಿ ಹಸನನ ಭರ್ಜಿಯು ಎದುರಾಳಿಯ ಬಾಹುರಕ್ಷೆಗೆ ತಾಕಿತ್ತು ಆ ಸವಾರರ ಕುದುರೆಗಳ ಭಾರದಲ್ಲಿ ಬಹಳ ವ್ಯತ್ಯಾಸವಿದ್ದುದರಿಂದ, ಸಿದ್ಧಿಹಸನನು ಆ ಸಂಘಟ್ಟನದಿಂದ ಸ್ವಲ್ಪವೂ ಕೂಡ ಕದಲದೆ ನೊಣವನ್ನು ಓಸರಿಸಿಕೊಂಡು

ಹೋಗುವಂತೆ ನೆಟ್ಟಗೆ ಹೋಗುತ್ತಿದ್ದನು. ಆದರೆ ಲಘುವಾಗಿದ್ದ ಆ ಅರಬ್ಬಿ ಠಾಕ ಇವು ಹಿಂಗಾಲಮೇಲಕ್ಕೆ ಕುಕ್ಕರಿಸಿ ಒಂದು ಪಕ್ಕಕ್ಕೆ ತಿರುಗಬೇಕಾಗಿ ಬಂದಿತು. ಆದುದರಿಂದ ಮಧ್ಯಸ್ಥಗಾರರು ನಿಸ್ಸಂದೇಹವಾಗಿ ಅಬಿಸೀನಿಯನೇ ಜಯಿಸಿದ ನೆಂದು ತಿಳಿಸಿದರು. ಇದು ಮುಗಿದ ಸ್ವಲ್ಪ ಹೊತ್ತಿನಮೇಲೆ ಯೂಸೂಫ್‌ಖಾನನೂ ಅಕ್ಬರಿನ ಆಸ್ಥಾನದವನೂ ರಂಗಸ್ಥಳದಲ್ಲಿ ಬಂದು ನಿಂತು, ತಮ್ಮ ಮುಖರಕ್ಷೆ ಯನ್ನು ಹಾಕಿಕೊಂಡು, ರಂಗಮಧ್ಯದಲ್ಲಿ ಮಹಾ ರಭಸದಿಂದ ಸಂಧಿಸಿದರು. ಮೊಗಲನ ಭರ್ಜಿಯು ಯೂಸೂಫ್ ಖಾನನ ಗುರಾಣಿಯ ನಡುವೆ ನೆಟ್ಟಗೆ ದೂರಿ ಕೊಂಡುಹೋಗಿ ಅವನ ಎದೆಯಲಿದ್ದ ಕಬ್ಬಿಣದ ಕವಚಕ್ಕೆ ತಾಗಿ ನಿಂತಿತು. ಯೂಸ ಫ್‌ಖಾನನು ತನ್ನ ಪ್ರತಿದ್ವಂದ್ವಿಯ ತಲೆಗೆ ಗುರಿಯಿಟ್ಟು ಕಿರೀಟವನ್ನು ಸರ್ವಶಕ್ತಿ ಯಿಂದಲೂ ಪ್ರಹರಿಸಿದನು. ಆ ಪೆಟ್ಟಿಗೆ ಅವನು ಮೂರ್ಛಿತನಾಗಿ ರಂಗಭೂಮಿ ಯಲ್ಲಿ ಬಿದ್ದುಬಿಟ್ಟನು. ಅದನ್ನು ಕಂಡೊಡನೆ ಯೂಸೂಫ್ ಖಾನನು ತಟ್ಟನೆ ಕೆಳ ಕ್ಕಿಳಿದು ನೆಲದಲ್ಲಿ ಬಿದ್ದಿದ್ದ ತನ್ನ ಎದುರಾಳಿಗೆ ಸಹಾಯಮಾಡಲು ಹೋದನು. ಇದರಿಂದ ಅಲ್ಲಿ ನೆರೆದಿದ್ದ ನೋಟಕರಿಗೆಲ್ಲಾ ಈತನಲ್ಲಿ ಮತ್ತಷ್ಟು ಗೌರವವುಂಟಾ ಯಿತು. ಸ್ವಲ್ಪಕಾಲದಲ್ಲಿಯೇ ಮೊಗಲನು ತೆಪ್ಪತ್ತುಕೊಂಡು ಜಯಶಾಲಿಯಾದ ತನ್ನ ಎದುರಾಳಿಯ ಬಾಹುವನ್ನವಲಂಬಿಸಿ ಮೆಲ್ಲಗೆ ರಂಗಸ್ಥಳದಿಂದ ಹೊರಕ್ಕೆ ಹೋದನು.

ಇದಾದ ಬಳಿಕ ಯೂಸೂಫ್‌ಖಾನನೂ ಸಿದ್ದಿಹಸನನೂ ರಂಗಕ್ಕೆ ಬಂದುನಿಂ ತರು. ಇವರ ಕಾಳಗವೇ ಅಂದಿನ ದಿನದ ಕೊನೆಯ ಕಾಳಗವು. ಆದು ದರಿಂದ ಇವರನ್ನು ನೋಡಿದಕೂಡಲೆ ಅಲ್ಲಿ ನೆರೆದಿದ್ದ ಅಪಾರವಾದ ಜನಸಂಘದ ಉತ್ಸಾಹವು ಉಕ್ಕಿ ತಲೆಮೀರಿಹೋಯಿತು ಅಬಿಸೀನಿಯನು ಅನೇಕ ಕ್ರೂರಕೃತ್ಯ ಗಳನ್ನು ಮಾಡಿ ಬಿಜಾಪುರದ ಜನರ ದ್ವೇಷಕ್ಕೆ ಪಾತ್ರನಾಗಿದ್ದನು. ಅದರಿಂದ ಜನರೆಲ್ಲರೂ ಯೂಸೂಫ್‌ಖಾನನ ಪಕ್ಷವನ್ನೇ ವಹಿಸಿದ್ದರು. ಹೀಗಿರುತ್ತಿರಲು ಸನ್ನೆ ಮಾತನ್ನು ಹೇಳಿ ಕಾಳಗವನ್ನು ಪ್ರಾರಂಭಿಸುವುದಕ್ಕೆ ಸ್ವಲ್ಪಮುಂಚೆ, ಮೊಗಲನು ಯೂಸೂಫ್‌ಖಾನನ ಸಮೀಪಕ್ಕೆ ಬಂದು ಹಿಂದಿನ ಕಾಳಗದಲ್ಲಿ ತೂತು ಬಿದ್ದಿದ್ದ ಅವನ ಗುರಾಣಿಗೆ ಪ್ರತಿಯಾಗಿ ತನ್ನ ಗುರಾಣಿಯನ್ನು ಕೊಟ್ಟನು. ಯೂಸೂಫ್‌ಖಾನನು ಅದನ್ನು ಆದರ ಪುರಸ್ಸರವಾಗಿ ತೆಗೆದುಕೊಂಡನು. ಈ ವಿಧವಾದ ನಡತೆಯಿಂದ ಆ ವೀರರಿಬ್ಬರಿಗೂ ಮುಂದೆ ನಿರಂತರವಾದ ಮೈತ್ರಿಯುಂಟಾಯಿತು. ಮುಖ್ಯವಾಗಿ ಇಷ್ಟೊಂದು ಫಲಕ್ಕೂ ಯೂಸೂಫ್‌ಖಾನನು ತನ್ನ ಮೊದಲಿದಿರಾಳಿಗೆ ತೋರಿಸಿದ ಉದಾರವಾದ ದಯೆಯೇ ಮೂಲವಾಯಿತು. ಬಳಿಕ ಕಾಳಗಕ್ಕೆ ಬೇಕಾದುದೆಲ್ಲ ಸಿದ್ಧ ವಾಯಿತು. ಇಬ್ಬರು ವೀರರೂ ಭರ್ಜಿಗಳನ್ನು ಗುರಿಯಿಟ್ಟು ಹಿಡಿದುಕೊಂಡು ಎದುರು ಬದುರಾಗಿ ನಿಂತರು ; ಕೂಡಲೆ ಮಧ್ಯಸ್ಥಗಾರರು 'ಜಾನೆ ದೇವ್' ಎಂದು ಹಿಂದೂ ಸ್ಥಾನಿಯಲ್ಲಿ ಗಟ್ಟಿಯಾಗಿ ಕೂಗಿಹೇಳಿದರು. ಒಡನೆ ಇಬ್ಬರು ವೀರರೂ ಮಹಾವೇಗ

ದಿಂದ ನುಗ್ಗಿ ರಂಗಮಧ್ಯದಲ್ಲಿ ಫಿರಂಗಿಹೊಡೆದಷ್ಟು ರಭಸದಿಂದ ಸಂಧಿಸಿದರು.
ಇಬ್ಬರೂ ಭರ್ಜಿಗಳನ್ನು ಬಲು ನೇರವಾಗಿ ಗುರಿಯಿಟ್ಟಿದ್ದುದರಿಂದ ಆ ಸಂಘಟ್ಟನದಲ್ಲಿ
ಅವರಿಬ್ಬರ ಭರ್ಜಿಗಳೂ ತುಮರುತುಮರಾಗಿ ಒಡೆದು ಹೋದುವು. ಇಬ್ಬರ ಕುದುರೆ
ಗಳೂ ಹಿಂಗಾಲುಗಳ ಮೇಲೆ ಕುಕ್ಕರಿಸಿ ಹೋಗಿ ಸವಾರರಿಬ್ಬರೂ ತಮ್ಮತಮ್ಮ ಆಸ
ನದಿಂದ ಕದಲಿದರು. ಇಂತಹ ಸಂದುಕಟ್ಟಿನಲ್ಲಿ ಭರ್ಜಿಯನ್ನು ವೇಗವಾಗಿ ನೂಕಲು
ಮುಂದಕ್ಕೆ ಬಾಗಿದ್ದ ಅಬಿಸೀನಿಯನು ಎಡಗಡೆ ಓಲಿದ್ದುದರಿಂದ, ಆ ಪಕ್ಕದ ಅಂಕ
ವಣಿ ಹರಿದು ದಾಯತಪ್ಪಿ ಅವನು ದೊಪ್ಪನೆ ಹುಡಿಯಲ್ಲಿ ಬಿದ್ದುಬಿಟ್ಟನು. ಅದನ್ನು
ಕಂಡು ಯೂಸೂಫ್ಖಾನನು ಕೆಳಕ್ಕೆ ಬಿದ್ದ ಇದಿರಾಳಿಗೆ ಒತ್ತಾಸೆಮಾಡುವ ಭಾವ
ದಿಂದ ಮತ್ತೊಮ್ಮೆ ಕುದುರೆಯಿಂದಿಳಿದನು. ಆದರೆ ಈಗ ಆತನ ಉಪಕಾರಕ್ಕೆ
ಅಪಕಾರವೇ ಫಲವಾಯಿತು. ಅವನು ಕುದುರೆಯಿಂದ ಇಳಿದನೋ ಇಲ್ಲವೋ
ಎನ್ನುವುದರೊಳಗಾಗಿ ಸಿದ್ದಿಹಸನನು ತನಗಾದ ಅವಮಾನದಿಂದ ಕೋಪೋದ್ದೀ
ಪಿತನಾಗಿ ಎದ್ದು ಕತ್ತಿಯನ್ನು ಹಿರಿದುಕೊಂಡು ಖಾನನ ಮೇಲೆ ಹಾರಿಬಿದ್ದನು,
ಯೂಸೂಫ್ಖಾನನು ಹಿಮ್ಮೆಟ್ಟಿ ತನ್ನ ತಲೆ ಮೈ ಕೈ ಕಾಲುಗಳ ಮೇಲೆ ಗುರಿಯಾಗಿ
ನಿಲಗಾಲವಿಲ್ಲದೆ ಬೀಳುತ್ತಿದ್ದ ಪೆಟ್ಟುಗಳನ್ನೆಲ್ಲಾ ನಿರಾಯಾಸವಾಗಿ ಬಹು ಚಮತ್ಕಾ
ರದಿಂದ ತಪ್ಪಿಸಿಕೊಳ್ಳುತ್ತ ನಿಂತನು. ಮಧ್ಯಸ್ಥಗಾರರು ತಮ್ಮ ಕಣ್ಣೆದುರಿಗೆ ಕಾಳ
ಗದ ಪದ್ಧತಿಗೆ ವಿರುದ್ಧವಾಗಿ ಹೀಗೆ ಅನ್ಯಾಯ ನಡೆಯಲವಕಾಶ ಕೊಡದಂತೆ ಅಡ್ಡ
ಬಂದು ನಿಲ್ಲಿಸಬೇಕಾಗಿತ್ತು. ಆದರೂ ಅವರು ಹೀಗಾಗುವುದೆಂದು ತಿಳಿಯದೆ
ಅಜಾಗರೂಕರಾಗಿದ್ದ ಕಾರಣ, ಏನೂ ಮಾಡದೆ ಧರ್ಮವೇಜಯ ಎಂದು ತೃಪ್ತಿ
ಪಟ್ಟುಕೊಂಡು ಸುಮ್ಮನೆ ಇದ್ದುಬಿಟ್ಟರು. ವೈಯರಿಯದೆ ಹೊಡೆದಾಡುವವನಿ
ಗಿಂತ ಕಣ್ಣರಿದು ಕಾದುವವನಿಗೆ ಎಷ್ಟು ಅನುಕೂಲಗಳುಂಟೋ ಅಷ್ಟು ಅನುಕೂಲ
ಗಳನ್ನೂ ಯೂಸೂಫ್ಖಾನನು ಪಡೆದುಕೊಂಡು ಸಮಯವನ್ನು ಎದುರುನೋ
ಡುತ್ತ ನಿಂತಿದ್ದನು. ಮಧ್ಯಸ್ಥಗಾರರು ಅಡ್ಡಬಂದು ತನ್ನ ಶತ್ರುವಿನ ಅಧರ್ಮ
ಕಾರ್ಯವನ್ನು ತಡೆಯುವರೋ ಏನೋ ಎಂದು ಅವನು ಸ್ವಲ್ಪಕಾಲ ನೋಡಿದನು.
ಅವರು ಏನೂ ಮಾಡದಿದ್ದುದನ್ನು ಕಂಡು ಬಳಿಕ ತನ್ನ ಶತ್ರುವಿನ ಘಾತಕ್ಕೆ ಹಿಂದೆಗೆ
ಯುವದನ್ನು ಬಿಟ್ಟು ತನ್ನ ಸಮಯವನ್ನು ನಿರೀಕ್ಷಿಸಿ ಹೊಂಚಿ ನೋಡುತ್ತ ನಿಂತು
ಕೊಂಡನು. ಆ ವೇಳೆಗೆ ಆಫ್ರಿಕದವನು ಕೋಪದಿಂದ ಹುಚ್ಚೇರಿ ದಿಕ್ಕಾಪಾಲಾಗಿ
ಹೊಡೆದು ಹೊಡೆದು ಬಳಲಿ ಬಲಗುಂದುತ್ತ ಬಂದು, ಕೊನೆಯಸಲ ಬಹು ಪ್ರಯತ್ನ
ಮಾಡಿ ತನ್ನ ಸರ್ವಶಕ್ತಿಯಿಂದಲೂ ತುರ್ಕಿಯವನ ಕಿರೀಟದ ಮೇಲೆ ಹೊಡೆದನು.
ಯೂಸೂಫ್ಖಾನನು ತನ್ನ ಗುರಾಣಿಯೊಡ್ಡಿ ಆ ಪೆಟ್ಟನ್ನು ತಪ್ಪಿಸಿದನು. ಆ
ಗುರಾಣಿ ಮಾತ್ರ ತನ್ನ ಆಯುಸ್ಸಿದ್ದವರೆಗೂ ಈ ಪೆಟ್ಟಿನ ಗಾಯವನ್ನು ಹೊತ್ತಿತ್ತು.
ಹೀಗೆ ಪೆಟ್ಟನ್ನು ತಪ್ಪಿಸಿಕೊಂಡು ಯೂಸೂಫ್ಖಾನನು ತನ್ನ ಬಲವನ್ನೆಲ್ಲಾ ಬಿಟ್ಟು
ಸಿದ್ದಿಯ ಕಿರೀಟದ ಮೇಲೆ ಹೊಡೆದು, ಕಿರೀಟ ಸಹಿತವಾಗಿ ಅವನ ತಲೆಬುರುಡೆ

ಯನ್ನು ಸೀಳಿಬಿಟ್ಟನು. ಆಗ ಮಾತ್ರ ಮಧಸ್ತಗಾರರು. ಅಡ್ಡಬಂದು ಸಿದ್ದಿ ಯನ್ನು ಹಿಡಿದುಕೊಂಡರು. ಹೀಗೆ ಜಯಶಾಲಿಯಾದ ಯೂಸೂಫ್‌ಖಾನನನ್ನು ನೋಡಿ ಜನರೆಲ್ಲರೂ ಕೋಲಾಹಲಧ್ವನಿಮಾಡಿದರು. ಬಳಿಕ ಅಧಿಕಾರಿಗಳು ಬಂದು ಆತನನ್ನು ಸುಲ್ತಾನನ ಸಮೀಪಕ್ಕೆ ಕರೆದುಕೊಂಡು ಹೋಗಿ ಅವನಿಗೆ ಉಡುಗೆರೆ ಗಳನ್ನು ಚಿನ್ನದ ಹಿಡಿಯ ಕತ್ತಿಯನ್ನೂ ಬಹುಮಾನವಾಗಿ ಕೊಟ್ಟು ಮರ್ಯಾದೆಮಾಡಿ ಸಿದರು. ಆಗ ಜನರೆಲ್ಲರೂ ಉಘೇ ಉಘೇ ಎಂದು ಸಂತೋಷದಿಂದ ಪುನಃ ಪುನಃ ಕೂಗಿಕೊಂಡರು.

ಮಾರನೆಯ ದಿವಸ ಯೂಸೂಫ್‌ಖಾನನನ್ನು ಕ್ರಮವಾಗಿ ಸುಲ್ತಾನನ ಅಂ ಗರಕ್ಷಕರ ಗೊತ್ತುಗಾರರನ್ನಾಗಿ ನೇಮಕಮಾಡಿದರು. ಬಳಿಕ ವಿಜಯನಗರದೊ ಡನೆ ಯುದ್ಧಮಾಡುವ ವಿಷಯವಾಗಿ ಮಂತ್ರಾಲೋಚನೆ ಮಾಡಲು ಸೇರಿದ್ದ ಸಭೆ ಯಲ್ಲಿ ಅವನೂ ಹೋಗಿ ಕುಳಿತನು. ಈ ಕಾಲದಲ್ಲಿ ಆ ಹಿಂದೂಸ್ಥಾನವು ಪರಾಕ್ರ ಮದಲ್ಲಿಯೂ ಐಶ್ವರ್ಯದಲ್ಲಿಯೂ ಅತ್ಯುಚ್ಛ್ರಾಯಸ್ಥಿತಿಯಲ್ಲಿತ್ತು. ಅದು ತನಗೆ ಉತ್ತರಭಾಗದಲ್ಲಿದ್ದ ಯಾವ ಒಬ್ಬ ತುರುಕ ರಾಜನಿಗೂ ಹೆದರುವಂತಿರಲಿಲ್ಲ. ಅಷ್ಟೇ ಅಲ್ಲ. ಈಚೆಗೆ ಆ ಸಂಸ್ಥಾನಗಳಿಂದ ಕಿತ್ತುಕೊಂಡ ರಾಜ್ಯಗಳಿಂದ ಹೆಚ್ಚಿ ಅದು ಕೃಷ್ಣಾನದಿಯ ವರೆಗೂ ವ್ಯಾಪಿಸಿಕೊಂಡಿತ್ತು. ಈ ತುರುಕರ ಸಂಸ್ಥಾನ ಗಳು ತಮ್ಮ ತಮ್ಮಲ್ಲಿಯ ಕಲಹದಿಂದ ವಿಜಯನಗರದ ರಾಮರಾಜನ ಅಹಂಕಾರಕ್ಕೆ ತಾವೇ ಕಾರಣವಾಗಿ, ಇದುವರೆಗೂ ತಾವೇ ಸಂಕಟಪಡುತ್ತಿದ್ದು, ಈಗ ಅವನಿಗೆ ವಿರುದ್ಧವಾಗಿ ಒಂದಾಗಿ ಸೇರಯತ್ನಿಸಿದುವು. ಆಲಿ ಅದಿಲ್‌ಷಾ ಚಾಂದ್‌ಬೀಬಿ ಯವರ ಮದುವೆಯಿಂದ ಬಿಜಾಪುರವೂ ಅಹಮದ್‌ನಗರವೂ ಆಗಲೇ ಒಂದಾಗಿ ಸೇರಿದ್ದುವು ಈ ಎರಡು ಸಂಸ್ಥಾನಗಳೂ ಸರ್ವಪ್ರಯತ್ನದಿಂದಲೂ ರಾಮರಾ ಜನನ್ನೂ ಆತನ ಹಿಂದೂಸಂಸ್ಥಾನದ ಪ್ರಾಬಲ್ಯವನ್ನೂ ನಿರ್ಮೂಲ ಮಾಡಬೇ ಕೆಂದೆಣಿಸಿ ತಮ್ಮ ಸೇನೆಗಳನ್ನು ಒಂದಾಗಿ ಸೇರಿಸಿದವು. ಗೋಲ್ಕೊಂಡೆ ಮತ್ತು ಬಿದರೆ ಸಂಸ್ಥಾನಗಳ ರಾಜರೂ ಈ ಏರ್ಪಾಡಿಗೆ ಒಳಪಟ್ಟು ತಮ್ಮ ತಮ್ಮ ಸೇನೆ ಗಳನ್ನು ತಂದರು. ದಕ್ಷಿಣದೇಶದಲ್ಲಿ ಮಹಮ್ಮದೀಯ ಮತವನ್ನು ಪ್ರಚಾರಕ್ಕೆ ತರಲು ಇದೇ ಒಳ್ಳೆಯ ಸಮಯವೆಂದೆಣಿಸಿ ಅನೇಕ ಮಹಮ್ಮದೀಯ ಮತಾಭಿ ಮಾನಿಗಳೂ ಬಂದು ಈ ಸೈನ್ಯಗಳಿಗೆ ಸೇರಿಕೊಂಡರು. ಸರ್ವಸಂಪತ್ಸಮೃದ್ಧ ವಾದ ವಿಜಯನಗರದ ಕೊಳ್ಳೆಯಲ್ಲಿ ತಮ್ಮ ದಾರಿದ್ರ್ಯವು ಹತವಾಗಬಹುದೆಂಬ ಆಸೆ ಯಿಂದ ಅರೆವಾಸಿ ಜನರು ಬಂದಿದ್ದರು. ಇದೇ ಕಾಲದಲ್ಲಿ ಆ ಗರ್ವೋದ್ಧತನಾದ ಹಿಂದೂರಾಜನೂ ತನ್ನ ರಾಷ್ಟ್ರರಕ್ಷಣೆಗಾಗಿ ಬೇಕಾದ ಪ್ರಯತ್ನಗಳನ್ನು ನಡಿಸು ತ್ತಲೇ ಇದ್ದನು. ಈಗ ಮಹಮ್ಮದೀಯರಾಜರೂ ಅವರ ಸೇನಾಧ್ಯಕ್ಷರೂ ಸೇರಿ— ವಿಜಯನಗರಕ್ಕೆ ಮುತ್ತಿಗೆಹಾಕುವುದಕ್ಕೆ ಒಳ್ಳೆಯಮಾರ್ಗ ಯಾವುದು, ಆ ರಾಜಧಾ ನಿಯಮೇಲೆ ಬೀಳುವುದಕ್ಕೆ ಉಪಾಯವೇನು— ಎಂದು ಪರ್ಯಾಲೋಚನೆ ಮಾಡು

ವುದಕ್ಕಾಗಿ ಬಿಜಾಪುರದ ಅರಮನೆಯಲ್ಲಿ ಮಂತ್ರಾಲೋಚನಾ ಸಭೆಯನ್ನು ನಡಿಸಿದರು.

ಅವರು ಬಹುಕಾಲ ಆಲೋಚನೆ ಮಾಡಿದರು; ಅದನ್ನೆಲ್ಲಾ ಇಲ್ಲಿ ಹೇಳುವುದು ಅಪ್ರಕೃತವಾಗಿದೆ. ಹಾಗೆ ಆಲೋಚನೆಮಾಡಿದ ಬಳಿಕ ಯುದ್ಧದಲ್ಲಿ ತಮಗೆ ಜಯವಾಗಬೇಕಾದರೆ ಮೊದಲು ಶತ್ರುಸೈನ್ಯದ ಗಣತಿಯನ್ನೂ ಶತ್ರುರಾಜನ ಉದ್ದೇಶಗಳನ್ನೂ ತಿಳಿಯುವುದು ಅವಶ್ಯಕವೆಂದು ನಿರ್ಧರಮಾಡಿದರು. ಇದಕ್ಕಾಗಿ ಆಪ್ತನಾದ ಒಬ್ಬ ಮನುಷ್ಯನನ್ನು ವಿಜಯನಗರಕ್ಕೆ ಕಳುಹಿಸಿ ಅಲ್ಲಿನ ವಿದ್ಯಮಾನವನ್ನೆಲ್ಲಾ ಅವನಿಂದ ತಿಳಿದುಕೊಳ್ಳಬೇಕಾಯಿತು. ಈ ಅಪಾಯಕರವಾದ ಕಾರ್ಯಕ್ಕೆ ಯಾರನ್ನು ಕಳುಹಿಸಬೇಕು, ಎಂದು ವಿಚಾರಮಾಡಿದರು. ಅದನ್ನು ಕೇಳಿ ಬಿಜಾಪುರದ ಸೇನಾಧಿಪತಿಯು — ಈ ಕೆಲಸಕ್ಕೆ ಸಿದ್ದಿಹಸನನೇ ಸರಿಯಾದ ಮನುಷ್ಯನು. ಆದರೆ ಆತನು ಕಾಳಗದಲ್ಲಾದ ಗಾಯದಿಂದ ಇನ್ನೂ ಶ್ರಮಪಡುತ್ತಿದ್ದಾನೆಂದು ಕೇಳುತ್ತೇನೆ ಎಂದು ಹೇಳಿದನು. ಅದನ್ನು ಕೇಳಿ ಮತ್ತೊಬ್ಬನು :—ಅವನು ದೃಢವಾಗಿದ್ದರೂ ಕೂಡ ಅವನಿಂದ ಏನೂ ಪ್ರಯೋಜನವಿಲ್ಲ. ಅವನ ಕರಿಯ ತೊಗಲನ್ನೂ ದಪ್ಪ ತುಟಿಯನ್ನೂ ಭೂತಾಕಾರವನ್ನೂ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಸರ್ವರೂ ತಿಳಿದಿದ್ದಾರೆ. ಅವನು ಎಷ್ಟೇ ಚಮತ್ಕಾರದಿಂದ ವೇಷಹಾಕಿಕೊಂಡು ಹೋದಾಗ್ಗೂ ಜನರು ಅವನನ್ನು ಕಂಡು ಹಿಡಿಯದೆ ಬಿಡರು—ಎಂದನು. ಈ ಮಾತನ್ನು ಕೇಳಿ ಯೂಸೂಫ್ ಖಾನನು—ಹಾಗಾದರೆ ನನ್ನನ್ನು ಕಳುಹಿಸಿಕೊಡಿ. ನಾನು ಅಲ್ಲಿಗೆ ಹೊಸಬ. ನನ್ನನ್ನು ಯಾರೂ ಗುರುತಿಸುವ ಸಂಭವವಿಲ್ಲ. ಇದರಮೇಲೆ, ನಮ್ಮ ಮಹಮ್ಮದೀಯ ಸೈನಿಕರು ಅಲ್ಲಿಯ ದೇವಸ್ಥಾನಗಳನ್ನೂ ಅರಮನೆಗಳನ್ನೂ ಸುಟ್ಟು ಜನರನ್ನೆಲ್ಲಾ ಕತ್ತರಿಸಿ ಹಾಕುವುದಕ್ಕೆ ಮೊದಲು, ಆ ಪ್ರಬಲವಾದ ಹಿಂದೂನಗರವನ್ನೂ ಅದರ ವಿಗ್ರಹಗಳ ವೈಭವವನ್ನೂ ನೋಡಬೇಕೆಂಬುದಾಗಿ ನನಗೆ ಅಪೇಕ್ಷೆಯಿದೆ—ಎಂದು ನುಡಿದನು.

ಸ್ವಲ್ಪ ಪರ್ಯಾಲೋಚನೆ ಮಾಡಿ ಯೂಸೂಫ್‌ಖಾನನನ್ನು ಕಳುಹಿಸಿಕೊಡುವುದಾಗಿ ಒಪ್ಪಿದರು. ತರುವಾಯ ಅವನನ್ನು ಕಳುಹಿಸಿಕೊಡುವುದಕ್ಕೆ ಬೇಕಾದ ಏರ್ಪಾಡುಗಳನ್ನು ಜಾಗ್ರತೆಯಾಗಿ ಸಿದ್ಧಪಡಿಸಿದರು. ಯೂಸೂಫ್‌ಖಾನನು ತನ್ನ ಬಿಳಿಯ ಚರ್ಮದಿಂದಲೂ ಜನರ ನಡೆನುಡಿಗಳ ವಿಚಾರದಲ್ಲಿ ತನಗಿದ್ದ ಮೌಢ್ಯದಿಂದಲೂ ತನ್ನಲ್ಲಿ ಸಂದೇಹ ಉಂಟಾಗದಿರುವುದಕ್ಕಾಗಿ ತಾನು ತುರ್ಕಿದೇಶದ ರತ್ನಪಡಿ ವ್ಯಾಪಾರಿಯ ವೇಷವನ್ನು ಹಾಕಿಕೊಂಡು ಹೋಗುವುದೇ ಸರಿಯಾದ ಉಪಾಯವೆಂದು ಬಗೆದು, ಹಾಗಾದರೂ ತನ್ನ ಗುರುತು ಸಿಕ್ಕೀತೆಂದಂಜಿ ಬಿಳಿಯ ಗಡ್ಡವನ್ನು ಕಟ್ಟಿಕೊಂಡು ಅರುವತ್ತು ವಯಿಸ್ಸಿನ ಮುದುಕನಂತೆ ತೋರ್ಪಡಿಸಿಕೊಳ್ಳುತ್ತ, ತನ್ನ ನಿಲವಂಗಿಯ ಒಳಗಡೆ ಸರಪಳಿಯ ಲೋಹ ಕವಚವನ್ನು ಧರಿಸಿ, ಆಪತ್ಕಾಲದಲ್ಲಿ ಉಪಯೋಗವಾಗುವಂತೆ ಮರೆಯಾಗಿ ಒಂದು ಕೈಕೋವಿಯನ್ನಿಟ್ಟುಕೊಂಡು,

ಹೊರಕ್ಕೆ ಮಾತ್ರ ಒಂದು ಕತ್ತಿಯನ್ನು ನೇತುಹಾಕಿಕೊಂಡು ಹೊರಟನು. ಆ ಕಾಲದಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿಯೂ ಕಳ್ಳಕಾಕರ ಹಾವಳಿ ಇದ್ದುದರಿಂದ, ವ್ಯಾಪಾರಿಗಳೆಲ್ಲರೂ ಆಯುಧಸಮೇತರಾಗಿ ಸಂಚರಿಸುವ ಪದ್ಧತಿಯಿತ್ತು. ಇಷ್ಟೇ ಅಲ್ಲ, ಆ ಕಾಲದಲ್ಲಿ ವರ್ತಕರು ಆಯುಧಪಾಣಿಗಳಾದ ಭಟರನ್ನೂ ಸಹ ಸಂಗಡ ಕರೆದುಕೊಂಡು ಹೋಗುತ್ತಿದ್ದರು. ಅಂಥದರಲ್ಲಿ ಯೂಸೂಫ್‌ಖಾನನು ಏಕಾಕಿಯಾಗಿಯೇ ಹೋಗಲಿಷ್ಟಪಟ್ಟನು. ಅವನಿಗೆ ಬಿಜಾಪುರದಲ್ಲಿ ಆಪ್ತರಾದ ಪರಿಜನರು ದೊರಕುವುದು ಸುಲಭಸಾಧ್ಯವಲ್ಲ, ಸಿಕ್ಕಿದ ಜನರನ್ನಿಟ್ಟುಕೊಂಡರೆ ಅವರಿಗೆ ತನ್ನ ಗುಟ್ಟು ತಿಳಿದುಹೋದಲ್ಲಿ ಪ್ರಮಾದವಾಗುವುದು. ಆಪ್ತರಲ್ಲದ ಪರಿಜನವಿದ್ದರೆ ಅವನು ಆರಂಭಿಸುವ ಕಾರ್ಯಕ್ಕೆ ಮತ್ತಷ್ಟು ವಿಘ್ನವೂ ತೊಂದರೆಯೂ ಉಂಟಾಗುವುವು. ಆದುದರಿಂದಲೇ ಅವನು ಒಬ್ಬೊಂಟಿಗನಾಗಿ ಹೊರಟನು. ಅವನು ಹೊರಡುವಾಗ ತಾನು ಗೋವೆಯಲ್ಲಿ ತಂದಿಟ್ಟಿರುವ ಸಾಮಾನುಗಳ ಮಾದರಿಯೆಂಬದಾಗಿ ವಿಜಯನಗರದಲ್ಲಿ ತೋರಿಸುವುದಕ್ಕಾಗಿ ಸುಲ್ತಾನನ ಬೊಕ್ಕಸದಲ್ಲಿದ್ದ ಒಂದೆರಡು ಇಂಗ್ಲಿಷ್ ಕೈ ಗಡಿಯಾರಗಳನ್ನು ಸಂಗಡ ತೆಗೆದುಕೊಂಡನು.

ಈ ಮೇರೆ ಸಿದ್ಧಮಾಡಿಕೊಂಡು ಯೂಸೂಫ್‌ಖಾನನು ವಿಜಯನಗರದ ಕಡೆಗೆ ಪಯಣ ಹೊರಟನು. ಮಾರ್ಗದಲ್ಲಿ ಯಾವ ವಿಶೇಷವೂ ನಡೆಯಲಿಲ್ಲ. ಆಗ್ಗೆ ಉಭಯ ಸಂಸ್ಥಾನಗಳ ಎಲ್ಲೆಗಳಲ್ಲಿರುತ್ತಿದ್ದ ಕಳ್ಳ ಕಾಕರರು ತಮ್ಮ ಹೋರೆಗಿಂತಲೂ ಸೇನೆಯಲ್ಲಿ ಸೇರಿಕೊಳ್ಳುವುದು ಉತ್ತಮವೆಂದೆಣಿಸಿ, ತತ್ಕಾಲದಲ್ಲಿ ಯುದ್ಧಕ್ಕಾಗಿ ಸೈನಿಕರನ್ನು ಸೇರಿಸುತ್ತಿದ್ದ ಹಿಂದೂ ಸೈನ್ಯಕ್ಕೋ ಮಹಮ್ಮದೀಯ ಸೈನ್ಯಕ್ಕೋ ಸೇರಿಕೊಂಡಿದ್ದರು. ಶೀಘ್ರದಲ್ಲಿಯೇ ಯುದ್ಧವು ನಡೆಯುವಂತಿದ್ದ ಕಾರಣ ಸಮಾಧಾನಕಾಲದಲ್ಲಿ ನಡೆಯತಕ್ಕ ವ್ಯಾಪಾರಗಳೆಲ್ಲಾ ನಿಂತುಹೋಗಿ, ವರ್ತಕರ ಸುಳಿದಾಟವೇ ತಪ್ಪಿ, ಕಳ್ಳಕಾಕರ ಜೀವನಕ್ಕೆ ಕಷ್ಟವಾಗಿದ್ದಿತು. ಆದುದರಿಂದ ಯೂಸೂಫ್‌ಖಾನನು ಯಾವ ತೊಂದರೆಯೂ ಇಲ್ಲದೆ ಹೋಗಿ ಸೇರಿ ವಿಜಯನಗರದ ಕೋಟೆಗೆ ಪ್ರವೇಶಮಾಡಿದನು. ವಿಜಯನಗರದ ಸಂಸ್ಥಾನದವರು, ಕಡೆಯ ವರೆಗೂ, ಜಾತಿ ಮತಭೇದಗಳನ್ನಿಡದೆ ತಮ್ಮ ಕೋಟೆಗೆ ಎಲ್ಲಾ ತರದ ವರ್ತಕರನ್ನೂ ಬರಮಾಡಿಕೊಂಡು ರಕ್ಷಿಸುತ್ತಿದ್ದುದರಿಂದ, ಅಲ್ಲಿಯ ವ್ಯಾಪಾರವೂ ಸಂಪತ್ತೂ ಅಪಾರವಾಗಿ ಬೆಳೆಯಲು ಕಾರಣವಾಗಿತ್ತು. ಕಾನ್‌ಸ್ಟಾಂಟಿನೋಪಲಿನಿಂದ ವರ್ತಕನು ಬಂದಿರುವುದಾಗಿ ದ್ವಾರಾಧ್ಯಕ್ಷನಿಗೆ ತಿಳಿದ ಕೂಡಲೆ, ಆತನು ದೂತನನ್ನು ಕಳುಹಿಸಿ ವರ್ತಕನನ್ನು ಮರ್ಯಾದೆಯಾಗಿ ಅರಮನೆಗೆ ಕರೆದುಕೊಂಡು ಹೋಗಿ ಬಿಡುವಂತೆ ಆಜ್ಞೆಮಾಡಿದನು. ಯೂಸೂಫ್ ಖಾನನು ದೂತನೊಡನೆಹೊರಟು, ಉತ್ತರದಲ್ಲಿ ಹರಿಯುತ್ತಿದ್ದ ತುಂಗಭದ್ರೆಯನ್ನು ಕಲ್ಲುಸೇತುವೆಯ ಮೂಲಕ ದಾಂಟಿ ಊರನ್ನು ಹೊಕ್ಕು, ಕಸಬಿನ ಬಜಾರವೆಂಬ ದೊಡ್ಡ ಅಂಗಡಿ ಬೀದಿಯಲ್ಲಿ ಹೊರಟು ಅಲ್ಲಿದ್ದ ಉಪ್ಪರಿಗೆ ಮನೆಗಳ ದಾರ್ಢ್ಯವನ್ನೂ ಬೀದಿಯ

ಉಭಯ ಪಾರ್ಶ್ವದ ಅಂಗಡಿಗಳ ಮುಂದೆಯೂ ವ್ಯಾಪಾರಮಾಡುವ ಜನರ ಸೌಕರ್ಯಕ್ಕಾಗಿ ಬಿಸಲಿಗೆ ಮರೆಯಾಗಿ ಕಟ್ಟಿದ್ದ ಕಲ್ಲುಕಂಬದ ಕೈಸಾಲೆಗಳ ಅಂದವನ್ನೂ ನೋಡಿ ಆಶ್ಚರ್ಯಪಡುತ್ತ ಹೋಗುತ್ತಿದ್ದನು. ಅವನು ಯಾವ ಕಡೆ ತಿರುಗಿದಾಗ್ಯೂ ಆ ನಗರದ ಐಶ್ವರ್ಯವನ್ನೂ ಶಿಲ್ಪಿಗಳ ಕೌಶಲವನ್ನೂ ಉಗ್ಗಡಿಸುವಂತೆ ಶಿಲಾಮಯವಾದ ದೇವಸ್ಥಾನಗಳೂ ಅರಮನೆಗಳೂ ಕಂಗೊಳಿಸುತ್ತಿದ್ದುವು, ಅದೇ ಕಾಲದಲ್ಲಿ ಇನ್ನೊಂದು ಭಾಗದಲ್ಲಿ ಈ ಧನಿಕರ ಭೋಗಾರ್ಥವಾಗಿ ಕಲ್ಲು ಗಣಿಗಳಲ್ಲಿಯೂ ಹಲವು ಕೈಗಾರಿಕೆಗಳಲ್ಲಿಯೂ ದುಡಿಯುತ್ತಿದ್ದ ಬಡಕೆಲಸಗಾರರ ಮಣ್ಣು ಮನೆಗಳು ಧನಿಕರಿಗೂ ದರಿದ್ರರಿಗೂ ಇದ್ದ ಮಹತ್ತಾದ ಅಂತರವನ್ನು ವ್ಯಕ್ತಪಡಿಸುತ್ತ ಗೋಚರಿಸುತ್ತಿದ್ದುವು.

ಆ ಮೇರೆ ಯೂಸೂಫ್‌ಖಾನನು ಎಲ್ಲವನ್ನೂ ನೋಡುತ್ತ ಜನ ನಿಬಿಡವಾದ ಆ ರಾಜಮಾರ್ಗದಲ್ಲಿ ಕುದುರೆಯನ್ನು ಮೆಲ್ಲಗೆ ಬಿಟ್ಟುಕೊಂಡು ಎರಡು ಮೂರು ಮೈಲಿ ದೂರ ಸಂದು ಅರಮನೆಯ ಅಗಸೆಬಾಗಿಲ ಬಳಿಗೆ ಹೋಗಿ ಸೇರಿದನು. ಆ ರಾಜಮಂದಿರವೂ ಕೂಡ ಆ ಪಟ್ಟಣದಲ್ಲಿದ್ದ ಇತರಗಳಾದ ದೊಡ್ಡ ದೊಡ್ಡ ಕಟ್ಟಡಗಳಂತೆಯೇ ಘನವಾದ ಶಿಲೆಗಳಿಂದ ನಿರ್ಮಿತವಾಗಿದ್ದಿತು. ಆ ಪಟ್ಟಣದ ತಳದಲ್ಲಿದ್ದ ಬಂಡೆಗಳು ಕಟ್ಟಡಗಳಿಗೆ ಉತ್ತಮವಾದ ಶಿಲೆಗಳನ್ನು ಸಮೃದ್ಧಿಯಾಗಿ ಒದಗಿಸುತ್ತಿದ್ದುದು ಮಾತ್ರವೇ ಅಲ್ಲದೆ ಆ ನಗರಕ್ಕೆ ಘನವಾದ ಒಂದು ಅಸ್ತಿಭಾರವನ್ನೂ ಸಹ ಒದಗಿಸುತ್ತಿದ್ದುವು ಯೂಸೂಫ್‌ಖಾನನು ಸೈನಿಕರಿಂದ ರಕ್ಷಿತವಾಗಿದ್ದ ರಾಜಮಂದಿರದ ಹೊರಗಣ ಐದು ಹೆಬ್ಬಾಗಿಲುಗಳನ್ನೂ ದಾಟಿ, ತರುವಾಯ ದ್ವಾರಪಾಲಕರ ಕಾವಲಲ್ಲಿದ್ದ ನಾಲ್ಕು ಬಾಗಿಲುಗಳನ್ನೂ ಕಳೆದು, ವಿಸ್ತಾರವಾದ ಅಂಗಳಕ್ಕೆ ಹೋಗಿ ಸೇರಿದನು. ಆ ಅಂಗಳವು ತಣ್ಣಗೆ ನೀರನ್ನು ಹಾರಿಸುತ್ತಿದ್ದ ಕಾರಂಜಿಗಳಿಂದಲೂ, ತಣ್ಣೆಳಲಿಂದ ಕೂಡಿದ ಮರಗಳ ಗುಂಪಿನಿಂದಲೂ, ಅಮೃತಶಿಲಾಸ್ತಂಭಗಳಿಂದ ಸೊಗಸುತ್ತಿದ್ದ ಕೈಸಾಲೆಗಳ ಸುತ್ತಿನಿಂದಲೂ, ಮಧ್ಯಾಹ್ನದ ಬಿಸಿಲ ಬೇಗೆಯನ್ನು ನಿವಾರಿಸುತ್ತ ಆಹ್ಲಾದಕರವಾಗಿ ಕಂಗೊಳಿಸುತ್ತಿತ್ತು. ಅಲ್ಲಿಗೆ ಸೇರಿದ ಕೂಡಲೆ ದೂತನು ಯೂಸೂಫ್‌ಖಾನನನ್ನು ಕುರಿತು—ನೀವು ತಂದಿರುವ ಸರಕುಗಳನ್ನು ಕೋಶಾಧ್ಯಕ್ಷರು ಬಂದು ಪರಾಮರಿಸುವ ವರೆಗೂ ನೀವು ಇಲ್ಲಿಯೇ ಇರಬೇಕು—ಎಂದು ಹೇಳಿ ಹೊರಟುಹೋದನು ಆ ದುರಹಂಕಾರಿಯಾದ ಕೋಶಾಧ್ಯಕ್ಷನು, ಆ ಕಾಲದಲ್ಲಿ ತನಗೆ ಯಾವ ಕೆಲಸವೂ ಇಲ್ಲದೆ ಇದ್ದರೂ ಕೂಡ, ಆ ಕಪಟ ವರ್ತಕನನ್ನು ತತ್‌ಕ್ಷಣವೇ ತನ್ನ ಬಳಿಗೆ ಬರಮಾಡಿಕೊಳ್ಳುವುದು ತನ್ನ ಗೌರವಕ್ಕೆ ಕಡಿಮೆಯೆಂದೆಣಿಸಿ ಕಾಲವಿಳಂಬ ಮಾಡಿ ಕಾಯಿಸುತ್ತಿದ್ದನು. ಇಷ್ಟರೊಳಗಾಗಿ ಆ ಅಧಿಕಾರಿಯನ್ನು ಮಹಾರಾಜನೇ ಕರೆಯಿಸಿಕೊಂಡನು ಹಾಗೆ ಅವನು ಸಮ್ಮುಖಕ್ಕೆ ಹೋದ ಕೂಡಲೆ—ಮಹಾಸ್ವಾಮಿ, ನರೆತಗಡ್ಡದ ತುರ್ಕಿಯ ವರ್ತಕನೊಬ್ಬನು ಬಾಗಿಲಲ್ಲಿ ಕಾದಿರುವನು—ಎಂಬುದಾಗಿ ಅರಿಕೆಮಾಡಿದನು. ರಾಮರಾ

ಜನಿಗೆ ಕುಶಲಕಾರ್ಯಗಳು ಎಂದರೆ ಬಹು ಪ್ರೇಮ ; ಆದುದರಿಂದ ವರ್ತಕರು ಯೂರೋಪಿನಿಂದ ತಂದಿರುವ ವಸ್ತುಗಳನ್ನು ಆಗಲೇ ನೋಡಬೇಕೆಂದು ಅಪೇಕ್ಷಿಸಿ " ಅವನನ್ನು ಅಂತಃಪುರದ ಮುಖಮಂಟಪಕ್ಕೆ ಕರೆದುಕೊಂಡು ಬನ್ನಿ. ಅಲ್ಲಿ ನಾನೂ ಸರಸ್ವತೀದೇವಿಯೂ ಅವನು ತಂದಿರುವ ಪದಾರ್ಥಗಳನ್ನೆಲ್ಲಾ ನೋಡುವೆವು " ಎಂದು ಅಪ್ಪಣೆ ಮಾಡಿದನು.

ಕೂಡಲೆ ಯೂಸೂಫ್‌ಖಾನನನ್ನು ಮುಖಮಂಟಪಕ್ಕೆ ಕರೆದುಕೊಂಡುಹೋದರು ಆ ಮಂಟಪವು ಹಿಂದೂ ಶಿಲ್ಪಿಗಳ ಅದ್ಭುತವಾದ ಚಾತುರ್ಯಕ್ಕೆ ನಿದರ್ಶನವಾಗಿ ಅತ್ಯಾಶ್ಚರ್ಯಕರನಾಗಿತ್ತು. ಅದರೊಳಗಡೆ ಸುತ್ತಲೂ ಶ್ವೇತ ಶಿಲಾಸ್ತಂಭಗಳು ರಂಜಿಸುತ್ತಿದ್ದುವು. -- ಅದರ ಮೇಲು ಛಾವಣಿಯು ಒಳಮೈಯ್ಯು ದಂತದಿಂದ ಮಾಡಿದ್ದರೋ ಎಂಬಂತೆ ಮಿರುಗುತ್ತಿದ್ದ ಗಾರೆಯಿಂದ ಶೋಭಿಸುತ್ತಿತ್ತು. ಅದರಲ್ಲಿ ಬಹು ಚಮತ್ಕಾರವಾಗಿ ಕೆತ್ತಿದ್ದ ಸಾವಿರಾರು ಕನ್ನಡಿಯ ಬಿಲ್ಲೆಗಳು ಎಂಟು ಕಡೆಗೂ ಬೆಳಕನ್ನು ಮುಕ್ಕುಳಿಸುತ್ತ ತಳತಳಿಸುತ್ತಿದ್ದುವು. ಇಂದ್ರಚಾಪದ ವರ್ಣವಿಲಾಸಗಳನ್ನೆಲ್ಲಾ ಮುಂದಿಡುವಂತೆ ಹೊಳೆಹೊಳೆಯುತ್ತಿದ್ದ ನಾನಾ ವಿಧವಾದ ರತ್ನಗಳಿಂದ ಅಲಂಕರಿಸಲ್ಪಟ್ಟ ಅದರ ಭಿತ್ತಿಗಳಲ್ಲಿ ರಾಮಾಯಣದ ಕಥಾವೃತ್ತಾಂತಗಳೆಲ್ಲವೂ ಚಿತ್ರಿತವಾಗಿದ್ದುವು. ಇಷ್ಟೊಂದು ಮನೋಹರವಾದ ಆ ಮಂಟಪಕ್ಕೆ ಯೂಸೂಫನು ಹೋದ ಸ್ವಲ್ಪ ಕಾಲಕ್ಕೆಲ್ಲಾ ಮಹಾರಾಜನು ತನ್ನ ಪತ್ನಿಯಾದ ಸರಸ್ವತೀದೇವಿಯೊಡನೆ ಬಂದನು, ವ್ಯಜನಹಸ್ತರಾದ ನಾಲ್ವರು ಪರಿಚಾರಿಣಿಯರು ಬಂದು ಮಹಾರಾಜನಿಗೂ ರಾಣಿಗೂ ತಂಗಾಳಿಯನ್ನು ಬೀಸುತ್ತ ನಿಂತರು. ಆ ಕಾಲದಲ್ಲಿ ಉಟ್ಟಿದ್ದ ದಿವ್ಯವಸ್ತ್ರಗಳಿಂದಲೂ ಕಿರೀಟದಲ್ಲಿ ಪ್ರಜ್ವಲಿಸುತ್ತಿದ್ದ ಅನರ್ಘವಾದ ರತ್ನಗಳಿಂದಲೂ ಈತನೇ ಮಹಾರಾಜನಿರಬೇಕೆಂದು ತಿಳಿದು ಯೂಸೂಫ್‌ಖಾನನು ಎದ್ದು ನಿಂತು ಮುಜರೆಮಾಡಿದನು ಮಹಾರಾಜನು ಇನ್ನೂ ಮಧ್ಯವಯಸ್ಕನಾಗಿದ್ದನು. ತಿದ್ದಿದಂತೆ ಎಸಳೆಸಳಾಗಿದ್ದ ಆತನ ಮುಖಭಾವವನ್ನು ನೋಡಿದರೆ ಅವನಲ್ಲಿ ಅಹಂಕಾರವೇ ಮುಖ್ಯವಾದ ಗುಣವೆಂದು ಯಾವ ಸಾಮುದ್ರಿಕನಿಗಾದರೂ ತೋರದಿರದು. ಆತನೂ ಆತನ ರಾಣಿಯು ಪರಿಚಾರಿಣಿಯರೂ ಸಹ ಯೂಸೂಫ್‌ಖಾನನು ತೋರಿಸಿದ ಯೂರೋಪ್‌ದೇಶದ ಕೈಗಾರಿಕೆಯ ಪದಾರ್ಥಗಳನ್ನು ಬಹು ಕುತೂಹಲದಿಂದ ಪರೀಕ್ಷಿಸಿ ನೋಡಿದರು. ಯೂಸೂಫ್‌ಖಾನನು ತಾನು ತಂದಿದ್ದ ವಿಚಿತ್ರವಾದ ಗೊಂಬೆ ಸಾಮಾನುಗಳನ್ನು ಹೇಗೆ ಮಾಡಿದ್ದಾರೆಂದು ಚೆನ್ನಾಗಿ ತಿಳಿಸಲಾರದೆ ಹೋದನು. ಇದರಿಂದ ಅವರು ಯಾವ ವಿಧವಾಗಿಯೂ ಅನುಮಾನಪಡದ ದೇಶಭಾಷೆ ತಿಳಿಯದುದರಿಂದ ಹೇಳಲಾರದೆ ಹೋಗಿರಬೇಕೆಂದು ಭಾವಿಸಿಕೊಂಡರು.

ಆ ಪರಿಚಾರಿಣಿಯರಲ್ಲಿ ಬಹು ರೂಪವತಿಯಾದ ಹದಿನೈದು ವಯಸ್ಸಿನ ಹುಡುಗಿಯೊಬ್ಬಳಿದ್ದಳು. ಅವಳು ಪುಣ್ಯವಂತನಾದ ಒಬ್ಬ ತುರ್ಕಿ ಸೈನಿಕನ

ಮಗಳು. ಆ ಸೈನಿಕನು ಕೆಲವು ಸಂವತ್ಸರಗಳ ಹಿಂದೆ ತನ್ನ ಹೆಂಡತಿ ಮಕ್ಕಳೊಡನೆ ಹಿಂದೂ ದೇಶಕ್ಕೆ ಬಂದು ಅಹಮದ್ ನಗರದ ಹುಸೇನ್ ನೈಜಾಂ ಷಾಹನ ಕೈಕೆಳಗೆ ಕೆಲಸದಲ್ಲಿ ನಿಂತನು. ಅವನು ಕೆಲಸಕ್ಕೆ ಬಂದು ಇನ್ನೂ ವರ್ಷವಾಗುವುದಕ್ಕೆ ಮುಂಚೆಯೇ ಅವನ ವಶದಲ್ಲಿದ್ದ ಗಡಿಗೋಟೆಯನ್ನು ವಿಜಯನಗರದ ಸೈನಿಕರು ಲಗ್ಗೆ ಹತ್ತಿ ಹಿಡಿದುಕೊಂಡು ಬಿಟ್ಟರು. ಆ ಲಗ್ಗೆಯಲ್ಲಿ ಆ ತುರುಕಸೈನಿಕನು ಮಡಿದುಹೋದನು; ಅವನ ಪತ್ನಿಯು ಆತ್ಮಹತ್ಯ ಮಾಡಿಕೊಂಡು ಪ್ರಾಣಬಿಟ್ಟಳು. ಅನಾಥೆಯಾದ ಅವರ ಮಗಳಾದ ಅಯೇಷೆಯನ್ನು ವಿಜಯನಗರಕ್ಕೆ ಸೆರೆಹಿಡಿದುಕೊಂಡು ಹೋದರು. ಅಲ್ಲಿ ಮಹಾರಾಣಿ ಸರಸ್ವತೀದೇವಿಯು ಆ ಹುಡುಗಿಯ ಸೌಂದರ್ಯಕ್ಕೆ ಮೆಚ್ಚಿ ಅವಳನ್ನು ಅಂತಃಪುರದಲ್ಲಿ ತನ್ನ ಪರಿಜನದಲ್ಲಿ ಸೇರಿಸಿಕೊಂಡಳು. ಆ ಹುಡುಗಿಯು ಇಷ್ಟುದೂರವಾದ ಪರದೇಶದಲ್ಲಿ ತಮ್ಮ ದೇಶದವನ ಮುಖವನ್ನು ಕಂಡಕೂಡಲೆ ವಿಜಾತೀಯವಾದ ಮನೋಭಾವಗಳಿಗೆ ಎಡೆಯಾದುದೂ, ತಮ್ಮ ಸೀಮೆಯ ನಾನಾ ವಿಧವಾದ ಪ್ರಕೃತಿ ವಿಶೇಷಗಳನ್ನು ಎಂದರೆ ಗೋಲ್ಡನ್‌ಹಾರನನ್ನೂ ಬಾಸ್ಫೊರಸ್ ಸಮುದ್ರದ ನೀಲತರಂಗಗಳನ್ನೂ ಮತ್ತು ತನ್ನ ಬಾಲಕ್ರೀಡೆಗಳನ್ನೂ ಸಹ ನೆನೆದುಕೊಂಡುದೂ ಏನೂ ಆಶ್ಚರ್ಯವಲ್ಲ. ಅವಳು ಲಗ್ಗೆಯ ಕಾಲದಲ್ಲಿ ಪಟ್ಟ ಕಷ್ಟಗಳಿಂದಲೂ, ತಮ್ಮ ತಂದೆಯ ಕೈಯಲ್ಲಿದ್ದ ಕೋಟೆ ಹೋದುದರಿಂದಲೂ, ತನಗೆ ವಿರೋಧಿಗಳಾಗಿಯೂ ವಿಗ್ರಹಾರಾಧಕರಾಗಿಯೂ ಇದ್ದವರ ನಡುವೆ ತಾನು ತೊತ್ತಿನಂತೆ ಬದುಕಬೇಕಾಗಿ ಬಂದುದರಿಂದಲೂ ಅವಳ ಕಣ್ಣಿಗೆ ಹಿಂದೂದೇಶವು ಬಹು ಘೋರವಾಗಿ ಕಾಣಿಸುತ್ತಿತ್ತು. ಆದಕಾರಣ ಯೂಸೂಫ್‌ಖಾನನನ್ನು ಕಂಡಕೂಡಲೆ ಅವಳಿಗೆ ಸ್ವದೇಶಕ್ಕೆ ಹೋಗಬೇಕೆಂಬ ಅಪೇಕ್ಷೆಯುಂಟಾಯಿತು. ತನ್ನ ಮನೋಗತವನ್ನು ನೆರವೇಉಸಲು ಈ ವರ್ತಕನು ಸಹಾಯಮಾಡನೇ ಎಂದು ಮೊದಲಾಗಿ ಆ ಹುಡುಗಿಯ ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆಗಳು ತರಂಗ ತರಂಗವಾಗಿ ಉಕ್ಕುತ್ತಿದ್ದುವು. ಆ ಸಮಯಕ್ಕೆ ಸರಿಯಾಗಿ ರಾಣಿಯು ವರ್ತಕನ ಮಾತನ್ನು ಚೆನ್ನಾಗಿ ತಿಳಿಯಲಾರದೆ ಆ ಹುಡುಗಿಯನ್ನು ಕರೆದು ತನಗೆ ಆ ಮಾತನ್ನು ತಿಳಿಯಹೇಳು ಎಂದಳು.

"ಅಯೇಷಾ, ನಿನಗೆ ತುರುಕಮಾತು ಬರುತ್ತದೆಯಲ್ಲಾ. ಇವನಿಗೆ ಈ ವಿಚಿತ್ರವಾದ ಕೆತ್ತನೆ ನಗವೆಲ್ಲಿ ಸಿಕ್ಕಿತು. ಇದಕ್ಕೆ ಕಡಿಮೆಯಾದ ಬೆಲೆಯೇನು ಹೇಳುತ್ತಾನೆ ಕೇಳು" ಎಂದು ರಾಣಿ ಹೇಳುತ್ತಲೆ, ಅವಳು ವರ್ತಕನ ಸಮೀಪಕ್ಕೆ ಹೋಗಿ ತುರುಕಿನಲ್ಲಿ ನಾಲ್ಕಾರು ಮಾತನಾಡಿ ಹಿಂತಿರುಗಿ ಬಂದು ಆ ನಗವು ಇಟಲಿದೇಶದಿಂದ ಬಂದಿದೆಯಂತೆ; ಅದು ನೀರೋ ಎಂಬ ಅಲ್ಲಿಯ ಚಕ್ರವರ್ತಿಗೆ ಸೇರಿದುದಂತೆ! ಒಂದು ಲಕ್ಷ ರೂಪಾಯಿಗೆ ಕಡಿಮೆಯಾಗಿ ಅದನ್ನು ಯಾರಿಗೂ ಕೊಡಲೊಲ್ಲನಂತೆ! ಆದರೆ ಅದನ್ನು ನಮ್ಮ ಮಹಾರಾಜರವರಿಗೆ ಒಪ್ಪಿಸುವಂತೆ ಅಪ್ಪಣೆಯಾದರೆ ತಾನು ಧನ್ಯನಾಗುವನಂತೆ—ಎಂದು ತಿಳಿಸಿದಳು. ಮಹಾರಾ

ಜನು ಅನುಗ್ರಹಿಸಿ ಅದನ್ನು ಸ್ವೀಕರಿಸಿದನು. ಆಗ ವರ್ತಕನೊಡನೆ ಮಾತನಾಡು ವಂತೆ ಪುನಃ ಅಯೇಷೆಗೆ ಅಪ್ಪಣೆಯಾಯಿತು. ಆ ಕಾಲದಲ್ಲಿ ಅವಳು ಮಾತನಾ ಡುತ್ತ, ಅವನು ಹೊರಡುವ ಸಮಯದಲ್ಲಿ ಅವನನ್ನು ಭಾವಗರ್ಭಿತವಾದ ನೋಟ ದಿಂದ ನೋಡುತ್ತ " ನಿನ್ನ ಒಡವೆಗಳೇನೋ ಬಹಳ ಬೆಲೆಯುಳ್ಳವುಗಳೇ ಸರಿ ; ಆದರೂ ಧೀರನಾದವನು ಸಮರಾತ್ರಿಯಲ್ಲಿ ದೊಡ್ಡ ದೇವಸ್ಥಾನದ ಬಾಗಿಲ ಬಳಿ ಯಲ್ಲಿದ್ದರೆ ಅವುಗಳಿಗಿಂತಲೂ ಬೆಲೆಯಾದ ವಸ್ತುವನ್ನು ಪಡೆಯಬಹುದು " ಎಂದು ಹೇಳಿದಳು. ತುರುಕಮಾತಿನಲ್ಲಿ ಹೇಳಿದ ಈ ಮಾತುಗಳು ಅವನಿಗೆ ಹೊರತು ಮತ್ತಾರಿಗೂ ತಿಳಿಯಲಿಲ್ಲವಾದುದರಿಂದ, ಅವರೆಲ್ಲರೂ ಅದು ಏನೋ ಒಡವೆಯ ವಿಷಯವಾದ ಮಾತಾಗಿರಬೇಕೆಂದು ಯೋಚಿಸಿಕೊಂಡು ಸುಮ್ಮನಿದ್ದುಬಿಟ್ಟರು. ಮಹಾರಾಜನು ವರ್ತಕನನ್ನು ನೋಡಿ--ನಮ್ಮ ವಿಜಯನಗರದ ಸೇನೆಯು ಬಿಜಾಪುರದ ಮತ್ತು ಅಹಮದ್ ನಗರದ ಮಸೀದಿಗಳನ್ನೆಲ್ಲಾ ಧ್ವಂಸಮಾಡಿ ಈ ಯುದ್ಧವನ್ನು ಮುಗಿಸಿದ ಕೂಡಲೆ, ನೀನು ಗೋವೆಯಲ್ಲಿಟ್ಟಿರುವ ನಿನ್ನ ಒಡವೆಗಳ ನ್ನೆಲ್ಲಾ ತೆಗೆದುಕೊಂಡು ಬಾ—ಎಂದು ಅಪ್ಪಣೆಮಾಡಿದನು. ತರುವಾಯ ವರ್ತ ಕನು ಆ ಕೆತ್ತನೆಯ ನಗವನ್ನೂ ಮಹಾರಾಜನು ಕೊಂಡುಕೊಂಡ ಕೇವು ಬೇರೆ ಒಡವೆಗಳನ್ನೂ ಅಲ್ಲಿಯೇ ಇಟ್ಟು ಹೊರಟುಬಂದನು.

ಅಲ್ಲಿಂದ ಹೊರಟು ಯೂಸೂಫ್‌ಖಾನನು ಅತಿಥಿಮಂದಿರದಲ್ಲಿ ತನಗೆ ಬಿಡಾ ರಮಾಡಿಕೊಟ್ಟಿದ್ದ ಕೊಟಡಿಗೆ ಬಂದು ಆ ಹುಡುಗಿಯು ತನಗೆ ಹೇಳಿದ ಮಾತುಗ ಳಿಗೆ ಅರ್ಥವೇನಿರಬಹುದೆಂದು ಪುನಃಪುನಃ ಯೋಚನೆ ಮಾಡುತ್ತಿದ್ದನು. ಆ ಹುಡು ಗಿಯ ಸೌಂದರ್ಯವೂ ಆ ಗೂಢಾರ್ಥವುಳ್ಳ ಮಾತುಗಳನ್ನು ಆಡುವ ಕಾಲದಲ್ಲಿ ನೋಡಿದ ಅವಳ ಕಣ್ಣಕರಿಯಾಲಿಯ ಹೊಳೆಪೂ ಅವನ ಮನಸ್ಸಿನಲ್ಲಿ ಏನೋ ಒಂದು ವಿಧವಾದ ವಿಕಾರವನ್ನುಂಟುಮಾಡಿರಬಹುದು. ಇದು ಹೇಗಾದರೂ ಇರಲಿ ; ಅವನು ಕೊಟಡಿಗೆ ಬಂದೊಡನೆ ಹೊರಹೊರಟು ವಿಜಯನಗರದಲ್ಲೆಲ್ಲಾ ದೊಡ್ಡ ದಾದ ದೇವಾಲಯವು ಯಾವುದು ಎಂದು ವಿಚಾರಿಸಿದನು. ಅಲ್ಲಿಯ ಶಿವಾಲಯವೇ ಎಲ್ಲಕ್ಕೂ ಭಾರಿಯಾದುದೆಂದು ತಿಳಿಯಬಂದಿತು. ಬಳಿಕ ತಾನು ಸಮರಾತ್ರಿಯಲ್ಲಿ ಅಲ್ಲಿದ್ದು ಆ ಗೂಢವಾಕ್ಯಗಳ ಭಾವವನ್ನು ತಿಳಿಯಬೇಕೆಂದು ಗೊತ್ತುಮಾಡಿಕೊಂ ಡನು. ಈ ನಡುವೆ ಊರನ್ನೆಲ್ಲಾ ಸುತ್ತಿ ಏನೇನು ಯುದ್ಧಸನ್ನಾಹಗಳು ನಡೆಯು ತ್ತವೆಯೋ ನೋಡಬೇಕೆಂದು ಹೊರಟನು.

ಅವನು ಆ ಪಟ್ಟಣದ ಹಾದಿಗಳಲ್ಲಿ ನೋಡುತ್ತ ಹೋಗುವಲ್ಲಿ ಯಾವ ಕಡೆ ನೋಡಿದಾಗ್ಗೂ ಯುದ್ಧಸನ್ನಾಹಗಳು ನಡೆಯುತಿದ್ದ ಹಾಗೆ ಕಾಣಬಂದಿತು. ಅಲ್ಲಿ ಸೇರುತಿದ್ದ ಸೈನ್ಯಗಳು ಕೂಡಲೆ ಯುದ್ಧರಂಗಕ್ಕೆ ಹೊರಡುವುದರಲ್ಲಿದ್ದಂತೆ ಅವನಿಗೆ ಅನುಭವದಿಂದ ಗೊತ್ತಾಯಿತು. ಎಲ್ಲೆಲ್ಲಿಯೂ ಕಾಲಾಳುಗಳು ತುಂಬಿಹೋಗಿದ್ದು ದರಿಂದ ಅವರ ಗಣತಿ ಇಷ್ಟೆಂದು ಸುಮಾರಾಗಿ ಗೊತ್ತುಮಾಡುವುದು ಕೂಡ ಸಾಧ್ಯ

ವಾಗಲಿಲ್ಲ. ಕುದುರೆಯ ಸೈನ್ಯವು 20,000 ಕ್ಕೆ ಕಡಿಮೆಯಾಗಿರಲಿಲ್ಲ. ಫಿರಂಗಿ ಸೈನ್ಯದವರಲ್ಲಿ ಸುಮಾರು 1,000 ಫಿರಂಗಿಗಳಿದ್ದುವು. ಈ ಸೇನೆಯ ಸಮೀಪದಲ್ಲಿ 1,000 ಯುದ್ಧದಾನೆಗಳಿದ್ದುವು. ಯೂಸೂಫ್‌ಖಾನನಿಗೆ ಇವುಗಳನ್ನು ಗಣನೆ ಮಾಡುವುದು ಕಷ್ಟವಾಗಲಿಲ್ಲ. ಕುಲುಮೆಗಳು ಹಗಲೂ ರಾತ್ರಿಯೂ ಉರಿಯುತಿದ್ದುವು. ಯುದ್ಧಕಾರ್ಯಕ್ಕೆ ಬೇಕಾದ ಆಯುಧ ಸಾಮಗ್ರಿಗಳನ್ನು ರಾತ್ರಿ ಬಹಳ ಹೊತ್ತಿನವರೆಗೂ ಮಾಡುತ್ತಲೇ ಇದ್ದರು. ಅರ್ಧರಾತ್ರಿಯ ವೇಳೆಗೆ ಈ ಗದ್ದಲವೆಲ್ಲಾ ಅಡಗಿ ನಗರವು ನಿಶ್ಶಬ್ದವಾಗಿ ನಿದ್ರಿಸುವಂತಿತ್ತು. ಆಗ ಯೂಸೂಫನು ಹಿಂದಿರುಗಿದವನಾಗಿ ಶಿವಾಲಯದ ಮಹಾದ್ವಾರದ ಬಳಿಗೆ ಬಂದು, ಅಲ್ಲಿ ಒಂದು ಬಂಡೆಯಮೇಲೆ ಕುಳಿತುಕೊಂಡು, ಮುಂದೆ ಏನು ನಡೆಯುವುದೋ ಎಂದು ಕುತೂಹಲದಿಂದ ಇದಿರುನೋಡುತ್ತ ಕುಳಿತುಕೊಂಡಿದ್ದನು.

ಆ ರಾತ್ರಿಯಲ್ಲಿ ಗಾಳಿಯ ಹೊಡೆತದಿಂದ ಎಡೆಬಿಡದೆ ಚಲಿಸುತ್ತಿದ್ದ ಅರಳಿ ಮರದೆಲೆಯ ಸದ್ದೊಂದು ವಿನಾ ಮತ್ತೊಂದು ಸದ್ದು ಕೇಳದೆ, ಎಲ್ಲವೂ ನಿಶ್ಶಬ್ದವಾಗಿ ಮೂಗುವಟ್ಟಿತ್ತು. ಅವನ ಸುತ್ತುಮುತ್ತಲೂ ಕಾಣುತ್ತಿದ್ದ ಪ್ರತಿವಸ್ತುವೂ ಅತ್ಯಾಕಾರವಾಗಿಯೂ ಅದ್ಭುತವಾಗಿಯೂ ಭೀತಿದಾಯಕವಾಗಿಯೂ ಇತ್ತು. ಅವನೆದುರಿಗೆ ಮಹಾದ್ವಾರದ ಮೇಲ್ಗಡೆಯಲ್ಲಿ ಕಂಗೊಳಿಸುತ್ತಿದ್ದ ಗೋಪುರವು ಅತ್ಯುನ್ನತವಾಗಿ ಇನ್ನೂರಡಿಗಳ ನೀಳಕ್ಕೆ ನಿಂತಿತ್ತು. ಆ ದೇವಸ್ಥಾನದ ಎತ್ತರವಾದ ಪೌಳಿಗಳ ಮಧ್ಯದಲ್ಲಿ ಬೆಳದಿಂಗಳಿಂದ ವ್ಯಕ್ತವಾಗಿ ಕಾಣುತ್ತಿದ್ದ ಮೂವತ್ತು ನಾಲ್ವತ್ತಡಿ ನೀಳವಾದ ಕಲ್ಲುಹಲಿಗೆಗಳನ್ನು ನೋಡಿದರೆ, ಅವು ಭೂತ ಭೇತಾಳಗಳ ಸಹಾಯದಿಂದ ನಿರ್ಮಿತವಾದ ಗೋಡೆಗಳೇ ಹೊರತು ಸಾಮಾನ್ಯ ಮನುಷ್ಯನಿಂದ ಸಾಗಿದ ಕಾರ್ಯವೆಂದು ತೋರುತ್ತಿರಲಿಲ್ಲ. ಆ ಮಹಾದ್ವಾರದ ಮುಂದುಗಡೆ ಒಂದೇ ಬಂಡೆಯಿಂದ ಮಾಡಿದ ಆನೆಯಷ್ಟು ತೋರದ ಒಂದು ಕಲ್ಲುಬಸವನಿದ್ದಿತು. ಅದರ ಪಕ್ಕದಲ್ಲಿ ಅದಕ್ಕಿಂತಲೂ ಭಾರಿಯಾಗಿ ಶಿಲಾಮಯವಾದನೃಸಿಂಹವಿಗ್ರಹಒಂದು ನಿಂತಿತ್ತು. ಅದು ಇಪ್ಪತ್ತುಮೊಳ ಎತ್ತರವಾಗಿತ್ತು. ಅದರ ಶಿರೋಭಾಗದಲ್ಲಿ ಶಿಲಾಮಯವಾದ ಒಂದು ಸರ್ಪವು ತನ್ನ ಹೆಡೆಗಳನ್ನು ಬಿಚ್ಚಿಕೊಂಡಿತ್ತು. ಆ ದೇವಸ್ಥಾನದ ಕಲ್ಲುಗೆಲಸ ಮರಗೆಲಸಗಳಲ್ಲಿ ಯಾವುದನ್ನು ನೋಡಿದರೂ ಕೂಡ ವಿಚಿತ್ರವಿಚಿತ್ರವಾಗಿ ಹೆಣೆದುಕೊಂಡಿದ್ದ ಸರ್ಪಗಳ ಆಕಾರವೇ ಕಾಣಿಸುತ್ತಿತ್ತು. ಆ ದೇವಸ್ಥಾನದ ಮುಂದುಗಡೆಯಲ್ಲಿ ನೆರಳುಹಾಕುತ್ತಿದ್ದ ವೃಕ್ಷಗಳು ಕೂಡ ಇದೇ ರೀತಿಯಲ್ಲಿ ನಿರ್ಮಿತವಾದಂತೆ ತೋರುತ್ತಿದ್ದುವು; ಏಕೆಂದರೆ ತಿರುಚುಮುರಿಚಾಗಿ ನುಲಿದು ಹೆಣೆದುಕೊಂಡಿದ್ದ ಅವುಗಳ ಬೇರುಗಳು ಬೆಳದಿಂಗಳ ಮಾಸಲು ಬೆಳಕಿನಲ್ಲಿ ನುಲಿದುಕೊಂಡಿದ್ದ ಹಾವುಗಳಂತೆ ಕಾಣಬರುತ್ತಿದ್ದುವು. ಇಷ್ಟಕ್ಕೂ ಮೇಲೆ ಯೂಸೂಫ್‌ಖಾನನಿದ್ದ ಸ್ಥಳದ ಸುತ್ತುಮುತ್ತಲೂ ಅಸಂಖ್ಯಾತ ದೇವತೋಪಾಸಕರಾದ ಹತ್ತುಲಕ್ಷ ಹಿಂದೂ ಜನರು ನಿದ್ರಾಮುದ್ರಿತರಾಗಿ ಮಲಗಿದ್ದರು. ಈ ದೇವರುಗ

ಳನ್ನೆಲ್ಲಾ ಸೈತಾನರೆಂದು ಭಾವಿಸುತ್ತಿದ್ದ ಆ ತುರಕರವನು ತಾನು ಹಿಂದೂರಾಜನ ಅರಮನೆಯಲ್ಲಿ ಹಠಾತ್ತಾಗಿ ಕಂಡ ತನ್ನ ದೇಶದ ಹುಡುಗಿಯ ಆಗಮನವನ್ನು ಎದುರು ನೋಡುತ್ತ ಒಂಟಿಯಾಗಿ ಆ ಅಪೂರ್ವವಾದ ಸನ್ನಿವೇಶದಲ್ಲಿ ಕುಳಿತಿದ್ದ ಕಾಲದಲ್ಲಿ ಅವನ ಮನಸ್ಸಿನಲ್ಲಿ ಒಂದು ವಿಧವಾದ ಕಾತರವುಂಟಾಯಿತೆಂಬುದೇನೂ ಆಶ್ಚರ್ಯವಲ್ಲ.

ಅವನು ಹಾಗೆ ಬಹಳಕಾಲ ಕಾದಿರಬೇಕಾಗಿರಲಿಲ್ಲ. ಅವನು ಮೈಯೆಲ್ಲಾ ಕಣ್ಣಾಗಿ ಆ ಹುಡುಗಿಯು ಯಾವ ಕಡೆ ಏನು ಸನ್ನೆ ಮಾಡುವಳೋ ಎಂದು ನೋಡುತ್ತ ಕುಳಿತುಕೊಂಡ ಸ್ವಲ್ಪಕಾಲಕ್ಕೆಲ್ಲಾ ಪಾರ್ಶ್ವದಲ್ಲಿದ್ದ ಬಿಲ್ವದ ತೋಪಿನಲ್ಲಿ ಮೃದುವಾದ ಕಂಠದಲ್ಲಿ ಒಂದು ತುರುಕುಮಾತಿನ ಹಾಡನ್ನು ಹಾಡಿದಂತೆ ಕೇಳಬಂದಿತು ಅವನು ಅದೇ ಸಣ್ಣ ದನಿಯಲ್ಲಿಯೇ ಆ ಹಾಡಿನ ಪಲ್ಲವಿಯನ್ನು ಹಾಡುತ್ತ ಆ ತೋಪಿನ ಕಡೆಗೆ ಹೋದನು. ಅಲ್ಲಿ ಅವನು ಬೆಳಗ್ಗೆ ರಾಜಮಂದಿರದಲ್ಲಿ ರಾಣಿಯಪರಿಜನರ ಜತೆಯಲ್ಲಿ ಕಂಡ ಆ ತುರುಕರ ಹುಡುಗಿಯು ಮುಖದ ಪರದೆಯನ್ನು ಹಾಕಿಕೊಂಡು ಬಂದು ಕಾದಿದ್ದಳು. ಆ ಹುಡುಗಿಯು ಇವನನ್ನು ಕಂಡಕೂಡಲೆ ತಾನು ಅಂಥ ಅಕಾಲದಲ್ಲಿ ಪರಪುರುಷನೊಡನೆ ಸಂಭಾಷಣೆಮಾಡಲು ಬಂದಿದ್ದ ಸಾಹಸಕ್ಕಾಗಿ ತಾನೇ ನಾಚಿಕೆಪಟ್ಟುಕೊಂಡು, ಸ್ವಲ್ಪಕಾಲ ಮಾತನಾಡಲಾರದೆ ಹೋಗಿ ಬಳಿಕ ಚೇತರಿಸಿಕೊಂಡು, ನೆಲವನ್ನು ನೋಡುತ್ತ ನಿಂತು ಹೀಗೆಂದಳು:—

ಅಯ್ಯಾ ಸ್ವದೇಶಬಂಧುವೆ, ನಾನು ನಾಚಿಕೆಯನ್ನು ಬಿಟ್ಟು ಈ ರೀತಿಯಾಗಿ ನಿನ್ನೊಡನೆ ಮಾತನಾಡಲಿಕ್ಕೆ ಬಂದುದನ್ನು ನೋಡಿ ಏನು ಯೋಚಿಸುವೆಯೋ ಕಾಣೆನು. ನಾನು ಏನು ಮಾಡಲಿ, ನನ್ನ ತಾಯಿತಂದೆಗಳನ್ನು ಕೊಂದುಹಾಕಿದ ಈ ನೀಚರಾಜನ ಅರಮನೆಯಲ್ಲಿ ಈ ವಿಗ್ರಹಾರಾಧಕರಾದ ಪರದೇಶಿಗಳ ನಡುವೆ ಸಿಕ್ಕಿಕೊಂಡು ಈ ಹನ್ನೆರಡುತಿಂಗಳೂ ನಾನು ಎಂತಹ ಬಾಳು ಬಾಳಿರುವೆನೋ ಯೋಚಿಸಿ ನೋಡು. ಇದನ್ನೆಲ್ಲಾ ಯೋಚಿಸಿ ನೋಡಿದ ಮೇಲೆಯೂ ನಾನು ನನಗೆ ಕರ್ಣಾನಂದಕರವಾದ ತುರುಕುಮಾತಿನಲ್ಲಿ ಮಾತನಾಡುವ ಒಬ್ಬ ಮಹಮ್ಮದೀಯನೊಡನೆ ಈರೀತಿ ಸಂಭಾಷಣೆಮಾಡ ಬಂದುದು ತಪ್ಪೆಂದು ನಿನಗೆ ತೋರಿದರೆ ನನ್ನನ್ನು ಇಲ್ಲಿಯೇ ಕೊಂದುಹಾಕಿಬಿಡು. ಈಗ ನಾನು ಬಾಳುವ ಹೆಣದ ಬಾಳಿಗಿಂತಲೂ ನಿಜವಾದ ಸಾವೇ ಮೇಲು. ಹಾಗಲ್ಲದೆ ನೀನು ಈ ನನ್ನ ತಪ್ಪಿತವನ್ನು ಕ್ಷಮಿಸುವುದಾದರೆ ನನ್ನನ್ನು ಈ ಹಾಳೂರಿನಿಂದ ಹೊರಗೆ ಕರೆದುಕೊಂಡು ಹೋಗಲು ಸಹಾಯ ಮಾಡುವೆಯಾ ಹೇಳು. ನನ್ನನ್ನು ನನ್ನ ಸ್ವದೇಶಕ್ಕೇ ಕರೆದುಕೊಂಡು ಹೋಗಬೇಕಾದುದಿಲ್ಲ; ಬಿಜಾಪುರಕ್ಕಾದರೂ ಸರಿಯೆ, ಇಲ್ಲವೇ ಮುಸಲ್ಮಾನರ ಆಳಿಕೆಗೊಳಪಟ್ಟು ಅಲ್ಲಾಪೂಜೆ ನಡೆಯುವ ಇಂಡಿಯಾ ದೇಶದ ಮತ್ತಾವ ಭಾಗಕ್ಕಾದರೂ ಸರಿಯೆ, ಕರೆದುಕೊಂಡು ಹೋದರೆ ಸಾಕು— ಎಂದಳು.

ಅದಕ್ಕೆ ಖಾನನು—ತಂಗಿ, ನಿನ್ನ ನಡತೆಯನ್ನು ಯಾರೂ ನಿಂದಿಸರು. ತಂದೆ ತಾಯಿಗಳ ಪೋಷಣೆಯಲ್ಲಿ ಮಹಮ್ಮದೀಯರ ಮನೆತನದಲ್ಲಿ ಸುಖವಾಗಿ ಬೆಳೆದ ಹುಡುಗಿಯ ವಿಷಯದಲ್ಲಿ ಯಾವ ನಡತೆ ಅನುಚಿತವೆಂದು ತೋರಬಹುದೋ ಅದೇ ನಡತೆಯು ಈ ವಿಗ್ರಹಾರಾಧಕರಿಗೆ ತೊತ್ತಾಗಿ ಸಿಕ್ಕುಬಿದ್ದ ನಿನ್ನಂಥವಳ ವಿಷಯದಲ್ಲಿ ಸ್ತೋತ್ರಾರ್ಹವಾಗಿಯೇ ಇರುವುದು ಯಾವ ಮುಸಲ್ಮಾನನೂ ವಿಗ್ರಹಪೂಜಕರ ನೊಗಕ್ಕೆ ಬಹುಕಾಲವೂ ಕೊರಳೊಡ್ಡಿ ನಿಲ್ಲುವುದು. ಅಲ್ಲನಿಗೆ ಇಷ್ಟವಾಗಿರಲಾರದು—ಎಂದು ಮೃದುವಾಗಿ ನುಡಿದನು.

"ಹಾಗಾದರೆ ನನಗೆ ಸಹಾಯಮಾಡಿ ಹೇಗಾದರೂ ಈ ಹಾಳೂರಿನಿಂದ ನನ್ನನ್ನು ಹೊರಕ್ಕೆ ಕರೆದುಕೊಂಡು ಹೋಗು. ವಿಗ್ರಹಪೂಜೆಗೂ ಅಹಂಕಾರಕ್ಕೂ ನೆಲೆಯಾದ ಈ ಊರು ಎಂದಾರೂ ಹಾಳಾಗುವುದೇನೋ ಖಂಡಿತ" ಎಂದು ಅವಳು ಹೇಳಿದಳು.

ಯೂಸೂಫ್‌ಖಾನನು ಒಂದು ನಿಮಿಷಕಾಲ ಆಲೋಚನೆಯಲ್ಲಿ ಮಗ್ನನಾಗಿದ್ದು ಬಳಿಕ ಹೀಗೆಂದನು:—ಎಲೌ ತಂಗಿ. ನೀನು ಅಪರಿಚಿತೆಯಾದರೂ ನನ್ನ ಪ್ರಾಣಗಳನ್ನು ನಿನ್ನ ಕೈಯಲ್ಲಿಟ್ಟು ಹೇಳುವೆನು ಕೇಳು. ನಾನು ನಿಜವಾಗಿಯೂ ವರ್ತಕನಲ್ಲ: ನಾನೊಬ್ಬ ಸೈನಿಕನು. ವಿಜಯನಗರದ ಸೈನ್ಯದ ಬಲಾಬಲಗಳನ್ನೂ ಇಲ್ಲಿಯ ರಾಜನ ಯುದ್ಧಕಾರ್ಯದ ಏರ್ಪಾಡುಗಳನ್ನೂ ತಿಳಿದುಕೊಂಡು ಬರುವುದಕ್ಕಾಗಿ ಬಿಜಾಪುರದ ಸುಲ್ತಾನನ ಬಳಿಯಿಂದ ಇಲ್ಲಿಗೆ ಬಂದಿರುವೆನು. ನನ್ನ ಸಂಗತಿ ತಿಳಿದುಹೋದರೆ ನನಗೆ ಮರಣವೇ ಸಿದ್ಧ. ನಾನು ಇಲ್ಲಿ ಸಿಕ್ಕಿದಷ್ಟು ಸಮಾಚಾರವನ್ನು ತೆಗೆದುಕೊಂಡು ಮೆಲ್ಲಗೆ ತಲೆತಪ್ಪಿಸಿಕೊಂಡು ಹೋಗಿ ಸೇರಿದರೆ ಈ ಹಿಂದೂ ಸಂಸ್ಥಾನದ ಮೇಲೆ ಬೀಳಲು ಬರುತ್ತಿರುವ ಮಹಮ್ಮದೀಯರಾಜರಿಗೆ ಬಹಳ ಸಹಾಯವಾಗಬಹುದು. ನಾಳೆಯ ರಾತ್ರಿಯೊಳಗಾಗಿ ನನಗೆ ಸಿಕ್ಕಬಹುದಾದ ಸಂಗತಿಗಳನ್ನೆಲ್ಲಾ ಶೇಖರಮಾಡಲು ಸಾಧ್ಯವೆಂದು ತಿಳಿದುಕೊಂಡಿದ್ದೇನೆ ಮಾರುದಿನ ಬೆಳಗ್ಗೆ ವಿಜಯನಗರವನ್ನು ಬಿಟ್ಟು ಹೊರಡಬೇಕೆಂದಿದ್ದೇನೆ ನೀನು ಅರಮನೆಯಿಂದ ಪುನಃ ಹೊರಗೆ ಬರುವುದಕ್ಕಾದರೆ ಒಬ್ಬ ಸೇವಕನಂತೆ ವೇಷಹಾಕಿಕೊಂಡು ತುಂಗಭದ್ರೆಯ ಕಲ್ಲುಸೇತುವೆಗಾಚೆ ಒಂದು ಮೈಲಿಯ ದೂರದಲ್ಲಿ ನನ್ನ ಜತೆಗೆ ಬಂದುಸೇರು. ನೀನು ಇಷ್ಟುಮಾತ್ರ ಮಾಡಿದರೆ, ನಾನು ನನ್ನ ಕತ್ತಿಯನ್ನು ನಿನ್ನ ಸೇವೆಯಲ್ಲಿ ವಿನಿಯೋಗಿಸಿ ನಿನ್ನನ್ನು ಸುರಕ್ಷಿತವಾಗಿ ಬಿಜಾಪುರಕ್ಕಾದರೂ ಕರೆದುಕೊಂಡು ಹೋಗುವೆನು. ಇಲ್ಲವೇ ನಿನ್ನ ರಕ್ಷಣೆಗಾಗಿ ನನ್ನ ಪ್ರಾಣವನ್ನಾದರೂ ಒಪ್ಪಿಸುವೆನು—ಎಂದನು.

"ನನ್ನನ್ನು ಪುನಃ ಹೊರಗೆ ಬಿಡುವುದಕ್ಕಾಗಿ ದ್ವಾರಪಾಲಕನಿಗೆ ಈ ನನ್ನ ಉಳಿದಿರುವೊಂದು ಒಡವೆಯನ್ನೂ ಲಂಚವಾಗಿ ಕೊಡುವೆನು. ನಾನು ಪುನಃ ಬಿಜಾಪುರದ ಮಾರ್ಗದಲ್ಲಿ ಬಂದು ಸೇರುವವರೆಗೆ ಇದೇ ನನ್ನ ಕಡೆಯ ಸಲಾಮು"

ಎಂದು ಹೇಳಿ ಹೊರಟವಳು ಪುನಃ ಹಿಂತಿರುಗಿಬಂದು—" ಈ ಯುದ್ಧದ ವಿಷಯ ವಾಗಿ ನಾನು ತಿಳಿಸತಕ್ಕ ಸಂಗತಿಯೇನೂ ಇಲ್ಲವೆ ? ಈ ಮಂದಭಾಗ್ಯೆಯಾದ ನನ್ನ ಕಥೆಗಿಂತಲೂ ಆ ವಿಷಯವು ನಿಮಗೆ ಆದರಾರ್ಹವಾಗಿರುವುದರಲ್ಲಿ ಸಂದೇಹ ವಿಲ್ಲ. ನಿನ್ನೆಯದಿನ ಮಹಾರಾಜನು ತಾನು ಮಹಮ್ಮದೀಯರ ರಾಜ್ಯವನ್ನು ನಿರ್ಮೂಲಿಸುವುದಕ್ಕೆ ಹಲವು ಉಪಾಯಗಳನ್ನು ಮಾಡಿರುವುದಾಗಿ ತನ್ನ ರಾಣಿ ಯೊಡನೆ ಗುಟ್ಟಾಗಿ ಹೇಳಿಕೊಳ್ಳುತ್ತಿದ್ದನು ನಿಮ್ಮ ಸೇನೆಯಲ್ಲಿ ಸಿದ್ದ—ಸಿದ್ದಿ— ಏನೋ ಒಂದು ಎಂಬ ಅಬಿಸೀನಿಯಾದವ ನಿಲ್ಲವೆ? ಅವನ ಇನ್ನೊಂದು ಹೆಸರು ನನಗೆ ಮರೆತುಹೋಯಿತು. ಆ ಹೆಸರೇನು ?

" ಹರ್ಸ—ಸಿದ್ದಿ ಹರ್ಸ—ಅವನ ಸಮಾಚಾರವೇನು ? " "ಅಹುದು. ಸಿದ್ದಿ ಹರ್ಸ ಅದೇ ಅವನ ಹೆಸರು. ಅವನು ರಾಜದ್ರೋಹಿ ಅವನು ಬಿಜಾಪುರದ ಸೇನೆಯನ್ನು ಇಂಗುಲಗಿ ಕಡುವಿನ ಬಳಿಗೆ ಕರೆದುಕೊಂಡು ಬರುವುದಾಗಿ ಮಾತು ಕೊಟ್ಟಿದ್ದಾನಂತೆ. ಆ ಬಳಿ ಮಹಮ್ಮದೀಯ ಸೇನೆಯನ್ನೆಲ್ಲಾ ಧ್ವಂಸಮಾಡುವುದ ಕ್ಕಾಗಿ ಒಂದುಕಡೆ ಮರೆಯಾಗಿ ಸಾವಿರ ಫಿರಂಗಿಗಳು ಸಿದ್ಧವಾಗಿವೆಯಂತೆ. "

" ತಂಗಿ, ಇದು ಅನರ್ಘವಾದ ಸಮಾಚಾರವು. ನಾವು ಸುರಕ್ಷಿತವಾಗಿ ಈ ಸುದ್ದಿಯನ್ನು ಬಿಜಾಪುರಕ್ಕೆ ತೆಗೆದುಕೊಂಡು ಹೋದಲ್ಲಿ, ನಿನಗೆ ಬೇಗಂರವರ ಆ ಸ್ಥಾನದಲ್ಲಿ ವಿಶೇಷವಾಗಿ ಮರ್ಯಾದೆ ನಡೆಯುವುದು. ರಾಮರಾಜನು ತನ್ನ ರಾಣಿಗೆ ಹೇಳಿದುದು ಇನ್ನೇನಾದರೂ ಜ್ಞಾಪಕವಿದೆಯೆ ? "

" ಅವನು ಮಹಮ್ಮದೀಯರನ್ನು ನಿರ್ಮೂಲಮಾಡುವೆನೆಂದು ಆಡಿಕೊಂಡು ಹೆಮ್ಮೆ ಮಾತುಗಳೂ, ಪಾಪಕರವಾದ ಅವನ ಸಂತೋಷದ ಹಿಗ್ಗೂ ವಿನಾ ನನಗೆ ಇನ್ನೇನೂ ಜ್ಞಾಪಕವಿಲ್ಲ. ಇದೋ ಸಲಾಂ ಮಾಡುವೆನು. ನಾನು ಅರಮನೆ ಯಲ್ಲಿ ಇಲ್ಲದುದು ತಿಳಿದುಬಿಟ್ಟರೆ—" ಎಂದು ಅರೆಮಾತಿನಲ್ಲಿಯೇ ಹೊರಟು ಹೋದಳು.

ಅನಂತರ ಯೂಸೂಫ್ ಖಾನನು ಅತಿಥಿಮಂದಿರಕ್ಕೆ ಬಂದನು. ಅಲ್ಲಿಗೆ ಬಂದ ಕೂಡಲೆ ಅವನನ್ನು ನಗರರಕ್ಷಕರ ಮುಖಂಡನು ಹಿಡಿದುಕೊಂಡು ಹೋಗಿ ಸೆರೆಯಲ್ಲಿಟ್ಟುಬಿಟ್ಟನು. ರಾಜನು ಆದಿನ ಬೆಳಗ್ಗೆ ತಾನು ತೆಗೆದ ಆಭರಣಗಳನ್ನೆಲ್ಲಾ ತನ್ನ ಕೋಶಾಧ್ಯಕ್ಷನಿಗೆ ತೋರಿಸಿದನು. ಆತನು ಅವುಗಳನ್ನು ನೋಡುತ್ತ ಇರು ವಾಗ ಒಂದನ್ನು ತಾನು ಹಿಂದೆ ಬಿಜಾಪುರದ ಅರಮನೆಯಲ್ಲಿ ನೋಡಿದುದಾಗಿ ಹೇಳಿದನು. ಈ ಮಾತನ್ನು ಕೇಳಿದಕೂಡಲೆ ರಾಜನಿಗೆ ಸಂದೇಹವುಂಟಾಗಿ, ವರ್ತ ಕನ ಉದ್ದೇಶವನ್ನು ಊಹಿಸಿಕೊಂಡು ಕೂಡಲೆ ನಗರಾಧ್ಯಕ್ಷನನ್ನು ಕರೆಯಿಸಿ—

ಈಗಲೇ ಹೋಗಿ ಅತಿಥಿಮಂದಿರಕ್ಕೆ ಬಂದಿರುವ ವರ್ತಕನ ತಲೆಯನ್ನು ಹೊಯ್ಸಿಬಿಡು. ಬೇಡ ಬೇಡ, ಸ್ವಲ್ಪ ಇರು ; ಅವನನ್ನು ಭದ್ರವಾಗಿ ಸೆರೆಯಲ್ಲಿಡು.

ನಾವು ಬಿಜಾಪುರದಿಂದ ವಿಜಯೋತ್ಸವದಲ್ಲಿ ಹಿಂದಿರುಗಿದಾಗ ಇವನನ್ನೂ ಇವನಂತಹ ಸಾವಿರಾರು ಮಹಮ್ಮದೀಯ ನೀಚರನ್ನೂ ನಮ್ಮ ಆನೆಗಳ ಕಾಲುಗಳಿಗೆ ಕಟ್ಟಿ ತುಳಿಸಿಬಿಡೋಣ — ಎಂದು ಅಪ್ಪಣೆ ಕೊಟ್ಟನು.

ಆದುದರಿಂದ ನಗರರಕ್ಷಕರು ಯೂಸೂಫ್‌ಖಾನನನ್ನು ಹಾಗೆಯೇ ಹಿಡಿದುಕೊಂಡು ಹೋಗಿ ಸೆರೆಯಲ್ಲಿಟ್ಟು - ಮಹಾರಾಜರ ಆನೆಗಳು ಯುದ್ಧದಿಂದ ಹಿಂದಿರುಗಿ ಬಂದು ನಿನ್ನನ್ನೂ ನಿನ್ನಂತೆ ಸೆರೆಸಿಕ್ಕುವ ಮುಸಲ್ಮಾನರನ್ನೂ ತುಳಿದುಹಾಕುವುದಕ್ಕೆ ಸಿದ್ಧವಾಗುವ ವರೆಗೂ ನಿನಗೆ ಬಂಧವಿಮೋಚನವಿಲ್ಲ ಎಂದು ಅವನಿಗೆ ತಿಳಿಸಿದರು.

ಇಲ್ಲಿ ಹೀಗಿರುತ್ತಿರಲು ಅಲ್ಲಿ ಕೃಷ್ಣಾತೀರದಲ್ಲಿ ಎರಡು ಲಕ್ಷದಷ್ಟು ಸೇನೆ ಸೇರುತ್ತಿತ್ತು. ಇಂಗುಳಿಗೆ ಕಡುವಿನ ತೆಂಕಲಿಗೆ ಸ್ವಲ್ಪದೂರದಲ್ಲಿ ಉತ್ತರತೀರದಲ್ಲಿದ್ದವರಿಗೆ ಕಾಣಿಸದಂತೆ ರಾಮರಾಯನ ದೊಡ್ಡಸೇನೆಯು ಪಾಳೆಯ ಹಾಕಿಕೊಂಡಿತು. ಆ ಸ್ಥಳಕ್ಕೇ ತುರುಕರ ಸೇನೆಯನ್ನು ಕರೆದುಕೊಂಡು ಬರಬೇಕಾಗಿತ್ತು. ಕಡುವಿನ ಪೂರ್ವಪಶ್ಚಿಮ ಬಾಗಗಳಲ್ಲಿ ವಿಜಯನಗರದ ಫಿರಂಗಿಗಳನ್ನು ಸಾಲಾಗಿ ನಿಲ್ಲಿಸಿ, ಕಣ್ಣಿಗೆ ಕಾಣಿಸದಂತೆ ಬಹು ಚಮತ್ಕಾರವಾಗಿ ಮರೆಮಾಡಿ, ಅವೆಲ್ಲಕ್ಕೂ ಮದ್ದು ಗುಂಡುಗಳನ್ನು ಹಾಕಿ, ಶತ್ರುಗಳು ಹೊಳೆಯನ್ನು ದಾಟುವಾಗ ಏಕಕಾಲದಲ್ಲಿ ಉಭಯ ಪಾರ್ಶ್ವದಿಂದಲೂ ಗುಂಡುಗಳನ್ನು ಹಾರಿಸಿ ಅವರನ್ನೆಲ್ಲಾ ಧ್ವಂಸಮಾಡಿಬಿಡಲು ಸಿದ್ಧಪಡಿಸಿಕೊಂಡಿದ್ದರು. ಈ ಅಪಾಯವನ್ನರಿಯದೆ ಮಹಮ್ಮದೀಯರಾಜರು ಮುಂದುವರಿದು ಹತ್ತಿರಹತ್ತಿರಕ್ಕೆ ಬರುತ್ತಿದ್ದರು. ಆ ಅಬಿಸೀನಿಯದ ದ್ರೋಹಿಯು ತಾನೇ ಬೇಹು ನೋಡುವುದಾಗಿ ಕೇಳಿಕೊಂಡು, ಆ ಕಡುವನ್ನು ದಾಟಿ, ನೋಡಿ ಹಿಂದಿರುಗಿ ಹೋಗಿ, ಆ ಬಳಿ ಶತ್ರುಗಳ ಸುಳಿವೇ ಇಲ್ಲವೆಂದು ಅರಿಕೆಮಾಡಿ, ಬಿಜಾಪುರದ ಸೈನ್ಯದ ಮುಂಚೂಣಿಯನ್ನು ತಾನೇ ನಡಿಸಿಕೊಂಡು ಬಂದನು. ಇವನ ಮುಂಗಡೆಯ 40,000 ಸೈನ್ಯವನ್ನು ಕಡುವಿನ ಈಚೆಯ ದಡಕ್ಕೆ ಕರೆದುಕೊಂಡು ಬಂದ ಕೂಡಲೆ ತನ್ನ ಕುದುರೆಯನ್ನು ಓಡಿಸಿಕೊಂಡು ಹಿಂದೂಸೇನೆಯ ಸೇನಾಮುಖಕ್ಕೆ ಬಂದುಬಿಡಬೇಕೆಂದು ಇವನೂ ರಾಮರಾಜನೂ ಮೊದಲೇ ಏರ್ಪಾಡುಮಾಡಿಕೊಂಡಿದ್ದರು. ಇವನು ಬಂದುಬಿಡುವ ಸನ್ನೆಯನ್ನೇ ನೋಡಿಕೊಂಡಿದ್ದು ಏಕಕಾಲದಲ್ಲಿ ಸಾವಿರ ಫಿರಂಗಿಗಳನ್ನು ಹಾರಿಸಿ ಗುಂಡಿನಮಳೆ ಸುರಿಸಿ ಉತ್ತರತೀರದಿಂದ ಸಹಾಯ ಬಂದೊದಗುವುದರೊಳಗಾಗಿ ಕಡುವಿನಲ್ಲಿದ್ದ ಸೇನೆಯಷ್ಟನ್ನೂ ಸುಟ್ಟುಬಿಡಬೇಕೆಂದು ಆಲೋಚನೆಮಾಡಿದ್ದರು.

ಸಿದ್ದಿಹಸನನು ತನ್ನ ಕರಿಯ ಕುದುರೆಯ ಮೇಲೇರಿಕೊಂಡು ಬಿಜಾಪುರದ ಸೇನೆಯ ಮುಂದೆ ಬರುತ್ತಿದ್ದನು. ಅವನ ಪಕ್ಕದಲ್ಲಿ ಯೂಸೂಫ್‌ಖಾನನ ಮಿತ್ರನಾದ ಮೊಗಲ್ ಸವಾರನೂ ಬರುತ್ತಿದ್ದನು. ಈತನು ಈ ಮಹಾಯುದ್ಧದಲ್ಲಿ ತಾನೂ ಅನ್ವಯಿಸುವೆನೆಂದು ತಾನಾಗಿ ಕೇಳಿಕೊಂಡುದರ ಮೇಲೆ ಇವನಿಗೆ ಸೇನೆ

ಯ ಮುಂಭಾಗದಲ್ಲಿ ಗೌರವಾರ್ಹವಾದ ಒಂದು ಅಧಿಕಾರವನ್ನು ಕೊಟ್ಟಿದ್ದರು. ಇವರು ಇನ್ನೇನು ಹೊಳೆಯ ದಡಕ್ಕೆ ಬಂದರು ಎನ್ನುವ ವೇಳೆಗೆ ಸರಿಯಾಗಿ ಪೂರ್ವ ದಿಕ್ಕಿನಿಂದ ಯಾವನೋ ಒಬ್ಬ ಸವಾರನು ದಾರಿ ನಡೆದು ನಡೆದು ಬಳಲಿ ಕಂಗೆಟ್ಟಿದ್ದ ತನ್ನ ಕುದುರೆಯನ್ನು ಮಹಾ ಪ್ರಯತ್ನದಿಂದ ಮುಂದು ಮುಂದಕ್ಕೆ ಅಟ್ಟುತ್ತ ಬರುತ್ತಿದ್ದಹಾಗೆ ಕಾಣಿಸಿತು. ಆ ಸವಾರನು ಹಾಗೆ ಬರುವುದಕ್ಕೆ ತಕ್ಕ ಕಾರಣವೂ ಇತ್ತು. ಏಕೆಂದರೆ ಆ ಸವಾರನೇ ಯೂಸೂಫ್‌ಖಾನನು. ಅವನು ವಿಜಯನಗರದ ಸೆರೆಯಿಂದ ತಪ್ಪಿಸಿಕೊಂಡು ಬಂದಿದ್ದನು; ತಾನು ಬರುವುದು ಸ್ವಲ್ಪ ತಡವಾದರೆ ಕೆಲಸ ಕೈ ಮೀರಿಹೋಗಿ ಸಾವಿರಾರು ಮಂದಿ ಮುಸಲ್ಮಾನರು ಬಲಿಯಾಗಿ ಹೋಗುವುದು ಅವನಿಗೆ ಚನ್ನಾಗಿಯೂ ಗೊತ್ತಿತ್ತು. ಆದುದರಿಂದ ಅವನು ಅಷ್ಟೊಂದು ತವಕದಿಂದ ಬರುತ್ತಿದ್ದನು. ಇತ್ತ ಅಬಿಸೀನಿಯದವನು ಸುಮ್ಮನೆ ಕಾಲವಿಳಂಬ ಮಾಡದೆ ಮುಂದೆ ಕಡುವನ್ನು ಹಾಯಬೇಕೆಂದು ಬಲಾತ್ಕರಿಸುತ್ತಿದ್ದನು. ಅವನ ಪಕ್ಕದಲ್ಲಿದ್ದ ಮೊಗಲನು ಅದಕ್ಕೆ ಒಡಂಬಡದೆ—ಆ ಸವಾರನು ಬರುವವರೆಗೂ ನಿರೀಕ್ಷಿಸೋಣ. ಅವನು ಏನಾದರೂ ವಿಶೇಷ ಸಮಾಚಾರವನ್ನು ತಂದಿದ್ದರೂ ಇರಬಹುದು—ಎಂದು ಹೇಳಿ ತಡೆದನು ಈ ಚರ್ಚೆ ನಡೆಯುತ್ತಿರುವಾಗಲೇ ಯೂಸೂಫ್‌ಖಾನನು ಮತ್ತಷ್ಟು ಹತ್ತಿರಕ್ಕೆ ಬಂದನು. ಕೂಡಲೆ ಅವನು ಇಂಥವನೆಂದು ಅವರಿಗೆ ತಿಳಿಯಿತು. ಆಗ ಅವನು—

ಅಲ್ಲನಿಗೆ ವಂದನೆಯಿರಲಿ! ನನ್ನನ್ನು ಸಕಾಲಕ್ಕೆ ಇಲ್ಲಿಗೆ ತಂದನಲ್ಲಾ! ಎಂದು ಕೂಗಿಕೊಂಡು, ಸಿದ್ಧಿಹಸನನ ಕಡೆಗೆ ತಿರುಗಿದನು.

ಹಸನನು ತನ್ನ ಕತ್ತಿಗೆ ಕೈಹಾಕುತ್ತ ಕಡುವಿಗೆ ಇಳಿಯುವಂತೆ ತನ್ನ ಸೇನೆಗೆ ಅಪ್ಪಣೆ ಮಾಡಿದನು.

ಅದನ್ನು ಕೇಳಿ ಖಾನನು—ಎಲೋ ಅಬಿಸೀನಿಯದ ನಾಯೇ, ಸೇನೆಯನ್ನು ಒಡನೆ ಹಿಂತಿರುಗುವಂತೆ ಮಾಡು, ಇಲ್ಲವೆ ಇಲ್ಲಿಯೇ ರಾಜದ್ರೋಹಿಗೆ ತಕ್ಕ ಮರಣವನ್ನು ಹೊಂದುವೆ —ಎಂದು ಗಟ್ಟಿಯಾಗಿ ಕೂಗಿಕೊಂಡನು.

ಅದಕ್ಕೆ ಸಿದ್ಧಿಹಸನನು—ನನ್ನ ಪರಿವಾರದವರನ್ನು ದಂಗೆಯೆಬ್ಬಿಸಿ ನನಗೆ ಅಪ್ಪಣೆಮಾಡುವುದಕ್ಕೆ ನೀನು ಯಾವನೋ?—ಎಂದು ಆಕ್ಷೇಪಿಸಿ, ತನ್ನ ಕತ್ತಿಯನ್ನು ಹಿರಿದುಕೊಂಡು ತನ್ನ ಗುಟ್ಟನ್ನು ಹೊರಪಡಿಸುವುದಕ್ಕೆ ಮುಂಚೆಯೇ ಯೂಸೂಫ್‌ಖಾನನನ್ನು ಕೊಂದುಬಿಡಬೇಕೆಂದು ಅವನ ಮೇಲೆ ನುಗ್ಗಿದನು. ಆದರೆ ತುರ್ಕಿಯವನು ಮಹಾಜಾಗರೂಕನಾದುದರಿಂದ ತನ್ನ ಅಂಗಿಯಲ್ಲಿ ಮರಸಿಟ್ಟಿದ್ದ ಕೈಕೋವಿಯನ್ನು ತಟ್ಟನೆ ಕೈಗೆ ತೆಗೆದುಕೊಂಡು ಹಸನನು ಕತ್ತಿಯೆತ್ತಿದ ಕೂಡಲೆ ಅವನೆದೆಗೆ ಸರಿಯಾಗಿ ಗುರಿಕಟ್ಟಿ ಸುಟ್ಟುಬಿಟ್ಟನು. ಕೂಡಲೆ ಹಸನನು ಸತ್ತುಬಿದ್ದನು.

ಆ ಕಾಲದಲ್ಲಿ ಮೊಗಲನು ಮಾತ್ರ ಸಹಾಯಕ್ಕೆ ಬಾರದಿದ್ದರೆ ಯೂಸೂಫ್

ಖಾನನ ಪಾಡು ಏನಾಗಿ ಹೋಗುತ್ತಿತ್ತೊ ! ತಿಳಿಯದು. ಬಿಜಾಪುರದ ಸೇನೆಯು ವರು ಅಲ್ಲಿ ಏನುಸಂಗತಿ ನಡೆಯಿತೋ ತಿಳಿಯದೆ, ತಮ್ಮ ಸೇನಾಪತಿ ಹತನಾದು ದನ್ನು ಮಾತ್ರ ಕಂಡು ಆರ್ಭಟಿಸುತ್ತ, ಯೂಸೂಫ್‌ಖಾನನ ಸುತ್ತಲೂ ಸುತ್ತಿ ಕೊಂಡು ಅವನನ್ನು ಕೊಂದುಬಿಡುವುದರಲ್ಲಿದ್ದರು. ಅಷ್ಟರಲ್ಲೇ ಮೊಗಲನು ಯೂಸೂಫ್‌ಖಾನನ ಕತ್ತಿಕೋವಿಗಳನ್ನು ತೆಗೆದುಕೊಂಡು ಅವರನ್ನು ಸಮಾಧಾನ ಪಡಿಸಿ, ಅವನನ್ನು ವಿಚಾರಿಸುವುದಾಗಿ ಭರವಸೆಕೊಟ್ಟು, ಅದೇಮೇರೆ ಯೂಸೂಫ್ ಖಾನನನ್ನು ಸುಲ್ತಾನನ ಬಳಿಗೆ ಕರೆದುಕೊಂಡು ಹೋದನು. ಅಲ್ಲಿ ಖಾನನು ವಿಜ ಯನಗರದಲ್ಲಿ ನಡೆದ ಸಂಗತಿಯನ್ನೆಲ್ಲಾ ಸಾಂಗವಾಗಿ ತಿಳಿಸಿದನು. ಯೂಸೂಫ್ ಖಾನನನ್ನು ಸೆರೆಯಲ್ಲಿ ಹಾಕಿದ ಸಮಾಚಾರವನ್ನು ಕೇಳಿ ಅಯೋಷೆಯು ಮೊದಲು ಮೊದಲು ನಿರಾಶೆಯಾಗಿ ನಿಂತು, ಬಳಿಕ ಸರ್ವಪ್ರಕಾರದಿಂದಲೂ ಯತ್ನಮಾಡಿ ಅವನನ್ನು ಬಿಡಿಸಬೇಕೆಂದು ಸಂಕಲ್ಪಮಾಡಿಕೊಂಡು, ಅವನು ಸೆರೆಗೆಬಿದ್ದ ಒಂದು ವಾರದೊಳಗಾಗಿ ಪ್ರಯತ್ನಮಾಡಿ, ಅಲ್ಲಿ ಹಿಂದು ವೇಷದಲ್ಲಿದ್ದ ಒಬ್ಬ ಮುಹಮ್ಮ ದೀಯ ಕಾವಲುಗಾರನಿಗೆ ಅಪಾರವಾಗಿ ಲಂಚಕೊಟ್ಟು ಯೂಸೂಫ್‌ಖಾನನನ್ನು ಬಿಡುಗಡೆಮಾಡಿಸಿ, ಅವನ ಕತ್ತಿ ಕೋವಿಗಳನ್ನು ಅವನಿಗೇ ಕೊಡಿಸಿ. ಒಂದು ಒಳ್ಳೆ ಕುದುರೆಯನ್ನು ಸಹಾ ಒದಗಿಸಿಕೊಡುವಂತೆ ಏರ್ಪಾಡು ಮಾಡಿದಳು. ಆ ಕಾಲ ದಲ್ಲಿ ವಿಜಯನಗರದಲ್ಲಿ ರಾಜನೂ ಇಲ್ಲದೆ ಸೇನೆಯೂ ಇಲ್ಲದೆ ಅನಾಯಕವಾಗಿದ್ದ ಪ್ರಯುಕ್ತ, ಸೆರೆಯಿಂದ ತಪ್ಪಿಸಿಕೊಂಡು ಹೋಗುವುದು ವಿಶೇಷ ಕಷ್ಟವಾಗಿರಲಿಲ್ಲ. ಆದರೆ ಅವನು ಬಿಜಾಪುರಕ್ಕೆ ಹೋಗುವಾಗ ಮಾತ್ರ ಎಲ್ಲಾ ಕಡೆಯಲ್ಲಿಯೂ ಹರಡಿ ಕೊಂಡಿದ್ದ ವಿಜಯನಗರದ ಸೈನ್ಯದಕ್ಕೈಗೆ ಸಿಕ್ಕಿಕೊಳ್ಳದಹಾಗೆ ಬಹುದೂರ ಬಳಸಾದ ಹಾದಿಯಲ್ಲಿ ಸುತ್ತಿಕೊಂಡು ಹೋಗಬೇಕಾಯಿತು. ಆದಪ್ರಯುಕ್ತವೇ ಅವನು ಮುಹ ಮ್ಮದೀಯ ಸೇನೆಯ ಅಪಾಯವನ್ನು ತಪ್ಪಿಸುವುದಕ್ಕಾಗಿ ಇಂಗುಲಿಗಿ ಕಡುವಿನ ಬಳಿಗೆ ಬರುವುದಕ್ಕೆ ಬಲು ತಡವಾಗಿ, ಸಮಯಕ್ಕೆ ಸರಿಯಾಗಿ ಬರುವುದೇ ದುಸ್ತರ ವಾಗಿಹೋಯಿತು. ಈ ಮೇರೆ ತನ್ನ ವೃತ್ತಾಂತವನ್ನೆಲ್ಲಾ ಹೇಳಿ ಮುಗಿಸುವುದ ರೊಳಗಾಗಿ, ಇವನ ಮಾತಿಗೆ ಸಾಕ್ಷಿಯಾಗಿ ಎದುರುದಡದಲ್ಲಿ ವಿಜಯನಗರದ ಸೈನಿ ಕರುಗಳು ಸಹಸ್ರೋಪಸಹಸ್ರವಾಗಿ ಕಾಣಿಸಿಕೊಂಡು, ಸಮೀಪದಲ್ಲಿ ಹೊಳೆಯ ಜೋಡಿನಲ್ಲಿ ಮರಸಿಕೊಂಡಿದ್ದ ಗೂಢಚಾರರು ಆಬಿಸೀನಿಯನು ಹತನಾದ ಸಂಗತಿ ಯನ್ನು ತಿಳಿದು ರಾಮರಾಜನ ಬಳಿಗೆ ಹೋಗಿ ಅರಿಕೆಮಾಡಿದರು. ಈ ಪ್ರಕಾರ ವಾಗಿ ಮರೆಹುಯಿಲಿನ ಪ್ರಯತ್ನವು ಕೈಗೂಡಲಿಲ್ಲವೆಂದು ತಿಳಿದಕೂಡಲೆ, ರಾಮ ರಾಜನು ತನ್ನ ಸೈನಿಕರನ್ನು ಮುಂದುವರಿಸಿ ಆಚೆಯ ದಡದ ಶತ್ರುಗಳಮೇಲೆ ಗುಂಡುಹೊಡೆಯುವಂತೆ ಆಜ್ಞಾಪಿಸಿದನು. ಅತ್ತ ಅಬಿಸೀನಿಯನ ಮೈಯನ್ನು ಹುಡುಕಿಸಿ ನೋಡುವಲ್ಲಿ ಅವನ ಪಾಗಿನ ಒಳಗಡೆಯಲ್ಲಿ ಗುಟ್ಟಾಗಿ ಕಟ್ಟಿದ್ದ ಒಂದು ವಿಜಯನಗರದ ಕಾಗದವು ಸಿಕ್ಕಿ ಅವನ ದ್ರೋಹವು ಮತ್ತಷ್ಟು ವ್ಯಕ್ತವಾಗಿ ದೃಢ

ಪಟ್ಟಿತು. ಆದುದರಿಂದ ಅವರು ಹಸನನ ಹೆಣವನ್ನು ಕೂಡ ಮಣ್ಣು ಮಾಡದೆ, ಅ ಕಾಲದಲ್ಲಿ ಉಭಯಸೈನ್ಯವನ್ನೂ ಅನುಸರಿಸಿ ಬರುತ್ತಿದ್ದ ರಣಹದ್ದುಗಳ ಫಲಾಹಾರಕ್ಕೆ ಬಿಟ್ಟು ಹಿಂದಕ್ಕೆ ಹೊರಟುಹೋದರು. ದ್ರೋಹಿಯಾದ ಹಸನನ ಮರಣದಿಂದ ಅಧ್ಯಕ್ಷನಿಲ್ಲದೆ ನಿಂತಿದ್ದ ಆ ಸೈನ್ಯಕ್ಕೆ ಯೂಸೂಫ್‌ಖಾನನನ್ನೇ ಅಧ್ಯಕ್ಷನನ್ನಾಗಿ ನೇಮಕಮಾಡಿದರು.

ವಿಜಯನಗರದವರ ಫಿರಂಗಿಗಳ ಹೊಡೆತದಿಂದ ಮಹಮ್ಮದೀಯರಿಗೆ ಏನೂ ನಷ್ಟವಾಗಲಿಲ್ಲ ; ಅವರು ನದೀತೀರದಿಂದ ಹಿಂದಕ್ಕೆ ಹೊರಟು ಸ್ವಲ್ಪ ದೂರದಲ್ಲಿ ದೃಢವಾದ ಆಸರೆಗಳಲ್ಲಿ ನಿಂತು, ಮುಂದೆ ಹೇಗೆ ಯುದ್ಧ ನಡಿಸಬೇಕೆಂದು ಅಲ್ಲಿ ಮಂತ್ರಾಲೋಚನೆ ಮಾಡಿದರು. ವಿಜಯನಗರದ ಸೇನೆಗಳು ಪ್ರಬಲವಾದ ಸಾವಿರಾರು ಫಿರಂಗಿಗಳನ್ನಿಟ್ಟುಕೊಂಡು ಇಂಗುಲಿಗಿ ಕಡುವಿನಲ್ಲಿ ಬಲವಾಗಿ ಪಾಳೆಯ ಹಾಕಿಕೊಂಡಿರುವುದರಿಂದ ಈ ಮಾರ್ಗವಾಗಿ ಹೋಗುವುದು ಹುಚ್ಚುತನವೆಂದೂ ಆದಕಾರಣ ನದಿಯ ಉತ್ತರತೀರದಲ್ಲಿಯೇ ಹೊರಟು ಹತ್ತುಮೈಲಿ ದೂರದಲ್ಲಿರುವ ಧಾನೂರು ಕಡುವಿನ ಬಳಿಗೆ ಸೇನೆಯನ್ನು ತೆಗೆದುಕೊಂಡು ಹೋಗುವಂತೆ ನಟಿಸಿ ಹಿಂದೂ ಸೇನೆಯನ್ನು ಈಗಿರುವ ಸ್ಥಳದಿಂದ ಹೊರಕ್ಕೆ ಎಳೆಯಬೇಕೆಂದೂ ನಿಷ್ಕರ್ಷೆಮಾಡಿಕೊಂಡರು. ಅವರ ಇಷ್ಟಾರ್ಥವು ಲಭಿಸಿತು. ಇಂತಹ ಕುಟಿಲೋಪಾಯದಿಂದ ಕಾರ್ಯಸಾಧನೆಯಾದುದಕ್ಕೆ ಚರಿತ್ರದಲ್ಲಿ ಎಷ್ಟೋನಿದರ್ಶನಗಳಿವೆ. ಅದೇಮೇರೆ ಮಹಮ್ಮದೀಯರು ತಮ್ಮ ತಂತ್ರವನ್ನು ನಡೆಯಿಸಲಾರಂಭಿಸಿದರು. ಮಹಮ್ಮದೀಯ ಸೈನಿಕರು ಆಚೆ ದಡದಲ್ಲಿ ಹೋದಹಾಗೆಲ್ಲಾ ವಿಜಯನಗರದ ಸೈನಿಕರೂ ಈಚೆದಡದಲ್ಲಿ ಹೋಗುತ್ತ, ಧಾನೂರು ಕಡುವಿಗೆ ಸೇರಿ ಹಿಂದೆ ತಾವು ಇಂಗುಲಿಗಿಯಲ್ಲಿ ನಿಂತಿದ್ದಹಾಗೆಯೇ ಬಲವಾಗಿ ಪಾಳೆಯಹಾಕಿಕೊಂಡು ನಿಂತರು. ತರುವಾಯ ಮಹಮ್ಮದೀಯರು ರಾತ್ರಿ ಕತ್ತಲೆಯಲ್ಲಿ ಶತ್ರುಗಳಿಗೆ ತಿಳಿಯದಂತೆ ಹಿಂತಿರುಗಿಹೊರಟು ವೇಗವಾಗಿ ನಡೆದು ಇಂಗುಲಿಗೆ ಕಡುವಿಗೆಹೋಗಿ ಸೇರಿ, ಅಲ್ಲಿ ಯಾವ ಅತಂಕವೂ ಇಲ್ಲದೆ ಹೊಳೆಯನ್ನು ದಾಟಿಬಂದು, ನದಿಯ ದಕ್ಷಿಣತೀರದಲ್ಲಿ ತಮ್ಮ ಸೇನೆಯನ್ನೆಲ್ಲಾ ವ್ಯೂಹವಾಗಿ ನಿಲ್ಲಿಸಿ, ಯುದ್ಧಕ್ಕೆ ಅಣಿಮಾಡಿಕೊಂಡು ನಿಂತರು.

ಶತ್ರುಗಳ ಚಾತುರ್ಯದಿಂದ ಆ ಮೇರೆ ಮೋಸಹೋದ ರಾಮರಾಜನು ತನ್ನ ರಾಜಧಾನಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಇದ್ದ ಸ್ಥಿತಿಯಲ್ಲಿಯೇ ಯುದ್ಧಮಾಡಬೇಕಾಯಿತು. ಬಳಿಕ 1565ನೇ ಇಸವಿ ಜನವರಿ 25ನೆಯ ತಾರೀಖಿನ ದಿನ ಪ್ರಾತಃಕಾಲದಲ್ಲಿ ಯುದ್ಧಕ್ಕೆ ಪ್ರಾರಂಭವಾಯಿತು. ಇದು ಹಿಂದೂಚರಿತ್ರದಲ್ಲಿ ತಾಳಿಕೋಟೆ ಯುದ್ಧವೆಂದು ಪ್ರಖ್ಯಾತವಾಗಿದೆ. ಇದು ಹಿಂದೂದೇಶದಲ್ಲಿ ನಡೆದ ಯುದ್ಧಗಳಲ್ಲೆಲ್ಲಾ ಬಹು ಪ್ರಬಲವಾದುದು. ಬಹುಕಾಲದವರೆಗೆ ಉಭಯ ಸೇನೆಗಳೂ ಸರಿಗೈಯಾಗಿ ಹೊಡೆದಾಡುತ್ತಿದ್ದುವು. ಹಿಂದೂರಾಜನ ಫಿರಂಗಿ ಸೈನಿ

ಕರು ಅನವರತವೂ ಹತ್ತಿಸಿ ಬಿಡುತ್ತಿದ್ದ ಸಾವಿರಾರು ಆಕಾಶ ಬಾಣಗಳ ಪೆಟ್ಟಿನಿಂದ ಮಹಮ್ಮದೀಯರು ಸ್ವಲ್ಪಕಾಲ ದಿಗ್ಭ್ರಮೆಹಿಡಿದು ಮಂಕಾಗಿ ನಿಂತಿದ್ದರು. ಹಿಂದೂ ತುರಗದಳದ ಪ್ರಹಾರದಿಂದ ಮಹಮ್ಮದೀಯ ಸೇನೆಯ ಪಾರ್ಶ್ವಭಾಗಗಳು ಭಗ್ನವಾಗಿ ಹೋದುವು ಅದರೂ ಅದರ ಮಧ್ಯಭಾಗ ಮಾತ್ರ ಯೂಸೂಫ್‌ಖಾನನ ಮೇಲಾರೈಕೆಯಲ್ಲಿದ್ದು ವಿಜಯನಗರದ ಸೇನೆಯ ಮಧ್ಯಭಾಗಕ್ಕೆದುರಾಗಿ ಹೊರಟು, ಯಾವ ಕಡೆಯನ್ನೂ ಲಕ್ಷ್ಯಮಾಡದೆ ಕ್ರಮ ಕ್ರಮವಾಗಿ ಮುಂದುವರಿಯುತ್ತ, ಅಲ್ಲಿ ಶತ್ರುಗಳಿಗೂ ಮಿತ್ರರಿಗೂ ತಿಳಿವಂತೆ ಉನ್ನತ ಗಜಾರೂಢನಾಗಿ ಯುದ್ಧವ್ಯಾಪಾರವನ್ನು ನಡೆಯಿಸುತ್ತ ಮೂರ್ತಿಗೊಂಡಿದ್ದ ರಾಮರಾಜನ ಸಮ್ಮುಖಕ್ಕೆ ನಡೆಯಿತು ಅಲ್ಲಿ ಯೂಸೂಫ್‌ಖಾನನು ಆತನೆದುರಾಗಿ ನಿಂತು ಮಹಮ್ಮದೀಯ ಸೇನೆಯ ಯುದ್ಧಕಾರ್ಯಗಳನ್ನು ನಡೆಯಿಸಲಾರಂಭಿಸಿದನು. ಆ ಪ್ರಬಲನಾದ ರಾಜನನ್ನು ಹಿಡಿದರೂ ಸರಿಯೆ, ಸಂಹರಿಸಿದರೂ ಸರಿಯೆ, ವಿಜಯವು ತಮ್ಮ ಕೈಸೇರುವುದೆಂದು ಖಾನನಿಗೆ ಗೊತ್ತಿತ್ತು. ಇದರ ಮೇಲೆ ರಾಜನು ತನ್ನನ್ನು ಏಳುದಿವಸಕಾಲ ಅಹೋರಾತ್ರಿ ಸೆರೆಯಲ್ಲಿಟ್ಟು ಆನೆಯ ಕಾಲಿನಲ್ಲಿ ತುಳಿಸುವವರೆಗೆ ಅಲ್ಲಿಯೇ ಇಟ್ಟಿರಬೇಕೆಂದು ಆಜ್ಞೆಮಾಡಿದ್ದಕಾರಣ, ಖಾನನಿಗೆ ಆತನಮೇಲೆ ಮುಯ್ಯಿ ತೀರಿಸಿಕೊಳ್ಳಬೇಕೆಂಬ ಆಗ್ರಹವೂ ಇತ್ತು. ಯೂಸೂಫ್‌ಖಾನನ ಸೇನೆಗೂ ಮಹಾರಾಜನ ಆನೆಗೂ ಅಡ್ಡವಾಗಿ ಮಹಾ ಪರಾಕ್ರಮಶಾಲಿಗಳಾದ ಹಿಂದೂ ಸೈನಿಕರು ಪುಂಖಾನು ಪುಂಖವಾಗಿ ಬಂದು ಬೀಳುತ್ತಿದ್ದರು ಆದರೂ ಯೂಸೂಫ್‌ಖಾನನು ರಾಜನ ಆನೆಯಮೇಲೆಯೇ ಕಣ್ಣಿಟ್ಟು ಏಕಪ್ರಕಾರವಾಗಿ ಮುಂಬರಿದು ನಡೆಯುತ್ತಿದ್ದನು ಇದನ್ನು ನೋಡಿ ರಾಮರಾಜನಿಗೆ ಎದೆಯೊಡೆದುಹೋಯಿತು. ಅವನು ತನ್ನ ಅಶ್ವಸೈನ್ಯಕ್ಕೆ ಉಂಟಾದ ವಿಜಯವನ್ನರಿಯದೆ ತನ್ನಮೇಲೆ ನಿರಂತರವಾಗಿ ಬರುತ್ತಿರುವ ಶತ್ರುವನ್ನು ಮಾತ್ರ ಕಂಡು ಎದೆಗುಂದಿ ದಿಗಿಲುಬಿದ್ದು ಬಿಟ್ಟನು. ಆದಕಾರಣ ಅವನು ತಟ್ಟನೆ ಆನೆಯಿಂದಿಳಿದು ಪಕ್ಕದಲ್ಲಿದ್ದ ಪಲ್ಲಕ್ಕಿಯಲ್ಲಿ ಕುಳಿತುಕೊಂಡನು ಆದರೆ ಪಲ್ಲಕ್ಕಿಬೋಯಿಗಳು ಭೀತಿಪಟ್ಟು ತಮ್ಮ ಊಳಿಗವನ್ನು ಮಾಡದೆಹೋದರು. ಕೂಡಲೆ ಅವನು ಅಲ್ಲಿಂದಿಳಿದು ತನ್ನ ಪರಿಜನರಲ್ಲಿ ಒಬ್ಬನ ಕುದುರೆಯನ್ನು ಹತ್ತಿಕೊಂಡನು. ಇಷ್ಟರಲ್ಲಿಯೇ ಸೇನೆಯ ಮಧ್ಯಭಾಗದಲ್ಲಿ ಹೊಡೆದಾಡುತ್ತಿದ್ದ ಹಿಂದೂಸೈನಿಕರು ತಮ್ಮ ರಾಜನನ್ನು ಕಾಣದೆ, ಆತನು ಸಂಹೃತನಾಗಿ ಹೋಗಿರಬೇಕೆಂದೆಣಿಸಿ ಭಯಗ್ರಸ್ತರಾಗಿ, ಉಲ್ಲೋಲಕಲ್ಲೋಲವಾಗಿ ತಲ್ಲಣಿಸಿ ಹಿಂದೆಗೆದು ಬಿಟ್ಟರು. ಈ ವೇಳೆಗೆ ಸರಿಯಾಗಿ ಎರಡು ಸೇನೆಗಳಿಂದಲೂ ಮೂರುಸಾವಿರ ನಾಲ್ಕುಸಾವಿರ ಆನೆಗಳು ಕಿತ್ತುಕೊಂಡು ಯುದ್ಧರಂಗಕ್ಕೆ ನುಗ್ಗಿ, ನನ್ನವರು ತನ್ನವರೆಂದರಿಯದೆ ಕಂಡಕಂಡಹಾಗೆ ಕೊಂದು ಕೆಡಹುತ್ತ, ಇದ್ದ ಗಲಿಬಿಲಿಯನ್ನು ಮತ್ತಷ್ಟು ಹೆಚ್ಚಿಸಿಬಿಟ್ಟುವು. ಇಷ್ಟೊಂದು ಅವಾಂತರವಾದರೂ ಯೂಸಫ್‌ಖಾನನು ಮಾತ್ರ ತನ್ನ ಗುರಿಯನ್ನು ಬಿಡಲಿಲ್ಲ. ದೊರೆಯು ಆನೆಯಿಂದಿಳಿದಾಗ್ಗೆ ಅವನು ವಿಶೇಷದೂರದಲ್ಲಿರಲಿಲ್ಲ. ಆತನು ಪಲ್ಲ

ಕ್ಕಿಗೆ ಹೋದುದನ್ನು ನೋಡಿಕೊಂಡಿದ್ದು, ಅವನು ಕುದುರೆ ಹತ್ತಿದಾಗ ತಾನು ಸಂಗಡಲೇ ಹೋದನು ಅಷ್ಟೊಂದು ನಿಬಿಡವಾಗಿ ಸೇರಿದ ಜನಸಮ್ಮರ್ದದಲ್ಲಿ ವೇಗವಾಗಿ ಹೋಗುವುದು ಸಾಧ್ಯವಾಗಿರಲಿಲ್ಲ. ಅದುದರಿಂದ ಯೂಸೂಫ್‌ಖಾನನು ಸ್ವಲ್ಪಕಾಲದಲ್ಲಿಯೇ ರಾಮರಾಜನ ಸಮೀಪಕ್ಕೆ ಸೇರಿ, ತನ್ನ ಕತ್ತಿಯ ಒಂದೇ ಬೀಸಿನಿಂದ ಆತನ ಶಿರಸ್ಸನ್ನು ಛೇದಿಸಿಬಿಟ್ಟನು. ಕೂಡಲೆ ಅ ತಲೆಯನ್ನು ಒಬ್ಬ ಮಹಮ್ಮದೀಯ ಸೈನಿಕನು ತೆಗೆದುಕೊಂಡು ಒಂದು ಭರ್ಜಿಗೆ ಸಿಕ್ಕಿಸಿ ಉಭಯ ಸೈನ್ಯಕ್ಕೂ ಕಾಣಿಸುವಹಾಗೆ ಮೇಲಕ್ಕೆ ಎತ್ತಿ ಹಿಡಿದನು, ಹಿಂದೂ ಸೈನಿಕರು ತಮ್ಮ ಮಹಾರಾಜನ ರುಂಡವನ್ನು ನೋಡಿ ಭಯಭ್ರಾಂತರಾಗಿ ಹಿಮ್ಮೆಟ್ಟಿ, ಶತ್ರುಗಳಿಂದ ಬೆನ್ನಟ್ಟಲ್ಪಟ್ಟು, ದಿಕ್ಕುದೆಸೆಗಾಣದೆ ಯುದ್ಧರಂಗದಿಂದ ನಾನಾಮುಖವಾಗಿ ಪಲಾಯನಮಾಡಿಬಿಟ್ಟರು. ಈ ಮೇರೆ ವಿಜಯನಗರದ ಅಪಾರವಾದ ಸೇನೆಯೂ ಧ್ವಂಸವಾಗಿ, ಹೋಗಿ, ತಮಗೆ ಎಷ್ಟೋಸಲ ವಿಜಯಲಕ್ಷ್ಮಿಯನ್ನು ಗಳಿಸಿಕೊಟ್ಟ ಮಹಾರಾಜನೂ ಸಂಹೃತನಾದನೋಲೆ ಆನಗರನಿವಾಸಿಗಳು, ತಮಗೆ ವಿರೋಧವಾಗಿ ಏಕೀಭವಿಸಿ ಬಂದಿದ್ದನಾಲ್ವರು ಮಹಮ್ಮದೀಯ ಸುಲ್ತಾನರಸೇನೆಯಮೇಲೆ ಯಾವ ಕಾರ್ಯಭಾಗವನ್ನು ತಾನೆ ಮಾಡಲಾಪರು? ಅವರು ನಿರಾಳವಾಗಿ ಸುಮ್ಮನಿದ್ದುಬಿಟ್ಟರು. ಆದುದರಿಂದ ಜಯಶಾಲಿಗಳಾದ ಮಹಮ್ಮದೀಯರು ಯಾವ ತಡೆಯೂ ಇಲ್ಲದೆ ಆ ಪಟ್ಟಣವನ್ನು ಹಿಡಿದುಕೊಂಡು, ಕೊಳ್ಳೆಹೊಡೆದು, ತಮ್ಮ ಮತದ್ವೇಷ ತೀರಿಸಿಕೊಳ್ಳುವುದಕ್ಕಾಗಿ ಅಲ್ಲಿದ್ದ ಹಿಂದೂದೇವಾಲಯಗಳನ್ನೆಲ್ಲಾ ಒಡೆದು ಧ್ವಂಸಮಾಡಿಬಿಟ್ಟರು. ಆದರೆ ಯೂಸೂಫ್‌ಖಾನನು ಮಾತ್ರ ಹಿಂದೆ ತನಗೆ ಉಪಕಾರ ಮಾಡಿದ ಹುಡುಗಿಯನ್ನು ಮರೆಯದೆ, ಅವಳ ರಕ್ಷಣೆಗಾಗಿ ರಾಜನ ಅಂಗರಕ್ಷಕನೊಬ್ಬನನ್ನು ತನ್ನ ಸಂಗಡ ಕರೆದುಕೊಂಡು, ತಾನೇ ಮುಂದಾಗಿ ಅರಮನೆಯ ಬಳಿಗೆ ಹೋಗಿ ಅಲ್ಲಿಯ ಸ್ತ್ರೀಜನರಿಗೆ ಯಾವ ಅಪಾಯವೂ ಆಗದಂತೆ ಕಾದುಕೊಂಡನು. ಅನಂತರ ಬಿಜಾಪುರಕ್ಕೆ ಹೋದಾಗ ಅವನಿಗುಂಟಾದ ವಿಭವದಲ್ಲಿ ಅವನು ಒಬ್ಬ ರಾಜಕುಮಾರಿಯನ್ನೇ ಮದುವೆಯಾಗಬಹುದಾಗಿತ್ತು. ಆದರೂ ಅವನು ಬಿಜಾಪುರದ ಸುಲ್ತಾನನ ಸಂಬಂಧಕ್ಕಿಂತಲೂ ಪ್ರಣಯಪುರಸ್ಸರವಾದ ವಿವಾಹವೇ ಮೇಲೆಂದು ಭಾವಿಸಿಕೊಂಡು ತನ್ನನ್ನು ಸೆರೆಯಿಂದ ರಕ್ಷಿಸಿ ತನಗೆ ಪ್ರಾಣದಾನಮಾಡಿದ ಆ ರೂಪವತಿಯಾದ ಅಯೇಷೆಯನ್ನೇ ಮದುವೆಯಾದನು. ಆ ಬಳಿಕ ಅವನು ಬಿಜಾಪುರದ ಸೈನ್ಯದಲ್ಲಿಯೇ ಕೆಲಕಾಲವಿದ್ದು ಕ್ಷಿಪ್ರದಲ್ಲಿಯೇ ಮಹಾಸೇನಾಪತಿ ಪದವಿಗೆ ಬಂದನು. ಆದರೂ ಅವನಿಗೂ ಅವನ ಹೆಂಡತಿಗೂ ಸ್ವದೇಶದಮೇಲಿನ ಮಮತೆ ಮಾತ್ರ ತಪ್ಪಲಿಲ್ಲ. ಅದುಕಾರಣ ಅವರು ತಮ್ಮ ವೃದ್ಧಾಪ್ಯದ ವರೆಗೂ ಅಲ್ಲಿ ಇರಲೊಲ್ಲದೆ ಹತ್ತು ಹನ್ನೆರಡು ವರ್ಷಕಾಲ ಮಾತ್ರ ಅಲ್ಲಿದ್ದು, ಬಳಿಕ ತಮ್ಮ ಮಕ್ಕಳನ್ನೂ ಸಂಗಡ ಕರೆದುಕೊಂಡು ತುರ್ಕಿದೇಶಕ್ಕೆ ಹಿಂದಿರುಗಿ ಹೊರಟುಹೋದರು. ಈ ರೀತಿಯಾಗಿ ಅಯೇಷೆಯು ತನ್ನ ದುರವಸ್ಥೆಯಲ್ಲಿ ಯಾವ ಸುಖಪ್ರಾಯವಾಗಿದ್ದರೂ ಪ್ರತ್ಯಕ್ಷವಾಗಿ ಅನುಭವಿಸಲಸಾಧ್ಯವೆಂಬಂತೆ ಸ್ವಪ್ನಪ್ರಾಯವಾಗಿ

ಕಾಣುತ್ತಿದ್ದಿತೋ ಅಂಥ ತನ್ನ ಇಷ್ಟಾರ್ಥವೆನ್ನೆಲ್ಲಾ ಪಡೆದು, ತಮ್ಮ ಸ್ವಾಂಚಾಲ್ ಮಸೀದಿಯ ಭುವನೇಶ್ವರಿಗಳನ್ನೂ ಮಿನಾರತ್ತುಗಳನ್ನೂ ಪುನಃ ನೋಡಿ ಸಂತುಷ್ಟಳಾದಳು.

---

## ಕಳೆದುಕೊಂಡ ಕೈಪೆಟ್ಟಿಗೆ.

ಶಿವಾಜಿಯೂ ಅವನ ಪರಿಜನರೂ ಸೂರತ್ತಿನಮೇಲೆ ಬಂದುಬಿದ್ದು ಅಲ್ಲಿದ್ದುದುಬದ್ದುದನ್ನೆಲ್ಲಾ ದೋಚಿಕೊಂಡು ದಕ್ಷಿಣದಲ್ಲಿದ್ದ ತಮ್ಮ ದುರ್ಗಗಳಿಗೆ ಹೊರಟು ಹೋದರು. ಇಂಗ್ಲಿಷ್ ಕೋಠಿಗಳಲ್ಲಿದ್ದ ನಾವು ನಮ್ಮ ಪ್ರಾಣಕ್ಕೂ ಅರ್ಥಕ್ಕೂ ಅಪಾಯವಾಗದಂತೆ ನೋಡಿಕೊಂಡೆವು. ಈ ವಿಷಯದಲ್ಲಿ ನಾವು ಮುಖ್ಯವಾಗಿ ನಮ್ಮ ಮುಖಂಡರಾದ ಸರ್‌ಜಾರ್ಜ್ ಆಕ್ಸೆಂಡನ್ನರವರ ಪರಾಕ್ರಮಕ್ಕೂ ಜಾಗರೂಕತೆಗೂ, ಮತ್ತು ಅವರು ನಮ್ಮ ಸಹಾಯಕ್ಕಾಗಿ ಸ್ವಾಲಿರೇವಿನಿಂದ ಬರಮಾಡಿಕೊಂಡಿದ್ದ ನಾವಿಕರಿಗೂ ಅವರು ತಂದಿದ್ದ ಫಿರಂಗಿಗಳಿಗೂ ಸಹ ಎಷ್ಟು ಕೃತಜ್ಞರಾಗಿದ್ದರೂ ತೀರದು. ಆದರೂ ಮರಾಟಿಯವರ ಮುತ್ತಿಗೆಯು ನನ್ನ ಚಿಕ್ಕಪ್ಪನಿಗೆ ಮಾತ್ರ ಬಹಳ ಚಿಂತೆಗೆ ಕಾರಣವಾಯಿತು. ಏಕೆಂದರೆ ಈ ಅವಾಂತರದಲ್ಲಿ ನಮ್ಮ ಚಿಕ್ಕಪ್ಪನು ತನ್ನ ಪ್ರಾಣಕ್ಕೆ ಸಮಾನವೆಂದು ಭಾವಿಸಿ ಇಟ್ಟುಕೊಂಡಿದ್ದ ಕೈಪೆಟ್ಟಿಗೆಯೊಂದು ಹೋಗಿಬಿಟ್ಟಿತು. ಆ ಪೆಟ್ಟಿಗೆಯಲ್ಲಿ ನಮ್ಮ ಮಾವನು ಮೃತಳಾದ ತನ್ನ ಪ್ರಿಯಪತ್ನಿಯ ಭಾವಚಿತ್ರಕ್ಕೆ ರತ್ನಖಚಿತವಾದ ಕಟ್ಟುಹಾಕಿಸಿ ಅದನ್ನೂ, ರಾಜನು ನಮ್ಮ ಚಿಕ್ಕಪ್ಪನ ರಾಜಭಕ್ತಿಗೆ ಮೆಚ್ಚಿ ಬಹುಮಾನವಾಗಿ ಕೊಟ್ಟಿದ್ದ ಮತ್ತೊಂದು ಚಿತ್ರವನ್ನೂ ಇರಿಸಿದ್ದನು. ನಾವು ಮರಾಟಿಯವರ ಹಾವಳಿಯನ್ನು ಕೇಳಿ ನಮ್ಮ ಚಿಕ್ಕಪ್ಪನ ಮನೆಯಿಂದ ಹೊರಟು ಕೋಠಿಗೆ ಬಂದು ಸೇರಿಕೊಳ್ಳುವ ಆತುರದಲ್ಲಿ ಆ ಕೈಪೆಟ್ಟಿಗೆಯನ್ನೂ ಅದರಲ್ಲಿದ್ದ ಬೆಲೆಯಾದ ವಸ್ತುಗಳನ್ನೂ ಸಹಿತ ಹಿಂದೆ ಬಿಟ್ಟು ಬಂದುಬಿಟ್ಟೆವು. ಮರಾಟೆಯವರು ಆ ಮನೆಯನ್ನೆಲ್ಲಾ ಚೆನ್ನಾಗಿ ಚೊಕ್ಕಟಮಾಡಿಬಿಟ್ಟು ಹೊರಟುಹೋಗಿದ್ದರು. ನಾವು ಹಿಂತಿರುಗಿ ಹೋಗಿ ನೋಡುವಲ್ಲಿ ಮನೆಯಲ್ಲಿ ಬರಿಯ ಗೋಡೆಗಳು ಮಾತ್ರ ಉಳಿದಿದ್ದುವೇ ಹೊರತು ಕೈಪೆಟ್ಟಿಗೆಯ ಹೆಸರೇ ಇರಲಿಲ್ಲ. ಸೂರತ್ತಿನಲ್ಲಿ ಕೊಳ್ಳೆಹೋದ ಇತರ ಪದಾರ್ಥಗಳೊಡನೆ ಆ ಪೆಟ್ಟಿಗೆಯೂ ಶಿವಾಜಿಯ ಹೊಸ ರಾಜಧಾನಿಯಾದ ರಾಯಘಡಕ್ಕೆ ಸಾಗಿಹೋಗಿರಬೇಕು. ಅದು ಪುನಃ ಸಿಕ್ಕಿ ನಮ್ಮ ಚಿಕ್ಕಪ್ಪನು ಕಣ್ಣುತುಂಬ ನೋಡಿ ಸಂತೋಷಪಡುವಂತೆ ಬೇರೆ ಕಾಣಲಿಲ್ಲ.

ನಮ್ಮ ಚಿಕ್ಕಪ್ಪನು ಹಿಂದಿನ ರಾಜನ ಮನೆತನದಲ್ಲಿ ಮಹಾವಿಶ್ವಾಸವುಳ್ಳವನಾಗಿದ್ದಕಾರಣ ಹೊಸರಾಜನ ಮನೆತನದವರು ಇಂಗ್ಲೆಂಡಿನಲ್ಲಿದ್ದ ಅವನ ಸ್ಥಿರಸ್ವತ್ತು

ನ್ನೆಲ್ಲಾ ಕಿತ್ತುಕೊಂಡುಬಿಟ್ಟರು. ಬಳಿಕ ಅವನು ಕಳೆದುಳಿದ ಅಲ್ಪಸ್ವಲ್ಪವನ್ನು ತೆಗೆದುಕೊಂಡು ಹಾಲೆಂಡ್ ದೇಶಕ್ಕೆ ಹೋಗಿ ಅಲ್ಲಿ ಇಂಡಿಯಾದೇಶದ ಸಾಮಾನುಗಳನ್ನು ತರಿಸಿ ವರ್ತಕತನ ಮಾಡುತ್ತ ಬೇಕಾದಹಾಗೆ ಸಂಪಾದನೆಮಾಡಿ ಧನಿಕನಾಗಿದ್ದನು. ಅವನು ಹಿಂದೂದೇಶಕ್ಕೆ ಕಡೆಯಾವೃತ್ತಿ ಬಂದಾಗ್ಗೆ ದಿಕ್ಕುಗೆಟ್ಟ ಹುಟ್ಟುಬಡವನಾದ ನನ್ನನ್ನು ಸಂಗಡ ಕರೆದುಕೊಂಡು ಬಂದನು. ನನ್ನ ತಂದೆಯು ನೆಸ್‌ಬಿ ಎಂಬ ಯುದ್ಧರಂಗದಲ್ಲಿ ಹಿಂದೆಯೇ ಮೃತನಾಗಿ ಹೋಗಿದ್ದನು. ಹೀಗಾಗಿ ನಾನು ನಮ್ಮ ಚಿಕ್ಕಪ್ಪನ ಬಳಿ ಸೇರಿ ಎಳ್ಳು ಎಂದರೆ ಎಣ್ಣೆಯಾಗಿ ನಿಂತು ಅವನ ಪ್ರೇಮವನ್ನು ಪಡೆದುಕೊಂಡೆನು. ಆದರೆ ನನಗೆ ವ್ಯಾಪಾರವಲ್ಲಿ ಮಾತ್ರ ಮನಸ್ಸುಹೋಗದು. ಒಟ್ಟೇನು, ಈಗ ಶಿವಾಜಿಯು ಕಡೆಯ ಕೊಳ್ಳೆಬಾಕರ ಕೈಗೆ ಬೀಳದಂತೆ ಕೋಠಿಯನ್ನು ಕಾಪಾಡಿಕೊಳ್ಳುವಾಗ ನನಗೆ ಮನಸ್ಸಿಗೆ ಎಷ್ಟಾನಂದವಾಯಿತೋ, ಅಹಮ್ಮದಾಬಾದಿನಿಂದಲೂ, ಭರುಕಚ್ಛದಿಂದಲೂ, ಕಾಂಬೆಯಿಂದಲೂ ಬುಟ್ಟೆದಾರಿ ಬಟ್ಟೆಗಳನ್ನು ಕೊಂಡುಕೊಳ್ಳುವಾಗ ಅಷ್ಟಾನಂದವಾಗಲಿಲ್ಲ. ಈ ಬೀದಿಜಗಳದಲ್ಲಿ ನನಗುಂಟಾದ ಉದ್ರೇಕದಿಂದ ನನ್ನ ಹೃದಯದಲ್ಲಿ ವಂಶಪಾರಂಪರ್ಯವಾಗಿ ಬಂದಡಗಿದ್ದ ಸಾಹಸಾಭಿರುಚಿಯು ತಲೆಯೆತ್ತಿ ಈ ಗಜಗಡ್ಡಿಯ ಗೊಡ್ಡುವ್ಯಾಪಾರದಲ್ಲಿ ನನಗೆ ಮತ್ತಷ್ಟು ಬೇಸರಿಕೆಯುಂಟಾಗಿಹೋಯಿತು.

ಈ ವಿಧವಾದ ಚಿತ್ತವೃತ್ತಿಯಲ್ಲಿರುವಾಗ ನನಗೆ ಒಂದು ಸೊಗಸಾದ ಆಲೋಚನೆ ಹೊಳೆಯಿತು. ನಾನು ಮರಾಟಿಯವರ ದೇಶಕ್ಕೆ ಬಂದು ನುಗ್ಗುನುಗ್ಗಿ ನಮ್ಮ ಕೈಪೆಟ್ಟಿಗೆಯನ್ನು ಏಕೆ ತರಬಾರದು ಎಂದು ಯೋಚಿಸಿದೆನು. ಅದರಲ್ಲಿದ್ದ ಪದಾರ್ಥಗಳೇನೂ ವಿಶೇಷ ಬೆಲೆ ಬಾಳುತ್ತಿರಲಿಲ್ಲ ; ಅದನ್ನು ಮರಾಟಿಯವರು ಹಿಂದಿರುಗಿ ಕೊಟ್ಟಪಕ್ಷದಲ್ಲಿ ನಾನು ನಮ್ಮ ಚಿಕ್ಕಪ್ಪನ ಹೆಸರಿನಲ್ಲಿ ಬೇಕಾದಷ್ಟು ಹಣವನ್ನು ಕೊಡುವದಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಈ ಸಾಹಸಕಾರ್ಯವೇನೋ ಅಪಾಯಕರವೇ ಹೌದು ; ಇದನ್ನು ಮಾಡುವದು ಶುದ್ಧ ಅವಿವೇಕವೆಂದು ಸಹ ಹೇಳಬಹುದು. ಆದರೆ ಕಳೆದ ಎರಡು ಮೂರು ತಿಂಗಳಿಂದ ಏಕರೀತಿಯಾಗಿ ಕುಳಿತೆಡೆಯಿಂದ ಕದಲದೆ ಬೇರುಬಿಟ್ಟು ಮಾಡುತ್ತಿದ್ದ ಹಾಳು ವ್ಯಾಪಾರದಿಂದ ಬೇಸತ್ತುಹೋಗಿದ್ದ ನನ್ನಂಥವನ ಮನಸ್ಸಿಗೆ ಈ ಅಪಾಯವೇ ಆಕರ್ಷಣಮಾತ್ರವಾಯಿತು. ಇದೂ ಅಲ್ಲದೆ ಈ ಕೆಲಸಕ್ಕೆ ಪ್ರಯತ್ನಿಸುವುದರಲ್ಲಿ ನನಗೆ ಬೇರೊಂದುದ್ದೇಶವೂ ಇತ್ತು. ನಾನು ಇಂಗ್ಲೆಂಡಿನಿಂದ ಬರುವುದಕ್ಕೆ ಮುಂಚೆ ಆ ಭಾವಚಿತ್ರಗತೆಯಾದ ಸ್ತ್ರೀಯು ಸುಂದರಿಯಾದ ಸುತೆಯಲ್ಲಿ ಅನುರಕ್ತನಾಗಿದ್ದೆನು. ಆದರೆ ನಾನು ದಟ್ಟದರಿದ್ರನಾಗಿ ಕಂಡವರ ಕೈಕೆಳಗೆ ಬಿದ್ದಿದ್ದುದರಿಂದ ನನ್ನ ಅನುರಾಗವನ್ನು ಪ್ರಕಟಪಡಿಸಲಾರದೆ ಇದ್ದೆನು. ಆದರೂ ನಾನು ಪ್ರಯಾಣೋನ್ಮುಖನಾದ ಕಾಲದಲ್ಲಿ ಆಕೆಯು ನನ್ನಲ್ಲಿ ಅನುಗ್ರಹಿಸಿಕೊಟ್ಟ ಮನೋಹರವಾದ ಗುಲಾಬಿಹೂವು ನನ್ನ ಮನಸ್ಸಿನಲ್ಲಿ ಆಶೋತ್ತರವನ್ನುಂಟುಮಾಡಿತು. ಆದುದರಿಂದ ಈಗ ನಾನು ನಮ್ಮ

ಚಿಕ್ಕಪ್ಪನಿಗೆ ಪ್ರಾಣಪ್ರಾಯವಾದ ಕೈಪೆಟ್ಟಿಗೆಯನ್ನು ಪದಾರ್ಥಸಹಿತವಾಗಿ ಸಂಪಾದಿಸಿಕೊಟ್ಟಲ್ಲಿ ಆತನಿಗೆ ನನ್ನ ಪ್ರಣಯ ವಿಷಯದಲ್ಲಿ ಅನುಕೂಲಬುದ್ಧಿಯುಂಟಾಗಬಹುದೆಂಬದಾಗಿ ತೋರಿತು. ಇಷ್ಟರಮೇಲೆ—ಪ್ರಾಯದ ಹುಡುಗರ ಸಾಹಸಕ್ಕೆಲ್ಲಾ ಉದ್ದೇಶವನ್ನು ವಿಚಾರಮಾಡಲೇಕೆ? ಆ ಕಾಲದಲ್ಲಿ ನನಗೆ ಹಾಗೆ ಬುದ್ಧಿಹುಟ್ಟಿತು; ಅದೇ ಮುಖವಾಗಿ ಹೊರಡಲು ನಿಶ್ಚಯಮಾಡಿಬಿಟ್ಟೆನು.

ನಾನು ಹೊರಡುವ ಸಂಗತಿಯನ್ನು ನಮ್ಮ ಚಿಕ್ಕಪ್ಪನಿಗೆ ತಿಳಿಸುವುದು ಯುಕ್ತವಾಗಿ ಕಾಣಲಿಲ್ಲ. ಆ ನರೆತಗಡ್ಡದ ವಿವೇಕಿಯು ತಾನು ಕಳೆದುಕೊಂಡ ಪದಾರ್ಥಗಳಿಗಾಗಿ ಹಂಬಲಿಸುತ್ತಿದ್ದರೂ ನನ್ನ ಪಯಣಕ್ಕೆ ಅಡ್ಡಿಮಾಡುವುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ನಾನು ನನ್ನ ಏರ್ಪಾಡುಗಳನ್ನೆಲ್ಲಾ ಗುಟ್ಟಾಗಿ ಮಾಡಿಕೊಂಡೆನು. ನನ್ನ ಗುಟ್ಟನ್ನು ಒಬ್ಬರಿಗೂ ತಿಳಿಸಲಿಲ್ಲ. ಆದರೆ ಅದನ್ನು ಗೋಪಾಲ ಎಂಬ ಒಬ್ಬ ಸೂರತಿ ಕುದುರೆಯವನಿಗೆ ಮಾತ್ರ ತಿಳಿಸಿದ್ದೆನು. ಅವನನ್ನು ಅನೇಕ ವೇಳೆ ಪರೀಕ್ಷೆಮಾಡಿ ನೋಡಿದ್ದೆನು. ಅವನು ಧೈರ್ಯಶಾಲಿಯಾಗಿಯೂ ಒಳ್ಳೆಯ ನಂಬುಗೆಗೆ ಅರ್ಹನಾಗಿಯೂ ಇದ್ದನು. ಬಳಿಕ ನಾನು ಆ ಊರಿನಲ್ಲಿ ದೊರೆಯುವ ಒಳ್ಳೆ ಆಯುಧಗಳನ್ನು ಕೊಂಡುಕೊಂಡು ಅವನಿಗೆ ಒಂದು ಕತ್ತಿಯನ್ನೂ ಕಠಾರಿಯನ್ನೂ ಕೊಟ್ಟು ನನ್ನ ನಡುಕಟ್ಟಿಗೆ ಒಂದು ಕತ್ತಿಯನ್ನು ನೇತುಹಾಕಿಕೊಂಡು ತುಪಾಕಿಯೊರೆಯಲ್ಲಿ ಒಂದು ಕೈತುಪಾಕಿಯನ್ನು ಹಾಕಿ ಸಂಗಡ ತೆಗೆದುಕೊಂಡೆನು. ಹೀಗೆ ಎಲ್ಲವೂ ಸಿದ್ಧವಾದಮೇಲೆ ನಾವಿಬ್ಬರೂ ನಾಡು ತಟ್ಟುಗಳನ್ನು ಹತ್ತಿಕೊಂಡು ಹೊರಟೆವು. ಇವು ಕಣ್ಣಿಗೆ ಅಷ್ಟೊಂದು ಅಂದವಾಗಿಲ್ಲದಿದ್ದರೂ ದಣಿವಿಲ್ಲದೆ ದುಡಿಯತಕ್ಕುವಾಗಿದ್ದುವು. ಇವುಗಳು ಹತ್ತುವ ಕಡಿದಾದ ಪರ್ವತಪ್ರದೇಶಗಳಿಗೆ ಮಾತ್ರ ಇಂಗ್ಲಿಷ್ ಕುದುರೆಗಳನ್ನು ತಂದರೆ ಅವು ಕಾಲುಮುರಿದುಕೊಂಡು ಬೀಳುವುದೇ ಸಿದ್ಧ.

ನಾವು ಈ ವೀರರೆ ಆಯುಧಪಾಣಿಗಳಾಗಿ ಕುದುರೆಗಳನ್ನು ಹತ್ತಿಕೊಂಡು ಜನವರಿ ತಿಂಗಳ ಕೊನೆಯಲ್ಲಿ ಒಂದು ದಿನ ಸೂರ್ಯಾಸ್ತಮಯವಾದ ಬಳಿಕ ಹೊರಟೆವು. ನಾವು ಪಯಣ ಹೊರಟಕಾಲದಲ್ಲಿ ನಮ್ಮೆದುರಿಗೆ ಕಂಗೊಳಿಸಿದ ಸುತ್ತುಮುತ್ತಿನ ಸೌಂದರ್ಯಸಂಪತ್ತನ್ನು ನಾನು ಎಂದಿಗೂ ಮರೆಯಲಾರೆನು. ನಮ್ಮೆದುರಿಗೆ ಅಕಾಶದಲ್ಲಿ ಪೂರ್ವದಿಗ್ಭಾಗದಲ್ಲಿ ಬೃಹಸ್ಪತಿಯು ಪ್ರಕಾಶಿಸುತ್ತಿತ್ತು. ನಮ್ಮ ಹಿಂದುಗಡೆಯಲ್ಲಿ ಶುಕ್ರಗ್ರಹವು ಸೂರತಿನ ಮನೆಗಳ ಮೇಲುಗಡೆಯ ನೇರದಲ್ಲಿ ಕಾಣಿಸುತ್ತಿತ್ತು. ನಮ್ಮ ತಲೆಯಮೇಲೆ ಗಗನಮಧ್ಯದಲ್ಲಿ ಅರ್ಧಚಂದ್ರನು ಆ ಬಯಲಿನಲ್ಲಿ ತನ್ನ ಚಂದ್ರಿಕಾಧವಳದುಕೂಲವನ್ನು ಹರಡಿ ನಾವು ಎಡವಿ ಬೀಳದ ಹಾಗೆ ಬೆಳಕನ್ನು ಬೀರುತ್ತಿದ್ದನು. ಈ ಕಾಲದಲ್ಲಿ ಹಗಲುಹೊತ್ತಿನಲ್ಲಿ ನೆಲವು ಬಿಸಲಿನ ಬೇಗೆಯಿಂದ ಕಾಯ್ದು ಕೆಂಪೇರಿರುತ್ತದೆ; ರಾತ್ರಿಯಲ್ಲಿ ಬೆಳದಿಂಗಳ ಸೊಂಪಿನಲ್ಲಿ ಎಲ್ಲವೂ ಹೊಸತಾಗಿ ಕಳೆಗೊಂಡು ಇಂದ್ರಭವನದಂತೆ ಕಂಗೊಳಿಸುತ್ತದೆ.

ರಾತ್ರಿ ತಂಪು ಹೊತ್ತಿನಲ್ಲಿ ನಾವು ಹೋಗುತಹೋಗುತ ಉಲ್ಲಾಸರಸವು ತಲೆಮೀರಿ ನಾನು ಗಟ್ಟಿಯಾಗಿ ಹಾಡತೊಡಗಿದೆನು. ಬೆಳಿಗ್ಗೆ ಸೂರತಿನಿಂದ ಮೂವತ್ತು ಮೈಲಿಯಷ್ಟು ದೂರ ಬಂದ ಬಳಿಕ, ನಾನು ಚಿಕ್ಕಪ್ಪನು ನನ್ನನ್ನು ಕಾಣದೆ ಯಾರಾದರೂ ಎತ್ತಿಕೊಂಡು ಹೋದರೋ ಎಂದು ಎಲ್ಲಿ ಪೇಚಾಡುವನೋ ಎಂದುಕೊಂಡು ಒಬ್ಬ ಆಳನ್ನು ಗೊತ್ತುಮಾಡಿ ನಾವು ಇಂಥಕಡೆಗೆ ಈ ಯುದ್ದೇಶದಿಂದ ಹೋಗುತ್ತಿದ್ದೇವೆಂದು ಅವನ ಮೂಲಕ ಸಮಾಚಾರ ಹೇಳಿಕಳುಹಿಸಿದೆನು.

ನಾವು ಸೂರತ್ತಿನಿಂದ ರಾಜಘಡಕ್ಕೆ ಬಹು ಕ್ಷಿಪ್ರವಾಗಿ ಮಾಡಿದ ಪ್ರಯಾಣದ ವಿವರವನ್ನೆಲ್ಲಾ ಇಲ್ಲಿ ವಿವರಿಸಬೇಕಾದ ಪ್ರಕೃತವಿಲ್ಲ. ನಮ್ಮನ್ನು ಹಾದಿ ಯಲ್ಲಿ ಅನೇಕವಾಗಿ ಬೆದರಿಸಿದರು; ಆದರೂ ಯಾರೂ ವಿಶೇಷವಾಗಿ ತೊಂದರೆಪಡಿಸಲಿಲ್ಲ. ಆಗಿಂದಾಗ್ಗೆ ನಮ್ಮಮೇಲೆ ಬೀಳುವುದಕ್ಕೋ ಎಂಬಹಾಗೆ ಕಳ್ಳರು ಗುಂಪುಗುಂಪಾಗಿ ಬಂದು ನಮ್ಮ ಹತ್ತಿರದಲ್ಲಿ ಹೊಂಚುಹಾಕುತ್ತಿದ್ದರು. ಅಂಥ ಸಂದರ್ಭದಲ್ಲೆಲ್ಲಾ ನಾನು ಒಂದು ತುಪಾಕಿಯನ್ನು ಗೋಪಾಲನ ಕೈಗೆ ಕೊಟ್ಟು ಮತ್ತೊಂದನ್ನು ನನ್ನ ಕೈಯಲ್ಲಿ ಸಿದ್ಧವಾಗಿ ಹಿಡಿದುಕೊಂಡಿರುತ್ತಿದ್ದೆನು. ಇದನ್ನು ಕಂಡು ಕಳ್ಳರು ಹುಬ್ಬು ಗಂಟುಹಾಕಿಕೊಂಡು ಹಿಂಜರಿಯುತ್ತಿದ್ದರು. ನಮ್ಮಲ್ಲಿ ಒದೆಗಳೇ ಹೊರತು ಮತ್ತೇನೂ ದೊರಕುವದಿಲ್ಲವೆಂದು ತಿಳಿದುಕೊಂಡು ಅವರು ಕೊನೆಗೆ ನಮ್ಮ ಗೋಜಿಗೆ ಬಾರದೆ ಸುಲಭವಾದ ಬೇಟೆಯನ್ನು ಎದುರುನೋಡುತ್ತ ನಿಂತುಬಿಟ್ಟರು. ಬಳಿಕ ನಾವು ಕೃಷ್ಣಪಕ್ಷದ ಮೂಗತ್ತಲೆಯಲ್ಲಿ ಅಲ್ಲಲ್ಲಿ ನಿಲ್ಲುತ್ತ ಮುಂಜಾವದ ತಂಗಾಳಿಯ ತಂಪಿನಲ್ಲಿ ದಾರಿ ನಡೆಯುತ್ತ ಹೋದೆವು. ಇದರಿಂದ ನಮಗೆ ಚೆನ್ನಾಗಿ ಹಸಿವಾಗುತ್ತಿತ್ತು. ನಾವು ಹೋಗುತ್ತಿದ್ದ ಪ್ರದೇಶಗಳಲ್ಲೆಲ್ಲಾ ಮರಾಟಿಯವರ ಹಾವಳಿ ನಡೆದಿದ್ದರೂ, ಶಿವಾಜಿಯು ಬಡರೈತರ ಗೋಜಿಗೆ ಹೋಗದಂತೆ ತನ್ನವರಿಗೆಲ್ಲಾ ಕಟ್ಟುಮಾಡಿದ್ದ ಕಾರಣ, ಜನರು ಊರುಬಿಟ್ಟು ಓಡಿಹೋಗಿರಲಿಲ್ಲ. ಆದರೂ ಅಲ್ಲಿ ಚಪಾಟಿ, ಹಾಲು, ಹಣ್ಣು, ಇವುಹೊರತು ಮತ್ತೇನೂ ಸಿಕ್ಕುತ್ತಿರಲಿಲ್ಲ; ಕೋಳಿ ಮೊಟ್ಟೆಗಳು ಸಹ ದೊರಕುತ್ತಿರಲಿಲ್ಲ. ಒಂದೊಂದುವೇಳೆ ಹಳ್ಳಿಯವರು ಹಟಹಿಡಿದು ದುಡ್ಡಿಗಾಗಲಿ ಧರ್ಮಕ್ಕಾಗಲಿ ಒಂದು ಚೂರು ರೊಟ್ಟಿ ಸಹ ಕೊಡರು. ಹೀಗಾಗಿ ಒಂದೊಂದು ಸಮಯದಲ್ಲಿ ನಾವು ಬರಿಯಹೊಟ್ಟೆಗೆ ಬಲವಾಗಿ ನಡುಕಟ್ಟು ಕಟ್ಟಿ ಮುಂದಕ್ಕೆ ಹೋಗಬೇಕಾಗುತ್ತಿತ್ತು. ಇದು ಮಾತ್ರ ಆರೋಗ್ಯಶಾಲಿಯಾದ ಇಂಗ್ಲಿಷರವನಿಗೆ ಎಂದಿಗೂ ಸೊಗಸುವುದಿಲ್ಲ. ಈ ಕುಂದುಕವೊಂದನ್ನು ಬಿಟ್ಟುಬಿಟ್ಟರೆ ಉಳಿದ ಎಲ್ಲಾ ವಿಷಯದಲ್ಲಿಯೂ ನಮ್ಮ ಪ್ರಯಾಣವು ಆಹ್ಲಾದಕರವಾಗಿಯೇ ಇತ್ತು. ಆ ದೇಶದ ವಿಜಾತೀಯರಾದ ಜನಗಳ ನಡೆನುಡಿಗಳಲ್ಲಿ ತಿಳಿಯತಕ್ಕ ಸ್ವಾರಸ್ಯವಾದ ಸಂಗತಿಗಳೆಷ್ಟೋ ಇದ್ದುವು. ನಮ್ಮ ಎಡಗಡೆ ಮುಗಿಲನ್ನು ಮುಟ್ಟುವಂತೆ ನಿಂತಿದ್ದ ಘಾಟಗಳ ಪ್ರಾಕೃತಿಕ ಸೌಂದರ್ಯವು ಬಹು ಗಂಭೀರವಾಗಿಯೂ ಅದ್ಭುತವಾಗಿಯೂ ಇತ್ತು. ಅವುಗಳ ವರ್ಣನೆಯನ್ನು ನನಗಿಂತ ಬರವ

ಣಿಗೆಯಲ್ಲಿ ತೇರಿದವರಿಗೆ ಬಿಟ್ಟುಕೊಟ್ಟಿದ್ದೇನೆ. ನಾನು ವರ್ಣನಾ ವೈಖರಿಗಳಿಲ್ಲದೆ ಸರಳವಾದ ಕಥೆ ಹೇಳುವುದಕ್ಕೆ ಬಂದವನು ; ಈಗ ನನಗೆ ವರ್ಣನೆಗೆ ವ್ಯವಧಾನ ವಿಲ್ಲ. ಜಾಗ್ರತೆಯಾಗಿ ನಮ್ಮ ಪ್ರಯಾಣದ ಮುಖ್ಯೋದ್ದೇಶವಾದ ಶಿವಾಜಿಯ ಸಂದರ್ಶನಕ್ಕೆ ಹೋಗಬೇಕು.

ನಾವು ಮಹರ್ ಎಂಬಲ್ಲಿಗೆ ಹೋದಾಗ ಅಲ್ಲಿ ಸೂರತ್ತಿನಲ್ಲಿ ಕೊಳ್ಳೆಹೊಡೆದ ಸಾಮಗ್ರಿಗಳನ್ನು ರಾಜಘಡಕ್ಕೆ ಸಾಗಿಸುತ್ತಿದ್ದ ಎತ್ತಿನ ಭಂಡಿಗಳ ಕಡೆಯಗುಂಪನ್ನು ಸಂಧಿಸಿದೆವು. ಆ ಭಂಡಿಗಳ ಕಾವಲಿಗಾಗಿ ಒಬ್ಬ ಹವಾಲ್ದಾರನೂ ಅವನ ಕೈ ಕೆಳಗೆ ಇಪ್ಪತ್ತೈದುಮಂದಿ ಭಟರೂ ಸಂಗಡ ಹೋಗುತ್ತಿದ್ದರು. ನಮ್ಮನ್ನು ಕಂಡ ಕೂಡಲೇ ಅವರು ನಮ್ಮನ್ನು ಹೆದರಿಸುತ್ತ ನಮ್ಮ ಸುತ್ತಲೂ ಅರ್ಧಚಂದ್ರಾಕಾ ರವಾಗಿ ಸುತ್ತಿಕೊಂಡರು. ನಾವೂ ನಮ್ಮ ಕೈಕೋವಿಗಳಿಗೆ ಗುಂಡು, ಮದ್ದುಗಳನ್ನು ಹಾಕಿ ಸಿದ್ಧವಾಗಿ ನಿಂತುಕೊಂಡೆವು. ಆ ಮರಾಟಿ ಸವಾರರು ನೋಡುವುದಕ್ಕೆ ಸೊಗಸಾಗಿದ್ದರು. ಅವರು ಕತ್ತಿ ಗುರಾಣಿಗಳನ್ನೂ ಭರ್ಜಿಗಳನ್ನೂ ತಳೆ ದಿದ್ದರು. ಅವರು ಹಾಕಿಕೊಂಡಿದ್ದ ರಜಾಯಿ ಕವಚಗಳು ಕತ್ತಿಯ ಪೆಟ್ಟನ್ನು ಬಹಳ ಮಟ್ಟಿಗೆ ತಡೆಯತಕ್ಕವುಗಳಾಗಿ ಕಾಣಬಂದುವು ಅವರಲ್ಲಿ ಅನೇಕರು ತಮ್ಮ ಕಿವಿ ಗಳಲ್ಲಿ ಚಿನ್ನದಿಂದಲೋ ಬೆಳ್ಳಿಯಿಂದಲೋ ಮಾಡಿದ ಒಂಟಿಗಳನ್ನು ಹಾಕಿಕೊಂಡಿ ದ್ದರು. ದಟ್ಟವಾಗಿಹೊರವಾಗಿ ಬೆಳೆದಿದ್ದ ಅವರ ಮೀಸೆಗಳು ಅವರ ಮುಖಕ್ಕೆ ಒಂದು ವಿಧವಾದ ವೀರರಸವನ್ನೂ ಕ್ರೌರ್ಯವನ್ನೂ ಉಂಟುಮಾಡುತ್ತಿದ್ದುವು. ನಮ್ಮನ್ನು ಹಾಗೆ ಸುತ್ತಿಕೊಂಡಬಳಿಕ ಅವರ ಮುಖಂಡನು ನಮ್ಮ ಆಯುಧಗಳನ್ನು ಒಪ್ಪಿಸಿಬಿಡಬೇಕೆಂದು ಗಟ್ಟಿಯಾಗಿ ಕೂಗಿ ಹೇಳಿದನು. ನಾವು ಅದಕ್ಕೊಪ್ಪಲಿಲ್ಲ. ತರುವಾಯ ಒಂದು ಒಡಂಬಡಿಕೆಗೆ ಏರ್ಪಾಡಾಯಿತು. "ನಮ್ಮ ಆಯುಧಗಳನ್ನು ನಿಮಗೆ ಒಪ್ಪಿಸಿದರೆ ನಮ್ಮನ್ನು ಏನುಮಾಡಬೇಕೆಂದಿದ್ದೀರಿ ?"--ಎಂದು ನಾನು ಕೇಳಿದೆನು. ಅದಕ್ಕೆ ಹವಾಲ್ದಾರನು -- "ನಿಮ್ಮನ್ನು ರಾಜಘಡದಲ್ಲಿ ನಮ್ಮ ಮಹಾ ರಾಜರ ಬಳಿಗೆ ಕರೆದುಕೊಂಡು ಹೋಗುತ್ತೇವೆ"—ಎಂದು ಹೇಳಿದನು. "ನಮಗೆ ಬೇಕಾದುದೂ ಅದೇ ಆದರೂ, ಆ ಕೋಟೆಗೆ ಹೋಗಿ ಸೇರುವವರೆಗೂ ನಮ್ಮ ಆಯುಧಗಳನ್ನು ಕೊಡಲೊಲ್ಲೆವು. ನಮ್ಮನ್ನು ಹೀಗೆಯೇ ಬೇಕಾದರೂ ಕರೆ ದುಕೊಂಡುಹೋಗಿ ; ಇಲ್ಲವೇ ನಿಮ್ಮ ಪ್ರಾಣದಮೇಲಿನ ಆಸೆಯನ್ನು ತೊರೆದು ನಮ್ಮ ಆಯುಧಗಳನ್ನು ಕಿತ್ತುಕೊಂಡು ಆಮೇಲೆ ಬೇಕಾದರೂ ಕರೆದುಕೊಂಡು ಹೋಗಿ ,—ಎಂದು ಹೇಳಿದೆನು. ಇದನ್ನು ಕೇಳಿ ಹವಾಲ್ದಾರನು ತನ್ನವರೊಡನೆ ಆಲೋಚನೆ ಮಾಡಿದನು. ಆ ಕಾಲದಲ್ಲಿ ಅವರಲ್ಲಿ ತುಪಾಕಿಯಿರಲಿಲ್ಲ. ಅವರು ನಮ್ಮಮೇಲೆ ಬಿದ್ದಲ್ಲಿ ನಮ್ಮ ಕೈಕೋವಿಗೆ ಒಬ್ಬರಿಬ್ಬರಾದರೂ ಬಲಿಯಾಗುವುದೇ ನೋ ಖಂಡಿತ, ಆದುದರಿಂದ ಅವರು ಪ್ರಕೃತದಲ್ಲಿ ಸಾಹಸಕ್ಕಿಂತ ಸಹನವೇ ಮೇಲೆಂದು ತಿಳಿದಕೊಂಡಂತೆ ಕಾಣುತ್ತದೆ. ಅದಕ್ಕೂ ಮೇಲೆ ನಾವೇ ರಾಜಘಡಕ್ಕೆ

ಹೋಗಲು ಸಿದ್ಧವಾಗಿರುವಲ್ಲಿ ಬರಿಯ ಬಿಗುಮಾನಕ್ಕಾಗಿ ಪ್ರಾಣಕಳೆದುಕೊಳ್ಳುವುದು ಹುಚ್ಚುತನ. ಆದಪ್ರಯುಕ್ತ ನಾನು ರಾಜಘಡದಲ್ಲಿ ನಮ್ಮ ಆಯುಧಗಳನ್ನು ಒಪ್ಪಿಸುವುದಾಗಿ ಪ್ರತಿಜ್ಞೆಮಾಡಿಕೊಟ್ಟ ಬಳಿಕ, ಅವರು ನಮ್ಮನ್ನು ಸಂಗಡ ಕರೆದುಕೊಂಡು ಹೊರಟು ಮುಂದೆ ದಾರಿಯುದ್ದಕ್ಕೂ ನಮ್ಮನ್ನು ಬಹಳ ವಿಶ್ವಾಸವಾಗಿ ಕಾಣುತ್ತಬಂದರು.

ಹಾಗ ದಾರಿ ನಡೆದು ಒಂದು ಕಡಿದಾದ ಪ್ರದೇಶವನ್ನು ಹತ್ತಿ ರಾಜಘಡದ ಕೋಟೆಯ ಮೊದಲುಬಾಗಿಲ ಬಳಿಗೆ ಬಂದು ಸೇರಿದೆವು. ಇಲ್ಲಿಗೆ ಬಂದ ಕೂಡಲೆ ನಾವು ಹಿಂದೆ ಮಾತುಕೊಟ್ಟಿದ್ದ ಪ್ರಕಾರ ನಮ್ಮ ಆಯುಧಗಳನ್ನು ದ್ವಾರಪಾಲಕರ ಕೈಗೆ ಒಪ್ಪಿಸಿಬಿಟ್ಟೆವು. ಕೋಟೆಯ ಒಳಗಡೆನಾವು ಕೆಣಕು ಜಗಳದಿಂದ ಭಯಪಡತಕ್ಕ ಆವಶ್ಯವಿರಲಿಲ್ಲ. ಶಿವಾಜಿಮಾತ್ರ ನಮ್ಮನ್ನು ಕೊಲ್ಲಬೇಕೆಂದಾಗಲಿ ಸೆರೆಹಾಕಬೇಕೆಂದಾಗಲಿ ಅಪೇಕ್ಷಿಸಿದರೆ ನಮ್ಮ ಆಯುಧಗಳಿಂದ ನಮಗೆ ಆಗತಕ್ಕ ಪ್ರಯೋಜನವೇನೂ ಇರಲಿಲ್ಲ. ಆದುದರಿಂದಲೇ ನಿರ್ಭಯವಾಗಿ ಆಯುಧಗಳನ್ನು ಕೊಟ್ಟು ಮುಂದೆ ಹೋದೆವು. ಅಲ್ಲಿ ಮೇಲಕ್ಕೆ ಹತ್ತುವುದಕ್ಕೆ ಒಂದೇ ಹಂತವಿದ್ದಿತು. ಕಡಿದಾಗಿಯೂ ಇಕ್ಕಟ್ಟಾಗಿಯೂ ಇದ್ದ ಆ ಮೆಟ್ಟಲುಗಳನ್ನು ನಾವು ಬಹು ಶ್ರಮದಿಂದ ಹತ್ತಿ ಹೋಗುತ್ತ ಆ ಹಾದಿಯನ್ನು ರಕ್ಷಿಸಿಕೊಳ್ಳುವುದಕ್ಕೆ ಮೇಲುಗಡೆ ಭಯಂಕರವಾಗಿ ಕಟ್ಟಿದ್ದ ಕೊತ್ತಳವನ್ನು ಕಂಡೆವು. ಅದನ್ನು ನೋಡಿದಾಗ ನನ್ನ ಮನಸ್ಸಿನಲ್ಲಿ— ಈ ಕೋಟೆಯನ್ನು ವಶಪಡಿಸಿಕೊಳ್ಳಬೇಕಾದರೆ ಕ್ಷಾಮದಿಂದಲೂ ಮೋಸದಿಂದಲೂ ಆಗಬೇಕೇ ಹೊರತು ಮತ್ತಾವವಿಧದಿಂದ ತಾನೇ ಸಾಧ್ಯವಾದೀತು ? ಎಂದು ಅದನ್ನು ನೋಡಿ ಆಶ್ಚರ್ಯಪಟ್ಟೆನು.

ನಾವು ಮೂರನೆಯ ಬಾಗಿಲನ್ನು ದಾಟಿದ ಬಳಿಕ ನಮ್ಮನ್ನು ಕೋಟೆಯ ಕಿಲ್ಲೆದಾರನ ಬಳಿಗೆ ಕರೆದುಕೊಂಡುಹೋದರು. ಆತನು ನಮ್ಮ ವಿಚಾರವನ್ನೆಲ್ಲಾ ಕೇಳಿ, ನಾವು ಮಹಾರಾಜನನ್ನು ಕಾಣಲಪೇಕ್ಷಿಸುತ್ತೇವೆಂದು ತಿಳಿಸಿದ ಬಳಿಕ, ನಮಗೆ ಇಳಿದುಕೊಳ್ಳುವದಕ್ಕೆ ಬಿಡಾರಮಾಡಿಕೊಟ್ಟು, ನಾವು ಬಹುಶಃ ಮಾರು ದಿವಸ ಮಹಾರಾಜರ ದರ್ಬಾರಿಗೆ ಹೋಗಲು ಅಪ್ಪಣೆಯಾಗಬಹುದೆಂದು ತಿಳಿಸಿದನು. ನಾವು ಸ್ವಲ್ಪ ಹೊತ್ತು ವಿಶ್ರಮಿಸಿದ್ದು ಮಾರ್ಗಾಯಾಸವನ್ನು ಪರಿಹರಿಸಿಕೊಂಡು ಕೋಟೆಯ ಸುತ್ತಲೂ ತಿರುಗಿಕೊಂಡು ಬರಲು ಹೊರಟೆವು. ಆ ಕೋಟೆಯ ಕಾವಲಿಗಾಗಿ ಸುಮಾರು ಎರಡುಮೂರು ಸಾವಿರ ಭಟರಿದ್ದರು. ಅದರಲ್ಲಿ ಸರಕಾರಿ ಕಟ್ಟಡಗಳೂ ಸೇರಿ ಒಟ್ಟು ಮುನ್ನೂರು ಕಟ್ಟಡಗಳಿದ್ದವು. ಆ ಬೆಟ್ಟವು ನಾವು ಬಂದ ದಿಕ್ಕು ಒಂದರಲ್ಲಿ ಹೊರತು ಉಳಿದ ಕಡೆಯಲ್ಲೆಲ್ಲಾ ಬಲು ಕಡಿದಾಗಿದ್ದುದರಿಂದ ಆ ಭಾಗಗಳಲ್ಲಿ ಯಾವ ವಿಧವಾದ ರಕ್ಷಣೋಪಾಯವೂ ಬೇಕಾಗಿರಲಿಲ್ಲ. ನಾವು ಕೋಟೆಯ ಸುತ್ತಲೂ ಬಳಸಿಕೊಂಡು ಬರುವಾಗ ನಮ್ಮ ಸಂಗಡ ಒಬ್ಬ ಬ್ರಾಹ್ಮಣಗುಮಾಸ್ತನು ಬಂದನು. ಇವನು ಅಲ್ಲಿ ನಾವು ಕಂಡು ಕೇಳಿದ ಪ್ರತಿಯೊಂ

ದರ ಪ್ರಯೋಜನವನ್ನೂ ನಮಗೆ ತಿಳಿಯಹೇಳುತ್ತಾ. ಆ ರೀತಿಯಾಗಿ ಹೇಳುವಾಗಲೆಲ್ಲಾ ತಮ್ಮ ಮಹಾರಾಜನ ವಿವೇಕವನ್ನೂ ಪರಾಕ್ರಮವನ್ನೂ ಮಹಿಮೆಯನ್ನೂ ಸ್ವಲ್ಪವು ಬೇಸರದೆ ಹೊಗಳುತ್ತಾ ಬಂದನು. ನಮ್ಮ ಹಿಂದೆ ಕೆಲಮಂದಿ ಸೈನಿಕರೂ ಬಂದರು. ಇವರು ಹೆಸರಿಗೆ ಮಾತ್ರ ನಮ್ಮ ಪ್ಯೈಗಾವಲಿಗೆ ಬಂದವರೆಂದು ಹೇಳಿದರೂ ನಿಜವಾಗಿಯೂ ನಾವು ಏನೂ ಅಪಾಯಮಾಡದಂತೆ ನೋಡಿಕೊಳ್ಳುವುದಕ್ಕಾಗಿ ಬಂದಿದ್ದರು. ಬಳಿಕ ಇಳಿಹೊತ್ತಿನ ನೆರಳು ನೀಳವಾಗಲುಪಕ್ರಮಿಸಿತು. ಆಗ ನಮ್ಮೊಡನೆ ಬಂದಿದ್ದವನು ನಮಗೆ ರಾಜನನ್ನು ತೋರಿಸುವುದಾಗಿ ತಿಳಿಸಿದನು. ಆ ಕ್ರೂರನನ್ನು ನೋಡಬೇಕೆಂದು ನಾವೂ ತವಕಪಡುತ್ತಿದ್ದೆವು. ಆತನು ತನ್ನ ಕೈಯಾರ ಅಪ್ಝಲ್‌ಖಾನನನ್ನು ಕೊಂದಿದ್ದನೆಂದು ಕೇಳಿದ್ದೆನು; ಅಲ್ಲದೆ ತನ್ನಂತೆಯೇ ಹಿಂದೂರಾಜನಾಗಿದ್ದ ಜೌಲೀರಾಜನನ್ನು ಕೂಡ ಇತರರ ಮೂಲಕ ಮೋಸದಿಂದ ಕೊಲೆಮಾಡಿಸಿದ್ದನೆಂದೂ ಕೇಳಿದ್ದೆನು. ಸೂರತ್ತಿನಲ್ಲಿ ಮರಾಟಿಯವರಕೈಗೆ ಸಿಕ್ಕಿಹೋಗಿದ್ದ ನನ್ನ ಸ್ನೇಹಿತನಾದ ಸ್ಮಿತ್ತನ್ನೂ — ಶಿವಾಜಿಯು ತನ್ನ ಬಳಿಗೆ ಹಿಡಿತಂದವರ ತಲೆಗಳನ್ನೂ ಕೈಕಾಲುಗಳನ್ನೂ ಕತ್ತರಿಸಿಬಿಡುವಂತೆ ನಿರ್ದಾಕ್ಷಿಣ್ಯವಾಗಿ ಅಪ್ಪಣೆಮಾಡುತ್ತಿದ್ದನು — ಎಂಬದಾಗಿ ನನ್ನಸಂಗಡ ಹೇಳಿದ್ದನು. ಆದುದರಿಂದ ಶಿವಾಜಿಯ ಮುಖವು ಪಿಶಾಚದ ಮುಖದಂತೆ ಘೋರವಾಗಿರಬೇಕೆಂದೂ, ಅವನ ಕ್ರೂರವಾದ ಆಜ್ಞೆಯನ್ನು ನಡಿಸುವುದಕ್ಕಾಗಿಯೂ ಪ್ರಜೆಗಳ ನ್ಯಾಯವಾದ ಆಗ್ರಹದಿಂದ ಅವನನ್ನು ರಕ್ಷಿಸಿಕೊಳ್ಳುವುದಕ್ಕಾಗಿಯೂ ಅವನ ಸುತ್ತಲೂ ಮಹಾ ಕಠಿನಾತ್ಮರಾದ ಕಡುಗರು ಕೈಯಲ್ಲಿ ಕತ್ತಿಯನ್ನು ಹಿಡಿದು ಸರ್ವದಾ ನಿಂತುಕೊಂಡಿರಬೇಕೆಂದೂ, ನಾನು ಮನಸ್ಸಿನಲ್ಲಿಸಂಕಲ್ಪ ಚಿತ್ರಗಳನ್ನು ಕಲ್ಪಿಸಿಕೊಂಡಿದ್ದೆನು. ಆದರೆ ಆ ಬ್ರಾಹ್ಮಣನು ತೋರಿಸಿದ ನಿಜವಾದ ಶಿವಾಜಿಗೂ ನನ್ನ ಸಂಕಲ್ಪಕಲ್ಪಿತನಾದ ಶಿವಾಜಿಗೂ ಯಾವ ವಿಧವಾದ ಸಾಮ್ಯವೂ ಇರಲಿಲ್ಲ. ನಾನು ನೋಡಿದ ಕಾಲದಲ್ಲಿ ಶಿವಾಜಿಯು ಯಾವ ಪರಿಜನವೂ ಇಲ್ಲದೆ ಏಕಾಕಿಯಾಗಿ ಒಂದು ಬಾವಿಕಟ್ಟೆಯ ಕಲ್ಲಿನಮೇಲೆ ಕುಳಿತುಕೊಂಡು ಅಲ್ಲಿ ನೀರು ಸೇದುವುಕ್ಕೆ ಬಂದ ಹೆಂಗಸರನ್ನು ಸುಮುಖನಾಗಿ ಮಾತನಾಡಿಸುತ್ತ ಅವರವರ ಮನೆಮಕ್ಕಳ ಯೋಗಕ್ಷೇಮಗಳನ್ನೂ ವಿಚಾರಿಸುತ್ತ ಇದ್ದನು. ಬಾವಿಯ ಬಳಿಯಲ್ಲಿದ್ದ ಮಕ್ಕಳೆಲ್ಲಾ ನಸುನಗುತ್ತ ಸ್ವಲ್ಪವೂ ಹೆದರಿಕೆಯಿಲ್ಲದೆ ಅವನ ಬಳಿಗೆ ಹೋಗುತ್ತಿದ್ದುವು. ಆತನು ಇದಕ್ಕಾಗಿಯೇ ತಂದು ಇಟ್ಟುಕೊಂಡಿದ್ದ ಹಣ್ಣು ಮಿಠಾಯಿಗಳನ್ನು ಅವುಗಳಿಗೆಲ್ಲಾ ಹಂಚುತ್ತಿದ್ದನು. ನಾನು ಆತನಿಗೆ ಕಾಣಿಸದಂತೆ ಮರೆಯಾಗಿದ್ದುಕೊಂಡು ಆತನ ಮುಖಭಾವವನ್ನು ನೋಡುತ್ತನೋಡುತ್ತ ಇಷ್ಟು ದಯಾರಸಪೂರ್ಣವಾಗಿಯೂ ಇಷ್ಟೊಂದು ಮನೋಹರವಾಗಿಯೂ ಇರುವ ಮುಖವನ್ನೇ ನೋಡಿದುದಿಲ್ಲವೆಂದು ಯೋಚಿಸಿಕೊಂಡೆನು ಅತನು ತನ್ನ ರಾಜ್ಯಕ್ಕೂ ತನ್ನ ಮತಕ್ಕೂ ವಿರೋಧಿಗಳಾದವರ ವಿಷಯದಲ್ಲಿ ಹೇಗಾದರೂ ಇರಲಿ; ತನ್ನ ಪ್ರಜೆಗಳನ್ನು ಮಾತ್ರ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ಪಾಲಿಸುತ್ತಿದ್ದನು. ಆದುದರಿಂದ ಆತನು ಶತ್ರುಗಳ ಭೀತಿಗೂ ದ್ವೇಷಕ್ಕೂ ಎಷ್ಟು

ಮಟ್ಟಿಗೆ ಪಾತ್ರನಾಗಿದ್ದನೋ ತನ್ನ ಪ್ರಜೆಗಳ ಪ್ರೀತಿಗೂ ವಿಶ್ವಾಸಕ್ಕೂ ಅಷ್ಟು ಮಟ್ಟಿಗೆ ಪಾತ್ರನಾಗಿದ್ದನು. ನಾನು ರಾಜಘಡದಲ್ಲಿದ್ದ ಕೆಲವುಕಾಲದಲ್ಲಿ ಶಿವಾಜಿಯು ವಿಷಯವಾದ ಈ ಹೊಸ ಅಭಿಪ್ರಾಯವೇ ಸ್ಥಿರವಾಗಿ ದೃಢಪಟ್ಟಿತು. ನಾನು ಪ್ರಶ್ನೆ ಮಾಡಿದ ಪ್ರತಿಯೊಬ್ಬ ಮಾವಳಿಯೂ, ಪ್ರತಿಯೊಬ್ಬ ಹಕ್ಕೂರಿಯೂ, ಶಿವಾಜಿಯು ಮಹಾರಾಷ್ಟ್ರದ ರಕ್ಷಕನೆಂದೂ ಹಿಂದೂಮತಕ್ಕೆ ಮೂಲಸ್ತಂಭರೂಪನೆಂದೂ ಶ್ಲಾಘಿಸುತ್ತ, ಆತನ ವಿಷಯದಲ್ಲಿ ಅತ್ಯಂತ ಪ್ರೇಮಪುರಸ್ಸರವಾದ ಭಕ್ತಿಯೊಡನೆ ಮಾತನಾಡಿದನು.

ನಾನು ಪುನಃ ಶಿವಾಜಿಯುನ್ನು ಸಂದರ್ಶನ ಮಾಡಿದುದು ಮಾರನೆಯ ದಿನದ ದರ್ಬಾರಿನಲ್ಲಿ. ಆ ಕಾಲದಲ್ಲಿ, ಶಿವಾಜಿಗೂ ಆತನ ಪ್ರಧಾನ ಪರಿಜನರಿಗೂ ನೇತ್ರಾನಂದವಾಗುವಂತೆ, ಸೂರತ್ತಿನಿಂದ ತಂದಿದ್ದ ಪದಾರ್ಥಗಳನ್ನೆಲ್ಲಾ ಎದುರಿಗೆ ಅಂಗಮಣಿ ಇಡಿಸಿದ್ದರೂ ಸೂರತ್ತಿನಲ್ಲಿ ಕೊಳ್ಳೆಹೊಡೆದುತಂದ ವಸ್ತ್ರಾಭರಣಗಳು ನಿಜವಾಗಿಯೂ ಬಲುಸೊಗಸಾಗಿದ್ದುವು.ಮುಖ್ಯ ಮುಖ್ಯವಾದ ಆಭರಣಗಳನ್ನೆಲ್ಲಾ ಪರ್ಷಿಯಾ ದೇಶದ ಅಮೂಲ್ಯವಾದ ರತ್ನ ಕಂಬಳದ ಮೇಲೆ ಇರಿಸಿದ್ದರು. ಅಲ್ಲಿ ಮುಕ್ತಾಹಾರಗಳೂ, ಅನರ್ಘ್ಯವಾದ ವಜ್ರಗಳೂ ಕೆಂಪುಗಳೂ ಪಚ್ಚೆಗಳೂ ಕೆತ್ತಿದ ಆಭರಣಗಳೂ, ಬಿಡು ರತ್ನಗಳೂ ಹೇರಳವಾಗಿದ್ದುವು.ಒಂದು ಕಡೆಯಲ್ಲಿ ನಮ್ಮ ಚಿಕ್ಕಪ್ಪನ ಕೈ ಪೆಟ್ಟಿಗೆಯೂ ಇತ್ತು. ಇನ್ನೊಂದು ಕಡೆಯಲ್ಲಿ ಇಪ್ಪತ್ತು ಇಪ್ಪತ್ತೈದು ಲಕ್ಷ ರೂಪಾಯಷ್ಟು ಚಿನ್ನಬೆಳ್ಳಿ ನಾಣ್ಯಗಳನ್ನೂ ರಾಶಿಹಾಕಿದ್ದರು.ಅವುಗಳನ್ನು ಮಾತ್ರ ಕೂಡಲೆ ಬೊಕ್ಕಸದಲ್ಲಿ ಭದ್ರಪಡಿಸಿಟ್ಟರು ಆ ದರ್ಬಾರಿನಲ್ಲಿ ಶಿವಾಜಿಯೇ ಪ್ರಧಾನ ಪುರುಷನಾಗಿದ್ದನೆಂದು ಹೇಳಬೇಕಾದುದೇ ಇಲ್ಲ. ಆ ಕಾಲದಲ್ಲಿ ಆತನು ಕೆಂಪುಪಾಗನ್ನು ಇಟ್ಟುಕೊಂಡು ಅದರ ಮೇಲೆ ದಿವ್ಯವಾದ ವಜ್ರದ ಶಿರಪೇಷನ್ನು ಧರಿಸಿ ಪೀಠದಲ್ಲಿ ಮಂಡಿಸಿದ್ದನು. ಆತನು ಬಾವಿಯ ಬಳಿಯಲ್ಲಿದ್ದ ಕಾಲಕ್ಕಿಂತಲೂ, ಈಗ ದರ್ಬಾರಿನಲ್ಲಿ ಆತನನ್ನು ನಾನು ಚೆನ್ನಾಗಿ ನೋಡಲವಕಾಶದೊರೆಯಿತು. ಆತನ ಪರಿಜನರೊಬ್ಬರೂ ಗಡ್ಡವನ್ನು ಬೆಳಸದಿದ್ದರೂ ಶಿವಾಜಿ ಮಾತ್ರ ತಾನು ರಾಜಪುತ್ರಸಂತತಿಗೆ ಸೇರಿದವನೆಂದು ಗಡ್ಡವನ್ನು ಬೆಳಿಸಿದ್ದನು. ಆತನು ಆಕಾರದಲ್ಲಿ ತೆಳ್ಳಗಿದ್ದು ಬಲು ಚಟುವಟಿಕೆಯಾಗಿದ್ದನು. ಉದ್ದದಲ್ಲಿ ಮಾತ್ರ ಸ್ವಲ್ಪ ಮಟ್ಟವೆಂದೇ ಹೇಳಬೇಕು. ಆತನ ಕೈಗಳು ನೀಳವಾಗಿದ್ದು ಆತನು ಖಡ್ಗಪಾಣಿಯಾಗಿ ಯುದ್ಧಮಾಡುವ ಕಾಲದಲ್ಲಿ ಹೆಚ್ಚು ಸೌಕರ್ಯವನ್ನುಂಟುಮಾಡುತ್ತಿದ್ದುವು. ಹಿಂದೂ ದೇಶದವರಲ್ಲಿ ಅವನ ಮೈಬಣ್ಣವು ಬಿಳಿಯದೆಂದೇ ಹೇಳಬಹುದು. ಅವನ ಮೂಗು ಉದ್ದವಾಗಿ ಗಿಳಿಯ ಕೊಕ್ಕಿನಂತೆ ಬಾಗಿಕೊಂಡಿತ್ತು. ಅವನ ಕಣ್ಣುಗಳು ಪ್ರಕಾಶಮಾನವಾಗಿ ನಿಂತಲ್ಲಿ ನಿಲ್ಲದೆ ಬಲು ಚುರುಕಾಗಿದ್ದುವು. ಆತನು ತನ್ನವರೊಡನೆ ಮಾತನಾಡುವಾಗಲೆಲ್ಲಾ ಹಸನ್ಮುಖನಾಗಿ ಮಾತನಾಡುತ್ತಿದ್ದನು. ಆತನ ಸಮೀಪವಾಗಿ ಇನ್ನೂ ಸ್ವಲ್ಪ ತಗ್ಗಾದ ಒಂದು ಉಲಾರದ ಮೇಲೆ ಆತನ ಪ್ರೇಮಪುತ್ರನೂ ಭವಿಷ್ಯದ್ರಾಜಾಧಿಕಾ

ರಿಯೂ ಆದ ಸಾಂಬಾಜಿಯು ಆಡುತ್ತಿದ್ದನು. ಆಗ ಅವನಿಗೆ ಏಳು ವರ್ಷವಯಸ್ಸಾಗಿತ್ತು. ಆವನು ಮುಂದೆ ಧೈರ್ಯವೊಂದು ಹೊರತು ತಂದೆಯ ಇತರ ಸದ್ಗುಣಗಳನ್ನೊಂದನ್ನೂ ಪಡೆಯದೆ ದುರ್ಮಾರ್ಗದಲ್ಲಿ ಬದುಕಿ ದುರ್ಮರಣದಲ್ಲಿ ಜೀವವನ್ನು ಕಳೆದುಕೊಂಡುದು ಚರಿತ್ರೆಯಲ್ಲೆಲ್ಲಾ ಪ್ರಸಿದ್ಧವಾಗಿದೆ. ಶಿವಾಜಿಯ ಹಿಂದುಗಡೆ ಸಮೀಪವಾಗಿ ಆತನ ಪೇಷ್ವೆಯಾದ ಮೋರೊಪಂತ್ ಪಿಂಗ್ಲೆಯೂ, ಮತ್ತು ಅಪ್ಜುಲ್‌ಖಾನನ ಸಂಹಾರದಲ್ಲಿಯೂ ಪುನಹೆಯಲ್ಲಿ ಷೆಯಿಷ್ಟಾಖಾನನ ಮೇಲೆ ಬೀಳುವದರಲ್ಲಿಯೂ ಇತರವಾದ ಸಾಹಸ ಕಾರ್ಯಗಳಲ್ಲಿಯೂ ಆತನ ಸಂಗಡಿಗನಾಗಿ ಮಹಾ ವೀರರಲ್ಲಿ ವೀರನೆಂದು ಪ್ರಖ್ಯಾತನಾದ ತಾನಾಜಿ ಮಲಸ್ರೆಯೂ ನಿಂತಿದ್ದರು. ಭದ್ರಪೀಠದ ಉಭಯಪಾರ್ಶ್ವಗಳಲ್ಲಿಯೂ ಸಾಲ್ಗೊಳಿಸಿದ ಹೊಂಗೆಲಸದ ಭರ್ಜಿಗಳಿಗೆ ಮಹಾರಾಜವೈಭವ ಸೂಚಕಗಳಾದ ಹಲವು ಬಿರುದುಗಳನ್ನು ನೇತಹಾಕಿದ್ದರು. ಅವುಗಳಲ್ಲಿ ದೊಡ್ಡ ದೊಡ್ಡ ಹಲ್ಲುಗಳಿಂದ ಕೂಡಿದ ಸ್ವರ್ಣಮಯವಾದ ಮತ್ಸ್ಯ ಶಿರಸ್ಸುಗಳೂ,ಕುದುರೆ ಬಾಲಗಳೂ, ಇವೆಲ್ಲಕ್ಕೂ ಮೇಲೆ ಮಹಾರಾಜನ ನಿಷ್ಪಕ್ಷಪಾತವಾದ ನ್ಯಾಯಪರಿಪಾಟಿಯನ್ನು ಸೂಚಿಸುವುದಕ್ಕಾಗಿ ಸಮತೂಕವಾಗಿ ನಿಲ್ಲಸಿದ ಚಿನ್ನದ ತ್ರಾಸುಗಳೂ ಕಂಗೊಳಿಸುತ್ತಿದ್ದುವು.

ದರ್ಬಾರಿಗೆ ಪ್ರವೇಶದೊರೆಯುವುದೇ ಕಷ್ಟವಾಗಿರುವಲ್ಲಿ ಬೇರೆಯಾಗಿ ಶಿವಾಜಿಯ ಸಂದರ್ಶನವನ್ನು ಪಡೆದುಕೊಳ್ಳುವುದು ಮತ್ತಷ್ಟು ಕಷ್ಟವೆಂದು ಹೇಳಬೇಕಾದುದೇ ಇಲ್ಲ. ನಮಗೆ ಎಲ್ಲಾ ಸಂಗತಿಗಳನ್ನೂ ತಿಳಿಯ ಹೇಳುತ್ತಿದ್ದ ಆ ಬ್ರಾಹ್ಮಣ ಗುಮಾಸ್ತನನ್ನು ಕೇಳುವಲ್ಲಿ, ಆತನು ಅನೂಚಾನವಾದ ಪೂರ್ವದೇಶದವರ ಸಂಪ್ರದಾಯದ ಪ್ರಕಾರ ರಾಜನನ್ನು ಕಾಣತಕ್ಕವರು ಮೊದಲು ಮಂತ್ರಿಗಳಿಗೆ ಭಾರಿಯಾಗಿ ಕಾಣಿಕೆಯನ್ನು ಒಪ್ಪಿಸಬೇಕು ಎಂದು ತಿಳಿಸಿದನು. ಹಾಗೆ ಒಪ್ಪಿಸಬೇಕಾದ ಮೇಲೆ ನಾನು ಶಿವಾಜಿಯ ಪ್ರಧಾನ ಮಂತ್ರಿಗಳಿಗೆ ಏನು ಒಪ್ಪಿಸಬೇಕು, ಅದರಲ್ಲಿಯೂ ಮುಖ್ಯವಾಗಿ ಪೇಷ್ವೆಮೊರೋಪಂತ್ ಪಿಂಗ್ಲೆಗೆ ಏನೊಪ್ಪಿಸಬೇಕು ಎಂದು ಆಲೋಚನೆ ಮಾಡಬೇಕಾಯಿತು. ಅವರಿಗೆ ಒಪ್ಪಿಸುವುದಕ್ಕೆ ಯೋಗ್ಯವಾದ ಯಾವ ಪದಾರ್ಥವೂ ನನ್ನಲ್ಲಿರಲಿಲ್ಲ. ನನ್ನಲ್ಲಿ ಎರಡು ಕೈ ತುಪಾಕಿಗಳಿದ್ದುವು. ಇವನ್ನು ರಾಜನಿಗೆ ಒಪ್ಪಿಸಬೇಕೆಂದು ಯೋಚನೆಮಾಡಿದ್ದೆನು. ನಾನು ಹೇಗೆ ಮಾಡಬೇಕೆಂದು ಪೇಚಾಡುತ್ತಿದ್ದಾಗ, ರಾಜನಿಗೆ ನನ್ನನ್ನು ನೋಡುವ ಕುತೂಹಲವುಂಟಾದ ಪ್ರಯುಕ್ತ ನನ್ನ ಕೋಟಲೆಗಳೆಲ್ಲಾ ಒಂದೇ ಕ್ಷಣಕ್ಕೆ ನಿವಾರಣೆಯಾಗಿ ಮಾಯವಾಗಿ ಹೋದುವು. ನಾನು ಅಲ್ಲಿಗೆ ಸೇರಿ ಒಂದೆರಡು ದಿವಸವಾದ ಬಳಿಕ ರಾಜನೇ ನನ್ನನ್ನು ನೋಡಲಪೇಕ್ಷಿಸಿ ಕರೆಯ ಕಳುಹಿದುದರಿಂದ, ನನ್ನನ್ನು ರಾಜನ ಸಮ್ಮುಖಕ್ಕೆ ಕರೆದುಕೊಂಡು ಹೋದರು.

ನಾನು ಅಲ್ಲಿಗೆ ಹೋಗಿ ಮುಜರೆ ಮಾಡಿದ ಬಳಿಕ ಶಿವಾಜಿಯು 'ನೀನು ರಾಜಘಡಕ್ಕೆ ಬಂದ ಉದ್ದೇಶವೇನು' ಎಂಬುದಾಗಿ ನನ್ನನ್ನು ಪ್ರಶ್ನೆಮಾಡಿದನು.ಅದಕ್ಕೆ

ನಾನು—ಮಹಾಸ್ವಾಮಿ, ನಾನು ಎರಡು ಉದ್ದೇಶಗಳಿಂದ ಬಂದಿರುವೆನು. ಮೊದಲು, ಘನವಾದ ಮೊಗಲರ ಮಹಿಮೆಯನ್ನೇ ತೊಡೆದು ಬಿಡುವುದರಲ್ಲಿ ಯತ್ನಿಸುತ್ತಿರುವ ತಮ್ಮಂಥ ಮಹಾರಾಜರನ್ನೂ ತಮ್ಮ ರಾಜಧಾನಿಯನ್ನೂ ಪ್ರತ್ಯಕ್ಷವಾಗಿ ನೋಡಬೇಕೆಂಬುದು ಒಂದು. ಎರಡನೆಯದು, ಸೂರತ್ತಿನಿಂದ ಇಲ್ಲಿಗೆ ತಂದ ವಸ್ತುಗಳಲ್ಲಿ ಒಂದು ಕೈ ಪೆಟ್ಟಿಗೆಯಿದೆ. ಅದೇನೂ ವಿಶೇಷ ಬೆಲೆಬಾಳತಕ್ಕುದಲ್ಲ. ಆದರೂ ಅದರ ಸ್ವಾಮಿಗೆ ಅದು ಪ್ರಾಣಪ್ರಿಯವಾಗಿದೆ. ಅದನ್ನು ಈ ಸನ್ನಿಧಾನದಲ್ಲಿ ಪ್ರಾರ್ಥಿಸಿ ತೆಗೆದುಕೊಂಡು ಹೋಗಬೇಕೆಂಬುದು ಒಂದು. ಇವೇ ನನ್ನ ಉದ್ದೇಶಗಳು—ಎಂದು ಅರಿಕೆ ಮಾಡಿದೆನು. "ಹಾಗಾದರೆ ಇಂಥ ವಿಶೇಷಾನುಗ್ರಹಕ್ಕೆ ಯಾವ ಪ್ರತಿಫಲವನ್ನು ಮಾಡುವುದಾಗಿ ಉದ್ದೇಶಿಸಿರುವೆ ?" ಎಂದು ಪ್ರಶ್ನೆ ಮಾಡಿದನು. ನನಗೆ ಯಾವ ಪ್ರತ್ಯುತ್ತರವೂ ತೋರದೆ ಮಂಕುಕವಿದು ನಿಂತೆನು. ವರ್ತಕನಿಗೆ ಹೇಳುವಂತೆ ಅಂಥ ಮಹಾರಾಜನಿಗೆ ಇನ್ನೂರು ಮುನ್ನೂರು ರೂಪಾಯಿ ಕೊಡುತ್ತೇನೆ ಎಂದು ಹೇಳಲಾಗುತ್ತದೆಯೇ ? ಹಾಗೆ ಹೇಳುವದಕ್ಕೆ ಮುಖವಿಲ್ಲದವನಾಗಿ, ಪ್ರತಿಫಲವನ್ನಪೇಕ್ಷಿಸದ ಪರೋಪಕಾರವೇ ಬಹು ಶ್ರೇಷ್ಠವಾದುದೆಂದೂ ; ಅಂಥ ಸತ್ಕಾರ್ಯವು, ಷೇಕ್ಸ್ಪಿಯರ್ ಹೇಳುವಂತೆ, ಮಹಾರಾಜರುಗಳಿಗೆ ಕಿರೀಟಕ್ಕಿಂತಲೂ ಶ್ಲಾಘ್ಯವಾದ ಭೂಷಣವಾಗಿರುವದೆಂದೂ ಏನೇನೋ ಧರ್ಮಕಥೆಗಳನ್ನು ಓದಿದೆನು. ನಾನು ಉದಾಹರಿಸಿದ ಷೇಕ್ಸ್ಪಿಯರನ ವಾಕ್ಯದಲ್ಲಿ, ಈ ಮಹಾರಾಜನಿಗೆ ಅಷ್ಟೇನೂ ಆದರವುಂಟಾದಂತೆ ಕಾಣಲಿಲ್ಲ. ಆತನು ಪ್ರಸನ್ನವದನನಾಗಿ ಮುಗುಳುನಗು ನಗುತ್ತ ಇಂತೆಂದನು—ನಮ್ಮವರು ಸೂರತ್ತಿನಿಂದ ತಂದಿರುವ ವಸ್ತುಗಳು ಸಂಸ್ಥಾನಕ್ಕೆ ಸೇರಿದುವು. ಅದರಲ್ಲಿ ನಿಷ್ಕಾರಣವಾಗಿಯಾಗಲಿ ಶುಷ್ಕದಾಕ್ಷಿಣ್ಯಕ್ಕಾಗಿಯಾಗಲಿ ನಾನು ಒಂದು ಕಾಸನ್ನು ವೆಚ್ಚಮಾಡಿದರೂ ನಮ್ಮ ಪ್ರಜೆಗಳಿಗೆ ನಷ್ಟಮಾಡಿದಂತಾಗುತ್ತದೆ. ಅದರಲ್ಲಿಯೂ ಸೂರತ್ತಿನಲ್ಲಿ ನಮ್ಮ ಸೈನಿಕರ ಕಾರ್ಯಗಳಿಗೆಲ್ಲಾ ಹಟದಿಂದ ಪ್ರತಿಭಟಿಸಿ ನಿಂತು ನಮ್ಮ ಅಧಿಕಾರಕ್ಕೆ ಒಳಗಾಗುವುದಕ್ಕೂ ಇಷ್ಟಪಡದಿರುವ ಪರದೇಶೀಯರ ಗುಂಪಿಗೆ ಸೇರಿದ ನಿನಗೆ ಆ ವಸ್ತುವನ್ನು ಕೊಡುವುದು ಸುತರಾಂ ಧರ್ಮವಲ್ಲ. ಆದರೂ ನನಗೆ ಇಂಗ್ಲಿಷರೊಡನೆ ಕಲಹವಾಡಲಿಷ್ಟವಿಲ್ಲ ನಮ್ಮಲ್ಲಿ ಸೆರೆಬಿದ್ದಿದ್ದ ಸ್ಮಿತ್ ಎಂಬುವನನ್ನು ಶಿರಚ್ಛೇದ ಮಾಡಬೇಕೆಂದು ನಮ್ಮವರು ಹೇಳಿದಾಗ್ಗ್ಯೂ ಅವರ ಮಾತಿಗೆ ಕಿವಿಗೊಡದೆ ಆತನನ್ನು ನಾನು ಬಿಟ್ಟುಕೊಟ್ಟುದೇ ನನ್ನ ಮನೋಗತಕ್ಕೆ ಸಾಕ್ಷಿಯಾಗಿದೆ. ಅವನ ವಿಷಯದಲ್ಲಿ ಹೇಗೋ ಹಾಗೆಯೇ ನಿನ್ನ ವಿಷಯದಲ್ಲಿಯೂ ಯಾವ ಅಪಾಯಮಾಡುವುದಕ್ಕೂ ನನಗಿಷ್ಟವಿಲ್ಲ ನಿನ್ನನ್ನು ನಿರಪಾಯವಾಗಿ ಸೂರತ್ತಿಗೆ ಕಳುಹಿಸಿಕೊಡುತ್ತೇನೆ ನೀನು ಹಿಂದುಮುಂದು ನೋಡದೆ ದುಡುಕಿ ಸಿಂಹದ ಗುಹೆಗೆ ನುಗ್ಗಿಯೂ ಇಷ್ಟು ಸುಲಭವಾಗಿ ತಪ್ಪಿಸಿಕೊಂಡು ಹೋದುದು ನಿನ್ನ ಪುಣ್ಯವೆಂದು ತಿಳಿ ಎಂದು ಹೇಳಿದನು. ಇದರ ಮೇಲೆ ನಾನು ಯಾವ ಮಾತನ್ನು ತಾನೆ ಆಡಬಹುದು ? ನಾನು ಮೌನವಾಗಿ ಸಮ್ಮುಖದಿಂದ ಹೊರಟುಹೋದೆನು. ಬಳಿಕ ಅರಮನೆ

ಯವರು ಬಂದು, ನಾನು ಅಲ್ಲಿ ಮೂರುದಿವಸದ ಮಟ್ಟಿಗೆ ಇರಬಹುದೆಂದೂ ತರುವಾಯ ಹಡಗುಹತ್ತಿ ಬೊಂಬಾಯಿಗೋ ಸೂರತ್ತಿಗೋ ಹಿಂತಿರುಗಿ ಹೋಗಬೇಕೆಂದೂ ತಿಳಿಸಿದರು. ನನಗೆ ಅವರು ನಿತ್ಯವೂ ಕೊಡುತ್ತಿದ್ದ ಅನ್ನವನ್ನೂ ತೊವ್ವೆಯನ್ನೂ ತಿಂದು ಚಳಿತುಹೋಗಿ ಸೂರತ್ತಿಗೆ ಹೋಗಿ ಮಾಂಸವನ್ನು ಕಂಡೇನೇ ಎಂಬಂತೆ ಆಗಿಹೋಗಿದ್ದರೂ ಕೂಡ, ಒಂದು ವೇಳೆ ರಾಜನು ಪಶ್ಚಾತ್ತಾಪಪಟ್ಟು ಕೈಪೆಟ್ಟಿಗೆಯನ್ನೂ ಕೊಡುವನೋ ಏನೋ ಎಂಬ ಚಾಪಲ್ಯದಿಂದ ಅಲ್ಲಿಯೇ ಮೂರುದಿವಸಕಾಲ ಇದ್ದು ನೋಡುವುದು ಒಳ್ಳೆಯದೆಂದು ಯೋಚಿಸಿ ಹಾಗೆಯೇ ನಿಂತೆನು.

ಆ ಕಾಲದಲ್ಲಿ ಅವರು ನಮಗೆ ಹೆಚ್ಚು ತಡೆಯಿಡದೆ ಕೋಟೆಯಲ್ಲಿ ಎಲ್ಲಿಗೆ ಬೇಕಾದರೂ ಹೋಗಿ ನೋಡತಕ್ಕುದನ್ನೆಲ್ಲಾ ನೋಡುವಂತೆ ಬಿಟ್ಟುಕೊಟ್ಟರು. ನಾನು ಶಿವಾಜಿಯ ಸಂದರ್ಶನ ಮಾಡಿಕೊಂಡ ದಿವಸ ಸಾಯಾಹ್ನದಲ್ಲಿ ಆ ಬ್ರಾಹ್ಮಣ ಗುಮಾಸ್ತನೊಡನೆ ಕೋಟೆಯಲ್ಲಿ ಒಂದು ಅಧುಕ್ತಮೂಲೆಗೆ ಹೋಗಿ ಎತ್ತರವಾದ ಒಂದು ಭಾಗದಲ್ಲಿ ನಿಂತು ಸುತ್ತು ಮುತ್ತು ಕಾಣಿಸುತ್ತಿದ್ದ ಪ್ರದೇಶಗಳನ್ನು ನೋಡುತ್ತ ಸೂರ್ಯಾಸ್ತಮಾನವಾದ ಬಹಳ ಹೊತ್ತಿನವರೆಗೂ ಅಲ್ಲಿಯೇ ನಿಂತಿದ್ದೆನು. ಬಳಿಕ ಕತ್ತಲೆ ಕವಿಯುತ್ತ ಬಂದು ನಾವು ಹೊರಡಬೇಕೆಂದಿರುವ ವೇಳೆಯಲ್ಲಿ ಆ ಬಳಿಯಲ್ಲಿ ನಾವುಗಳು ಮಾತ್ರವೇ ಅಲ್ಲದೆ ಇನ್ನೂ ಯಾರೋ ಕೆಲವರು ಬಂದಿದ್ದಂತೆ ತೋರಿತು. ಗಾಢಾಲೋಚನೆಯಲ್ಲಿ ಮಗ್ನನಾದ ಹಾಗೆ ಕಾಣುತ್ತಿದ್ದ ಒಬ್ಬ ಮರಾಟಿ ಸೈನಿಕನು ಒಂಟಿಯಾಗಿ ನಮ್ಮ ಹಾದಿಯನ್ನು ದಾಟಿ ಹೋಗುತ್ತಿದ್ದನು. ಅವನ ಹಿಂದುಗೂಡಲೆ ಯಾರೋ ಮೂರು ಜನರು ಹಜ್ಜೆಗೆ ಹಜ್ಜೆ ಇಟ್ಟು ಹೊಂಚು ಹಾಕುತ್ತ ಮರದ ಮರೆಯಲ್ಲಿಯೂ ಬಂಡೆಗಳ ಆಸರೆಯಲ್ಲಿಯೂ ಬೆಕ್ಕಿನ ಹಾಗೆ ಮೈಮರೆಸಿಕೊಂಡು ನಡೆಯುತ್ತ ಬೆಂಬತ್ತಿ ಬಂದರು. ಇವರು ಮುಂದಿನ ಸೈನಿಕನ ಮೇಲೆಯೇ ದೃಷ್ಟಿಯಿಟ್ಟು ಹೋಗುತ್ತಿದ್ದುದರಿಂದ ನಮ್ಮನ್ನು ಕಾಣಲಿಲ್ಲ. ಇವರು ನಮ್ಮನ್ನು ದಾಟಿ ನಾಲ್ಕಾರು ಹಜ್ಜೆ ಹೋದಕೂಡಲೆ ಭಗ್ಗನೆ ತಮ್ಮ ವೇಷವನ್ನೂ ಮುಚ್ಚುಮರೆಯನ್ನೂ ತೆಗೆದುಹಾಕಿ ಕತ್ತಿಯನ್ನು ಹಿಡಿದುಕೊಂಡು ಮುಂದೆ ಹೋಗುತ್ತಿದ್ದ ಸೈನಿಕನ ಮೇಲೆ ಬೀಳಲೋಡಿದರು ಆ ಸೈನಿಕನು ಇವರ ಜಾಡನ್ನು ತಿಳಿದು ತಟ್ಟನೆ ತನ್ನ ಆಲೋಚನೆಯನ್ನು ಬಿಟ್ಟು ಹೊದೆದಿದ್ದ ಶಾಲುವನ್ನು ಬಿಸುಟು, ತನ್ನ ಉದ್ದವಾದ ಕತ್ತಿಯನ್ನು ಹಿಡಿದುಕೊಂಡು ಮೂವರೂ ತನ್ನನೇಲೆ ಏಕಕಾಲದಲ್ಲಿ ಬೀಳಲಿಕ್ಕೆ ಅವಕಾಶವಾಗದಂತೆ ಸಮೀಪದಲ್ಲಿ ಎರಡು ಬಂಡೆಗಳ ನಡುವೆ ಇಕ್ಕಟ್ಟಾದ ಪ್ರದೇಶಕ್ಕೆ ಓಡಿಹೋಗಿ ಶತ್ರುಗಳನ್ನು ಎದುರಿಸಿ ನಿಂತುಕೊಂಡನು. ಆ ಕಾಲದಲ್ಲಿ ನನ್ನಲ್ಲಿ ಪ್ರಬಲವಾದ ಯಾವ ಆಯುಧಗಳೂ ಇರಲಿಲ್ಲ ; ಒಂದು ದೊಣ್ಣೆ ಮಾತ್ರ ಇತ್ತು. ಅದನ್ನೇ ತೆಗೆದುಕೊಂಡು ಆತನ ಸಹಾಯಕ್ಕೆ ಓಡಿದೆನು. ಅಲ್ಲಿ ಹೋಗಿ ದೊಣ್ಣೆಯನ್ನು ಎತ್ತಿ ಹಿಂದೆ ನಿಂತಿದ್ದವನ ಕಿವಿಯ ಕೆಳಗೆ ಬಲವಾಗಿ ಒಂದು ಪೆಟ್ಟು ಕೊಟ್ಟು ಅವನನ್ನು ನೆಲಕ್ಕೊರಗಿಸಿಬಿಟ್ಟೆನು. ಇದಾದ ಮೇಲೆಯೇ ಅವರಿಗೆ ಇನ್ನಾರೋ ಹೆಚ್ಚುಮಂದಿ ಇದ್ದಾರೆಂದು

ಗೊತ್ತಾಯಿತು. ಹಠಾತ್ತಾಗಿ ನಾವು ಹಿಂದುಗಡೆಯಿಂದ ಹೋಗಿ ಮೇಲೆ ಬಿದ್ದುದು ಆ ಘಾತುಕರಿಗೆ ಮತ್ತಷ್ಟು ಭಯಕ್ಕೆ ಕಾರಣವಾಯಿತು. ನನ್ನ ಪೆಟ್ಟಿಗೆ ಬಿದ್ದವನ ಮುಂದೆ ನಿಂತಿದ್ದವನು ಮಹಾಕೋಪಾವಿಷ್ಟನಾಗಿ ತನ್ನ ಕತ್ತಿಯನ್ನು ನನ್ನ ಬಗಲಿಗೆ ಚುಚ್ಚಿ ಹಿಡಿಯುವರಿಗೂ ಹೂತ-ಬಿಟ್ಟನು. ಆದರೆ ನನ್ನ ಪುಣ್ಯಕ್ಕೆ ಅದು ನನ್ನ ಹೃದಯಕ್ಕೆ ಸೋಕದೆ ನನ್ನ ದಪ್ಪನಾದ ನಿಲವಂಗಿಯಲ್ಲಿ ದೂರಿಕೊಂಡಿತು. ಅವನು ಅದನ್ನು ತಿರುಗಿ ಹಿರಿದುಕೊಳ್ಳುವಷ್ಟರೊಳಗಾಗಿ ನಾನು ಅವನ ಮೇಲೆ ಬಿದ್ದು ನನ್ನ ಬಲವನ್ನೆಲ್ಲಾ ಬಿಟ್ಟು ತಳ್ಳಿ ಅವನನ್ನು ಬೆನ್ನು ಕೆಳಗಾಗಿ ಕೆಡವಿಬಿಟ್ಟು ಅವನು ಪುನಃ ಏಳಲವಕಾಶವಿಲ್ಲದಂತೆ ಅವನ ಮೇಲೆ ಹಾರಿ ಹೊಟ್ಟೆಯಮೇಲೆ ಬಲವಾಗಿ ಅಮುಕಿಕೊಂಡು ಚೆನ್ನಾಗಿ ಕುಳಿತುಕೊಂಡುಬಿಟ್ಟೆನು. ಆ ಮೇರೆ ಅವನ ಹೆಣಗಾಟಗಳಿಗೆ ಅವಕಾಶ ಕೊಡದಹಾಗೆ ಕುಳಿತುಕೊಂಡು ಆಕಡೆ ಆವರಿಬ್ಬರ ಕಲಹವನ್ನೂ ನೋಡುತ್ತಿದ್ದೆನು. ನಾನು ಅಂಥಾ ಸಂಕಟಕಾಲದಲ್ಲಿ ಯಾವ ಮನುಷ್ಯನ ಸಹಾಯಕ್ಕಾಗಿ ಸಕಾಲದಲ್ಲಿ ಓಡಿಬಂದೆನೋ ಆ ಮನುಷ್ಯನೇ ಮಹಾರಾಜ ಶಿವಾಜಿಯೆಂದು ತಿಳಿದ ಕೂಡಲೆ ನನಗೆ ಪರಮಾಶ್ಚರ್ಯವಾಯಿತು ಆತನು ಸಮಾನಸ್ಕಂದನಾದ ಶತ್ರುವಿನೊಡನೆ ಖಡ್ಗಪಾಣಿಯಾಗಿ ಯುದ್ಧಮಾಡುವ ಕಾಲದಲ್ಲಿ ಆಸಹಾಯಶೂರನಾಗಿರುವನು. ಈಗ ಆತನ ಶತ್ರುವು ಆತನಿಗಿಂತಲೂ ದೀರ್ಘಾಕಾರನಾಗಿಯೂ ಬಲಿಷ್ಠನಾಗಿಯೂ ಇದ್ದನು. ಆದರೆ ಶಿವಾಜಿಯು ಹಸ್ತವೇಗದಲ್ಲಿಯೂ ಪ್ರಯೋಗಕೌಶಲದಲ್ಲಿಯೂ ಕೈಚಳಕದಲ್ಲಿಯೂ ಶತ್ರುವಿಗಿಂತಲೂ ಮಿಾರಿದವನಾಗಿದ್ದನು. ಭವಾನಿ ಎಂಬ ಆತನ ಕತ್ತಿಯು ಎಲ್ಲಾ ಕಡೆಗಳಲ್ಲಿಯೂ ಮಿಂಚಿನವೇಗದಿಂದ ಸುಳಿಯುತ್ತಿತ್ತು. ಹಾಗೆ ನಿರಂತರವಾಗಿ ಬೀಳುತ್ತಿದ್ದ ಪೆಟ್ಟುಗಳನ್ನು ತಪ್ಪಿಸಿಕೊಳ್ಳುವುದೇ ಎದುರಾಳಿಗೆ ದುಷ್ಕರವಾಗಿ ಹೋಗಿ ಬಹುಕಾಲ ಅವನಿಗೆ ಯಾವ ಪ್ರತಿಕ್ರಿಯೆ ಮಾಡಲೂ ಅವಕಾಶ ದೊರೆಯದೆ ಹೋಯಿತು. ಕೊನೆಗೆ ನಿರಾಶೆಯಾಗಿ ಅವನು ಒಂದು ಪೆಟ್ಟು ಹೊಡೆಯಹೋಗಲು ಶಿವಾಜಿಯು ಅದಕ್ಕೆ ಕತ್ತಿಯನ್ನೊಡ್ಡಿ ತಪ್ಪಿಸದೆ ತಟ್ಟನೆ ಬಲಹಿಮ್ಮಡಿಯ ಮೇಲೆ ಹಿಂತಿರುಗಿ ಅದೇ ಕಾಲದಲ್ಲಿಯೇ ಭವಾನಿಯನ್ನು ಶತ್ರುವಿನ ಹೃದಯಸ್ಥಾನದಲ್ಲಿ ತಿವಿದು ಅವನನ್ನು ಕೊಂದು ಕೆಡಹಿಬಿಟ್ಟನು.

ಈ ಮೇರೆ ಆ ದ್ವಂದ್ವಯುದ್ಧವು ಪೂರ್ತಿಯಾದ ಬಳಿಕ ಮಹಾರಾಜನು ನನ್ನ ಸಮಿಾಪಕ್ಕೆ ಬಂದನು. ಕೂಡಲೆ ನಾನು ನನಗೂ ತಿಳಿಯದೆ ಮುಜರೆಮಾಡಲಿಕ್ಕೆಂದು ಅರೆವಾಸಿ ಎದ್ದೆನು. ಇಷ್ಟುಮಾತ್ರ ಅವಕಾಶವಾದುದಕ್ಕೆ ನನ್ನ ಕೆಳಗಿದ್ದವನು ಮಹಾ ಪ್ರಯತ್ನಮಾಡಿ ನನ್ನನ್ನು ಒದರಿಕೊಂಡು ಎದ್ದು ಶಿವಾಜಿಯನ್ನು ಶಪಿಸುತ್ತ ನೆಟ್ಟನೆ ಪ್ರಪಾತದ ಬಳಿಗೆ ಓಡಿಹೋಗಿ ಕಣ್ಮರೆಯಾದನು. ಅವನು ಪ್ರಾಣದೊಂದಿಗೆ ಬೇರೆ ಕೆಳಕ್ಕೆ ಸೇರಲಾರದೆ, ಅಲ್ಲಿ ಶಿಲೆಗಳ ನಡುವೆ ಬಿದ್ದು ಆ ಪ್ರದೇಶದ ರಣಹದ್ದುಗಳಿಗೆ ತುತ್ತಾಗಿ ಹೋಗಿರಬೇಕೆಂದು ಕಾಣುತ್ತದೆ.

ಅವನು ಹಾಗೆ ಓಡಿ ಹೋಗಿ ಕಣ್ಮರೆಯಾಗುವವರೆಗೂ ಶಿವಾಜಿಯು ಅವನನ್ನೇ ದೃಷ್ಟಿಸಿ ನೋಡುತ್ತಿದ್ದು ಬಳಿಕ ಹಸನ್ಮುಖನಾಗಿ ನನ್ನ ಕಡೆಗೆ ತಿರುಗಿ, ಇಂತೆಂದನು.—

ಎಲೈ ಧೀರನಾದ ಇಂಗ್ಲೀಷರವನೇ, ಇಂದು ನನ್ನ ಪ್ರಾಣಸಂರಕ್ಷಣೆಮಾಡಿ ಆ ಮೂಲಕ ನಮ್ಮ ರಾಜ್ಯಕ್ಕೂ ಮತಕ್ಕೂ ಪ್ರಾಪ್ತವಾಗುತ್ತಿದ್ದ ಮಹತ್ತಾದ ವಿಪತ್ತನ್ನು ತಪ್ಪಿಸಿದೆ. ಸದ್ಯಃ ನಾವು ನಮ್ಮ ನಮ್ಮ ಜಾತಿ ಮತಭೇದಗಳನ್ನು ಮರೆತು ಸರಳವಾದ ನಿಮ್ಮ ಇಂಗ್ಲೀಷ್ ಪದ್ಧತಿಯಂತೆ ಪರಸ್ಪರ ಕೈಹಿಡಿದು ಕುಲುಕೋಣ. ನಾಳೆ ಪುನಃ ಬಂದು ನನ್ನನ್ನು ಕಾಣು. ಆಗ ನೀನು ಬೇಕಾದುದನ್ನು ಕೇಳು. ಈಗ ನೀನು ಮಾಡಿದ ಹಾಗೆ ಮಹಾರಾಷ್ಟ್ರಕ್ಕೆ ಉಪಕಾರಮಾಡಿದವನಿಗೆ ನಾನು ಯಾವುದನ್ನೂ ಇಲ್ಲವೆನ್ನಲಾರೆನು.

ಬಳಿಕ ಆಪತ್ಕಾಲದಲ್ಲಿ ಸಹಾಯಮಾಡಿದವರು ಪರಸ್ಪರ ಹಸ್ತಗ್ರಹಣಮಾಡುವಂತೆ ನಾವೂ ಒಬ್ಬೊಬ್ಬರ ಕೈ ಹಿಡಿದು ಕುಲುಕಿ, ತರುವಾಯ ನನ್ನ ದೊಣ್ಣೆಯ ಪೆಟ್ಟಿನಿಂದ ಬಿದ್ದುಬಿಟ್ಟಿದ್ದವನನ್ನು ಹೋಗಿ ನೋಡಿದೆವು. ಅವನು ಸತ್ತುಬಿದ್ದಿದ್ದುದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ನಾವು ಅವನನ್ನು ನೋಡುತ್ತಿದ್ದ ಕಾಲಕ್ಕೆ ಸರಿಯಾಗಿ ಕೆಲವುಮಂದಿ ಸೈನಿಕರು ಇಲ್ಲಿ ನಡೆದ ಸಂಗತಿಯನ್ನೆಲ್ಲಾ ಬ್ರಾಹ್ಮಣಗುಮಾಸ್ತನ ಮೂಲಕ ಕೇಳಿ, ಆತುರದಿಂದ ಬಂದು ಸೇರಿದರು. ಅವರು ಅಲ್ಲಿ ಸತ್ತುಬಿದ್ದಿದ್ದವರನ್ನೂ ಶಿವಾಜಿಯ ರಕ್ತಮಯವಾದ ಕತ್ತಿಯನ್ನೂ ನೋಡಿ ಬೆರಗಾಗಿ ನಿಂತರು ಅವರನ್ನು ನೋಡಿ ಶಿವಾಜಿಯು ಇಷ್ಟೇ ಹೇಳಿದನು.—"ಕತ್ತಲೆಯಲ್ಲಿ ನಮ್ಮ ಮೇಲೆ ಮೂವರು ಬಂದು ಬಿದ್ದರು, ನಾನು ದೇವರಕೃಪೆಯಿಂದಲೂ ನನ್ನ ಕತ್ತಿಯ ಸಹಾಯದಿಂದಲೂ ಒಬ್ಬನನ್ನು ಸಂಹರಿಸಿದೆನು. ಎರಡನೆಯವನು ಈ ವೀರನ ಭೀಮಗದೋಪಮವಾದ ದಂಡದ ಪೆಟ್ಟಿನಿಂದ ಸತ್ತುಬಿದ್ದನು. ಮೂರನೆಯವನು ಓಡಿಹೋದನು." ಇದಾದ ಮೇಲೆ ಆ ರಾತ್ರಿ ಅಲ್ಲಿ ಸತ್ತುಬಿದ್ದವರನ್ನು ಸಾಗಿಸುವದೊಂದೇ ಹೊರತು ಮತ್ತೇನೂ ನಡೆಯತಕ್ಕುದಿರಲಿಲ್ಲ.

ತರುವಾಯ ವಿಚಾರಿಸುವಲ್ಲಿ ಆ ಘಾತಕರು ಮಹಮ್ಮದೀಯರೆಂದು ತಿಳಿಯ ಬಂದಿತು ಅವರು ಹಿಂದೂಸ್ಥಾನದಲ್ಲೆಲ್ಲಾ ಮಹಮದ್ ಮತಕ್ಕೆ ವೈರಿಯಾಗಿದ್ದ ಶಿವಾಜಿಯನ್ನು ಕೊಂದು ತಾವು ಸ್ವರ್ಗಸುಖವನ್ನು ಅನುಭವಿಸಬೇಕೆಂದೂ ಇಲ್ಲದಿದ್ದರೆ ಆ ಪ್ರಯತ್ನದಲ್ಲಿಯಾದರೂ ಪ್ರಾಣವನ್ನು ತೊರೆಯಬೇಕೆಂದೂ ಬಂದಿದ್ದರಂತೆ

ಮರುದಿನ ನಾನು ಮಹಾರಾಜರ ಸಮ್ಮುಖಕ್ಕೆ ಹೋಗುವಾಗ ನನ್ನನ್ನು ಕಂಡವರೆಲ್ಲರೂ ಆದರ ಪುರಸ್ಸರವಾಗಿ ಸಲಾಂಮಾಡುವವರೇ ; ನೋಡಿದವರೆಲ್ಲರೂ ಮೈತ್ರಿಯಿಂದ ಮಂದಹಾಸಮಾಡುವವರೇ ಆಗಿದ್ದರು. ಹಿಂದೆ ನನ್ನಲ್ಲಿ ಸಂದೇಹಪಟ್ಟು ಗಂಟುಮೋರೆ ಹಾಕಿಕೊಂಡಿದ್ದವರೂ ಅಲಕ್ಷ್ಯದಿಂದ ಉದಾಸೀನ

ವಾಗಿದ್ದವರೂ ಕೂಡ ಈಗ ನನ್ನಲ್ಲಿ ಆದರವನ್ನು ತೋರ್ಪಡಿಸಲುಪಕ್ರಮಿಸಿದರು. ಯಾವ ಕಡೆ ನೋಡಿದರೂ ಜನಗಳಿಗೆ ನನ್ನಲ್ಲುಂಟಾದ ಪ್ರೀತಿಯು ಪ್ರಕಟವಾಗು ತ್ತಿತ್ತು. ಕೆಲವರು ಮರಾಟಿಗಳು ನನಗೆ ಮಾಂಸವನ್ನು ತಂದು ಕೊಡುವವುಟ್ಟಿಗೂ ಪ್ರೀತಿತೋರಿದರು. ಅದುವರೆಗೂ ಕೇವಲ ಧಾನ್ಯಾಹಾರದಲ್ಲಿದ್ದ ನನಗೆ ಅವರು ಬೇಯಿಸಿ ತಂದುಕೊಟ್ಟ ಮಾಂಸವೂ ಕೂಡ ಆದರಣೀಯವಾಗಿತ್ತು. ಈಗ ನಮ್ಮ ಚಿಕ್ಕಪ್ಪನ ಕೈ ಪೆಟ್ಟಿಗೆಯನ್ನು ಹಿಂದಕ್ಕೆ ಕೊಡುವ ವಿಷಯದಲ್ಲಿ ಯಾವ ಅಡ್ಡಿಯೂ ಇರಲಿಲ್ಲವೆಂದು ಹೇಳಬೇಕಾದುದೇ ಇಲ್ಲ. ನಾನು ನನ್ನ ಕೈ ಕೋವಿಗಳನ್ನು ತೆಗೆದುಕೊಂಡು—ಮಹಾಸ್ವಾಮಿ, ಇವುಗಳು ಈ ಆಸ್ಥಾನದಲ್ಲಿ ಒಪ್ಪಿಸುವುದಕ್ಕೆ ಯೋಗ್ಯವಾದುವುಗಳಲ್ಲ; ಅದರೂ ಮಹಾಸ್ವಾಮಿಯಂಥ ಪ್ರಖ್ಯಾತರಾದ ವೀರರಿಗೆ ಉಚಿತವಾದುವುಗಳು—ಎಂದು ಹೇಳಿ ಅವುಗಳನ್ನು ಒಪ್ಪಿಸಿದೆನು. ಮಹಾರಾಜನು ಅನುಗ್ರಹ ಪೂರ್ವಕವಾಗಿ ಅವುಗಳನ್ನು ಪರಿಗ್ರಹಮಾಡಿದನು. ಬಳಿಕ ಆತನು ಅವುಗಳ ಕೆಲಸವನ್ನು ನೋಡಿ ಸಂತುಷ್ಟನಾಗಿ—ಒಬ್ಬ ವೀರನು ಮತ್ತೊಬ್ಬ ವೀರನಿಗೆ ಇದಕ್ಕಿಂತಲೂ ಉಚಿತವಾದ ಪದಾರ್ಥವನ್ನು ನಜರು ಮಾಡಲಾರನು ಎಂದು ಅಪ್ಪಣೆಕೊಟ್ಟು, ನನ್ನ ಕೊರಳಲ್ಲಿ ಅನರ್ಘವಾದ ಒಂದು ಮುತ್ತಿನ ಸರವನ್ನು ಹಾಕಿ—ನಿನ್ನ ಮನಸ್ಸಿಗೆ ಆಸೆಯಾದುದನ್ನು ಕೇಳು—ಎಂದು ಅಪ್ಪಣೆಮಾಡಿದನು. ಹಿಂದೆ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯಾದ ಸಂದರ್ಭದಲ್ಲಿ ಷಾಜಹಾನನ ದರ್ಬಾರಿನಲ್ಲಿ ಡಾಕ್ಟರ್ ಬ್ರೌಟನನು ನಮ್ಮ ದೇಶೀಯರಿಗೆ ಪಡೆದು ಕೊಟ್ಟ ಹಕ್ಕು ಬಾಧ್ಯತೆಗಳನ್ನು ಜ್ಞಾಪಕಕ್ಕೆ ತಂದುಕೊಂಡು ನಾನು ರಾಜನನ್ನು ನೋಡಿ-ಮಹಾಸ್ವಾಮಿ, ತಮ್ಮ ರಾಜ್ಯದಲ್ಲಿ ಇಂಗ್ಲೀಷ್ ವರ್ತಕರು ವ್ಯಾಪಾರಮಾಡಲು ಅಧಿಕಾರವನ್ನು ದಯಪಾಲಿಸಬೇಕು—ಎಂಬದಾಗಿ ಮೆಲ್ಲಗೆ ಧೈರ್ಯಮಾಡಿ ಕೇಳಿಕೊಂಡೆನು. ಅದಕ್ಕೆ ಆತನು—ಇಂಗ್ಲೀಷ್‌ವರ್ತಕರನ್ನೂ ಕೈಗಾರಿಕೆಯವರನ್ನೂ ನಮ್ಮ ದೇಶಕ್ಕೆ ಬಿಡಲು ನಾವು ಇಷ್ಟವುಳ್ಳವರಾಗಿದ್ದೇವೆ. ಈ ವಿಷಯವಾಗಿ ರಾಜಪುಡಕ್ಕೆ ರಾಯಭಾರಿಗಳು ಬಂದಲ್ಲಿ ಅವರನ್ನು ಆದರಪುರಸ್ಸರವಾಗಿ ಬರಮಾಡಿಕೊಳ್ಳುತ್ತೇವೆ.—ಎಂದು ಪ್ರತ್ಯುತ್ತರ ಕೊಟ್ಟನು.

ಮರು ದಿನ ಬೆಳಗ್ಗೆ ನನಗೆ ಬೇಕಾದ ಹಾಗೆ ಕೊಟ್ಟ ಅಮೂಲ್ಯವಾದ ಬಹುಮಾನಗಳನ್ನು ತೆಗೆಯಿಸಿಕೊಂಡು ನನ್ನ ಆಪ್ತಭೃತ್ಯನಾದ ಸೂರತ್ತಿನ ಕುದುರೆಯವನನ್ನೂ ಸಂಗಡ ಕರೆದುಕೊಂಡು, ರಾಜಪುಡದಿಂದಿಳಿದು ನಾಗೋತ್ನಕ್ಕೆ ಸೇರಿ, ಅಲ್ಲಿ ಶಿವಾಜಿಯ ಸರ್ವೋತ್ತಮವಾದ ಹಡಗನ್ನು ಹತ್ತಿ ಸೂರತ್ತಿಗೆ ಹೋಗಿ ಸೇರಿದೆನು. ಅಲ್ಲಿ ನಮ್ಮ ಚಿಕ್ಕಪ್ಪನು ನನ್ನ ದುಡುಕು ತನಕ್ಕಾಗಿ ಸ್ವಲ್ಪ ಸಿಟ್ಟುಮಾಡಿಕೊಂಡರೂ ನನ್ನನ್ನು ಬಹಳ ಪ್ರೀತಿಯಿಂದ ಬರಮಾಡಿಕೊಂಡನು. ಬಳಿಕ ಆತನು ನನ್ನನ್ನು ಕುರಿತು "ಎಲಾ ಮುಟ್ಠಾಳ ಹುಡುಗ, ನನ್ನ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡಬೇಕು ಎಂಬದಾಗಿ ನನಗೆ ಬಹುಕಾಲದಿಂದ ಆಸೆಯಿದೆ. ನಿನ್ನ ಈ

ದುಡುಕು ಕೆಲಸದಿಂದಲೂ ಅವಳ ಕಾಗದಗಳಿಂದಲೂ ನೀವಿಬ್ಬರೂ ಈ ನನ್ನ ಅಪೇಕ್ಷೆಗೆ ವಿಮುಖರಾಗಿಲ್ಲವೆಂದು ತಿಳಿಯಬರುವ ಕಾರಣ ನಾವು ಇನ್ನು ಒಂದೆರಡು ತಿಂಗಳೊಳಗಾಗಿ ಇಂಗ್ಲೆಂಡಿಗೆ ಹಿಂತಿರುಗಿ ಹೋಗಿ ವಿವಾಹ ಮಂಗಳವನ್ನು ನೆರವೇರಿಸೋಣ" ಎಂದು ಹೇಳಿದನು. ಅದೇ ಪ್ರಕಾರ ಎರಡು ತಿಂಗಳಿಗೆ ನಡೆದ ನನ್ನ ಮದುವೆಯಲ್ಲಿ ಈಗ ಶಿವಾಜಿಯಿಂದ ಲಬ್ಧವಾದ ಮುತ್ತಿನ ಹಾರವು ಇಂಗ್ಲೆಂಡ್ ದೇಶದಲ್ಲೆಲ್ಲಾ ಅತ್ಯಂತ ರೂಪವತಿಯಾದ ಆ ಕನ್ಯಾಮಣಿಯ ಕಂಠನಾಳವನ್ನು ಅಲಂಕರಿಸಿ ಕಂಗೊಳಿಸಿತು.

---

WD 2150—GPB--2,500-3-6-26